ಸೋಮವಾರ, ಫೆಬ್ರವರಿ 21, 2022 | ₹ 6.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೂರ್ನಾಲ್ಕು ತಾಸು ಕಾರ್ಯಾಚರಣೆ • ವಾಯುಪಡೆ ಹೆಲಿಕಾಪ್ಟರ್ ಬಳಕೆ

ನಂದಿಬೆಟ್ಟ: ವಿದ್ಯಾರ್ಥಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಂದಿಬೆಟ್ಟದಲ್ಲಿ ಭಾನುವಾರ ಬೆಟ್ಟ ಏರುವಾಗ ಆಯತಪ್ಪಿ ಬಿದ್ದಿದ್ದ ನಿಶಾಂಕ್ ಅವರನ್ನು ಮೂರ್ನಾಲ್ಕು ಗಂಟೆಗಳ ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ.

ದೆಹಲಿ ಮೂಲದ ನಿಶಾಂಕ್, ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಮೊದಲ ವರ್ಷದ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ.

ಯಲಹಂಕದ ಭಾರತೀಯ ವಾಯುಪಡೆಯ ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ನಿಶಾಂಕ್‌ರನ್ನು ರಕ್ಷಿಸಿ, ಸುರಕ್ಷಿತವಾಗಿ ಕರೆತಂದಿದೆ. ಮಧ್ಯಾಹ್ನದಿಂದಲೇ ರಾಜ್ಯ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ, ಅರಣ್ಯ ಇಲಾಖೆ ಹಾಗೂ ಪೊಲೀಸರು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಅಲ್ಪ ಪ್ರಮಾಣದ ತರಚಿದ ಗಾಯಗಳಿಂದ ಬಳಲಿದ ಯುವಕನನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.



ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡಿದ್ದ ಪೊಲೀಸರು

ಅವರು ಭಾನುವಾರ ಬೆಳಿಗ್ಗೆ ಬೈಕ್‌ನಲ್ಲಿ ನಂದಿಬೆಟ್ಟಕ್ಕೆ ಬಂದಿದ್ದರು. ವಾರಾಂತ್ಯದಲ್ಲಿ ಪ್ರವಾಸಿಗರ ಭೇಟಿಯನ್ನು ನಿರ್ಬಂಧಿಸಲಾಗಿದೆ. ಆದ್ದರಿಂದ ಬೆಟ್ಟದ ಚೆಕ್‌ಪೋಸ್ಟ್ ಬಳಿ ಬೈಕ್ ನಿಲ್ಲಿಸಿ, ಬ್ರಹ್ಮಗಿರಿ ಬೆಟ್ಟದ ಮೂಲಕ ನಂದಿಬೆಟ್ಟ ಏರುವ ಸಾಹಸಕ್ಕೆ ಮುಂದಾಗಿದ್ದರು.

ಬೆಟ್ಟ ಏರಿದ್ದ ನಿಶಾಂಕ್, ಆಯತಪ್ಪಿ ಸುಮಾರು 250 ಅಡಿ ಕೆಳಕ್ಕೆ ಉರುಳಿ ಬಿದ್ದರು. ಬೆಟ್ಟಗಳ ನಡುವಿನ ಪೊಟರೆಯಲ್ಲಿ ದೊರೆತ ಆಧಾರ ಹಿಡಿದು ನಿಂತಿದ್ದರು. ಇಲ್ಲದಿದ್ದರೆ ಕೆಳಗೆ 300 ಅಡಿ ಆಳದ ಕಂದಕಕ್ಕೆ ಬೀಳುವ ಅಪಾಯವಿತ್ತು.

ನಿಶಾಂಕ್

ಜೀವ ಉಳಿಸಿದ ಮೊಬೈಲ್: ಕಲ್ಲಿನ ಪೊಟರೆಯಲ್ಲಿ ಸಿಲುಕಿದ್ದ ಅವರು ಅಲ್ಲಿಂದಲೇ ದೆಹಲಿಯಲ್ಲಿರುವ ಪೋಷಕರಿಗೆ ಮೊಬೈಲ್ ಮೂಲಕ ಕರೆ ಮಾಡಿ ವಿಷಯ ತಿಳಿಸಿದರು. ಪೋಷಕರು ಕರ್ನಾಟಕ ಸರ್ಕಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗೆ ವಿಷಯ ತಿಳಿಸಿ, ಮಗನನ್ನು ರಕ್ಷಿಸುವಂತೆ ಕೋರಿದರು.

ಉತ್ತರ ಪ್ರದೇಶದಲ್ಲಿ ಮೂರನೇ ಹಂತದ ಮತದಾನ

ಪಂಜಾಬ್‌ನಲ್ಲಿ ಮತದಾನ ಶಾಂತಿಯುತ

ಪ್ರಜಾವಾಣಿ ವಾರ್ತೆ

ಚಂಡೀಗಡ/ಲಖನೌ: ಪಂಜಾಬ್ ವಿಧಾನಸಭೆಯ ಎಲ್ಲ 117 ಕ್ಷೇತ್ರಗಳು ಹಾಗೂ ಉತ್ತರ ಪ್ರದೇಶದ 59 ಕ್ಷೇತ್ರಗಳಿಗೆ ಭಾನುವಾರ ನಡೆದ ಮತದಾನ ಬಹುತೇಕ ಶಾಂತಿಯುತವಾಗಿತ್ತು.

ಪಂಜಾಬ್‌ನಲ್ಲಿ ಒಂದೇ ಹಂತದಲ್ಲಿ ಮತದಾನ ನಡೆದಿದ್ದು, ಶೇ 68ರಷ್ಟು ಮತ ಚಲಾವಣೆಯಾಗಿದೆ. 2017ರಲ್ಲಿ ಶೇ 77.36ರಷ್ಟು ಮತದಾನವಾಗಿತ್ತು. ಉತ್ತರ ಪ್ರದೇಶದಲ್ಲಿ ಮೂರನೇ ಹಂತದಲ್ಲಿ ಶೇ 57ರಷ್ಟು ಮತದಾನವಾಗಿದೆ. ಈ ಕ್ಷೇತ್ರಗಳಲ್ಲಿ 2017ರಲ್ಲಿ ಶೇ 62ರಷ್ಟು ಮತದಾನವಾಗಿತ್ತು.

ಮಾರ್ಚ್ 10ರಂದು ಮತ ಎಣಿಕೆ ನಡೆಯಲಿದೆ.

ಐದು ಪ್ರಮುಖ ಪಕ್ಷಗಳು ಸ್ಪರ್ಧಿಸುವ ಕಾರಣ ಪಂಜಾಬ್‌ನಲ್ಲಿ ಬಹುಕೋನ ಸ್ಪರ್ಧೆ ಏರ್ಪಟ್ಟಿತ್ತು. ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ನವಜೋತ್ ಸಿಂಗ್ ಸಿಧು, ಕ್ಯಾಪ್ಟನ್ ಅಮರಿಂದರ್ ಸಿಂಗ್, ಭಗವಂತ್ ಮಾನ್ ಅವರ ಭವಿಷ್ಯ ಮತಪೆಟ್ಟಿಗೆ ಸೇರಿದೆ. ಕೆಲವೆಡೆ ಕಾಂಗ್ರೆಸ್–ಎಎಪಿ ಕಾರ್ಯಕರ್ತರು ಘರ್ಷಣೆ ನಡೆಸಿದ್ದಾರೆ. ಇವಿಎಂ ಕೈಕೊಟ್ಟ ಕೆಲವು ಘಟನೆಗಳು ನಡೆದಿವೆ.

ಉತ್ತರ ಪ್ರದೇಶದಲ್ಲಿ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸ್ಪರ್ಧಿಸಿದ್ದ ಕರ್ಹಾಲ್ ಕ್ಷೇತ್ರದ ಜನರು ಮತ ಚಲಾಯಿಸಿದರು. ಝಾನ್ಸಿಯಲ್ಲಿ ಅತಿಹೆಚ್ಚು ಅಂದರೆ, ಶೇ 67ರಷ್ಟು ಮತದಾನವಾಗಿದೆ.

ಪ್ರಕರಣ ದಾಖಲು: ತಾವು ಮತ ಚಲಾಯಿಸುವುದನ್ನು ಮೊಬೈಲ್‌ನಲ್ಲಿ ವಿಡಿಯೊ ಮಾಡಿ, ಸೆಲ್ಫಿ ಕ್ಲಿಕ್ಕಿಸಿಕೊಂಡ ಆರೋಪದಲ್ಲಿ ಕಾನ್ಪುರ ಮೇಯರ್ ಪ್ರಮೀಳಾ ಪಾಂಡೆ ವಿರುದ್ಧ ಪ್ರಕರಣ ದಾಖಲಾಗಿದೆ.

ಸಯಾಮಿ ಅವಳಿಗಳಿಂದ ಮತದಾನ

ಸೋಹನ್ ಸಿಂಗ್ ಹಾಗೂ ಮೋಹನ್ ಸಿಂಗ್ ಎಂಬ ಸಯಾಮಿ ಅವಳಿಗಳು ಪಂಜಾಬ್‌ನ ಅಮೃತಸರ ಕ್ಷೇತ್ರದ ಮತಗಟ್ಟೆಯಲ್ಲಿ ಭಾನುವಾರ ಮತ ಚಲಾಯಿಸಿದರು.

18 ವರ್ಷ ತುಂಬಿದ ಇಬ್ಬರಿಗೂ ಚುನಾವಣಾ ಆಯೋಗವು ಕಳೆದ ವರ್ಷ ಗುರುತಿನ ಚೀಟಿ ನೀಡಿತ್ತು. ಇಬ್ಬರಿಗೂ ಪ್ರತ್ಯೇಕ ಮತದಾನದ ಹಕ್ಕು ನೀಡಿತ್ತು. ಭಾನುವಾರ ಮತಗಟ್ಟೆಗೆ ಬಂದ ಇವರಿಗೆ ಮತ ಚಲಾಯಿಸಲು ಆಯೋಗವು ವಿಶೇಷ ವ್ಯವಸ್ಥೆ ಕಲ್ಪಿಸಿತ್ತು. ಒಬ್ಬರು ಮತದಾನ ಮಾಡುವಾಗ ಮತ್ತೊಬ್ಬರ ಕಣ್ಣಿಗೆ ಕಪ್ಪು ಕನ್ನಡಕವನ್ನು ನೀಡಲಾಗಿತ್ತು.

ಸಯಾಮಿ ಅವಳಿಗಳಾದ ಸೋಹನ್ ಸಿಂಗ್ ಹಾಗೂ ಮೋಹನ್ ಸಿಂಗ್ ಅಮೃತಸರದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು–ಪಿಟಿಐ ಚಿತ್ರ

ಎಲ್ ಐಸಿ ಐಪಿಒ

ಪಾಲಿಸಿದಾರಕರ ಮೀಸಲಾತಿ (ರಿಸರ್ವೇಶನ್)

ಇದರಲ್ಲಿ ಭಾಗವಹಿಸಲು ಪಾಲಿಸಿದಾರರು
ಕೆಳಗಿನ ಮಾನದಂಡಗಳನ್ನು ಪೂರ್ತಿಯಾಗಿಸಬೇಕು

- ಫೆಬ್ರವರಿ 13, 2022 ರಂತೆ ನಿಗಮದ ಒಂದು ಅಥವಾ ಹೆಚ್ಚಿನ ಪಾಲಿಸಿಗಳನ್ನು ಹೊಂದಿರುವ ನಿಗಮದ ನಿವಾಸಿ ವೈಯಕ್ತಿಕ ಪಾಲಿಸಿದಾರರು ಮತ್ತು ಬಿಡ್/ಆಫರ್ ತೆರೆಯುವ ದಿನಾಂಕಕ್ಕೆ ಅರ್ಹರು*
- ಪಾಲಿಸಿದಾರರ ಪ್ಯಾನ್ ವಿವರಗಳನ್ನು ಫೆಬ್ರವರಿ 28, 2022 ರಂದು ಅಥವಾ ಮೊದಲು ನಿಗಮದೊಂದಿಗೆ ನವೀಕರಿಸಬೇಕು

*ದಯವಿಟ್ಟು ಫೆಬ್ರವರಿ 13, 2022 ರ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ ಅನ್ನು ಸಹ ನೋಡಿ

ಡಿಮ್ಯಾಟ್ ಖಾತೆ ತೆರೆಯುವ ಪ್ರಕ್ರಿಯೆ

- ಹತ್ತಿರದ ಕಾಮನ್ ಸರ್ವೀಸ್ ಸೆಂಟರ್ (ಸಿಎಸ್‌ಸಿ) ನಲ್ಲಿ ಹೋಗಿ ಡಿಮ್ಯಾಟ್ ಖಾತೆ ತೆರೆದುಕೊಳ್ಳಿ

ಅಥವಾ

- ಡಿಮ್ಯಾಟ್ ಖಾತೆ ತೆರೆಯಲು ಈ ವೆಬ್‌ಸೈಟ್‌ಗೆ ಭೇಟಿಕೊಡಿ ಇಲ್ಲಿ ನಿಮಗೆ ರಿಜಿಸ್ಟ್ರಡ್ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಅವರ ಲಿಸ್ಟ್ (ಡಿಪಿ) ಸಿಗಲಿದೆ

ಎನ್‌ಎಸ್‌ಡಿಎಲ್: https://nsdl.co.in/Open_NSDL_Demat_Account.php
ಸಿಡಿಎಸ್‌ಎಲ್ : https://www.cdslindia.com/DP/dplist.aspx

LIFE INSURANCE CORPORATION OF INDIA is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the draft red herring prospectus dated February 13, 2022 ("DRHP") read with the corrigendum dated February 15, 2022. The DRHP is available on the websites of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com, respectively and is also available on the websites of the BRLMs, i.e. Kotak Mahindra Capital Company Limited at https://investmentbank.kotak.com, Axis Capital Limited at www.axiscapital.co.in, BofA Securities India Limited at www.ml-india.com, Citigroup Global Markets India Private Limited at www.online.citibank.co.in/rhtm/citigroupglobalscreen1.htm, Goldman Sachs (India) Securities Private Limited at www.goldmansachs.com, ICICI Securities Limited at www.icicisecurities.com, JM Financial Limited at www.jmfl.com, J.P. Morgan India Private Limited at www.jpmipl.com, Nomura Financial Advisory and Securities (India) Private Limited at www.nomuraholdings.com/company/group/asia/india/index.html and SBI Capital Markets Limited at www.sbicaps.com. Potential investors should note that investment in equity shares involves a high degree of risk and for details relating to such risk, please see the section titled 'Risk Factors' of the RHP, when filed. Potential investors should not rely on the DRHP filed with SEBI for making any investment decision. Specific attention of the investors is invited to "Risk Factors" beginning on page 23 of the DRHP.

This announcement does not constitute an offer of securities for sale in any jurisdiction, including the United States, and any securities described in this announcement may not be offered or sold in the United States absent registration under the U.S. Securities Act of 1933, as amended, or an exemption from such registration. No public offering or sale of securities in the United States is contemplated.

ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA

LIC/RKS/2021-22/48/KAN

ನಮ್ಮನ್ನು ಫಾಲೋ ಮಾಡಿರಿ: YouTube LIC India Forever | IRDAI Regn No.: 512

ಪ್ರತಿ ಕ್ಷಣವೂ ನಿಮ್ಮೊಂದಿಗೆ

ಸಾವಿರಾರು ಮಂದಿ ಪೂರ್ವ ಉಕ್ರೇನ್‌ನಿಂದ ಸ್ಥಳಾಂತರ

ಉಕ್ರೇನ್ ಗಡಿ: ಶೆಲ್ ದಾಳಿ

ಕೀವ್ (ಎಪಿ): ರಷ್ಯಾ ಅಣ್ವಸ್ತ್ರ ಸಜ್ಜಿತ ಕ್ಷಿಪಣಿಗಳೊಂದಿಗೆ ಮಿಲಿಟರಿ ಶಕ್ತಿ ಪ್ರದರ್ಶಿಸಿದ ಬೆನ್ನಲ್ಲೇ ಉಕ್ರೇನ್ ಸೈನಿಕರು ಮತ್ತು ರಷ್ಯಾ ಬೆಂಬಲಿತ ಬಂಡುಕೋರರ ನಡುವಿನ ಸಂಪರ್ಕ ರೇಖೆಯ ಉದ್ದಕ್ಕೂ ನೂರಾರು ಫಿರಂಗಿ ಶೆಲ್‌ಗಳ ದಾಳಿ ನಡೆದಿದೆ. ಸಂಘರ್ಷಪೀಡಿತ ಪ್ರದೇಶವು ರಷ್ಯಾದ ಆಕ್ರಮಣಕ್ಕೆ ತುತ್ತಾಗಬಹುದೆಂಬ ಭಯ ಭಾನುವಾರ ಹೆಚ್ಚುತ್ತಿದ್ದಂತೆ ಸಾವಿರಾರು ಜನರು ಪೂರ್ವ ಉಕ್ರೇನ್‌ನಿಂದ ಸ್ಥಳಾಂತರ ಗೊಂಡಿದ್ದಾರೆ.

ಭಾರಿ ಪ್ರಮಾಣದಲ್ಲಿ ಶೆಲ್ ದಾಳಿ ನಡೆದಿರುವುದರಿಂದ ಬಂಡುಕೋರರ ಹಿಡಿತದಲ್ಲಿರುವ ಪೂರ್ವ ಡಾನ್‌ಬಾಸ್ ಪ್ರದೇಶದ ಏಳು ಚೆಕ್ ಪೋಸ್ಟ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಎಂದು ಉಕ್ರೇನ್ ಮಿಲಿಟರಿ ಹೇಳಿದೆ.

ಉಕ್ರೇನ್ ಮೇಲೆ ಒತ್ತಡ ಹೆಚ್ಚಿಸಲು ರಷ್ಯಾ ಭಾನುವಾರ ಬೆಲಾರಸ್ ಜತೆಗೆ ಜಂಟಿ ಸಮಾರಾಭ್ಯಾಸ ನಡೆಸಿತು. ಉಕ್ರೇನ್ ಮೇಲೆ ಆಕ್ರಮಣ ನಡೆಸುವ ಭಾಗವಾಗಿಯೇ ರಷ್ಯಾ ಬೆಲಾರಸ್‌ನಲ್ಲಿ 30 ಸಾವಿರ ಸೈನಿಕರನ್ನು ನಿಯೋಜಿಸಿದೆ ಎಂದು ನ್ಯಾಟೊ ಆರೋಪಿಸಿದೆ.

ಶನಿವಾರ ಸಂಘರ್ಷ ಪೀಡಿತ ಪ್ರದೇಶದಲ್ಲಿ ಉಕ್ರೇನ್ ಸೇನೆಯ ಇಬ್ಬರು ಯೋಧರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದರು.

ಸುಮಾರು 1,50,000 ಸೈನಿಕರು, ಯುದ್ಧವಿಮಾನಗಳು ಮತ್ತು ಶಸ್ತ್ರಾಸ್ತ್ರಗಳಿಂದ ರಷ್ಯಾ ತನ್ನ ನೆರೆಯ ರಾಷ್ಟ್ರ ಉಕ್ರೇನ್ ಅನ್ನು ಮೂರು ಕಡೆ ಸುತ್ತುವರಿದು ದಾಳಿ ಮಾಡಲು ಸಜ್ಜಾಗಿದೆ ಎಂದು ಪಾಶ್ಚಿಮಾತ್ಯ ರಾಷ್ಟ್ರಗಳ ನಾಯಕರು ಮತ್ತೆ ಎಚ್ಚರಿಸಿದ್ದಾರೆ.

ಉಕ್ರೇನ್ ಆಕ್ರಮಣ ತಡೆಯಲು ಯುರೋಪ್ ರಾಷ್ಟ್ರಗಳು ಎಲ್ಲ ರೀತಿಯ ರಾಜತಾಂತ್ರಿಕ ಮಾರ್ಗಗಳನ್ನು ಕೊನೆಯ ಪ್ರಯತ್ನವಾಗಿ ಬಳಸುತ್ತಿವೆ.

ರಷ್ಯಾ ಶನಿವಾರ ಕಪ್ಪು ಸಮುದ್ರದ ಕರಾವಳಿಯಲ್ಲಿ ನೌಕಾ ಸಮರಾಭ್ಯಾಸದ ಜತೆಗೆ ನೆರೆಯ ಬೆಲಾರಸ್‌ನಲ್ಲಿ ಪರಮಾಣು ಶಸ್ತ್ರಾಸ್ತ್ರ ಸಾಗಿಸುವ ಸಾಮರ್ಥ್ಯದ ಖಂಡಾಂತರ ಮತ್ತು ಕ್ರೂಸ್ ಕ್ಷಿಪಣಿಗಳ ಪರೀಕ್ಷೆ ಸಹ ನಡೆಸಿತ್ತು.

ಕಠಿಣ ನಿರ್ಬಂಧದ ಎಚ್ಚರಿಕೆ: ರಷ್ಯಾ ಆಕ್ರಮಣಕ್ಕೆ ನೆಪಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಹಲವು ತಿಂಗಳುಗಳಿಂದ ಆರೋಪಿಸುತ್ತಿರುವ ಅಮೆರಿಕ ಮತ್ತು ಯುರೋಪ್‌ನ ಪ್ರಮುಖ ರಾಷ್ಟ್ರಗಳು ಒಂದು ವೇಳೆ ರಷ್ಯಾ ಉಕ್ರೇನ್ ಮೇಲೆ ಯುದ್ಧ ಸಾರಿದರೆ ತಕ್ಷಣದ ಕಠಿಣ ನಿರ್ಬಂಧಗಳನ್ನು ಪುಟಿನ್ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿವೆ.

ಮಾತುಕತೆ- ಪುಟಿನ್‌ಗೆ ಉಕ್ರೇನ್ ಅಧ್ಯಕ್ಷ ಆಹ್ವಾನ: ಪೂರ್ವ ಉಕ್ರೇನ್‌ನಲ್ಲಿ ಪ್ರತ್ಯೇಕತಾವಾದಿ ನಾಯಕರು ಮಿಲಿಟರಿ ಪೂರ್ಣ ಸಜ್ಜುಗೊಳಿಸುವಿಕೆಗೆ ಆದೇಶ ನೀಡಿ, ಹೆಚ್ಚಿನ ನಾಗರಿಕರನ್ನು ರಷ್ಯಾಕ್ಕೆ ಕಳುಹಿಸಿದ ಕೆಲವೇ ಗಂಟೆಗಳಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸಂಧಾನ ಮಾತುಕತೆಗೆ ಪುಟಿನ್‌ಗೆ ಆಹ್ವಾನ ನೀಡಿದ್ದಾರೆ.

ಬಿಕ್ಕಟ್ಟು ಪರಿಹರಿಸಲು ಉಭಯ ನಾಯಕರ ಭೇಟಿಗೆ ಸ್ಥಳ ನಿಗದಿಪಡಿಸುವಂತೆ ಅವರು ಮ್ಯೂನಿಕ್ ಭದ್ರತಾ ಸಮ್ಮೇಳನದಲ್ಲಿ ಪುಟಿನ್ ಅವರಿಗೆ ಕರೆ ನೀಡಿದ್ದಾರೆ. 'ಶಾಂತಿಯುತ ಇತ್ಯರ್ಥಕ್ಕಾಗಿ ಉಕ್ರೇನ್ ರಾಜತಾಂತ್ರಿಕ ಮಾರ್ಗ ಮಾತ್ರ ಅನುಸರಿಸುವುದನ್ನು ಮುಂದುವರಿಸುತ್ತದೆ' ಎಂದು ಝೆಲೆನ್‌ಸ್ಕಿ ಹೇಳಿದರು. ಇದಕ್ಕೆ ರಷ್ಯಾ ಕಡೆಯಿಂದ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಬಂಡುಕೋರರ ಹಿಡಿತದಲ್ಲಿರುವ ಪ್ರದೇಶಗಳ ನಿವಾಸಿಗಳಿಗೆ ಸುಮಾರು 7 ಲಕ್ಷ ಪಾಸ್‌ಪೋರ್ಟ್‌ಗಳನ್ನು ನೀಡಲಾಗಿದೆ. ರಷ್ಯಾದ ನಾಗರಿಕರು ಅಳಿವಿನಂಚಿನಲ್ಲಿದ್ದಾರೆ ಎಂಬ ಹೇಳಿಕೆಗಳನ್ನು ಮಿಲಿಟರಿ ಕಾರ್ಯಾಚರಣೆಗೆ ಸಮರ್ಥನೆಯಾಗಿ ಬಳಸಲೂಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಡೊನೆಟ್‌ಸ್ಕ್ ನಗರದಲ್ಲಿ ಹಲವು ಬಾರಿ ಸ್ಫೋಟದ ಸದ್ದು: ಪೂರ್ವ ಉಕ್ರೇನ್‌ನ ಪ್ರತ್ಯೇಕತಾವಾದಿಗಳ ಹಿಡಿತದಲ್ಲಿರುವ ಡೊನೆಟ್‌ಸ್ಕ್ ನಗರದ ಕೇಂದ್ರ ಭಾಗದಲ್ಲಿ ಭಾನುವಾರ ಹಲವು ಬಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಜನರಿಗೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ದೊಡ್ಡ ಧ್ವನಿವರ್ಧಕದಲ್ಲಿ ಮನವಿ ಮಾಡುತ್ತಿರುವುದು ಕಂಡುಬಂತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ರಾಯಿಟರ್ಸ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಉಕ್ರೇನ್ ತೊರೆಯಲು ಕರೆ: ಕೆಲವೇ ದಿನಗಳಲ್ಲಿ ಯುದ್ಧ ಸಂಭವಿಸುವ ಹೊಸ ಸೂಚನೆಗಳು ಗೋಚರಿಸಿದ ಬೆನ್ನಲ್ಲೇ ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳು ತಮ್ಮ ಪ್ರಜೆಗಳಿಗೆ ಉಕ್ರೇನ್ ತೊರೆಯುವಂತೆ ಸೂಚಿಸಿವೆ.

ರಷ್ಯಾ ಆಕ್ರಮಣದ ಪ್ರಮುಖ ಗುರಿಗಳಾಗಿರುವ ಉಕ್ರೇನ್ ರಾಜಧಾನಿ ಕೀವ್ ಮತ್ತು ಒಡೆಸಾಗೆ ಜರ್ಮನಿಯ ವಾಯುಯಾನ ಸಂಸ್ಥೆ ಲುಫ್ಥಾನ್ಸಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದೆ.

ಕೀವ್‌ನಲ್ಲಿರುವ ನ್ಯಾಟೊ ಸಂಪರ್ಕ ಕಚೇರಿಯು ಸಿಬ್ಬಂದಿಯನ್ನು ಬ್ರಸೆಲ್ಸ್‌ಗೆ ಪಶ್ಚಿಮ ಉಕ್ರೇನ್ ನಗರ ಎಲ್ವಿವ್‌ಗೆ ಸ್ಥಳಾಂತರಿಸಲಾಗಿದೆ ಎಂದಿದೆ.

ಉಕ್ರೇನ್‌ನಲ್ಲಿ ಸೈನಿಕರು ಮಹಿಳೆಯರಿಗೆ ಶಸ್ತ್ರ ತರಬೇತಿ ನೀಡಿದರು –ರಾಯಿಟರ್ಸ್ ಚಿತ್ರ

ಆಕ್ರಮಣ ನಡೆದರೆ ಡಾಲರ್, ಪೌಂಡ್‌ಗೆ ತಡೆ: ಪುಟಿನ್‌ಗೆ ಬ್ರಿಟನ್ ಎಚ್ಚರಿಕೆ

ಲಂಡನ್ (ರಾಯಿಟರ್ಸ್): ಉಕ್ರೇನ್ ಆಕ್ರಮಣಕ್ಕೆ ರಷ್ಯಾ ಅಧ್ಯಕ್ಷ ಪುಟಿನ್ ಆದೇಶಿಸಿದರೆ ಯುಎಸ್ ಡಾಲರ್ ಮತ್ತು ಬ್ರಿಟಿಷ್ ಪೌಂಡ್‌ಗಳಲ್ಲಿ ರಷ್ಯಾದ ಕಂಪನಿಗಳು ವ್ಯವಹರಿಸುವುದನ್ನು ಅಮೆರಿಕ ಮತ್ತು ಬ್ರಿಟನ್ ತಡೆ ಹಿಡಿಯಲಿವೆ ಎಂದು ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಭಾನುವಾರ ಎಚ್ಚರಿಕೆ ನೀಡಿದ್ದಾರೆ. ಮ್ಯೂನಿಕ್ ಭದ್ರತಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅವರು ಬಿಬಿಸಿಗೆ ನೀಡಿರುವ ಸಂದರ್ಶನದಲ್ಲಿ ರಷ್ಯಾ ಅಧ್ಯಕ್ಷರಿಗೆ ಈ ಎಚ್ಚರಿಕೆ ರವಾನಿಸಿದ್ದಾರೆ.

ರಷ್ಯಾದ ಹೆಚ್ಚಿನ ಹಣದ ವಹಿವಾಟು ಲಂಡನ್ ಹಣಕಾಸು ಮಾರುಕಟ್ಟೆ ಮೂಲಕ ನಡೆಯುತ್ತದೆ. ರಷ್ಯಾ ಕಂಪನಿಗಳು ಹಣಕಾಸು ಮಾರುಕಟ್ಟೆಗಳಲ್ಲಿ ಬಂಡವಾಳ ಸಂಗ್ರಹಿಸುವುದನ್ನು ನಿರ್ಬಂಧಿಸುವ ಜತೆಗೆ, ರಷ್ಯಾ ಹೊಂದಿರುವ ಕಂಪನಿಗಳು ಮತ್ತು ಆಸ್ತಿಗಳ ಮಾಲೀಕತ್ವವನ್ನು ಬಹಿರಂಗಪಡಿಸಲಾಗುವುದು. ಅಲ್ಲದೇ ರಷ್ಯಾ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸಲಾಗುವುದು ಎಂದು ಜಾನ್ಸನ್ ಬೆದರಿಕೆ ಹಾಕಿದ್ದಾರೆ. ಎರಡನೇ ಮಹಾಯುದ್ಧದ ನಂತರ ಯುರೋಪ್ ಅನ್ನು ಭೀಕರ ಸಂಘರ್ಷದಲ್ಲಿ ಮುಳುಗಿಸಲು ರಷ್ಯಾ ಸಿದ್ಧತೆ ನಡೆಸುತ್ತಿದೆ. ಉಕ್ರೇನ್‌ನ ಆಕ್ರಮಣ ಮಾಡಿದರೆ ಮಾಸ್ಕೋ ಜಾಗತಿಕ ಅರ್ಥವ್ಯವಸ್ಥೆಯಿಂದ ಹೊರಗುಳಿಯಲಿದೆ ಎಂದು ಅವರು ಎಚ್ಚರಿಸಿದ್ದಾರೆ.

'ಶಾಂತಿಮಂತ್ರ ಜಪಿಸಲ್ಲ'

ಮ್ಯೂನಿಕ್, ಜರ್ಮನಿ (ಎಎಫ್‌ಪಿ): ಉಕ್ರೇನ್ ಗಡಿಯುದ್ದಕ್ಕೂ ರಷ್ಯಾ ಉದ್ವಿಗ್ನ ಪರಿಸ್ಥಿತಿ ನಿರ್ಮಿಸುತ್ತಿರುವಾಗ ನಾವು ಶಾಂತಿಮಂತ್ರ ಜಪಿಸುತ್ತಾ ಸುಮ್ಮನೆ ಕೂರುವುದಿಲ್ಲ ಎಂದು ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಚಾರ್ಲ್ಸ್ ಮಿಷೆಲ್ ಭಾನುವಾರ ಎಚ್ಚರಿಕೆ ನೀಡಿದ್ದಾರೆ.

ರಷ್ಯಾ ಮಾತುಕತೆಗೆ ಬಯಸುತ್ತಿದೆಯೇ ಎನ್ನುವ ದೊಡ್ಡ ಪ್ರಶ್ನೆ ಬಾಕಿ ಉಳಿದಿದೆ. ಅದೇ ಏನೆ ಇರಲಿ, ರಷ್ಯಾ ಕ್ಷಿಪಣಿ ಪರೀಕ್ಷೆ ಮತ್ತು ಮಿಲಿಟರಿ ಜಮಾವಣೆಯನ್ನು ಮುಂದುವರಿಸುತ್ತಿರುವಾಗ ನಾವು ನಾವು ಶಾಂತಿಮಂತ್ರ ಜಪಿಸುತ್ತಾ ಕೂರುವುದಿಲ್ಲ ಎಂದು ಮಿಷೆಲ್ ಮ್ಯೂನಿಕ್ ಭದ್ರತಾ ಸಮ್ಮೇಳನದಲ್ಲಿ ಹೇಳಿದರು.

'ಉಕ್ರೇನ್‌ನಿಂದ ನಿರ್ಗಮಿಸಿ'

ನವದೆಹಲಿ (ಪಿಟಿಐ): 'ವಾಸ್ತವ್ಯ ಅನಿವಾರ್ಯ ಅಲ್ಲದಿದ್ದರೆ ಉಕ್ರೇನ್‌ನಿಂದ ತಾತ್ಕಾಲಿಕವಾಗಿ ನಿರ್ಗಮಿಸಬೇಕು' ಎಂದು ಉಕ್ರೇನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಭಾರತೀಯ ವಾಸಿಗಳಿಗೆ ಸಲಹೆ ಮಾಡಿದೆ.

ಉನ್ನತ ಮಟ್ಟದಲ್ಲಿ ಉದ್ವಿಗ್ನ ಸ್ಥಿತಿ, ಅನಿಶ್ಚಿತತೆ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ ಎಂದು ರಾಯಭಾರ ಕಚೇರಿ ಹೇಳಿದೆ.

ಮ್ಯಾಕ್ರನ್ –ಪುಟಿನ್ ಮಾತುಕತೆ

ಪ್ಯಾರಿಸ್(ಎಎಫ್‌ಪಿ): ಉಕ್ರೇನ್‌ನಲ್ಲಿನ ಪರಿಸ್ಥಿತಿಯ ಬಗ್ಗೆ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವೆ ಭಾನುವಾರ ದೂರವಾಣಿ ಮೂಲಕ ಮಾತುಕತೆ ನಡದಿದೆ.

ಉಕ್ರೇನ್‌ನ ಮೇಲೆ ರಷ್ಯಾದ ಆಕ್ರಮಣ ತಡೆಯುವ ಕೊನೆಯ ಪ್ರಯತ್ನದ ಭಾಗವಾಗಿ ಫ್ರೆಂಚ್ ಕಡೆಯಿಂದ ಬೆಳಿಗ್ಗೆ 11ಕ್ಕೆ ಕರೆ ಮಾಡಿ, ಪುಟಿನ್ ಜತೆ ಮಾತುಕತೆ ನಡೆಸಲಾಯಿತು ಎಂದು ಫ್ರೆಂಚ್ ಅಧ್ಯಕ್ಷರ ಕಚೇರಿ ತಿಳಿಸಿದೆ.

ಸಹಾಯಕ ಸರ್ಕಾರಿ ಅಭಿಯೋಜಕರ ನೇಮಕದಲ್ಲಿ ಅಕ್ರಮ ಆರೋಪ

ಇಲಾಖಾ ವಿಚಾರಣೆಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 2013ರಲ್ಲಿ ನಡೆದ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಕ್ಕೆ ಸಂಬಂಧಿಸಿದಂತೆ ಸಹಾಯಕ ಸರ್ಕಾರಿ ಅಭಿಯೋಜಕರ ವಿರುದ್ಧ ಉಪಲೋಕಾಯುಕ್ತರ ವರದಿ ಆಧರಿಸಿ ನಡೆಯುತ್ತಿದ್ದ ವಿಚಾರಣೆಗೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿದೆ.

ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಗೊಳ್ಳದಿದ್ದ ಎಚ್.ಟಿ.ರವಿ ಅವರು ಆಗಿನ ಪ್ರಾಸಿಕ್ಯೂಷನ್ ನಿರ್ದೇಶಕ ಚಂದ್ರಶೇಖರ್ ಹಿರೇಮಠ, ಇನ್ನೊಬ್ಬ ಸಿಬ್ಬಂದಿ ವಿರುದ್ಧ ನೀಡಿದ್ದ ದೂರು ಆಧರಿಸಿ ವಿಚಾರಣೆ ನಡೆಸಲಾಗುತ್ತಿತ್ತು.

ಈ ಬಗ್ಗೆ ಸರೋಜಿನಿ ವೀರಪ್ಪ ಬಟಕುರ್ಕಿ ಮತ್ತು ಇತರರ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡ ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ಮತ್ತು ಪಿ.ಎಸ್.ನರಸಿಂಹ ಅವರಿದ್ದ ಪೀಠವು ಇಲಾಖಾ ವಿಚಾರಣೆಗೆ ತಡೆಯಾಜ್ಞೆ ನೀಡಿತು.

ಅರ್ಜಿದಾರರ ಪರವಾಗಿ ಹಿರಿಯ ವಕೀಲ ಬಸವ ಪ್ರಭು ಎಸ್ ಪಾಟೀಲ ಮತ್ತು ವಕೀಲರಾದ ಚಿನ್ಮಯ್ ದೇಶಪಾಂಡೆ ಮತ್ತು ಅನಿರುದ್ಧ್ ಸಂಗನೇರಿಯಾ ಅವರು ಹಾಜರಿದ್ದರು. ಉಪಲೋಕಾಯುಕ್ತರ ಪರವಾಗಿ ವಕೀಲರಾದ ಶೈಲೇಶ್ ಮಡಿಯಾಳ್ ಮತ್ತು ನಿಶಾಂತ್ ಪಾಟೀಲ್ ಹಾಜರಿದ್ದು, 'ವಿಚಾರಣೆಯನ್ನು ನಾಲ್ಕು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ' ಎಂಬುದನ್ನು ಪೀಠದ ಗಮನಕ್ಕೆ ತಂದರು.ಇದೇ ಸಂದರ್ಭದಲ್ಲಿ ಪೀಠವು ಅರ್ಜಿಗಳನ್ನು ಇತ್ಯರ್ಥಪಡಿಸುವವರೆಗೂ ಇಲಾಖಾ ವಿಚಾರಣೆಯನ್ನು ಕೈಗೊಳ್ಳಬಾರದು ಎಂದು ಪೀಠವು ತಿಳಿಸಿತು.

ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಸುಮಾರು 60 ಜನರು ನೇಮಕಗೊಂಡಿದ್ದು, ವಿಚಾರಣೆ ಎದುರಿಸುತ್ತಿದ್ದಾರೆ.

ಆಯ್ಕೆ ಪ್ರಶ್ನಿಸಿದ್ದವರಲ್ಲಿ 9 ಮಂದಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರೆ, ಉಳಿದವರ ಅರ್ಜಿಯ ವಿಚಾರಣೆಯು ಹೈಕೋರ್ಟ್‌ನಲ್ಲಿ ಬಾಕಿ ಉಳಿದಿದೆ.

ಹಳ್ಳಿಗರಿಗೆ ಬ್ಯೂಟಿಷಿಯನ್, ಟೆಕ್ನೀಷಿಯನ್ ಉಚಿತ ತರಬೇತಿ ಯೋಜನೆ

ಮನೆ ಬಾಗಿಲಿಗೆ ಬರಲಿದೆ ಕೌಶಲ್ಯ ರಥ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಿಮಗೆ ಬ್ಯೂಟಿಷಿಯನ್ (ಪ್ರಸಾದನ ಕಲಾವಿದೆ) ಆಗಬೇಕೆಂಬ ಕನಸಿದೆಯೇ, ಫ್ಯಾನ್, ಮಿಕ್ಸಿ, ಗ್ಯಾಸ್ ಸ್ಟೌ, ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿ ಕಲಿತು ಟೆಕ್ನಿಷಿಯನ್ ಆಗಬೇಕೆಂದಿದೆಯೇ? ಹಾಗಿದ್ದರೆ, ಇನ್ನು ಮುಂದೆ ಶುಲ್ಕ ಕಟ್ಟಿ ಈ ತರಬೇತಿ ಪಡೆಯಲು ಪಟ್ಟಣಕ್ಕೆ ಹೋಗಬೇಕೆಂದೇನೂ ಇಲ್ಲ. ನೀವಿರುವ ಹಳ್ಳಿಗೇ, ಮನೆ ಬಾಗಿಲಿಗೇ ಬರಲಿದೆ 'ಕೌಶಲ್ಯ ರಥ'!

'ಮುಖ್ಯಮಂತ್ರಿ ಕೌಶಲ ಕರ್ನಾಟಕ ಯೋಜನೆ' ಅಡಿಯಲ್ಲಿ ಗ್ರಾಮೀಣ ಭಾಗದ ಮತ್ತು ಹಳ್ಳಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಯುವ ಜನತೆಗೆ ಈ ಎರಡೂ ಕೌಶಲಗಳ ತರಬೇತಿ ನೀಡಲು ರಾಜ್ಯ ಕೌಶಲ ಅಭಿವೃದ್ಧಿ ನಿಗಮ ಮುಂದಾಗಿದೆ. ಈ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 23 ರಂದು ಚಾಲನೆ ನೀಡಲಿದ್ದಾರೆ.

'ಹಳ್ಳಿಗಳಿಗೂ ಕೌಶಲ ತಲುಪಬೇಕು. ಅಲ್ಲಿನ ಯುವ ಜನರೂ ತರಬೇತಿ ಪಡೆದು ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡು ಬದುಕು ಕಟ್ಟಿಕೊಳ್ಳಬೇಕು' ಎಂಬ ಗುರಿ ಇಟ್ಟು ಕೌಶಲ ಅಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ನಿಗಮದ ಅಧಿಕಾರಿಗಳ ಜೊತೆ ಸಮಾಲೋಚಿಸಿ ಯೋಜನೆ ರೂಪಿಸಿದ್ದಾರೆ. ರಾಜ್ಯದ ಎಲ್ಲ ಹಳ್ಳಿಗೆ ಕೌಶಲ ಬಲ್ಲ ಪರಿಣತರು, ಪರಿಕರಗಳ ಜೊತೆ 'ಕೌಶಲ್ಯ ರಥ'ದಲ್ಲಿ (ಬಸ್) ತೆರಳಿ, ಆಸಕ್ತರಿಗೆ ಉಚಿತವಾಗಿ ತರಬೇತಿ ನೀಡುವುದು ಯೋಜನೆಯ ಉದ್ದೇಶ.

ಏನಿದು ತರಬೇತಿ: ರಾಜ್ಯದ ಪ್ರತಿ ಹಳ್ಳಿಗೆ ತೆರಳಲಿರುವ ಈ 'ಕೌಶಲ್ಯ ರಥ', ಸಹಾಯಕ ಬ್ಯೂಟಿ ಥೆರಾಪಿಸ್ಟ್ ಮತ್ತು ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಎಂಬ ಎರಡು ವಿಧದ ಕೌಶಲ ತರಬೇತಿಯನ್ನು ತಲಾ 208 ಗಂಟೆ ಅವಧಿಯಲ್ಲಿ ನೀಡಲಿದೆ. ನಿತ್ಯ 8 ಗಂಟೆ ಅವಧಿ ತರಬೇತಿ ನೀಡಲಿದೆ. 18ರಿಂದ 35 ವಯೋಮಾನ, ಕನಿಷ್ಠ 8ನೇ ತರಗತಿ ಓದಿದವರು ಈ ತರಬೇತಿ ಪಡೆಯಬಹುದು. ಹೆಸರು ನೋಂದಾಯಿಸಿದವರನ್ನು ತಲಾ 15 ಮಂದಿಯ ತಂಡಗಳಾಗಿ ಮಾಡಿ ಒಂದು ತಿಂಗಳು ತರಬೇತಿ ನೀಡಲಾಗುವುದು.

ಮೊದಲ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯ 11, ಮೈಸೂರು ಜಿಲ್ಲೆಯ 12 ಕಡೆಗಳಲ್ಲಿ ಬ್ಯೂಟಿಷಿಯನ್ ತರಬೇತಿ, ಬಾಗಲಕೋಟೆ ಜಿಲ್ಲೆಯ 9 ಮತ್ತು ಚಾಮರಾಜನಗರ ಜಿಲ್ಲೆಯ 7 ಕಡೆಗಳಲ್ಲಿ ಎಲೆಕ್ಟ್ರಿಷಿಯನ್ ತರಬೇತಿ ನೀಡಲು ನಿಗಮ ಈಗಾಗಲೇ ರೂಪುರೇಷೆ ಸಿದ್ಧಪಡಿಸಿದೆ. ರಾಜ್ಯದಾದ್ಯಂತ ತರಬೇತಿ ನೀಡಲು ಈಗಾಗಲೇ ನಾಲ್ಕು ಬಸ್‌ಗಳನ್ನು ಸಿದ್ಧಪಡಿಸಲಾಗಿದೆ. ಸದ್ಯದಲ್ಲಿ ಇನ್ನೂ ನಾಲ್ಕು ಬಸ್‌ಗಳು ಸಿದ್ಧವಾಗಲಿದೆ.

ಎಲೆಕ್ಟ್ರಿಕಲ್ ಟೆಕ್ನಿಷಿಯನ್: ಈ ತರಬೇತಿಯಲ್ಲಿ ಮೊದಲ 88 ಗಂಟೆ ಅವಧಿಯಲ್ಲಿ ಬೇಸಿಕ್ ಕಲಿಸಲಾಗುತ್ತದೆ. ಬಳಿಕ ತಲಾ 40 ಗಂಟೆಯ ಅವಧಿಯಲ್ಲಿ ಎಲೆಕ್ಟ್ರಿಕಲ್ ವಸ್ತುಗಳ ದುರಸ್ತಿ, ಮೋಟಾರ್ ವೈಡಿಂಗ್, ಮನೆಯಲ್ಲಿ ಬಳಸುವ ಎಲೆಕ್ಟ್ರಿಕಲ್, ಗ್ಯಾಸ್ ಸ್ಟೌ, ಫ್ಯಾನ್ ಮುಂತಾದ ವಸ್ತುಗಳ ದುರಸ್ತಿ ಕುರಿತು ತರಬೇತಿ ನೀಡಲಾಗುವುದು.

ಸಹಾಯಕ ಬ್ಯೂಟಿ ಥೆರಾಪಿಸ್ಟ್: ಈ ತರಬೇತಿ ಪಡೆದವರು ಬೇಸಿಕ್ ಚರ್ಮದ ಆರೈಕೆ (ಸ್ಕಿನ್ ಕೇರ್) ಸೇವೆ, ಸರಳ ಮೇಕಪ್, ಪೆಡಿಕ್ಯೂರ್ (ಪಾದೋಪಚಾರ) ಮತ್ತು ಮನಿಕ್ಯೂರ್ (ಹಸ್ತಾಂಲಕಾರ), ಸರಳ ಮೆಹಂದಿ, ಕೇಶ ವಿನ್ಯಾಸ ಮಾಡಬಹುದು.

ಏನು ಲಾಭ: 'ಎಲೆಕ್ಟ್ರಿಕಲ್ ಟೆಕ್ನಿಷಿಯನ್ ತರಬೇತಿ ಪಡೆದವರು ತಮ್ಮ ಮನೆಗಳಲ್ಲಿ ಕೆಟ್ಟು ಹೋದ ಎಲೆಕ್ಟ್ರಿಕಲ್ ವಸ್ತುಗಳನ್ನು ದುರಸ್ತಿ ಮಾಡಬಹುದು. ಬಲ್ಬ್, ಟ್ಯೂಬ್ ಲೈಟ್, ಎಲ್‌ಇಡಿ ಬಲ್ಬ್, ಸ್ವಿಚ್‌ಗಳು, ಸರ್ಕ್ಯೂಟ್ ಬ್ರೇಕರ್‌ಗಳನ್ನು ಬದಲಾಯಿಸಬಹುದು. ಇಸ್ತ್ರಿ ಪೆಟ್ಟಿಗೆ, ಕಾಲಿಂಗ್ ಬೆಲ್, ಮಿಕ್ಸಿ, ಗ್ಯಾಸ್ ಸ್ಟೌ ಮುಂತಾದವುಗಳನ್ನು ದುರಸ್ತಿ ಮಾಡಬಹುದು. ಫ್ಯಾನ್, ಮಿಕ್ಸಿ, ಸಬ್ ಮರ್ಸಿಬಲ್ ಪಂಪ್ ಮುಂತಾದವುಗಳ ಮೋಟಾರ್ ವೈಡಿಂಗ್, ದುರಸ್ತಿ ಕಾರ್ಯ ಮಾಡಬಹುದು. ಹೊಸ ವಿದ್ಯುತ್ ಅಳವಡಿಕೆ ಕೆಲಸಗಳನ್ನು ನುರಿತ ತಾಂತ್ರಿಕರ ಮೇಲ್ವಿಚಾರಣೆಯಲ್ಲಿ ಮಾಡುವ ಮೂಲಕ ಉದ್ಯೋಗವನ್ನು ಮಾಡಬಹುದು' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಅಶ್ವಿನ್ ಗೌಡ ಅವರು ತಿಳಿಸಿದರು.

ಪ್ರಮಾಣಪತ್ರ, ಪರಿಕರಗಳ ಕಿಟ್

'ಎರಡೂ ಕೌಶಲಗಳ ತರಬೇತಿಯಲ್ಲಿ ಭಾಗವಹಿಸಿದವರಿಗೆ ಪ್ರಾಯೋಗಿಕ ಕಲಿಕೆಯ ಬಗ್ಗೆ ಕೊನೆಯ ದಿನ ತಟಸ್ಥ ಸಂಸ್ಥೆಯೊಂದರಿಂದ ಪರೀಕ್ಷೆ ನಡೆಸಲಾಗುವುದು. ಅದರಲ್ಲಿ ಉತ್ತೀರ್ಣರಾದವರಿಗೆ ಕೌಶಲ ಅಭಿವೃದ್ಧಿ ನಿಗಮದ ವತಿಯಿಂದ ಪ್ರಮಾಣಪತ್ರ ನೀಡಲಾಗುವುದು. ಅಲ್ಲದೆ, ತರಬೇತಿ ಪಡೆದ ಕೌಶಲಕ್ಕೆ ಸಂಬಂಧಿಸಿ ಪರಿಕರಗಳ ಕಿಟ್ ಉಚಿತವಾಗಿ ನೀಡಲಾಗುವುದು. ಹಳ್ಳಿಗಳಲ್ಲಿ ಬ್ಯೂಟಿಷಿಯನ್ ಮತ್ತು ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಕೌಶಲ ಕಲಿತವರಿಗೆ ಹೆಚ್ಚಿನ ಬೇಡಿಕೆ ಇದೆ. ತರಬೇತಿ ಪಡೆದು ಸ್ವಾವಲಂಬಿಗಳಾಗಲು ಗ್ರಾಮೀಣ ಪ್ರದೇಶದವರಿಗೆ ಇದರಿಂದ ಅವಕಾಶ ಆಗಲಿದೆ' ಎಂದು ಅಶ್ವಿನ್ ಗೌಡ ತಿಳಿಸಿದರು.

ರಾಜ್ಯದ ಗ್ರಾಮೀಣ ಯುವ ವರ್ಗವನ್ನು ಸ್ವ ಉದ್ಯೋಗಿಗಳನ್ನಾಗಿಸುವ ಉದ್ದೇಶದಿಂದ ಈ ವಿನೂತನ ಕೌಶಲ ತರಬೇತಿ ಯೋಜನೆ ರೂಪಿಸಲಾಗಿದೆ

ಡಾ. ಸಿ.ಎನ್. ಅಶ್ವತ್ಥನಾರಾಯಣ
ಐಟಿ ಬಿಟಿ, ಕೌಶಲಾಭಿವೃದ್ಧಿ ಸಚಿವ

ಸೋಮವಾರ, ಫೆಬ್ರುವರಿ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 52 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಐ.ಟಿ ಕ್ಷೇತ್ರ ಚೇತರಿಕೆ ಕಾಣುತ್ತಿದೆ. ಆಧುನಿಕ ತಂತ್ರಜ್ಞಾನದ ಕೋರ್ಸ್‌ಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉದ್ಯೋಗದ ಅಭಯವೂ ದೊರೆಯುತ್ತಿದೆ.

ಆಳ-ಅಗಲ
ಸಿದ್ಧಪುರುಷನ ಕೈಗೊಂಬೆಯಾಗಿದ್ದ ಷೇರುಪೇಟೆ ಮುಖ್ಯಸ್ಥೆ!
ಅಹಮದಾಬಾದ್ ಸ್ಫೋಟ: ರಾಜ್ಯದ ಮೂವರಿಗೆ ಶಿಕ್ಷೆ 8
'ಕೈ' ನಾಯಕರ ಅಸ್ತ್ರಕ್ಕೆ ಪ್ರತ್ಯಸ್ತ್ರ ಪ್ರಯೋಗಿಸಲು ಸರ್ಕಾರದ ಚಿಂತನೆ
ಕ್ರಿಕೆಟ್: ಸೂರ್ಯಕುಮಾರ್ ಆಟಕ್ಕೆ ಒಲಿದ ಜಯ 11
ಸಂಧಾನ ಫಲಿಸದಿದ್ದರೆ ಅಧಿವೇಶನ ಮೊಟಕು? 8

ಬಹುಕೋಟಿ ಮೌಲ್ಯದ ಚಿಪ್‌ಗಳ ಕಳವು: ಐದು ತಿಂಗಳಾದರೂ ಸಿಗದ ಸುಳಿವು

ಆಧಾರ್ ದತ್ತಾಂಶ ಕೇಂದ್ರಕ್ಕೆ ಕನ್ನ!

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ದೇಶದ ಎಲ್ಲ ನಾಗರಿಕರ ಆಧಾರ್ ದತ್ತಾಂಶವನ್ನು ಸಂಗ್ರಹಿಸಿಟ್ಟಿರುವ 'ಯುಐಡಿಎಐ ದತ್ತಾಂಶ ಕೇಂದ್ರ'ದಲ್ಲಿ ಅತಿಭದ್ರತಾ ವಲಯದಲ್ಲಿ ಇರಿಸಿದ್ದ ಬಹುಕೋಟಿ ಮೌಲ್ಯದ ಕಂಪ್ಯೂಟರ್ ಚಿಪ್‌ಗಳು ಕಳವಾಗಿ ಐದು ತಿಂಗಳು ಕಳೆದರೂ ನಗರದ ಪೊಲೀಸರಿಗೆ ಆರೋಪಿಗಳ ಸುಳಿವು ಪತ್ತೆಹಚ್ಚಲು ಸಾಧ್ಯವಾಗಿಲ್ಲ.

ಈ ಪ್ರಕರಣದಲ್ಲಿ ಸುಮಾರು ₹ 17 ಕೋಟಿಗೂ ಹೆಚ್ಚು ಮೌಲ್ಯದ ಚಿಪ್‌ಗಳ ಕಳವು ನಡೆದಿದೆ. ₹ 2 ಕೋಟಿ ಮೌಲ್ಯದ ಚಿಪ್‌ಗಳು ಕಳವಾಗಿರುವ ಆರೋಪದ ಮೇಲೆ 2021 ರ ಸೆಪ್ಟೆಂಬರ್ 19 ರಂದು ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಐದು ತಿಂಗಳು ಕಳೆದರೂ ತನಿಖೆ ದಡ ಸೇರಿಲ್ಲ.

ಕ್ರಿಮಿನಲ್ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿದ ಮೂರು ತಿಂಗಳೊಳಗೆ ಆರೋಪಪಟ್ಟಿ ಸಲ್ಲಿಸಬೇಕು. ಆದರೆ, ಈ ಪ್ರಕರಣದಲ್ಲಿ ಗಡುವಿನೊಳಗೆ ಆರೋಪಿಗಳ ಪತ್ತೆ ಸಾಧ್ಯವಾಗಿಲ್ಲ. ಪೊಲೀಸರು ಮೂರು ತಿಂಗಳು ಹೆಚ್ಚುವರಿ ಕಾಲಾವಕಾಶವನ್ನು ನ್ಯಾಯಾಲಯದಿಂದ ಪಡೆದುಕೊಂಡಿದ್ದರು. ಒಂದು ತಿಂಗಳಷ್ಟೇ ಬಾಕಿ ಇದ್ದು, ಆ ವೇಳೆಗೂ ತನಿಖೆ ಗುರಿ ಮುಟ್ಟುವ ಕುರಿತು ಅನುಮಾನಗಳು ಮೂಡಿವೆ.

ಕೊಡಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಟಾಟಾನಗರದ ಎನ್‌.ಟಿ.ಐ. ಬಡಾವಣೆಯಲ್ಲಿ ಆಧಾರ್ ದತ್ತಾಂಶ ಕೇಂದ್ರವಿದೆ. ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಕಮಾಂಡೋಗಳು ಭದ್ರತೆ ಒದಗಿಸುತ್ತಾರೆ. ಈ ಕೇಂದ್ರದಲ್ಲಿ ಅಳವಡಿಸಲು ತಂದಿದ್ದ ಹೊಸ ಸರ್ವರ್ ಒಂದನ್ನು ಒಡೆದು ಅದರಲ್ಲಿದ್ದ ಕಂಪ್ಯೂಟರ್ ಚಿಪ್‌ಗಳನ್ನು ಕಳವು ಮಾಡಿರುವ ಘಟನೆ 2021 ರ ಆಗಸ್ಟ್–ಸೆಪ್ಟೆಂಬರ್ ಅವಧಿಯಲ್ಲಿ ನಡೆದಿತ್ತು.

ಎಚ್‌ಪಿಇ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ ಸರ್ವರ್ ಪೂರೈಸಿತ್ತು. ಕೆಲವು ದಿನಗಳ ಬಳಿಕ ಅದನ್ನು ಜೋಡಿಸಲು ಕಂಪನಿಯ ತಂತ್ರಜ್ಞರು ಬಂದಿದ್ದಾಗ ಚಿಪ್‌ಗಳನ್ನು ಕಳವು ಮಾಡಿರುವುದು ಪತ್ತೆಯಾಗಿತ್ತು. ಎಚ್‌ಪಿಇ ಕಂಪನಿಯ ವ್ಯವಸ್ಥಾಪಕ ಎನ್. ವಿಜಯಕುಮಾರ್ ನೀಡಿದ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿತ್ತು.

ಕಳ್ಳರ ಸುಳಿವೇ ಇಲ್ಲ: ಆಧಾರ್ ದತ್ತಾಂಶ ಕೇಂದ್ರದಲ್ಲಿ ಸರ್ವರ್‌ಗಳನ್ನು ಅತಿ ಭದ್ರತೆಯಲ್ಲಿ ಇರಿಸಲಾಗಿದೆ. ನಿರಂತರವಾಗಿ ಸಿಐಎಸ್‌ಎಫ್ ಕಮಾಂಡೊಗಳ ಕಾವಲಿದೆ.

ರಾಷ್ಟ್ರೀಯ ಭದ್ರತೆ ವ್ಯಾಪ್ತಿಯ ಪ್ರಕರಣ

ಆಧಾರ್ ದತ್ತಾಂಶ ಸಂಗ್ರಹ ಕೇಂದ್ರದಲ್ಲಿ ರಾಷ್ಟ್ರದ ಎಲ್ಲ ಜನರ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಿಡಲಾಗಿದೆ. ರಾಷ್ಟ್ರೀಯ ಭದ್ರತೆಯ ವ್ಯಾಪ್ತಿಯಲ್ಲಿ ಈ ಕೇಂದ್ರ ಸೇರಿದೆ. ಕ್ಷಿಪ್ರಗತಿಯಲ್ಲಿ ಆರೋಪಿಗಳನ್ನು ಬಂಧಿಸಬೇಕಿತ್ತು. ಅದು ಸಾಧ್ಯವಾಗದಿದ್ದರೆ ತನಿಖೆಯನ್ನು ಉನ್ನತಮಟ್ಟದ ತಂಡಕ್ಕೆ ವರ್ಗಾಯಿಸಬೇಕಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ನಿಖರ ಮೌಲ್ಯ ₹ 17 ಕೋಟಿ

ರ‍್ಯಾಕ್ ಸರ್ವರ್‌ಗಳು, ಬ್ಲೇಡ್ ಸರ್ವರ್‌ಗಳು, ನೆಟ್‌ವರ್ಕ್ ಸ್ವಿಚ್, 20 ಸಿಪಿಯುಗಳು, ವಿವಿಧ ಸಾಮರ್ಥ್ಯದ 108 ಮೆಮೊರಿ ಕಾರ್ಡ್, 104 ಹಾರ್ಡ್ ಡಿಸ್ಕ್‌ಗಳು, 17 ಏರ್ ಫ್ಲೋ ಗೈಡ್‌ಗಳು ಕಳವಾಗಿರುವ ಮಾಹಿತಿ ಎಫ್‌ಐಆರ್‌ನಲ್ಲಿವೆ. ಕಳುವಾಗಿರುವ ಚಿಪ್‌ಗಳ ಮೌಲ್ಯ ₹ 17 ಕೋಟಿಗೂ ಹೆಚ್ಚು ಎನ್ನುತ್ತವೆ ಮೂಲಗಳು.

ಕಳ್ಳತನ ಪ್ರಕರಣದ ಕುರಿತು ತನಿಖೆ ನಡೆಯುತ್ತಿದೆ. ಕೇಂದ್ರದ ಭದ್ರತಾ ಅಧಿಕಾರಿಗಳು ಸೇರಿದಂತೆ ಹಲವರಿಂದ ಮಾಹಿತಿ ಪಡೆಯಬೇಕಿರುವುದರಿಂದ ಸ್ವಲ್ಪ ನಿಧಾನವಾಗುತ್ತಿದೆ
ಕಮಲ್ ಪಂತ್
ಬೆಂಗಳೂರು ನಗರ ಪೊಲೀಸ್ ಕಮಿಷನರ್

4ನೇ ಪುಟ ನೋಡಿ

ಕೇಂದ್ರದ ತೆರಿಗೆ ಪಾಲಿನಲ್ಲಿ ₹ 7,850 ಕೋಟಿ ಕೊರತೆ

• ಭರತ್ ಜೋಶಿ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಅಂತ್ಯ ಸಮೀಪಿಸುತ್ತಿದ್ದು, ರಾಜ್ಯಕ್ಕೆ ಕೇಂದ್ರದ ತೆರಿಗೆ ವರಮಾನದಲ್ಲಿ ಬರಬೇಕಿದ್ದ ಪಾಲಿನಲ್ಲಿ ₹ 7,850.29 ಕೋಟಿ ಕೊರತೆಯಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಮಂಡಲದಲ್ಲಿ ಮಂಡಿಸಿರುವ ಮಾಹಿತಿಯಲ್ಲಿ ಈ ವಿವರ ಬಹಿರಂಗಪಡಿಸಿದ್ದಾರೆ. ಕೇಂದ್ರದಿಂದ ಕರ್ನಾಟಕಕ್ಕೆ ತೆರಿಗೆ ವರಮಾನ ಹಂಚಿಕೆಯಲ್ಲಿ ₹ 24,273.06 ಕೋಟಿ ಬರಬೇಕು. ಡಿಸೆಂಬರ್ ಅಂತ್ಯದವರೆಗೆ ₹ 16,422.77 ಕೋಟಿಯಷ್ಟೇ ಬಂದಿದೆ. ವಿವಿಧ ಯೋಜನೆಗಳಿಂದ ರಾಜ್ಯಕ್ಕೆ ನೀಡಬೇಕಿದ್ದ ಅನುದಾನಗಳಲ್ಲೂ ಕೊರತೆಯಾಗಿದೆ.

ಪ್ರಸಕ್ತ ಹಣಕಾಸು ವರ್ಷ ಕೇಂದ್ರದಿಂದ ಅನುದಾನದ ರೂಪದಲ್ಲಿ ₹ 28,254.76 ಕೋಟಿ ದೊರಕಬೇಕು. ಡಿಸೆಂಬರ್ ಅಂತ್ಯದವರೆಗೆ ₹ 19,737.88 ಕೋಟಿ ಬಂದಿದ್ದು, ₹ 8,507.88 ಕೋಟಿ ಕೊರತೆ ಆಗಿದೆ.

2020–21 ನೇ ಆರ್ಥಿಕ ವರ್ಷದಲ್ಲಿ ತೆರಿಗೆ ವರಮಾನದ ಹಂಚಿಕೆಯ ಪಾಲಿನ ರೂಪದಲ್ಲಿ ₹ 28,591.23 ಕೋಟಿ ರಾಜ್ಯಕ್ಕೆ ಬರಬೇಕಿತ್ತು. ಆದರೆ, ದೊರೆತದ್ದು ₹ 21,694.11 ಕೋಟಿ ಮಾತ್ರ. ಕೋವಿಡ್–19 ಸಂಕಷ್ಟದ ನಡುವೆಯೇ ಕೇಂದ್ರದ ತೆರಿಗೆ ಪಾಲಿನಲ್ಲೂ ₹ 6,897.12 ಕೋಟಿ ಕೊರತೆ ಉಂಟಾಯಿತು.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರದಲ್ಲೂ ಕೊರತೆ ಉದ್ಭವಿಸಿದೆ. ಈ ವರ್ಷ ₹12,708 ಕೋಟಿ ಜಿಎಸ್‌ಟಿ ಪರಿಹಾರದ ರೂಪದಲ್ಲಿ ದೊರಕಬಹುದು ಎಂಬ ನಿರೀಕ್ಷೆಯನ್ನು ರಾಜ್ಯ ಸರ್ಕಾರ ಹೊಂದಿತ್ತು. ಆದರೆ, ಡಿಸೆಂಬರ್ ಅಂತ್ಯದವರೆಗೆ ಜಿಎಸ್‌ಟಿ ಪರಿಹಾರದ ರೂಪದಲ್ಲಿ ₹5,447.97 ಕೋಟಿ ಮಾತ್ರ ಲಭಿಸಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಕೇಂದ್ರ ತೆರಿಗೆ ಸಂಗ್ರಹದಲ್ಲಿ ಕರ್ನಾಟಕದ ಪಾಲು ಶೇಕಡ 4.71ರಷ್ಟು ಎಂಬುದಾಗಿ 14ನೇ ಹಣಕಾಸು ಆಯೋಗ ನಿಗದಿಪಡಿಸಿತ್ತು. ಆದರೆ, 15ನೇ ಹಣಕಾಸು ಆಯೋಗ ರಾಜ್ಯದ ಪಾಲನ್ನು ಶೇ 3.64ಕ್ಕೆ ಇಳಿಸಿತು. ಇದರಿಂದಾಗಿ ಕರ್ನಾಟಕ ತೆರಿಗೆ ವರಮಾನದ ಪಾಲಿನಲ್ಲಿ ₹ 6,897.12 ಕೋಟಿಯನ್ನು ಕಳೆದುಕೊಂಡಿದೆ.

ಆಶಾದಾಯಕ ವಾತಾವರಣ: 'ಜಿಎಸ್‌ಟಿ ಹಂಚಿಕೆಯಲ್ಲಿ ರಾಜ್ಯಕ್ಕೆ ಹೆಚ್ಚಿನ ಪಾಲು ದೊರಕಬಹುದು. ಇದರಿಂದಾಗಿ ಕೇಂದ್ರದಿಂದ ದೊರಕಬೇಕಾದ ವರಮಾನದ ಪಾಲಿನಲ್ಲಿ ಕೊರತೆ ಉಳಿಯುವ ಸಾಧ್ಯತೆ ಕಡಿಮೆ' ಎನ್ನುತ್ತಾರೆ ಬಜೆಟ್ ಮತ್ತು ನೀತಿ ಅಧ್ಯಯನ ಕೇಂದ್ರದ ಹಿರಿಯ ಸಂಶೋಧನಾ ಸಲಹೆಗಾರ ಮಧುಸೂಧನ್ ಬಿ.ವಿ. ರಾವ್.

ಸದ್ಯದ ಅಂಕಿ-ಅಂಶಗಳನ್ನು ಗಮನಿಸಿದರೆ, ರಾಜ್ಯದ ವರಮಾನ ಸಂಗ್ರಹದಲ್ಲಿ ಜನವರಿ ವೇಳೆಗೆ ಶೇ 86ರಷ್ಟು ಗುರಿ ಸಾಧನೆಯಾಗಿದೆ. ಡಿಸೆಂಬರ್‌ನಿಂದ ₹ 19,000 ಕೋಟಿ ವರಮಾನ ಸಂಗ್ರಹವಾಗಿದೆ. ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಇನ್ನೂ ₹ 40,000 ಕೋಟಿ ಸಂಗ್ರಹವಾಗಬಹುದು ಎಂದು ಅವರು ಹೇಳಿದರು.

ತುಂಗಭದ್ರಾ ಆರತಿ ಮಂಟಪಕ್ಕೆ ಶಂಕುಸ್ಥಾಪನೆ

ಹರಿಹರ (ದಾವಣಗೆರೆ ಜಿಲ್ಲೆ): 'ದಕ್ಷಿಣ ಕಾಶಿ' ಎಂದು ಖ್ಯಾತಿ ಪಡೆರುವ ಹರಿಹರದ ತುಂಗಭದ್ರಾ ನದಿಯ ತಟದಲ್ಲಿ ತುಂಗಭದ್ರಾ ಆರತಿ ಯೋಗ ಮಂಟಪ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು. 4

ಮೇಕೆದಾಟು: 5 ದಿನಕ್ಕೆ ಪಾದಯಾತ್ರೆ ಸೀಮಿತ 4

ಚೀನಾ ಗಡಿಯಲ್ಲಿ 45 ವರ್ಷ ಶಾಂತಿ ಇತ್ತು: ಜೈಶಂಕರ್

ಮ್ಯೂನಿಕ್ (ಪಿಟಿಐ): ಚೀನಾವು ಒಪ್ಪಂದಗಳನ್ನು ಉಲ್ಲಂಘಿಸಿ ಸೇನೆಯನ್ನು ಗಡಿಯ ಬಳಿಗೆ ತಂದ ಕಾರಣ ಆ ದೇಶದ ಜತೆಗಿನ ಭಾರತದ ಸಂಬಂಧವು 'ಅತ್ಯಂತ ಕ್ಲಿಷ್ಟಕರ ಹಂತ'ಕ್ಕೆ ತಲುಪಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

'45 ವರ್ಷಗಳ ಕಾಲ ಶಾಂತಿ ಇತ್ತು. ಗಡಿ ನಿರ್ವಹಣೆ ಸ್ಥಿರವಾಗಿತ್ತು. 1975ರ ಬಳಿಕ ಗಡಿಯಲ್ಲಿ ಸೇನಾ ಕಾರ್ಯಾಚರಣೆಗೆ ಸಂಬಂಧಿಸಿ ಯಾವುದೇ ಸಾವು–ನೋವು ಉಂಟಾಗಿರಲಿಲ್ಲ. ಗಡಿಯ ಸಮೀಪಕ್ಕೆ ಸೇನೆಯನ್ನು ತರಬಾರದು ಎಂದು ಚೀನಾದ ಜತೆಗೆ ನಾವು ಒಪ್ಪಂದ ಮಾಡಿಕೊಂಡಿದ್ದರಿಂದ ಇದು ಸಾಧ್ಯವಾಗಿತ್ತು. ಈಗ ಚೀನಾವು ಆ ಒಪ್ಪಂದಗಳನ್ನು ಉಲ್ಲಂಘಿಸಿದೆ' ಎಂದು ಅವರು ಹೇಳಿದ್ದಾರೆ.

ಮ್ಯೂನಿಕ್ ಭದ್ರತಾ ಸಮಾವೇಶದ (ಎಂಎಸ್‌ಸಿ) ಚರ್ಚಾಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ.

ಗಡಿಯ ಸ್ಥಿತಿಯು ಸಂಬಂಧದ ಸ್ಥಿತಿಯನ್ನು ನಿರ್ಧರಿಸುವುದು ಅತ್ಯಂತ ಸಹಜ. ಗಡಿಯ ಸ್ಥಿತಿಯಿಂದಾಗಿಯೇ ಚೀನಾದ ಜತೆಗಿನ ಸಂಬಂಧವು ಕ್ಲಿಷ್ಟಕರ ಸ್ಥಿತಿಗೆ ತಲುಪಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪಾಂಗಾಂಗ್ ಸರೋವರ ಪ್ರದೇಶದಲ್ಲಿ ನಡೆದ ಸಂಘರ್ಷದ ಬಳಿಕ ಭಾರತ–ಚೀನಾ ಸಂಬಂಧವು ಬಿಕ್ಕಟ್ಟಿಗೆ ಸಿಲುಕಿತ್ತು. ಎರಡೂ ದೇಶಗಳು ಗಡಿಯಲ್ಲಿ ಭಾರಿ ಸಂಖ್ಯೆಯಲ್ಲಿ ಸೈನಿಕರನ್ನು ನಿಯೋಜಿಸಿದ್ದವು. 2020ರ ಜೂನ್ 15ರಂದು ಗಾಲ್ವಾನ್ ಕಣಿವೆಯಲ್ಲಿ ನಡೆದ ಸಂಘರ್ಷದ ಬಳಿಕ ಬಿಕ್ಕಟ್ಟು ಉಲ್ಬಣಗೊಂಡಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಂಗಳೂರು ನಗರ ಜಿಲ್ಲೆ – ಆದೇಶವಾಗಿ ತಿಂಗಳು ಕಳೆದರೂ ಭರ್ತಿಯಾಗದ ಹುದ್ದೆ

ವಿಶೇಷ ಜಿಲ್ಲಾಧಿಕಾರಿ: ಹೊಸ ಹುದ್ದೆಗೆ ಇಲ್ಲ ಸೌಕರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂವಿವಾದಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿಶೇಷ ಜಿಲ್ಲಾಧಿಕಾರಿ –3 ಹುದ್ದೆಯನ್ನು 2022ರ ಜ.14ರಂದು ಸೃಷ್ಟಿಸಿದೆ. ಇದಾಗಿ ತಿಂಗಳು ಕಳೆದರೂ ಈ ಹುದ್ದೆ ಇನ್ನೂ ಭರ್ತಿ ಆಗಿಲ್ಲ. ಹೊಸ ಹುದ್ದೆಯನ್ನು ಸೃಷ್ಟಿ ಮಾಡಿರುವ ಸರ್ಕಾರ ಅದಕ್ಕೆ ತಕ್ಕಂತೆ ಮೂಲಸೌಕರ್ಯವನ್ನೂ ಕಲ್ಪಿಸಿಲ್ಲ.

ವಿಶೇಷ ಜಿಲ್ಲಾಧಿಕಾರಿ –3 ಹುದ್ದೆಯನ್ನು ಸೃಷ್ಟಿ ಮಾಡಿದ ದಿನವೇ ಪ್ರಸ್ತುತ ರಾಜ್ಯ ಚುನಾವಣಾ ಆಯೋಗದಲ್ಲಿ ಕಾರ್ಯದರ್ಶಿ ಆಗಿರುವ ಎಸ್.ಹೊನ್ನಾಂಬ ಅವರನ್ನು ಆ ಹುದ್ದೆಗೆ ವರ್ಗಾವನೆ ಮಾಡಿ ಸರ್ಕಾರ ಆದೇಶ ಮಾಡಿತ್ತು. ಆದರೆ, ಅದಕ್ಕೆ ಪೂರಕವಾದ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಂಡಿಲ್ಲ ಎಂಬ ದೂರುಗಳಿವೆ.

ವಿಶೇಷ ಜಿಲ್ಲಾಧಿಕಾರಿಗೆ ಆಪ್ತ ಸಹಾಯಕ, ವ್ಯವಸ್ಥಾಪಕ, ಇಬ್ಬರು ಗುಮಾಸ್ತರು, ಶಿರಸ್ತೇದಾರ್‌ಗನ್ನು ಒದಗಿಸಬೇಕು. ಒಂದು ವಾಹನ ಒದಗಿಸಿ, ಚಾಲಕನನ್ನೂ ನಿಯೋಜಿಸಬೇಕು. ಇದಕ್ಕೆಲ್ಲ ಸರ್ಕಾರ ಇನ್ನೂ ಮಂಜೂರಾತಿ ನೀಡಿಲ್ಲ. ಈ ಎಲ್ಲ ಸೌಕರ್ಯಗಳಿಲ್ಲದೆ ಈ ಹುದ್ದೆ ವಹಿಸಿಕೊಳ್ಳಲು ಐಎಎಸ್ ಅಧಿಕಾರಿಗಳು ಆಸಕ್ತಿ ತೋರಿಸುವುದಿಲ್ಲ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಹೊನ್ನಾಂಬ ಅವರನ್ನು ರಾಜ್ಯ ಚುನಾವಣಾ ಆಯೋಗವು ಕಾರ್ಯದರ್ಶಿ ಹುದ್ದೆಯಿಂದ ಇನ್ನೂ ಬಿಡುಗಡೆ ಮಾಡಿಲ್ಲ. ಹಾಗಾಗಿ ಅವರು ವಿಶೇಷ ಜಿಲ್ಲಾಧಿಕಾರಿ ಹುದ್ದೆ ವಹಿಸಿಕೊಂಡಿಲ್ಲ ಎಂದು ಗೊತ್ತಾಗಿದೆ.ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಕರೆಗೆ ಲಭ್ಯರಾಗಲಿಲ್ಲ.

ವಿಶೇಷ ಜಿಲ್ಲಾಧಿಕಾರಿ– ಹೊಸ ಹುದ್ದೆ ಏಕೆ?

ವಿವಿಧ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ನ್ಯಾಯಿಕ, ಅರೆನ್ಯಾಯಿಕ, ಪ್ರಕರಣಗಳ ಪರಿಶೀಲನೆಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ 2021ರ ಡಿ. 31ರಂದು ವಿಶೇಷ ಸಭೆ ನಡೆಸಲಾಗಿತ್ತು. ಆಗ ಬೆಂಗಳೂರು ನಗರ ಜಿಲ್ಲೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುವುದು ಕಂಡುಬಂದಿತ್ತು. ನಗರ ಜಿಲ್ಲೆಯ ಬೆಲೆಬಾಳುವ ಜಮೀನುಗಳ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಯುವುದಕ್ಕೆ ಹಾಗೂ ನಿಯಂತ್ರಿಸುವುದಕ್ಕೆ ಹಾಗೂ ಅರೆನ್ಯಾಯಿಕ ಪ್ರಕರಣಗಳನ್ನು ತ್ವರಿತ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದರು. ಈ ಸಲುವಾಗಿ ಈಗಾಗಲೇ ಇರುವ ಇಬ್ಬರು ವಿಶೇಷ ಜಿಲ್ಲಾಧಿಕಾರಿಗಳ ಜೊತೆಗೆ ಮತ್ತೊಬ್ಬರು ವಿಶೇಷ ಜಿಲ್ಲಾಧಿಕಾರಿ ಅವರನ್ನು ನೇಮಿಸಲು ಸಲಹೆ ನೀಡಿದ್ದರು.

ವಿಶೇಷ ಜಿಲ್ಲಾಧಿಕಾರಿ–3 ಅವರಿಗೆ 1964ರ ಭೂ ಕಂದಾಯ ಕಾಯ್ದೆಯ ಕಲಂ 136 (3) ಅಡಿ ದಾಖಲಾದ ಜಮೀನು ಸಂಬಂಧಿಸಿದ ದಾಖಲೆಗಳ ನೈಜತೆ ಪರಿಶೀಲನಾ ಪ್ರಕರಣಗಳು, ಒತ್ತುವರಿ ತೆರವು ಸ್ವಯಂಪ್ರೇರಿತ ಕ್ರಮ (ಮತ್ತು 67 (2), ಸೆಕ್ಷನ್ 39ರಡಿ ಹಾಗೂ ಸೆಕ್ಷನ್ 192 ಎ ಮತ್ತು ಬಿ ಅಡಿ ಒತ್ತುವರಿ ತೆರವು, ಸೆಕ್ಷನ್ 94 (3) ಅಡಿ ಭೂಮಂಜೂರಾತಿ ಪ್ರಕರಣಗಳು ಇನಾಂ ರದ್ದತಿ ಪ್ರಕರಣಗಳು, ಮಧ್ಯಸ್ಥಿಕೆ ಹಾಗೂ ಇತರ ಪ್ರಕರಣಗಳನ್ನು ಇತ್ಯರ್ಥಪಡಿಸುವ ಹೊಣೆ ವಹಿಸಲಾಗಿದೆ.

ಪ್ರತ್ಯೇಕ ಕೊಠಡಿಗೆ ಜಾಗದ ಕೊರತೆ

ವಿಶೇಷ ಜಿಲ್ಲಾಧಿಕಾರಿ–3 ಅವರಿಗೆ ಹಾಗೂ ಅವರ ಸಿಬ್ಬಂದಿಗೆ ಜಿಲ್ಲಾಧಿಕಾರಿ ಸಂಕೀರ್ಣದಲ್ಲಿ ಪ್ರತ್ಯೇಕ ಕೊಠಡಿ ಕಲ್ಪಿಸುವುದಕ್ಕೂ ಜಾಗದ ಕೊರತೆ ಎದುರಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ತಳಮಹಡಿ, ನೆಲ ಮಹಡಿ ಹಾಗೂ ನಾಲ್ಕು ಮಹಡಿಗಳನ್ನು ಹೊಂದಿರುವ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣವು ಈಗಾಗಲೇ ಜಿಲ್ಲಾಡಳಿತಕ್ಕೆ ಸಂಬಂಧಿಸಿದ ಕಚೇರಿಗಳಿಂದ ತುಂಬಿ ಹೋಗಿದೆ. ಇಲ್ಲಿನ ನೆಲ ಮಹಡಿಯಲ್ಲಿ ಜಿಲ್ಲಾಡಳಿತದ ಕಚೇರಿ, ಹೆಚ್ಚುವರಿ ಜಿಲ್ಲಾಧಿಕಾರಿ ಕಚೇರಿ, ಒಬ್ಬರು ವಿಶೇಷ ಜಿಲ್ಲಾಧಿಕಾರಿಯವರ ಕೊಠಡಿ, ಚುನಾವಣಾ ಶಾಖೆ, ಚುನಾವಣಾ ತಹಶೀಲ್ದಾರ್, ಜಿಲ್ಲಾಡಳಿತದ ಇತರ ಸಿಬ್ಬಂದಿಯ ಕೊಠಡಿಗಳಿವೆ. ಮೊದಲ ಮಹಡಿಯಲ್ಲಿ ಜಿಲ್ಲಾಧಿಕಾರಿ ಅವರ ಕೊಠಡಿ, ಸಭಾಂಗಣ/ಕೋರ್ಟ್ ಹಾಲ್, ಕಾನೂನು ಸಲಹೆಗಾರರ ಕೊಠಡಿ, ವಿಶೇಷ ಜಿಲ್ಲಾಧಿಕಾರಿ ಕೊಠಡಿ ಮತ್ತು ಅವರ ಆಪ್ತ ಸಿಬ್ಬಂದಿ ಹಾಗೂ ಆಡಳಿತ ಶಾಖೆಯ ಕಚೇರಿಗಳಿವೆ. ಎರಡನೇ ಮಹಡಿಯು ಸಾರ್ವಜನಿಕ ಜಮೀನುಗಳ ನಿಗಮದ ಕಚೇರಿಗಳಿಗೆ ಬಳಕೆ ಆಗುತ್ತಿವೆ. ಮೂರನೇ ಮಹಡಿಯನ್ನು ಹಳೆ ದಾಖಲೆಗಳನ್ನು ಸಂಗ್ರಹಿಸುವುದಕ್ಕೆ ಬಳಸಲಾಗುತ್ತಿದೆ. ನಾಲ್ಕನೇ ಮಹಡಿಯಲ್ಲಿ ಮುಜರಾಯಿ, ಮೋಜಣಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹಾಗೂ ಎನ್‌ಐಸಿ ಕಚೇರಿಗಳಿವೆ.

ಸುದ್ದಿ 2 ನಿಮಿಷ

ಪಿಸ್ತೂಲ್ ಮಾರಾಟ ಜಾಲ ಪತ್ತೆ

ಬೆಂಗಳೂರು: ನಗರದಲ್ಲಿ ಮಾರಲು ತಂದಿದ್ದ ಪಿಸ್ತೂಲ್ ಹಾಗೂ ಐದು ಜೀವಂತ ಗುಂಡುಗಳನ್ನು ಬ್ಯಾಟರಾಯನಪುರ ಪೊಲೀಸರು ಜಪ್ತಿ ಮಾಡಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಮಹಾರಾಷ್ಟ್ರ ಸಾಂಗ್ಲಿಯ ರಾಹುಲ್ ಸತೀಶ್ ಮಾನೆ ಮತ್ತು ಕೊಲ್ಲಾಪುರದ ರಫೀಕ್ ದಸ್ತಗಿರ್ ನದಾಫ್ ಬಂಧಿತರು. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಯಾಟಲೈಟ್ ಬಸ್ ನಿಲ್ದಾಣ ಬಳಿ ಆರೋಪಿಗಳು ಓಡಾಡುತ್ತಿದ್ದರು. ಅವರ ಬಳಿ ಕಪ್ಪು ಬಣ್ಣದ ಬ್ಯಾಗ್ ಇತ್ತು. ಅವರ ನಡೆಯಿಂದ ಅನುಮಾನಗೊಂಡಿದ್ದ ಸ್ಥಳೀಯರೊಬ್ಬರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಸಿಬ್ಬಂದಿ, ಆರೋಪಿಗಳನ್ನು ವಶಕ್ಕೆ ಪಡೆದು ತಪಾಸಣೆ ನಡೆಸಿದ್ದರು. ಬ್ಯಾಗ್‌ನಲ್ಲಿ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳು ಪತ್ತೆಯಾದವು' ಎಂದೂ ತಿಳಿಸಿವೆ.

'ಹೊರ ರಾಜ್ಯಗಳಲ್ಲಿ ತಯಾರಿಸುತ್ತಿದ್ದ ಪಿಸ್ತೂಲ್‌ಗಳನ್ನು ಆರೋಪಿಗಳು ನಗರಕ್ಕೆ ತಂದು ಮಾರುತ್ತಿದ್ದರು. ಅಪರಾಧ ಹಿನ್ನೆಲೆಯುಳ್ಳ ಕೆಲವರು ಪಿಸ್ತೂಲ್ ಖರೀದಿ ಮಾಡುತ್ತಿದ್ದ ಮಾಹಿತಿ ಲಭ್ಯವಾಗಿದೆ. ಅವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

ಸ್ಮಾರ್ಟ್ ಸಿಟಿ ಕಾಮಗಾರಿ ಪರಿಶೀಲನೆ

ಬೆಂಗಳೂರು: ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ ಅಧ್ಯಕ್ಷ ರಾಕೇಶ್ ಸಿಂಗ್ ಭಾನುವಾರ ಪರಿಶೀಲಿಸಿದರು.

ಬಸವೇಶ್ವರ ವೃತ್ತದಿಂದ ಮಿನ್ಸ್ಕ್‌ಸ್ಕ್ವೇರ್ ಸಂಪರ್ಕಿಸುವ ರಾಜಭವನ ರಸ್ತೆ, ಅಲಿ ಅಸ್ಕರ್ ರಸ್ತೆ, ಕನ್ನಿಂಗ್ ಹ್ಯಾಮ್ ರಸ್ತೆ, ಕಂಟೋನ್ಮೆಂಟ್ ಸಂಪರ್ಕಿಸುವ ಮಿಲ್ಲರ್ಸ್ ರಸ್ತೆ ಹಾಗೂ ಅಂಬೇಡ್ಕರ್ ಭವನ ಸಂಪರ್ಕಿಸುವ ರಸ್ತೆಯ ಕಾಮಗಾರಿಗಳನ್ನು ಅವರು ಪರಿಶೀಲನೆ ನಡೆಸಿದರು.

ಹಲವೆಡೆ ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಆದರೆ, ಕುಡಿಯುವ ನೀರು ಪೂರೈಕೆ ಕೊಳವೆ ಅಳವಡಿಸುವ ಕಾಮಗಾರಿಗಳು ಬಾಕಿ ಇವೆ. ಹೆಚ್ಚುವರಿ ಕಾರ್ಮಿಕರನ್ನು ನಿಯೋಜಿಸಿಕೊಂಡು ಹಗಲು ರಾತ್ರಿ ಕೆಲಸ ಮಾಡುವ ಮೂಲಕ ಈ ತಿಂಗಳ ಅಂತ್ಯದೊಳಗೆ ಈ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ರಾಕೇಶ್ ಸಿಂಗ್ ಸೂಚಿಸಿದರು.

ಬೆಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯ ಮುಖ್ಯ ಎಂಜಿನಿಯರ್ ವಿನಾಯಕ ಸುಗೂರು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಆರ್.ಚಂದ್ರಶೇಖರ, ಜಲಮಂಡಳಿ ಹೆಚ್ಚುವರಿ ಮುಖ್ಯ ಎಂಜಿನಿಯರ್ ಜಯಶಂಕರ್, ಕಾರ್ಯಪಾಲಕ ಎಂಜಿನಿಯರ್ ರಮೇಶ್ ಹಾಜರಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮೋದಿ ಆಶ್ವಾಸನೆಗಳೆಲ್ಲ ಸುಳ್ಳು: ಕಿಡಿ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದು ಏಳು ವರ್ಷಗಳು ಕಳೆದರೂ, ಅವರು ನೀಡಿದ್ದ ಭರವಸೆಗಳೆಲ್ಲ ಹುಸಿಯಾಗಿವೆ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ದೂರಿದರು.

ಉತ್ತರಹಳ್ಳಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ಬಂದಿದ್ದರೂ ಅಭಿವೃದ್ಧಿ ಕಂಡಿಲ್ಲ. ಶಾಸಕ ಎಂ. ಕೃಷ್ಣಪ್ಪ 15 ವರ್ಷಗಳಿಂದ ಬಡವರಿಗೆ ಒಂದೂ ನಿವೇಶನ ನೀಡಿಲ್ಲ. ಕುಡಿಯುವ ನೀರು, ರಸ್ತೆ, ಕಸ, ಒಳಚರಂಡಿ ಸಮಸ್ಯೆ ಬಗ್ಗೆ ಪ್ರಶ್ನಿಸಿದರೆ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಭಯ ಸೃಷ್ಟಿಸುತ್ತಿದ್ದಾರೆ. ಇದಕ್ಕೆ ಮತದಾರ ತಕ್ಕ ಉತ್ತರ ನೀಡುವ ದಿನಗಳು ದೂರವೇನಿಲ್ಲ' ಎಂದು ಎಚ್ಚರಿಸಿದರು.

ಕಾಂಗ್ರೆಸ್‌ನ ಉತ್ತರಹಳ್ಳಿ ವಾರ್ಡ್ ಘಟಕದ ಅಧ್ಯಕ್ಷ ಗುಂಡುಮಣಿ ಶ್ರೀನಿವಾಸ್, 'ಉತ್ತರಹಳ್ಳಿ ವಾರ್ಡ್‌ನಲ್ಲಿ ಯಾವುದೇ ಅಭಿವೃದ್ಧಿ ಕೆಲಸವಾಗಿಲ್ಲ. ಖಾಸಗಿ ಬಡಾವಣೆಗಳಿಗೆ ಮಾತ್ರ ಮೂಲ ಸೌಲಭ್ಯ ಕಲ್ಪಿಸಿ, ಬಡವರನ್ನು ಕಡೆಗಣಿಸಿದ್ದಾರೆ' ಎಂದರು.

ಸಮಗ್ರ ತಂಡ ಪ್ರಶಸ್ತಿ; ಕ್ರೀಡಾಪಟುಗಳಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಹರಿಯಾಣದ ನ್ಯಾಷನಲ್ ಸ್ಪೋರ್ಟ್ಸ್ ಆ್ಯಂಡ್ ಫಿಸಿಕಲ್ ಫಿಟ್ನೆಸ್ ಫೆಡರೇಷನ್ ವತಿಯಿಂದ ನಡೆದ ರಾಷ್ಟ್ರಮಟ್ಟದ ಜೂನಿಯರ್ ಮತ್ತು ಸಬ್ ಜೂನಿಯರ್ ಹಾಗೂ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್ ಶಿಪ್ ಕ್ರೀಡಾಕೂಟದಲ್ಲಿ ಸಮಗ್ರ ತಂಡ ಪ್ರಶಸ್ತಿ ಪಡೆದ ಸುಮನ್ ಚಿರಾಯು ಅಥ್ಲೆಟಿಕ್ ಅಕಾಡೆಮಿಯ ಕ್ರೀಡಾಪಟುಗಳಿಗೆ ಬಾಗಲೂರು ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಒಟ್ಟು 22 ಚಿನ್ನ, 11 ಬೆಳ್ಳಿ ಮತ್ತು 4 ಕಂಚಿನ ಪದಕಗಳನ್ನು ಒಳಗೊಂಡಂತೆ ಒಟ್ಟು 37 ಪದಕಗಳನ್ನು ಗಳಿಸುವ ಮೂಲಕ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇತ್ತೀಚೆಗೆ ಗದಗ ಜಿಲ್ಲೆಯಲ್ಲಿ ನಡೆದ ರಾಜ್ಯಮಟ್ಟದ ಜೂನಿಯರ್ ಮತ್ತು ಸಬ್ ಜೂನಿಯರ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ 3 ಚಿನ್ನ, 3 ಬೆಳ್ಳಿ ಹಾಗೂ 10 ಕಂಚಿನ ಪದಕ ಪಡೆದಿದ್ದಾರೆ.

ಅಲ್ಲದೆ ರಾಮನಗರದಲ್ಲಿ ನಡೆದ ರಾಜಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿಯೂ ಹಲವು ಪದಕಗಳನ್ನು ಗಳಿಸಿದ್ದಾರೆ.

ಈ ವೇಳೆ ಮಾತನಾಡಿದ ಗ್ರಾಮಪಂಚಾಯಿತಿ ಅಧ್ಯಕ್ಷರಾದ ಹಮೀದಾ ಬೇಗಂ, 'ಗ್ರಾಮೀಣ ಭಾಗದ ಮಕ್ಕಳು ತಮ್ಮ ಕಷ್ಟದ ಬದುಕಿನ ನಡುವೆಯೂ ಇಂತಹ ಸಾಧನೆ ಮಾಡುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿರುವುದು ಹೆಮ್ಮೆಯ ಸಂಗತಿ. ಇಂತಹ ಮಕ್ಕಳಿಗೆ ಪ್ರೋತ್ಸಾಹ ನೀಡುವುದರಿಂದ ಇನ್ನೂ ಹೆಚ್ಚಿನ ಸಾಧನೆಗೆ ಪ್ರೇರಣೆಯಾಗುತ್ತದೆ' ಎಂದರು.

ಅಕಾಡೆಮಿಯ ಸಂಸ್ಥಾಪಕ ಮತ್ತು ಮುಖ್ಯ ತರಬೇತುದಾರ ಭರತ್ ಆರ್.ಎ, ಗ್ರಾಮ ಪಂಚಾಯಿತಿ ಸದಸ್ಯರಾದ ಪ್ರಭುಸ್ವಾಮಿ, ಹೇಮಲತಾ, ಧನಂಜಯ್, ಕೆಂಪೇಗೌಡ, ಸಂತೋಷ್, ಸುಬ್ರಮಣಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು

PUBLIC NOTICE

General Public are hereby informed that my Client has entered into an Agreement of Sale dated 16.02.2022 to purchase the Schedule Property bearing Municipal No.6/2, PID No.78-100-6/2, earlier Site No.1/6, 1st Main, Vasanthnagar, Bengaluru–560 052, for valuable consideration, **measuring East to West 60 feet and North to South 70 feet, in all measuring 4200 sq.ft**, bounded on the **East by:** Common Road of 15 Feet X 70 Feet followed by Property of Coorg Association i.e. Kodava Samaj and Municipal No.7; **West by:** Property belonging to Padmashri Dr.M.C.Modi; **North by:** Property belonging the Bal Pharma Limited, bearing Municipal No. 6/3; **South by:** Property belonging to Sri.Vijay Kumar Srinivasan bearing Municipal No.6/1, from the Vendors **(1) Mr. R.V. Deepak** and **(2) Mr. R.V. Sandeep,** both are sons of S.V. Venkata Chalapathy, residents of Vasanath Nagar, Bengaluru–560052. Any person/s having any claims/objections for the said sale transaction may lodge their claims/objections with documentary proof ***within Fifteen (15) days*** from the date of Publication of this Notice with the undersigned. Thereafter, no claims/ objections shall be entertained by my client.

Sd/-

B. Devaraju, Advocate
No.14, "Amma", 9th 'G' Main,
Byraveshwaranagar, Nagarabhavi,
Bangalore -560 072
Ph: 9341269645
email: bdsdevaraju@gmail.com

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Multiple Vacancy

REQUIRED, TEAMLEADER, Telecaller, Backend & Field executive For Banking Loan collection (salary upto 20,000- 25,000). Direct recruitment to company Contact: 9620206756, 9620200756.

Receptionist/ Secretary

WANTED RECEPTIONIST with minimum 2 years experience and computer knowledge for an office at 4th Block Jayanagar. 9844076925.

Part-Time Jobs

A REPUTED MNC Company Will Provide Work From Home 30 to 35K Contact: 7019215243/ 9886641282

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2.5 Lakhs: 9606701007/ 8892501007

REAL ESTATE SELLING

Sites

Mysore

SALE OFFER Mysore MUDA Site Premier Location Site number 7196 (12X18 m) Vijayanagar IVth Stage IInd Phase East Facing 60 feet Road. Contact Agent Krishnamurthy 8277305783. Brokers Please Excuse

House

Anjanapura

600 SFT, East facing BDA Property is for Sale at Anjanapura. Brokers Excuse. Contact on 6362961311/ 9901050888.

Flat

J P Nagar

1100 SFT, North facing Semi furnished Flat for Sale at JPNagar & Bank Loan Available, A-Khata & OC CC Available, Immediate ready to move, Owner going Abroad. Contact- 6362961311/ 9901050888.

Kumaraswamy Layout

2 BEDROOM (1050 sft) Flat, Kumaraswamy layout 1st stage with all amenities Contact 9845159646

EDUCATIONAL

Admission

ONE SITTING: B.Sc (Paramedical All/ Agriculture/ Hotel/ Hospital Management/ Yoga/ IT/CS). D.Pharma/ B.Pharma/ BPT/DPT/ DMLT/BYNS/ B.Tech/ MBA/ BBA/BCA/ SSLC/PU. Asha Academy: Bangalore. 9448460103/ 7093438248

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

PERSONAL

Lost

THIS IS to bring to your kind notice that, Santosh s/o Gajanan Desai, Address: Plot no 13, Kashi Nivas, NGOS Colony, Gulbarga, our Land Link Deed is Missing since 9/2/22. If found kindly return to the above address.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD | ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಸಮಾವೇಶದಲ್ಲಿ ಸಾಹಿತಿ ಪ್ರೊ. ಎಸ್. ಜಿ. ಸಿದ್ದರಾಮಯ್ಯ ಸಲಹೆ

'ಅಂಧರ ಸಮಸ್ಯೆಗಳಿಗೆ ಸಮಾಜ ಸ್ಪಂದಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಧ ಸಮುದಾಯದ ಸಮಸ್ಯೆಗಳಿಗೆ ಸಮಾಜ ಮುಕ್ತ ಮನಸ್ಸಿನಿಂದ ಸ್ಪಂದಿಸುವ ಮೂಲಕ ಪರಿಹಾರ ಒದಗಿಸಬೇಕು' ಎಂದು ಸಾಹಿತಿ ಪ್ರೊ. ಎಸ್.ಜಿ ಸಿದ್ದರಾಮಯ್ಯ ಸಲಹೆ ನೀಡಿದರು.

ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಸ್ಥೆ ಮತ್ತು ಕರ್ನಾಟಕ ಅಂಧರ ವಿಮೋಚನಾ ವೇದಿಕೆ ಭಾನುವಾರ ಆಯೋಜಿಸಿದ್ದ ಅಂಧರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಇಂದು ಸಮಾಜ ವಿವಿಧ ಕಾರಣಗಳಿಗೆ ವಿಘಟನೆಗೊಳ್ಳುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ. ಆದರೆ, ಅಂಧ ಸಮುದಾಯ ಶುದ್ಧ ಮನಸ್ಸಿನಿಂದ ಸದಾ ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನ ಮಾಡಿದೆ' ಎಂದು ಹೇಳಿದರು.

'ಕಣ್ಣಿಲ್ಲದಿದ್ದರೂ ಅಂತರ್‌ದೃಷ್ಟಿ ಇರಬೇಕು. ಆಗ ಅನ್ಯರ ನೋವು ಅರ್ಥವಾಗುತ್ತದೆ. ಕಣ್ಣಿದ್ದವರ ಸಮುದಾಯ ಅಂದರೆ ಜಾತಿ, ಧರ್ಮ ಎನ್ನುವ ಭಾವನೆ ಇದೆ. ಆದರೆ, ಅಂಧರು ಮನುಷ್ಯತ್ವದಿಂದ ತಮ್ಮ ಸಮುದಾಯದ ಭಾವನೆಯನ್ನು ಎತ್ತಿ ಹಿಡಿದಿದ್ದಾರೆ' ಎಂದು ಹೇಳಿದರು.

ಅಂಧರ ವಿಮೋಚನಾ ವೇದಿಕೆಯ ರಾಜ್ಯ ಸಂಚಾಲಕ ಮುದಿಗೆರೆ ರಮೇಶ್ ಕುಮಾರ್, 'ಅಂಧರಿಗೆ ಆರ್ಥಿಕ ಭದ್ರತೆಯ ಜತೆ ಸಾಮಾಜಿಕ ಘನತೆ ನೀಡಬೇಕು. ಸ್ವಾವಲಂಬಿಗಳಾಗಿ ಬದುಕುತ್ತಿರುವ ಅಂಧರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯಗಳು ನಿರಂತರವಾಗಿ ನಡೆಯಬೇಕು' ಎಂದು ಹೇಳಿದರು.

'ಸರ್ಕಾರದ ವಿವಿಧ ಇಲಾಖೆಗಳಿಗೆ ಅಂಧರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಆದರೆ, ಅವರ ಸಾಮರ್ಥ್ಯವನ್ನು ಸಹ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸಬೇಕು. ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಗಳು ಹಾಗೂ ವಿವಿಧ ಅಕಾಡೆಮಿಗಳಲ್ಲಿಯೂ ಅಂಧರಿಗೆ ಪ್ರಾತಿನಿಧ್ಯ ನೀಡಬೇಕು' ಎಂದು ಹೇಳಿದರು.

ಗಾನಯೋಗಿ ಡಾ. ಪುಟ್ಟರಾಜ ಗವಾಯಿ ಸಂಗೀತ ರತ್ನ ಪ್ರಶಸ್ತಿಯನ್ನು ಖ್ಯಾತ ಗಾಯಕಿ ಬಿ.ಕೆ. ಸುಮಿತ್ರಾ ಅವರಿಗೆ ಹಾಗೂ ವಿಶ್ವಚೇತನ ಡಾ.ಹೆಲನ್ ಕೆಲ್ಲರ್ ಸೇವಾರತ್ನ ಪ್ರಶಸ್ತಿಯನ್ನು ಹೋರಾಟಗಾರ ಲಕ್ಷ್ಮೀನಾರಾಯಣ ಅವರಿಗೆ ಪ್ರದಾನ ಮಾಡಲಾಯಿತು.

ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹತ್ತು ಅಂಧ ಮತ್ತು ಇತರೆ ಸರ್ಕಾರಿ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಪ್ರೋತ್ಸಾಹ ಧನ ವಿತರಿಸಲಾಯಿತು.

ನಗರದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಅಂಧರ ಸಮಾವೇಶದಲ್ಲಿ ಖ್ಯಾತ ಗಾಯಕಿ ಬಿ.ಕೆ.ಸುಮಿತ್ರ ಅವರಿಗೆ ಸಂಗೀತರತ್ನ ಹಾಗೂ ಹೋರಾಟಗಾರ ಲಕ್ಷ್ಮೀನಾರಾಯಣ ನಾಗವಾರ ಅವರಿಗೆ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಹಿತಿ ಪ್ರೊ.ಎಸ್‌ಜಿ. ಸಿದ್ಧರಾಮಯ್ಯ, ಗಿರಿಜಾ ರೈಕ್ವಾ, ಚಿತ್ರ ನಿರ್ದೇಶಕ ಸಿಂಪಲ್ ಸುನಿಲ್, ಕರ್ನಾಟಕ ಅಂಧರ ವಿಮೋಚನಾ ವೇದಿಕೆ ಸಂಚಾಲಕ ಮುದುಗೆರೆ ರಮೇಶ್ ಕುಮಾರ್, ಎಚ್. ಜನಾರ್ಧನ್ (ಜನ್ನಿ), ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಸ್ಥೆ ರಾಜ್ಯ ಘಟಕದ ಅಧ್ಯಕ್ಷ ಕದಂಬ ಶ್ರೀನಿವಾಸ್ ಇದ್ದರು. – ಪ್ರಜಾವಾಣಿ ಚಿತ್ರ

'ಮತಾಂಧರಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಡ್ಡಿ'

'ಮತಾಂಧರಿಂದ ಹೆಣ್ಣು ಮಕ್ಕಳು ಕಲಿಕೆಯಿಂದ ದೂರ ಉಳಿಯುವ ಪರಿಸ್ಥಿತಿ ಇಂದು ಸೃಷ್ಟಿಯಾಗಿದೆ' ಎಂದು ಪ್ರೊ. ಎಸ್.ಜಿ. ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದರು.

'ಧರ್ಮಾಂಧರಿಂದಾಗಿ ಹೆಣ್ಣುಮಕ್ಕಳ ಶಿಕ್ಷಣ ಹಾಳಾಗುತ್ತಿದೆ. ಮಕ್ಕಳನ್ನು ಶಾಲೆಯಿಂದ ಹೊರಗೆ ನಿಲ್ಲಿಸಿ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ಈ ದೇಶವು ಒಂದು ಧರ್ಮದ ಸ್ವತ್ತಲ್ಲ. ಬದಲಾಗಿ ಬಹುತ್ವ ಸಂಸ್ಕೃತಿ ದೇಶ. ಮತಾಂಧತೆಯಿಂದ ಹೊರಬಂದು ದೇಶ ಕಟ್ಟಬೇಕು. ರಾಜಕೀಯ ಲಾಭಕ್ಕಾಗಿ ನಡೆಯುವ ಪ್ರಯತ್ನಗಳಿಗೆ ಕಿವಿಗೊಡಬಾರದು' ಎಂದು ಸಲಹೆ ನೀಡಿದರು.

ನಗರದಲ್ಲಿ ಇಂದು

ಕೃತಕ ಕಾಲು ಮತ್ತು ಮುಂಗೈ ಜೋಡಣೆ ಉಚಿತ ಶಿಬಿರ: ಆಯೋಜನೆ–ರೋಟರಿ ಬೆಂಗಳೂರು ಪೀಣ್ಯ, ಸ್ಥಳ–ಗಣೇಶ ಬಾಗ್, ಎಸ್.ಎಸ್. ಬಿ.ಎಸ್.ಜೈನ ಸಂಘ ಟ್ರಸ್ಟ್, ಇನ್‌ಫೆಂಟ್ರಿ ರಸ್ತೆ, (ಫೆ.27ರವರೆಗೆ ಶಿಬಿರ ನಡೆಯಲಿದೆ)

ಕೈಲಾಸೇಶ್ವರ, ವಿನಾಯಕ, ಪಾರ್ವತಿ ದೇವಿ, ಪ್ರಸನ್ನ ಆಂಜನೇಯಸ್ವಾಮಿ ಮತ್ತು ನವಗ್ರಹ ದೇವಾಲಯದ ಪ್ರತಿಷ್ಠಾಪನ ಮಹೋತ್ಸವ: ಸಾನ್ನಿಧ್ಯ–ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಸಚಿವ ವಿ.ಸೋಮಣ್ಣ, ಅತಿಥಿ–ಸಂಸದ ತೇಜಸ್ವಿ ಸೂರ್ಯ, ಸ್ಥಳ–ಸುರ್ವಣ ಬಡಾವಣೆ, ಚಂದ್ರ ಬಡಾವಣೆ, ಐಟಿಐ ಬಡಾವಣೆ ಕೂಡುವ ರಸ್ತೆ, ನಾಯಂಡಹಳ್ಳಿ ವಾರ್ಡ್, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಾತೃಭಾಷಾ ದಿನ: 'ಕನ್ನಡ ನಾಡಿನ ಮಾತೃ ಭಾಷೆಗಳು' ವಿಚಾರಗೋಷ್ಠಿ:ಅಧ್ಯಕ್ಷತೆ–ಅಜಕ್ಕಳ ಗಿರೀಶ್ ಭಟ್, ಅಡ್ಡಂಡ ಸಿ.ಕಾರ್ಯಪ್ಪ, ಹರಿಲಾಲ ಪವಾರ್, ಶಾ.ಮಂ.ಕೃಷ್ಣರಾಯ, ಆಯೋಜನೆ ಮತ್ತು ಸ್ಥಳ–ಕುವೆಂಪು ಭಾಷಾ ಭಾರತಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಅಖಿಲ ಭಾರತ ಮುಕ್ತ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ:ಉದ್ಘಾಟನೆ–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು–ಅವಿಚಲ್ ಕಪೂರ್, ಅಧ್ಯಕ್ಷತೆ–ಎಸ್. ವಿದ್ಯಾಶಂಕರ್, ಆಯೋಜನೆ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಸ್ಥಳ–ಹೋಟೆಲ್ ರಾಡಿಸನ್ ಬ್ಲೂ ಏಟ್ರಿಯಾ, ಅರಮನೆ ರಸ್ತೆ, ಬೆಳಿಗ್ಗೆ 10.30

ಭಾರತ ಲೆಕ್ಕ ಪರಿಶೋಧಕರ ಸಂಘದ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ (ಎಸ್‌ಐಆರ್‌ಸಿ) ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಅಧಿಕಾರ ಸ್ವೀಕಾರ:ಅತಿಥಿಗಳು–ಬಿ.ಟಿ. ಶೆಟ್ಟಿ, ಟಿ.ಶ್ರೀನಿವಾಸ, ಆಯೋಜನೆ ಮತ್ತು ಸ್ಥಳ–ಭಾರತ ಲೆಕ್ಕ ಪರಿಶೋಧಕರ ಸಂಘ, ಮಿಲ್ಲರ್ಸ್ ರಸ್ತೆ, ವಸಂತ ನಗರ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಸಭೆ ಮತ್ತು ಪದಾಧಿಕಾರಿಗಳಿಗೆ ಸನ್ಮಾನ:ಉದ್ಘಾಟನೆ–ಬರಗೂರು ರಾಮಚಂದ್ರಪ್ಪ, ಸನ್ಮಾನ–ಪುಟ್ಟಣ್ಣ, ಅತಿಥಿಗಳು–ಅ.ದೇವೇಗೌಡ, ಶರಣಪ್ಪ ಮಟ್ಟೂರ, ಅಧ್ಯಕ್ಷತೆ–ಎಚ್.ಕೆ.ಮಂಜುನಾಥ್, ಸ್ಥಳ–ಕೃಷ್ಣದೇವರಾಯ ಸಭಾಂಗಣ, ಮಲ್ಲೇಶ್ವರ, ಮಧ್ಯಾಹ್ನ 2.30

ಪ್ರೇಮಿಗಳ ದಿನ : 5.15 ಲಕ್ಷ ಕೆ.ಜಿ ಗುಲಾಬಿ ಸಾಗಣೆ

ಬೆಂಗಳೂರು: ಪ್ರೇಮಿಗಳ ದಿನಕ್ಕಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 5.15 ಲಕ್ಷ ಕೆ.ಜಿ.ಗಳಷ್ಟು ಗುಲಾಬಿ ಹೊರ ರಾಜ್ಯಗಳು ಹಾಗೂ ವಿದೇಶಗಳಿಗೆ ಸಾಗಣೆಯಾಗಿದೆ.

'ಪ್ರತಿವರ್ಷ ಪ್ರೇಮಿಗಳ ದಿನಕ್ಕಾಗಿ ಬೆಂಗಳೂರಿನಿಂದ 25 ವಿಮಾನ ನಿಲ್ದಾಣಗಳಿಗೆ ಗುಲಾಬಿ ಸಾಗಣೆ ಮಾಡಲಾಗುತ್ತದೆ. ಕಳೆದ ವರ್ಷ 2.17 ಲಕ್ಷ ಕೆ.ಜಿ ಗುಲಾಬಿ ಇಲ್ಲಿಂದ ವಿವಿಧ ಸ್ಥಳಗಳಿಗೆ ತಲುಪಿತ್ತು. ಈ ಬಾರಿ ದುಪ್ಪಟ್ಟು ಹೆಚ್ಚಳ ಕಂಡಿದೆ. ಕಳೆದ ಬಾರಿ 1.03 ಲಕ್ಷ ಕೆ.ಜಿ.ಯಷ್ಟಿದ್ದ ದೇಶಿಯ ಸಾಗಣೆಯೂ ಈ ವರ್ಷ 3.15 ಲಕ್ಷ ಕೆ.ಜಿ.ಗಳಿಗೆ ಏರಿದೆ' ಎಂದು ಬಿಐಎಎಲ್ ಮುಖ್ಯ ಕಾರ್ಯತಂತ್ರ ಅಭಿವೃದ್ಧಿ ಅಧಿಕಾರಿ ಸಾತ್ಯಕಿ ರಂಗನಾಥ್ ತಿಳಿಸಿದರು.

'ಗುಲಾಬಿ ರಫ್ತಿನಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಪ್ರತಿ ವರ್ಷ ಗುಲಾಬಿ ರಫ್ತು ಪ್ರಮಾಣ ಹೆಚ್ಚುತ್ತಿದೆ. ಬೆಂಗಳೂರು ವಿಮಾನ ನಿಲ್ದಾಣದಿಂದ ದೆಹಲಿ, ಮುಂಬೈ, ಕೋಲ್ಕತ್ತ, ಗುವಾಹಟಿ, ಚಂಡೀಗಡ, ಸಿಂಗಪುರ, ಲಂಡನ್, ದುಬೈ ಸೇರಿದಂತೆ ವಿವಿಧ ತಾಣಗಳಿಗೆ ಗುಲಾಬಿ ರಫ್ತು ಮಾಡಲಾಗಿದೆ' ಎಂದರು.

'ವಿಮಾನ ನಿಲ್ದಾಣದಲ್ಲಿ 60 ಸಾವಿರ ಟನ್ ಸಾಮರ್ಥ್ಯದ ಶೀತಲೀಕರಣ ಘಟಕದ ವ್ಯವಸ್ಥೆಯಿದ್ದು, ಕಡಿಮೆ ಬಾಳಿಕೆ ಅವಧಿಯ ಪದಾರ್ಥಗಳ ಸಾಗಣೆಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ' ಎಂದು ಹೇಳಿದರು.

ಬಾಲಕೃಷ್ಣ ರಚನೆಯ 'ನಹುಷ' ಪ್ರಸಂಗಕ್ಕೆ ಬಹುಮಾನ

ಬೆಂಗಳೂರು: ಯಕ್ಷಸಿಂಚನ ಟ್ರಸ್ಟ್ ವತಿಯಿಂದ ಯಕ್ಷಗಾನ ಸಾಹಿತ್ಯಾಸಕ್ತರಿಗಾಗಿ 2021ರ ಡಿಸೆಂಬರ್‌ನಲ್ಲಿ ಏರ್ಪಡಿಸಿದ್ದ ಯಕ್ಷಗಾನ ಪ್ರಸಂಗ ರಚನಾ ಸ್ಪರ್ಧೆಯಲ್ಲಿ ಹಿಲ್ಲೋಡಿ ಎಚ್.ಸಿ.ಬಾಲಕೃಷ್ಣ ರಚಿಸಿದ 'ನಹುಷ' ಪ್ರಸಂಗ ಮೊದಲ ಬಹುಮಾನ ಪಡೆದಿದೆ.

ಶಿವಕುಮಾರ ಅಳಗೋಡು ರಚಿಸಿದ 'ಯವಕ್ರೀತ ವೃತ್ತಾಂತ' ಪ್ರಸಂಗವು ದ್ವಿತೀಯ ಬಹುಮಾನ ಪಡೆದಿದೆ. ಮೊದಲ ಬಹುಮಾನವು ₹ 10 ಸಾವಿರ ನಗದು ಮತ್ತು ಪ್ರಶಸ್ತಿಪತ್ರವನ್ನು ಹಾಗೂ ಎರಡನೇ ಬಹುಮಾನವು ₹ 5 ಸಾವಿರ ನಗದು ಮತ್ತು ಪ್ರಶಸ್ತಿಪತ್ರವನ್ನು ಒಳಗೊಂಡಿದೆ ಎಂದು ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಗೊರಗುಂಟೆಪಾಳ್ಯ– ಹೆಬ್ಬಾಳ ನಡುವಿನ ಹೊರವರ್ತುಲ ರಸ್ತೆ ಬಳಿ ದೋಷ

ಎಂಇಎಸ್ ಮೇಲ್ಸೇತುವೆ– ಬೇರಿಂಗ್ ದುರಸ್ತಿ

ಪ್ರಜಾವಾಣಿ ವಾರ್ತೆ

ಎಂಇಎಸ್ ಮೇಲ್ಸೇತುವೆಯನ್ನು ದುರಸ್ತಿಪಡಿಸುತ್ತಿರುವುದು ಭಾನುವಾರ ಕಂಡುಬಂತು– ಪ್ರಜಾವಾಣಿ ಚಿತ್ರ

ಬೆಂಗಳೂರು: ಗೊರಗುಂಟೆಪಾಳ್ಯ-ಹೆಬ್ಬಾಳ ನಡುವಿನ ಹೊರವರ್ತುಲ ರಸ್ತೆಯಲ್ಲಿ ಎಂಇಎಸ್ ಬಳಿಯ ಮೇಲ್ಸೇತುವೆಯ ಬೇರಿಂಗ್‌ನಲ್ಲಿ ದೋಷ ಕಾಣಿಸಿಕೊಂಡಿದ್ದು, ಅದರ ದುರಸ್ತಿ ಕಾರ್ಯವನ್ನು ನೈರುತ್ಯ ರೈಲ್ವೆ ಕೈಗೆತ್ತಿಕೊಂಡಿದೆ.

2017ರಲ್ಲಿ ನಿರ್ಮಿಸಿದ್ದ ಈ ಮೇಲ್ಸೇತುವೆಯನ್ನು ನೈರುತ್ಯ ರೈಲ್ವೆಯು ಬಿಬಿಎಂಪಿಗೆ ಹಸ್ತಾಂತರಿಸಿತ್ತು. ಇದರ ಬೇರಿಂಗ್‌ನಲ್ಲಿ ದೋಷ ಕಾಣಿಸಿಕೊಂಡಿತ್ತು. ಅದನ್ನು ದುರಸ್ತಿಪಡಿಸುವಂತೆ ಕೋರಿ ಬಿಬಿಎಂಪಿಯು ನೈರುತ್ಯ ರೈಲ್ವೆ ಅಧಿಕಾರಿಗಳಿಗೆ 2021ರ ನವೆಂಬರ್ 25ರಂದು ಪತ್ರ ಬರೆದಿತ್ತು.

‘ತಜ್ಞರು ತಪಾಸಣೆ ನಡೆಸಿದ ಸಂದರ್ಭದಲ್ಲಿ ಎಂಇಎಸ್ ಮೇಲ್ಸೇತುವೆಯ ಬೇರಿಂಗ್‌ನಲ್ಲಿ ದೋಷವಿರುವುದು ಗಮನಕ್ಕೆ ಬಂದಿದೆ. ರೈಲ್ವೆ ಇಲಾಖೆಗೆ ಪತ್ರ ಬರೆದು ಈ ಬಗ್ಗೆ ಗಮನ ಸೆಳೆದಿದ್ದೇವೆ. ಅವರು ಬೇರಿಂಗ್ ದುರಸ್ತಿಪಡಿಸಲು ಕ್ರಮಕೈಗೊಂಡಿದ್ದಾರೆ’ ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಬಿಎಂಪಿಯು ನೈರುತ್ಯ ರೈಲ್ವೆಗೆ ಬರೆದ ಪತ್ರದ ಪ್ರಕಾರ, ಮೇಲ್ಸೇತುವೆಯ ಬೇರಿಂಗ್‌ಗಳ ಹಾಗೂ ಸಂರಚನೆಗೆ ಸಂಬಂಧಿಸಿದ ಅಂಶಗಳ ನಿರ್ವಹಣೆ ರೈಲ್ವೆ ಇಲಾಖೆ ಜವಾಬ್ದಾರಿ. ಮೇಲ್ಸೇತುವೆಯ ತಡೆಗೋಡೆ ಹಾಗೂ ಮೇಲ್ಮೈನ ನಿರ್ವಹಣೆ ಮಾಡುವುದು ಮತ್ತು ಡಾಂಬರೀಕರಣ ಬಿಬಿಎಂಪಿಯ ಜವಾಬ್ದಾರಿ.

ಈ ಮೇಲ್ಸೇತುವೆ ನಿರ್ಮಾಣಗೊಂಡ ಮೂರೇ ವರ್ಷಗಳಲ್ಲಿ ಡಾಂಬರು ಪದರದಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದವು. 2020ರ ಆಗಸ್ಟ್‌ನಲ್ಲಿ ಈ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ನಿಷೇಧಿಸಿ, ದೋಷ ಸರಿಪಡಿಸಲಾಗಿತ್ತು. ಈ ದುರಸ್ತಿ ಕಾರ್ಯಕ್ಕೆ ಬಿಬಿಎಂಪಿ ₹ 3 ಕೋಟಿ ವೆಚ್ಚ ಮಾಡಿತ್ತು. 2021ರ ಜುಲೈನಲ್ಲಿ ಇಲ್ಲಿನ ಕಾಂಕ್ರಿಟ್ ಸ್ಲ್ಯಾಬ್‌ಗಳನ್ನು ಜೋಡಿಸಿದ ಜಾಗದಲ್ಲೂ ಬಿರುಕು ಕಂಡುಬಂದಿತ್ತು. ತಜ್ಞರಿಂದ ಕೂಲಂಕಷವಾಗಿ ಪರಿಶೀಲಿಸಿದಾಗ ಮೇಲ್ಸೇತುವೆಯ ಸಂರಚನೆಯಲ್ಲೇ ದೋಷ ಇರುವುದು, ಇದರ ಕಾಂಕ್ರೀಟ್ ಸ್ಲ್ಯಾಬ್‌ಗಳು ಸ್ಥಳಾಂತರಗೊಂಡು ಕಂಪಿಸುತ್ತಿರುವುದು ಅದರಿಂದಾಗಿ ಬೇರಿಂಗ್‌ಗಳಿಗೆ ಹಾನಿ ಆಗಿರುವುದು ಪತ್ತೆಯಾಗಿತ್ತು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ 42 ಮೇಲ್ಸೇತುವೆಗಳಿದ್ದು, ನಾವು ಪ್ರತಿ ವರ್ಷವೂ ಈ ಎಲ್ಲ ಮೇಲ್ಸೇತುವೆಗಳ ತಪಾಸಣೆ ನಡೆಸುತ್ತೇವೆ. ತಪಾಸಣೆ ವೇಳೆ ಮೇಲ್ಸೇತುವೆಯಲ್ಲಿ ದೋಷ ಇರುವುದು ಸಂದೇಹ ವ್ಯಕ್ತವಾದರೆ ಅದನ್ನು ಸಂರಚನೆಯ ಪರೀಕ್ಷೆಗೆ ಒಳಪಡಿಸುತ್ತೇವೆ. ಮೇಲ್ಸೇತುವೆಯ ದೋಷವಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದರೂ ಅವುಗಳ ಸಂರಚನೆಯ ಪರೀಕ್ಷೆ ನಡೆಸುತ್ತೇವೆ’ ಎಂದು ಪ್ರಹ್ಲಾದ್ ಮಾಹಿತಿ ನೀಡಿದರು.

ಐಟಿಸಿ ಮೇಲ್ಸೇತುವೆಯಲ್ಲೂ ದೋಷ

ಐಟಿಸಿ ಕಾರ್ಖಾನೆ ಬಳಿಯ ಮೇಲ್ಸೇತುವೆಯಲ್ಲಿ ದೋಷ ಕಾಣಿಸಿಕೊಂಡಿರುವ ಸಂದೇಹವಿದ್ದು ಇದನ್ನೂ ಸಂರಚನಾ ಪರೀಕ್ಷೆಗೆ ಒಳಪಡಿಸಲು ಬಿಬಿಎಂಪಿ ನಿರ್ಧರಿಸಿದೆ.

‘ಈ ಮೇಲ್ಸೇತುವೆಯಲ್ಲಿ ಹೊರನೋಟಕ್ಕೆ ಯಾವುದೇ ದೋಷ ಕಾಣಿಸಿಲ್ಲ. ನಾನ್‌ಡಿಸ್ಟ್ರಕ್ಟಿವ್ ಪರೀಕ್ಷೆ ಸಂದರ್ಭದಲ್ಲಿ ಈ ಮೇಲ್ಸೇತುವೆಯ ಸಾಮರ್ಥ್ಯ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ. ಹಾಗಾಗಿ ಇದನ್ನು ಇನ್ನೊಮ್ಮೆ ಕೂಲಂಕಷವಾಗಿ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಿದ್ದೇವೆ’ ಎಂದು ಬಿ.ಎಸ್.ಪ್ರಹ್ಲಾದ್ ತಿಳಿಸಿದರು.

ಸುದ್ದಿ 2 ನಿಮಿಷ

ಯುವ ಕಾಂಗ್ರೆಸ್ ಪ್ರತಿಭಟನೆ: ಕಾರ್ಯಕರ್ತರು ವಶಕ್ಕೆ

ಬೆಂಗಳೂರು: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ‘ಸುಡುಗಾಡು ಸಿದ್ಧ’ ಎಂಬುದಾಗಿ ಕರೆದು ಅವಮಾನಿಸಿರುವ ವಸತಿ ಸಚಿವ ವಿ. ಸೋಮಣ್ಣ ಕ್ಷಮೆಯಾಚಿಸಬೇಕು’ ಎಂದು ಒತ್ತಾಯಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಮಾಗಡಿ ರಸ್ತೆ ಟೋಲ್ ವೃತ್ತದಲ್ಲಿ ಸೇರಿದ್ದ ಕಾರ್ಯಕರ್ತರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ವಿ. ಸೋಮಣ್ಣ ಅವರ ಪ್ರತಿಕೃತಿ ದಹಿಸಿ ಆಕ್ರೋಶ ಹೊರಹಾಕಿದರು.

ಸ್ಥಳದಲ್ಲಿದ್ದ ಪೊಲೀಸರು, ‘ಪ್ರತಿಭಟನೆಗೆ ಅನುಮತಿ ಪಡೆದಿಲ್ಲ. ಪ್ರತಿಭಟನೆ ಕೈಬಿಟ್ಟು ವಾಪಸು ಹೋಗಿ’ ಎಂದು ಹೇಳಿದರು. ಅದಕ್ಕೆ ಪ್ರತಿಭಟನಕಾರರು ಒಪ್ಪಲಿಲ್ಲ. ಅದೇ ವೇಳೆ ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ಬಸ್ಸಿನಲ್ಲಿ ಕರೆದೊಯ್ದರು. ಕೆಲ ಗಂಟೆಗಳ ನಂತರ ಬಿಡುಗಡೆ ಮಾಡಿದರು.

‘ಮೈಸೂರಿಗೆ ಫೆ.12ರಂದು ಭೇಟಿ ನೀಡಿದ್ದ ವಿ. ಸೋಮಣ್ಣ, ನಮ್ಮ ನಾಯಕ ಸಿದ್ದರಾಮಯ್ಯ ಅವರನ್ನು ಸುಡುಗಾಡು ಸಿದ್ಧ ಎಂಬುದಾಗಿ ಹೇಳಿಕೆ ನೀಡಿದ್ದರು’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಕಾಂಗ್ರೆಸ್ ನಾಯಕರ ಬಗ್ಗೆ ಬಿಜೆಪಿಯವರು ಅವಹೇಳನಕಾರಿಯಾಗಿ ಮಾತನಾಡುವುದು ಹೆಚ್ಚಾಗುತ್ತಿದೆ. ಇದು ಪಕ್ಷದ ನಡವಳಿಕೆ ತೋರಿಸುತ್ತದೆ. ಇದನ್ನೆಲ್ಲ ನೋಡುತ್ತಿರುವ ಜನ, ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂದರು.

ಅರಣ್ಯದಲ್ಲಿ ಕಾಡುಹಂದಿ ಬೇಟೆ: ಬೆಂಗಳೂರಿನ ಮೂವರ ಬಂಧನ

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಯಡಳ್ಳಿದೊಡ್ಡಿ ಅರಣ್ಯ ಪ್ರದೇಶದಲ್ಲಿ ಕಾಡುಹಂದಿ ಬೇಟೆಯಾಡಿ ಸಾಗಿಸಲು ಯತ್ನಿಸುತ್ತಿದ್ದ ಬೆಂಗಳೂರಿನ ಮೂವರನ್ನು ಚಾಮರಾಜನಗರ ಜಿಲ್ಲೆಯ ಸಿಇಎನ್ ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದಾರೆ.

ಬೆಂಗಳೂರಿನ ಮಂಜುನಾಥ, ಬಾಲರಾಜು, ಜೋಸೆಫ್ ಬಂಧಿತರು.

ಟಾಟಾ ಇಂಡಿಕಾ ಕಾರನ್ನು ಪೊಲೀಸರು ತಡೆದು ತಪಾಸಣೆ ಮಾಡಿದ್ದಾರೆ. ಬೇಟೆಯಾಡಿದ ಹಂದಿಯ ಮಾಂಸವನ್ನು ಚೀಲದೊಳಗೆ ತುಂಬಿಟ್ಟಿರುವುದು ಕಂಡು ಬಂದಿದೆ.

ಮೂವರನ್ನು ಬಂಧಿಸಿದ ಪೊಲೀಸರು ಅವರಿಂದ ಒಂಟಿ ಕೊಳವೆ ನಾಡ ಬಂದೂಕು, 10 ಗುಂಡು, ಎರಡು ಬ್ಯಾಟರಿ, 12 ಕೈ ಸಿಡಿಮದ್ದು, 3 ಮೊಬೈಲ್, ಎರಡು ಹಂದಿ ತಲೆ ಹಾಗೂ ಮಾಂಸ ವಶಪಡಿಸಿಕೊಂಡಿದ್ದಾರೆ.

‘ಬಂಧಿತ ಆರೋಪಿಗಳು ವೃತ್ತಿನಿರತ ಬೇಟೆಗಾರರು ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಹಿಂದೆ ಯಾವುದಾದರೂ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಫೋಟೊ ಕಳುಹಿಸಿ ಕಿರುಕುಳ: ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯೊಬ್ಬರ ಖಾಸಗಿ ಕ್ಷಣಗಳ ಫೋಟೊಗಳನ್ನು ಅವರ ತಂದೆಗೆ ಕಳುಹಿಸಿ ಕಿರುಕುಳ ನೀಡುತ್ತಿದ್ದ ಆರೋಪದಡಿ ರೌಡಿ ನಂದೀಶ್‌ನನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಯುವತಿಯೊಬ್ಬರು ದೂರು ನೀಡಿದ್ದರು. ಹುಳಿಮಾವು ಠಾಣೆ ರೌಡಿಪಟ್ಟಿಯಲ್ಲಿ ಹೆಸರಿದ್ದ ನಂದೀಶ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಯುವತಿಯು ಸ್ನೇಹಿತರ ಜೊತೆ ಖಾಸಗಿ ಕ್ಷಣಗಳನ್ನು ಕಳೆದಿದ್ದರು. ಅದರ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡಿದ್ದ ನಂದೀಶ್, ಯುವತಿಯ ತಂದೆಗೆ ಕಳುಹಿಸಿದ್ದ. ಫೋಟೊ, ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿಯೂ ಯುವತಿಯನ್ನು ಬೆದರಿಸಿದ್ದ.’

‘ಆರೋಪಿಯ ಕೃತ್ಯವನ್ನು ಯುವತಿ, ಸ್ನೇಹಿತನೇ ಆದ ರಾಜಕೀಯ ಮುಖಂಡರೊಬ್ಬರ ಮಗನ ಬಳಿ ಹೇಳಿಕೊಂಡಿದ್ದರು. ಆತನ ಜೊತೆ ಠಾಣೆಗೆ ಬಂದು ದೂರು ನೀಡಿದ್ದರು’ ಎಂದೂ ಮೂಲಗಳು ತಿಳಿಸಿವೆ.

ಬೆದರಿಸಲು ಸುಪಾರಿ: ‘ಯುವತಿ ಜೊತೆ ಯುವಕನೊಬ್ಬ ಸಲುಗೆ ಇರಿಸಿಕೊಂಡಿದ್ದ. ವಿಚಾರ ತಿಳಿದ ಯುವಕನ ಪೋಷಕರು, ಯುವತಿಯನ್ನು ದೂರ ಮಾಡಲು ನಂದೀಶ್‌ಗೆ ಸುಪಾರಿ ನೀಡಿದ್ದರೆಂಬ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರೌಡಿ ನಂದೀಶ್, ಯುವಕನ ಜೊತೆಗಿದ್ದ ಖಾಸಗಿ ಕ್ಷಣಗಳ ಫೋಟೊ ಇಟ್ಟುಕೊಂಡು ಯುವತಿಯನ್ನು ಬೆದರಿಸಿದ್ದ. ಯುವಕನಿಂದ ದೂರವಾಗುವಂತೆಯೂ ಕೊಲೆ ಬೆದರಿಕೆ ಹಾಕಿದ್ದ’ ಎಂದೂ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ವೇಗದ ಚಾಲನೆ: ₹ 1.27 ಲಕ್ಷ ದಂಡ

ಬೆಂಗಳೂರು: ನೈಸ್ ರಸ್ತೆಯಲ್ಲಿ ನಿಗದಿತ ಮಿತಿಗಿಂತ ಹೆಚ್ಚು ವೇಗದಲ್ಲಿ ವಾಹನ ಚಲಾಯಿಸಿದ್ದ 126 ಚಾಲಕರಿಗೆ ಸಂಚಾರ ಪೊಲೀಸರು ದಂಡ ವಿಧಿಸಿದ್ದಾರೆ.

‘ನೈಸ್ ರಸ್ತೆಯಲ್ಲಿ ಅತಿ ವೇಗದ ಚಾಲನೆಯಿಂದ ಅಪಘಾತಗಳು ಹೆಚ್ಚುತ್ತಿವೆ. ಹೀಗಾಗಿ, ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ಭಾನುವಾರ ವಿಶೇಷ ಕಾರ್ಯಾಚರಣೆ ನಡೆಸಿದರು. ಅತೀ ವೇಗದಲ್ಲಿ ವಾಹನ ಚಲಾಯಿಸಿದ್ದ 126 ಚಾಲಕರಿಂದ ₹ 1.27 ಲಕ್ಷ ದಂಡ ಸಂಗ್ರಹಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಶಾಸಕನ ಪತ್ನಿ ಮೊಬೈಲ್ ಕಿತ್ತೊಯ್ದಿದ್ದವರ ಬಂಧನ

ಬೆಂಗಳೂರು: ಶಾಸಕ ಪ್ರಿಯಾಂಕ್ ಖರ್ಗೆ ಪತ್ನಿ ಶ್ರುತಿ ಅವರ ಮೊಬೈಲ್ ಕಿತ್ತೊಯ್ದಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೋಹಿನ್ ಖಾಜಾ, ತೋಹಿದ್, ಜಬೀ ಹಾಗೂ ಇಲಿಯಾಸ್ ಬಂಧಿತರು. ಫೆ. 6ರಂದು ಬೆಳಿಗ್ಗೆ ವಾಯುವಿಹಾರಕ್ಕೆ ತೆರಳುತ್ತಿದ್ದ ವೇಳೆ ಶ್ರುತಿ ಅವರ ಮೊಬೈಲ್ ಕಿತ್ತೊಯ್ಯಲಾಗಿತ್ತು. ಪ್ರಿಯಾಂಕ್ ಅವರ ಆಪ್ತ ಸಹಾಯಕ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಸುಲಿಗೆಯನ್ನೇ ವೃತ್ತಿ ಮಾಡಿಕೊಂಡಿದ್ದರು. ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಹೈಗ್ರೌಂಡ್ಸ್, ಸರ್ಜಾಪುರ, ಮಂಡ್ಯ ಸೇರಿದಂತೆ ವಿವಿಧ ಠಾಣೆಗಳ ವ್ಯಾಪ್ತಿಗಳಲ್ಲಿ ನಡೆದಿದ್ದ 180 ಸುಲಿಗೆ ಪ್ರಕರಣದಲ್ಲಿ ಆರೋಪಿಗಳು ಭಾಗಿಯಾಗಿದ್ದರು.’

‘ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಕ್ಯಾಬ್ ಚಾಲಕರೊಬ್ಬರಿಗೆ ಆರೋಪಿಗಳು ಚಾಕುವಿನಿಂದ ಇರಿದು ಸುಲಿಗೆ ಮಾಡಿದ್ದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಅವರು ತಿಳಿಸಿದರು.

ದಿನಕ್ಕೆ ಎರಡು ಬಾರಿ ಕೃತ್ಯ: ‘ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕದ್ದಿದ್ದ ಆರೋಪಿಗಳು, ನಗರದಲ್ಲಿ ಸುತ್ತಾಡಿ ಕೃತ್ಯ ಎಸಗುತ್ತಿದ್ದರು. ಆ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

‘ಬೆಳಿಗ್ಗೆ 5 ಗಂಟೆಯಿಂದ 7 ಗಂಟೆ ಹಾಗೂ ರಾತ್ರಿ 8 ಗಂಟೆಯಿಂದ 10 ಗಂಟೆವರೆಗೆ ದಿನದಲ್ಲಿ ಎರಡು ಬಾರಿ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ರಸ್ತೆಯಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಹಿಂಬಾಲಿಸಿ, ಮೊಬೈಲ್ ಕಿತ್ತೊಯ್ಯುತ್ತಿದ್ದರು. ಕೆಲವೆಡೆ ವಾಹನಗಳನ್ನು ಅಡ್ಡಗಟ್ಟಿ ಚಾಕು ತೋರಿಸಿ ಬೆದರಿಸಿ ಸುಲಿಗೆ ಮಾಡುತ್ತಿದ್ದರು’ ಎಂದೂ ತಿಳಿಸಿದರು.



ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,75,827 ಒಟ್ಟು ಸೋಂಕಿತರು (17,75,342 ನಿನ್ನೆಯ ವಿವರ)

6,134	17,52,872	16,820
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	485
ಗುಣಮುಖ	737
ಸಾವು	12

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರೆಸ್‌ಕ್ಲಬ್‌ನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಿ.ಎಸ್‌.ರಂಗನಾಥ್ ಅವರ ‘ಸೂರಿ–100’ ಪುಸ್ತಕವನ್ನು (ಎಡದಿಂದ ಐದನೆಯವರು) ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ರೋಜರ್ ಬಿನ್ನಿ ಬಿಡುಗಡೆ ಮಾಡಿದರು. ಕೆಎಸ್‌ಒಯು ಕುಲಪತಿ ವಿದ್ಯಾಶಂಕರ್, ಶಾಸಕ ಎಲ್‌.ಎ.ರವಿಸುಬ್ರಹ್ಮಣ್ಯ, ಪ್ರೆಸ್‌ಕ್ಲಬ್ ಅಧ್ಯಕ್ಷ ಕೆ.ಸದಾಶಿವ ಶೆಣೈ, ಪ್ರಧಾನ ಕಾರ್ಯದರ್ಶಿ ಎಚ್‌.ವಿ.ಕಿರಣ್, ಬಿ.ಎಸ್‌.ರಂಗನಾಥ್, ಪತ್ರಕರ್ತ ಪೊನ್ನಪ್ಪ, ಶ್ರೀಹರಿ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ

ಸುರಾನಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರಪ್ಪ ಅವರು ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಿದರು. ಸಂಸ್ಥಾಪಕ ಡಾ.ಕೆ.ವಿ. ಮುನಿಸ್ವಾಮಿ, ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀಶೈಲಂ, ಪ್ರೊ.ವಿ.ಎಂ.ರವಿ, ಪುಟ್ಟರಾಜು, ಡಾ.ಸತ್ಯಶೀಲನಾಯರ್, ಡಾ.ಪ್ರಕಾಶ್, ಜಿ.ಇ.ಚಂದ್ರಯ್ಯ, ಮದನ್ ಕುಮಾರ್ ಇದ್ದರು.

ಕೆ.ಆರ್.ಪುರ: ‘ವಿದ್ಯಾರ್ಥಿಗಳು ಶಿಸ್ತು, ಸಂಯಮ ಸದ್ಗುಣಗಳನ್ನು ರೂಢಿಸಿಕೊಂಡರೆ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯ’ ಎಂದು ಸುರಾನ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರಪ್ಪ ತಿಳಿಸಿದರು.

ಕೆ.ಆರ್.ಪುರದ ವೆಂಕಟೇಶ್ವರ ಸಮೂಹ ವಿದ್ಯಾಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅತಿಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಿ ಮಾತನಾಡಿದರು.

‘ಜೀವನದಲ್ಲಿ ಗುರಿ ಮುಖ್ಯ. ಸಾಧನೆ ಮಾರ್ಗದಲ್ಲಿ ಸಾಗಲು ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಸಮಯ ಅಮೂಲ್ಯವಾದದ್ದು. ಸಮಯವನ್ನು ಹಾಳು ಮಾಡದೆ ಕಷ್ಟಪಟ್ಟು ವ್ಯಾಸಂಗ ಮಾಡಿದರೆ ಅದಕ್ಕೆ ತಕ್ಕ ಫಲ ಸಿಗುತ್ತದೆ ಎಂದರು.

ಶ್ರೀ ವೆಂಕಟೇಶ್ವರ ಸಮೂಹ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಡಾ.ಕೆ. ವಿ.ಮುನಿಸ್ವಾಮಿ, ‘ಶಿಕ್ಷಣದಿಂದ ಯಾವುದೇ ವ್ಯಕ್ತಿ ವಂಚಿತರಾಗಬಾರದು. ಪ್ರತಿಯೊಬ್ಬರಿಗೂ ಶಿಕ್ಷಣ ಲಭ್ಯವಾಗಬೇಕು. ಈ ಉದ್ದೇಶದಿಂದ ಸಂಸ್ಥೆಯು ಪ್ರತಿಭಾ ಪುರಸ್ಕಾರ ಹಮ್ಮಿಕೊಂಡು 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಚೆಕ್‌ಗಳನ್ನು ವಿತರಿಸಿದೆ’ ಎಂದು ತಿಳಿಸಿದರು.

ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಿಸಲು ಒತ್ತಾಯ

ಬೆಳಗಾವಿ: ‘ರಾಷ್ಟ್ರಧ್ವಜಕ್ಕೆ ಅವಮಾನ ಮಾಡುವಂತಹ ಹೇಳಿಕೆ ನೀಡಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಹಾಗೂ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು’ ಎಂದು ಒತ್ತಾಯಿಸಿ ಅಥಣಿಯ ವಕೀಲ ಭೀಮನಗೌಡ ಪರಗೊಂಡ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ಎಸ್ಪಿ ಕಚೇರಿ ಮೂಲಕ ಮನವಿ ಸಲ್ಲಿಸಿರುವ ಅವರು, ‘ಸಂವಿಧಾನದ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಈಶ್ವರಪ್ಪ ಅವರು, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಸ್ವಯಂಪ್ರೇರಿತವಾಗಿ ರಾಷ್ಟ್ರದ್ರೋಹ ಪ್ರಕರಣ ದಾಖಲಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಆಸ್ತಿ ಕಬಳಿಸಲು ಯತ್ನ: ಶಾಸಕ ಜಮೀರ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಚೊಕ್ಕನಹಳ್ಳಿ ಬಳಿಯ ಆಸ್ತಿ ಕಬಳಿಸಲು ಯತ್ನಿಸಿದ ಪ್ರಕರಣ ಸಂಬಂಧ ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಹಾಗೂ ಇತರರ ವಿರುದ್ಧ ಸಂಪಿಗೆಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಆರ್.ಟಿ. ನಗರದ ಶಾಹೀತಾ ನಾಜೀನ್ ಎಂಬುವರು ಜಮೀರ್ ಅಹ್ಮದ್ ಖಾನ್ ಹಾಗೂ ಇತರರ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ನಾಜೀನಾ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಪೊಲೀಸರಿಗೆ ಇತ್ತೀಚೆಗೆ ನಿರ್ದೇಶನ ನೀಡಿದೆ’ ಎಂದು ಪೊಲೀಸರು ಹೇಳಿದರು.

‘ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ಹಲ್ಲೆ (ಐಪಿಸಿ 323), ಲೈಂಗಿಕ ಕಿರುಕುಳ (ಐಪಿಸಿ 354), ವಂಚನೆ (ಐಪಿಸಿ 420), ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟು ಮಾಡಿದ (ಐಪಿಸಿ 427), ಅತಿಕ್ರಮ ಪ್ರವೇಶ (ಐಪಿಸಿ 447), ಅಪರಾಧ ಸಂಚು (ಐಪಿಸಿ 503), ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜಮೀರ್ ಅಹ್ಮದ್ ಖಾನ್ (49), ಅವರ ಸಹೋದರ ಜಮೀಲ್ (51), ಅತೀಕ್ ಕಾವರ್ (44) ಹಾಗೂ ಇತರರನ್ನು ಆರೋಪಿಯನ್ನಾಗಿ ಮಾಡಲಾಗಿದೆ’ ಎಂದೂ ತಿಳಿಸಿದರು.

ಪ್ರಕರಣದ ವಿವರ: ‘ದೂರುದಾರ ಶಾಹೀತಾ ನಾಜೀನ್ ಅವರ ಪತಿ ವಿದೇಶದಲ್ಲಿದ್ದಾರೆ. ಜಮೀರ್ ಅಹ್ಮದ್ ಖಾನ್ ಕುಟುಂಬಕ್ಕೆ ಸಂಬಂಧಪಟ್ಟ ಚೊಕ್ಕನಹಳ್ಳಿ ಬಳಿಯ ಆಸ್ತಿಯನ್ನು ನಾಜೀನ್ ದಂಪತಿ ಕಾನೂನುಬದ್ಧವಾಗಿ ಖರೀದಿಸಿದ್ದರು. ಆಗಸ್ಟ್ 4ರಂದು ನಾಜೀನ್ ಹಾಗೂ ಅವರ ಮಗ, ಜಾಗದಲ್ಲಿ ಶೆಡ್ ನಿರ್ಮಿಸುತ್ತಿದ್ದರು. ಜೆಸಿಬಿ ಯಂತ್ರ ಹಾಗೂ ಬುಲ್ಡೋಜರ್ ಸಮೇತ ಅತಿಕ್ರಮ ಪ್ರವೇಶ ಮಾಡಿದ್ದ ಆರೋಪಿಗಳು, ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದರೆಂಬ ಸಂಗತಿ ದೂರಿನಲ್ಲಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಬಸ್‌ಗಳನ್ನು ಜಾಗದಲ್ಲಿ ನಿಲ್ಲಿಸಿದ್ದರು. ನಾಜೀನ್ ಅವರನ್ನು ಎಳೆದಾಡಿ ಲೈಂಗಿಕ ದೌರ್ಜನ್ಯ ಎಸಗಿದ್ದರೆಂಬ ಆರೋಪ ಇದೆ’ ಎಂದೂ ತಿಳಿಸಿದರು.

ನಿಧನ ವಾರ್ತೆ

ಸಿದ್ದ ಬಸವಾಚಾರ್

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಅಧಿಕಾರಿ ಟಿ.ಎಸ್. ಸಿದ್ದಬಸವಚಾರ್ (83) ಅನಾರೋಗ್ಯದಿಂದಾಗಿ ಭಾನುವಾರ ಮಧ್ಯಾಹ್ನ ನಿಧನರಾದರು. ಸಿದ್ದಬಸವಚಾರ್ ಅವರಿಗೆ ಪತ್ನಿ ಮತ್ತು ಪತ್ರಕರ್ತ ಎಸ್. ಗಿರೀಶ್‌ಬಾಬು ಸೇರಿ ಮೂವರು ಪುತ್ರರು ಇದ್ದಾರೆ. ಕೆಂಗೇರಿ ಸ್ಯಾಟ್‌ಲೈಟ್ ಟೌನ್‌ನ 2ನೇ ಹಂತದಲ್ಲಿರುವ ಕೊಮ್ಮಘಟ್ಟ ಮುಖ್ಯರಸ್ತೆಯ ಚಿತಾಗಾರದಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಮಾ.5ರವರೆಗೆ ‘ಆರ್ಟ್ ವೇವ್ಸ್’ ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಪಾಷ್ ವೇವ್ಸ್ ಆರ್ಟ್ ಗ್ಯಾಲರಿ ವತಿಯಿಂದ ಮಾರ್ಚ್ 5ರವರೆಗೆ ‘ಆರ್ಟ್ ವೇವ್ಸ್’ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿದೆ.

‘ಪ್ರದರ್ಶನದ ಸಮಯ ಬೆಳಿಗ್ಗೆ 10ರಿಂದ ಸಂಜೆ 6. ಪ್ರದರ್ಶನ ಈಗಾಗಲೇ ಆರಂಭಗೊಂಡಿದ್ದು,-ರಾಜ್ಯದ ಕಲಾವಿದರು ಸೇರಿದಂತೆ ಆಹ್ವಾನಿತ ಕಲಾವಿದರ ಚಿತ್ರಗಳನ್ನು ಇಲ್ಲಿ ವೀಕ್ಷಿಸಬಹುದು’ ಎಂದು ಗ್ಯಾಲರಿ ನಿರ್ದೇಶಕ ಬಸವರಾಜ್ ಅರಗಿ ತಿಳಿಸಿದ್ದಾರೆ.

ಸ್ಥಳ: ಪಾಷ್ ವೇವ್ಸ್ ಆರ್ಟ್ ಗ್ಯಾಲರಿ, ರಾಮಮಂದಿರ ಮೈದಾನ ಎದುರು, ರಾಜಾಜಿನಗರ 3ನೇ ಬ್ಲಾಕ್.

ಬಿಬಿಎಂಪಿ ಒಂದರಲ್ಲೇ ಹತ್ತು ಸಾವಿರಕ್ಕೂ ಹೆಚ್ಚು ಅವಧಿ ಮೀರಿದ ಅರ್ಜಿಗಳು ಬಾಕಿ

ಜನರಿಗೆ ದೊರಕದ ‘ಸಕಾಲ’ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕಾಲದಲ್ಲಿ ಸರ್ಕಾರಿ ಸೇವೆಯನ್ನು ಒದಗಿಸಲು ಜಾರಿಗೆ ತಂದ ‘ಸಕಾಲ’ ಯೋಜನೆಯ ಲಾಭ ನಗರದ ಜನರಿಗೆ ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ. ವಿವಿಧ ಸೇವೆ ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಬೆಂಗಳೂರು ನಗರದಲ್ಲೇ ಅತೀ ಹೆಚ್ಚು 11,256 ಅರ್ಜಿಗಳು ವಿಲೇವಾರಿಯಾಗದೆ ಅವಧಿ ಮೀರಿ ಬಾಕಿ ಉಳಿದುಕೊಂಡಿವೆ.

2011ರಲ್ಲಿ ಸಕಾಲ ಕಾಯ್ದೆ ಜಾರಿಗೆ ಬಂದಿದ್ದು, 99 ಇಲಾಖೆಯ 1,115 ಸೇವೆಗಳು ಇದರ ವ್ಯಾಪ್ತಿಯಲ್ಲಿವೆ. ಜನನ-ಮರಣ ಪ್ರಮಾಣ ಪತ್ರವನ್ನು 3ರಿಂದ 7 ದಿನಗಳಲ್ಲಿ, ಪರೀಕ್ಷೆ ಅಂಕಗಳ ಮರುಎಣಿಕೆ 15 ದಿನಗಳಲ್ಲಿ, ಜಾತಿ ಪ್ರಮಾಣ ಪತ್ರ 21 ದಿನಗಳ ಒಳಗೆ, ವಾಹನ ಚಾಲನಾ ಪರವಾನಗಿ 30 ದಿನಗಳಲ್ಲಿ ಕೊಡಬೇಕು. ಹೀಗೆ ಬೇರೆ ಬೇರೆ ಸೇವೆಗಳಿಗೆ ಬೇರೆ ಬೇರೆ ಅವಧಿ ನಿಗದಿ ಮಾಡಲಾಗಿದೆ.

ನಿಗದಿತ ಅವಧಿ ಮೀರಿದರೆ ಸಂಬಂಧಪಟ್ಟ ಅಧಿಕಾರಿ ಅರ್ಜಿದಾರನಿಗೆ ದಿನಕ್ಕೆ ₹ 20ರಂತೆ ಪರಿಹಾರ ಪಾವತಿಸಬೇಕು. ದಂಡ ಪಡೆಯಬೇಕೆಂದರೆ ಅರ್ಜಿದಾರ ಮೇಲಧಿಕಾರಿಗೆ ಮತ್ತೊಂದು ಅರ್ಜಿ ಸಲ್ಲಿಸಬೇಕು.

ಸಕಾಲ ಯೋಜನೆಯಡಿ ಈವರೆಗೆ ರಾಜ್ಯದಲ್ಲಿ 21,53,46,382 ಅರ್ಜಿಗಳು ಸಲ್ಲಿಕೆಯಾಗಿದ್ದು, ಆ ಪೈಕಿ 21,49,29,359 ಅರ್ಜಿಗಳು ವಿಲೇವಾರಿಗೊಂಡಿವೆ. 4,17,023 ಅರ್ಜಿಗಳು ಅವಧಿ ಮೀರಿ ಬಾಕಿ ಉಳಿದಿವೆ.

ಬಾಕಿ ಉಳಿದ ಅರ್ಜಿಗಳಲ್ಲಿ ನಗರಾಭಿವೃದ್ಧಿ ಇಲಾಖೆ ಒಂದರಲ್ಲೇ 11,335 ಅರ್ಜಿಗಳು ಸಕಾಲದಲ್ಲಿ ವಿಲೇವಾರಿಯಾಗಿಲ್ಲ. ಈ ಪೈಕಿ ಬೆಂಗಳೂರು ನಗರ ಜಿಲ್ಲೆಯಲ್ಲೇ ಅತೀ ಹೆಚ್ಚು ಅರ್ಜಿಗಳು ಬಾಕಿ ಇವೆ. ಬೆಂಗಳೂರು ಹೊರತುಪಡಿಸಿದರೆ ಶಿವಮೊಗ್ಗ ಜಿಲ್ಲೆಯಲ್ಲಿ 50, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 12, ಕಲಬುರ್ಗಿ ಜಿಲ್ಲೆಯಲ್ಲಿ 4, ಬೆಳಗಾವಿ ಜಿಲ್ಲೆಯಲ್ಲಿ 3, ಧಾರವಾಡ, ಹಾಸನ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಲಾ 1 ಅರ್ಜಿ ಮಾತ್ರ ಬಾಕಿ ಉಳಿದುಕೊಂಡಿವೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿಬಿಎಂಪಿಯಲ್ಲೇ 10,947 ಅರ್ಜಿಗಳು ಹಲವು ದಿನಗಳಿಂದ ಅವಧಿ ಮೀರಿ ಬಾಕಿ ಉಳಿದುಕೊಂಡಿವೆ. ನಂತರದ ಸ್ಥಾನದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇದ್ದು, 275 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಜಲಮಂಡಳಿಯಲ್ಲಿ 72, ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಲ್ಲಿ 53, ಬಿಎಂಆರ್‌ಡಿಎನಲ್ಲಿ 32 ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 13 ಅರ್ಜಿಗಳು ಬಾಕಿ ಇವೆ ಎಂದು ಸಕಾಲ ಯೋಜನೆಯ ಅಂಕಿ–ಅಂಶಗಳು ಹೇಳುತ್ತಿವೆ.

‘ಅವಧಿ ಮೀರಿ ವಿಲೇವಾರಿ ಆಗುತ್ತಿರುವ ಅರ್ಜಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ವಿಳಂಬ ಮಾಡಿದ ಅಧಿಕಾರಿಯಿಂದ ದಂಡ ವಸೂಲಿ ಮಾಡಿದ್ದರೆ ಈ ಸಂಖ್ಯೆ ಕಡಿಮೆ ಆಗುತ್ತಿತ್ತು. ದಿನದ ದಂಡದ ಮೊತ್ತ ಹೆಚ್ಚಾಗಬೇಕು. ಅಲ್ಲದೆ, ಸಕಾಲ ಅವಧಿ ಮೀರಿದ ತಕ್ಷಣ ಅಧಿಕಾರಿಯ ವೇತನದಿಂದ ದಂಡದ ಮೊತ್ತ ಕಡಿತ ಮಾಡಿ ಅರ್ಜಿದಾರನ ಖಾತೆಗೆ ಜಮೆ ಮಾಡಬೇಕು. ಆಗ ಮಾತ್ರ ಸಕಾಲ ಕಾಯ್ದೆ ಸಮರ್ಪಕ ಜಾರಿ ಸಾಧ್ಯ’ ಎಂಬುದು ಸಕಾಲ ಯೋಜನೆಯಡಿ ಅರ್ಜಿ ಸಲ್ಲಿಸಿ ಜನನ ಪ್ರಮಾಣ ಪತ್ರಕ್ಕೆ ಕಾಯುತ್ತಿರುವ ಬಿಟಿಎಂ ಲೇಔಟ್‌ನ ಅನಿಲ್ ಅವರ ಅಭಿಪ್ರಾಯ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ವಿಳಂಬ

ಸಹಾಯಕ ಕಂದಾಯ ಅಧಿಕಾರಿ(ಎಆರ್‌ಒ) ಕಚೇರಿ	ಬಾಕಿ ಇರುವ ಅರ್ಜಿಗಳ ಸಂಖ್ಯೆ
ವೈಟ್‌ಫೀಲ್ಡ್	1,270
ಕೆಂಗೇರಿ	1,172
ಹೂಡಿ	856
ಮಾರತಹಳ್ಳಿ	766
ಬೇಗೂರು	440
ಬ್ಯಾಟರಾಯಪುರ	412
ಹೊರಮಾವು	322
ಕೊಡಿಗೇಹಳ್ಳಿ	299
ಕೆ.ಆರ್.ಪುರ	258

ಚಿತ್ರಾವಳಿ

ಬೆಂಗಳೂರು ಬ್ರಿಗೇಡ್ ಫಾರ್ ಅನಿಮಲ್ ಲಿಬರೇಷನ್ (ಬಿಬಿಎಎಲ್) ಸಂಘಟನೆಯ ಸದಸ್ಯರು ಚರ್ಚ್ ಸ್ಟ್ರೀಟ್‌ನಲ್ಲಿ ಭಾನುವಾರ ಭಿತ್ತಿ ಚಿತ್ರಗಳನ್ನು ಪ್ರದರ್ಶಿಸಿ ಪ್ರಾಣಿ ಹಿಂಸೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು

ಸರ್ಕಾರದ ವಿಶೇಷ ಅನುದಾನದಡಿಯಲ್ಲಿ ₹1 ಕೋಟಿ ವೆಚ್ಚದಲ್ಲಿ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಥಣಿಸಂದ್ರದ ಮಾರುತಿ ಸಾಮಿಲ್ಸ್ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಪಳನಿ ವೆಂಕಟೇಶ್, ಬಸವರಾಜ್, ಮಹೇಶ್ ಕುಮಾರ್ ಇತರರು ಇದ್ದರು.

–ಪ್ರಜಾವಾಣಿ ಚಿತ್ರಗಳು

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಖಾಲಿ ಪೈಪ್‌ಲೈನ್: ಹರಿಯದ ನೀರು

ರಾಮಮೂರ್ತಿ ನಗರ ವ್ಯಾಪ್ತಿಯ ಹೊಯ್ಸಳ ನಗರದಲ್ಲಿ ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ. ಜಲಮಂಡಳಿಯಿಂದ ಇಲ್ಲಿನ ಮನೆಗಳಿಗೆ ಪೈಪ್‌ಲೈನ್ ಸಂಪರ್ಕವಾಗಿ ದಶಕ ಕಳೆದಿದೆ. ಆದರೆ, ನೀರು ಹರಿಯಲೇ ಇಲ್ಲ. ನಿವಾಸಿಗಳು ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದು, ಅವರ ನಿರೀಕ್ಷೆ ಹುಸಿಯಾಗಿದೆ.

ಇದರಿಂದ ಬೇಸತ್ತ ನಿವಾಸಿಗಳೆಲ್ಲ ಹಣ ಪಾವತಿಸಿ, ಟ್ಯಾಂಕರ್‌ನಿಂದ ನೀರು ಸರಬರಾಜು ಮಾಡಿಕೊಳ್ಳುತ್ತಿದ್ದೇವೆ. ಕಾವೇರಿ ನೀರು ಸಂಪರ್ಕದ ಕೆಲಸವೂ ಇತ್ತೀಚೆಗೆ ನಡೆಯುತ್ತಿದ್ದು, ಅದು ಯಾವಾಗ ಪೂರ್ಣಗೊಳ್ಳುತ್ತದೆಯೋ ಗೊತ್ತಿಲ್ಲ. ಈಗಾಗಲೇ ಮನೆಗಳಿಗೆ ಇರುವ ಸಂಪರ್ಕಕ್ಕೆ ನೀರು ಪೂರೈಸಬೇಕು. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಎ.ವಿ.ಶಾಮರಾವ್, ರಾಮಮೂರ್ತಿ ನಗರ

ಹೊಯ್ಸಳ ನಗರದಲ್ಲಿ ನೀರು ಪೂರೈಕೆಗೆ ಜಲಮಂಡಳಿ ಹಾಕಿದ್ದ ಪೈಪ್‌ಲೈನ್ ಸಂಪರ್ಕ.

ಕೆಂಗುಂಟೆ ವೃತ್ತ: ದುಸ್ಥಿತಿಯಲ್ಲಿ ಬಸ್ ತಂಗುದಾಣ

ಜ್ಞಾನಭಾರತಿ ವಾರ್ಡ್ ವ್ಯಾಪ್ತಿಯಲ್ಲಿರುವ ಕೆಂಗುಂಟೆ ವೃತ್ತದಲ್ಲಿ ಬಸ್ ತಂಗುದಾಣವಿದೆ. ಆದರೆ, ಈ ತಂಗುದಾಣ ಪ್ರಯಾಣಿಕರ ಅನುಕೂಲಕ್ಕೆ ಬಾರದ ಸ್ಥಿತಿ ತಲುಪಿದೆ. ಸಾವಿರಾರು ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಈ ಸ್ಥಳದಿಂದ ವಿವಿಧೆಡೆಗೆ ಪ್ರತಿದಿನ ಸಂಚರಿಸುತ್ತಾರೆ. ತಂಗುದಾಣದಲ್ಲಿರುವ ಆಸನಗಳು ಮುರಿದು ಸಾಕಷ್ಟು ದಿನಗಳು ಕಳೆದಿವೆ. ಆದರೆ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದರ ದುರಸ್ತಿಗೆ ಮುಂದಾಗಿಲ್ಲ. ಹಿರಿಯರಿಗೆ ಕೂರಲು ವ್ಯವಸ್ಥೆ ಇಲ್ಲವಾಗಿದೆ. ತಂಗುದಾಣದಲ್ಲಿ ಸಂಗ್ರಹವಾಗುವ ಕಸವನ್ನು ತೆರವು ಮಾಡುತ್ತಿಲ್ಲ. ಬಸ್ ತಂಗುದಾಣವನ್ನು ಸರಿಪಡಿಸಿ, ಸ್ವಚ್ಛತೆ ಕಾಪಾಡಬೇಕು.

ತುಕಾರಾಂ, ಬಾಲಗಂಗಾಧರ ನಗರ



ಕೆಂಗುಂಟೆ ವೃತ್ತದ ಬಸ್ ತಂಗುದಾಣದಲ್ಲಿ ಆಸನಗಳು ಮುರಿದಿರುವುದು

ಕೊಡಿಗೇಹಳ್ಳಿ ಬಳಿ ರಸ್ತೆ ಮೇಲೆ ಹರಿಯುವ ಕೊಳಚೆ ನೀರು

ರಸ್ತೆ ಮೇಲೆ ಹರಿಯುವ ಕೊಳಚೆ ನೀರು

ಬಳ್ಳಾರಿ ರಸ್ತೆಯಲ್ಲಿ ಬ್ಯಾಟರಾಯನಪುರದಿಂದ ಕೊಡಿಗೇಹಳ್ಳಿ ವೃತ್ತದ ಕಡೆಗೆ ಸಾಗುವ ಮಾರ್ಗ ಮಧ್ಯೆ ಹಲವು ತಿಂಗಳುಗಳಿಂದ ಚರಂಡಿ ನೀರು ಹರಿಯುತ್ತಿದೆ. ಬ್ಯಾಟರಾಯನಪುರ, ಜಕ್ಕೂರು ಸೇರಿದಂತೆ ವಿವಿಧ ಭಾಗಗಳಿಂದ ಬರುವ ವಾಹನಗಳು ಇದೇ ಮಾರ್ಗವಾಗಿ ಮುಖ್ಯರಸ್ತೆಯನ್ನು ಸೇರುತ್ತವೆ. ವಿಮಾನ ನಿಲ್ದಾಣದಿಂದ ಬರುವ ಹಲವು ವಾಹನಗಳೂ ಈ ರಸ್ತೆಯಲ್ಲಿ ಸಂಚರಿಸುತ್ತವೆ.

ಚರಂಡಿ ನೀರು ರಸ್ತೆಯ ಮೇಲೆ ಹರಿಯುವುದರಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಕೊಳಚೆ ನೀರಿನಿಂದ ಪಾದಚಾರಿಗಳು ಈ ರಸ್ತೆಯಲ್ಲಿ ನಡೆಯಲು ಹಿಂದೇಟು ಹಾಕುತ್ತಾರೆ. ಅದರ ದುರ್ನಾತದಿಂದ ಮೂಗು ಮುಚ್ಚಿ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆ ಪರಿಹರಿಸಬೇಕು.

ಕೆ.ಪ್ರಭಾಕರ, ತಲಕಾವೇರಿ ಬಡಾವಣೆ ನಿವಾಸಿ

ರಸ್ತೆಗೆ ಡಾಂಬರು ಹಾಕಿ

ಎಂ.ಎಸ್.ಪಾಳ್ಯದ ಸಮೀಪ ಸಂಭ್ರಮ ಕಾಲೇಜಿನಿಂದ ಲಕ್ಷ್ಮೀಪುರದ ಕಡೆಗೆ ಹೋಗುವ ಮುಖ್ಯರಸ್ತೆಯು ಗುಂಡಿಗಳಿಂದ ತುಂಬಿದೆ. ಇದರಿಂದ ಪಾದಚಾರಿಗಳು ಹಾಗೂ ವಾಹನ ಸಂಚಾರಕ್ಕೆ ಬಹಳ ಸಮಸ್ಯೆಯಾಗಿದೆ. ರಸ್ತೆಯ ಡಾಂಬರು ಕಿತ್ತು ಬಂದು ಹಲವು ತಿಂಗಳುಗಳು ಕಳೆದಿದ್ದರೂ ಈವರೆಗೆ ದುರಸ್ತಿಗೆ ಮುಂದಾಗಿಲ್ಲ. ಬೈಕ್ ಸವಾರರು ಈ ರಸ್ತೆಯಲ್ಲಿ ಸಂಚರಿಸಲು ಹೈರಾಣಾಗುತ್ತಾರೆ. ದಯವಿಟ್ಟು ಈ ರಸ್ತೆಗೆ ಡಾಂಬರು ಕಲ್ಪಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ರಘು, ಸ್ಥಳೀಯ ನಿವಾಸಿ

ಲಕ್ಷ್ಮೀಪುರ ಮುಖ್ಯರಸ್ತೆ ಹದಗೆಟ್ಟಿರುವುದು

ಗಿರಿನಗರದ ರಾಮಕೃಷ್ಣ ಸೇವಾ ಆಶ್ರಮದ ರಸ್ತೆ ಸ್ಥಿತಿ

ಗಿರಿನಗರ: ಆಶ್ರಮದ ರಸ್ತೆ ಸರಿಪಡಿಸಿ

ಗಿರಿನಗರದ ರಾಮಕೃಷ್ಣ ಸೇವಾ ಆಶ್ರಮದ ರಸ್ತೆಯಲ್ಲಿ ಚರಂಡಿ ಕಾಮಗಾರಿ ನಡೆದಿತ್ತು. ಕಾಮಗಾರಿಗಾಗಿ ರಸ್ತೆಯನ್ನು ಅಗೆಯಲಾಗಿತ್ತು. ಆದರೆ, ಸರಿಯಾಗಿ ಮುಚ್ಚದ ಕಾರಣ ಈ ಕಿರಿದಾದ ರಸ್ತೆಯಲ್ಲಿ ಸಂಚರಿಸಲು ಬಹಳ ಸಮಸ್ಯೆಯಾಗಿದೆ. ಕಾಮಗಾರಿ ನಡೆದು 6 ತಿಂಗಳುಗಳು ನಡೆದರೂ ರಸ್ತೆಯನ್ನು ಹಾಗೆಯೇ ಬಿಟ್ಟಿದ್ದಾರೆ.

ಹದಗೆಟ್ಟಿರುವ ರಸ್ತೆಯಲ್ಲಿ ಬೈಕ್ ಸವಾರರು ಆಯತಪ್ಪಿ ಬಿದ್ದಿದ್ದಾರೆ. ಆಶ್ರಮ ಇರುವುದರಿಂದ ಹಲವರು ಈ ರಸ್ತೆಯಲ್ಲಿ ಓಡಾಡುತ್ತಾರೆ. ಈ ಬಗ್ಗೆ ಸ್ಥಳೀಯ ಶಾಸಕರಿಗೂ ಮನವಿ ಮಾಡಿದ್ದೇನೆ. ಯಾವುದೇ ಪ್ರಯೋಜನ ಆಗಲಿಲ್ಲ. ರಸ್ತೆ ಸರಿಪಡಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ಕೆ.ಮುರಳೀಧರ, ಗಿರಿನಗರ ನಿವಾಸಿ

ಬೆಂಗಳೂರು ವಿ.ವಿ ಜಾಗದಲ್ಲಿ ಬಿಬಿಎಂಪಿ ಕಾಮಗಾರಿ

ಗ್ರೇಡ್ ಸಪರೇಟರ್: ದೇವಸ್ಥಾನ ತೆರವಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಡ್ ಸಪರೇಟರ್ ನಿರ್ಮಿಸಲು ಬೆಂಗಳೂರು ವಿಶ್ವವಿದ್ಯಾಲಯದ ಜಾಗದಲ್ಲಿರುವ ಗಣೇಶ ದೇವಸ್ಥಾನ ತೆರವುಗೊಳಿಸಲು ಮುಂದಾಗಿರುವ ಕ್ರಮಕ್ಕೆ ಕೆಲ ಉದ್ಯೋಗಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ದೇವಸ್ಥಾನಕ್ಕೆ ಯಾವುದೇ ರೀತಿ ಹಾನಿಯಾಗದಂತೆ ಖಾಲಿ ಇರುವ ಜಮೀನಿನಲ್ಲಿ ಮಾತ್ರ ಗ್ರೇಡ್ ಸಪರೇಟರ್ ನಿರ್ಮಾಣ ಕಾರ್ಯ ಕೈಗೊಳ್ಳಬೇಕು ಎಂದು ವಿಶ್ವವಿದ್ಯಾಲಯ ಷರತ್ತು ವಿಧಿಸಿತ್ತು. ಆದರೆ, ಬಿಬಿಎಂಪಿ ಷರತ್ತು ಉಲ್ಲಂಘಿಸುತ್ತಿದೆ ಎಂದು ದೂರಿದ್ದಾರೆ.

ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿರುವ ಉಲ್ಲಾಳ ಮುಖ್ಯ ರಸ್ತೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯ ರಸ್ತೆಯ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಸುಪರ್ದಿಯಲ್ಲಿರುವ ಮಲ್ಲತ್ತಹಳ್ಳಿ ಗ್ರಾಮದಲ್ಲಿನ ಒಟ್ಟು 6095.14 ಚ.ಮೀ. (1 ಎಕರೆ 20.23 ಗುಂಟೆ) ವಿಸ್ತೀರ್ಣದ ಸರ್ಕಾರಿ ಗೋಮಾಳ ಜಾಗವನ್ನು ಬಿಬಿಎಂಪಿ ಪಡೆದಿತ್ತು. ಈ ಜಮೀನನ್ನು ಬಿಬಿಎಂಪಿಗೆ ಹಸ್ತಾಂತರಿಸುವ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹಲವು ಷರತ್ತುಗಳನ್ನು ವಿಧಿಸಿತ್ತು.

'ಜಮೀನಿನ ಸ್ವಾಧೀನ ಅಥವಾ ಮಾಲೀಕತ್ವವನ್ನು ವಿಶ್ವವಿದ್ಯಾಲಯವೇ ಉಳಿಸಿಕೊಳ್ಳಲಿದೆ. ಗ್ರೇಡ್ ಸಪರೇಟರ್ ನಿರ್ಮಾಣಕ್ಕಾಗಿ ತೆರವುಗೊಳಿಸಬೇಕಾಗುವ ಹತ್ತು ವಸತಿ ಗೃಹಗಳಿಗೆ ಬದಲಾಗಿ ಬೆಂಗಳೂರು ವಿಶ್ವವಿದ್ಯಾಲಯವೇ ಗುರುತಿಸಿದ ಜಾಗದಲ್ಲಿ ಬಿಬಿಎಂಪಿ ತನ್ನ ಸ್ವಂತ ಖರ್ಚಿನಲ್ಲಿ ನಿರ್ಮಿಸಿ ಹಸ್ತಾಂತರಿಸಬೇಕು' ಎಂದು ಕುಲಸಚಿವರು ಸೂಚಿಸಿದ್ದರು.

'ಅದ್ಭುತವಾದ ದೇವಸ್ಥಾನ ನಿರ್ಮಿಸಲಾಗುವುದು'

'ಈಗಿರುವ ದೇವಸ್ಥಾನದ ಬದಲು ಹೊಸದಾಗಿ ಭವ್ಯವಾದ ಮತ್ತು ಅದ್ಭುತವಾದ ಗಣೇಶ ದೇವಸ್ಥಾನವನ್ನು ನಿರ್ಮಿಸಿಕೊಡಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಹೊಸ ದೇವಸ್ಥಾನವನ್ನು ಕಲ್ಲಿನಿಂದ ನಿರ್ಮಿಸಿಕೊಡಲಾಗುವುದು. ಈ ಬಗ್ಗೆ ಯಾವುದೇ ಅನುಮಾನಗಳು ಬೇಡ' ಎಂದು ಸ್ಪಷ್ಟಪಡಿಸಿದ್ದಾರೆ.

'10 ವಸತಿ ಗೃಹಗಳನ್ನು ಹೊಸದಾಗಿ ನಿರ್ಮಿಸಿಕೊಡಲಾಗುವುದು. ಈಗಿರುವ ವಸತಿ ಗೃಹಗಳು ಒಂದು ಕೊಠಡಿಯ ಚಿಕ್ಕ ಮನೆಗಳಿವೆ. ಇವುಗಳ ಬದಲು ಎರಡು ಕೊಠಡಿಯ ದೊಡ್ಡ ಮನೆಗಳನ್ನು ನಿರ್ಮಿಸಿಕೊಡಲು ಉದ್ದೇಶಿಸಲಾಗಿದೆ. ಇವುಗಳನ್ನು ನಿರ್ಮಿಸಲು ಆರು ತಿಂಗಳು ಬೇಕಾಗುವುದರಿಂದ ಸದ್ಯ ಖಾಲಿ ಇರುವ ವಸತಿ ಗೃಹಗಳಿಗೆ ಸ್ಥಳಾಂತರವಾಗುವಂತೆ ಉದ್ಯೋಗಿಗಳಿಗೆ ಸೂಚಿಸಲಾಗಿದೆ. ಒಂದು ವೇಳೆ, ಅಲ್ಲಿಗೆ ತೆರಳು ಇಷ್ಟವಾಗದಿದ್ದಲ್ಲಿ ಬಾಡಿಗೆ ಮನೆಗೆ ಸ್ಥಳಾಂತರವಾಗುವಂತೆ ಕೋರಲಾಗಿದೆ. ಮನೆ ಬಾಡಿಗೆ ಮತ್ತು ಮುಂಗಡವನ್ನು ಸಹ ಬಿಬಿಎಂಪಿ ಪಾವತಿಸಲಿದೆ' ಎಂದು ತಿಳಿಸಿದ್ದಾರೆ.

ಜತೆಗೆ, 'ಗ್ರೇಡ್ ಸಪರೇಟರ್ ನಿರ್ಮಾಣಕ್ಕಾಗಿ ಪ್ರಸ್ತಾಪಿಸಲಾಗಿರುವ ಜಮೀನಿನಲ್ಲಿರುವ ದೇವಸ್ಥಾನದ ಕಟ್ಟಡಕ್ಕೆ ಹಾನಿಯಾಗದಂತೆ ಖಾಲಿ ಇರುವ ಜಮೀನಿನಲ್ಲಿ ಮಾತ್ರ ಉದ್ದೇಶಿತ ನಿರ್ಮಾಣ ಕಾರ್ಯ ಕೈಗೊಳ್ಳಬೇಕು. ಈ ಯೋಜನೆಗೆ ತೆರವುಗೊಳಿಸಬೇಕಾಗುವ ದೇವಸ್ಥಾನ ಜಾಗದ ತಡೆಗೋಡೆಯನ್ನು ಪಾಲಿಕೆ ವತಿಯಿಂದಲೇ ನಿರ್ಮಾಣ ಮಾಡತಕ್ಕದ್ದು' ಎಂದು ಕುಲಸಚಿವರು 2021ರ ಸೆ.17ರಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬರೆದಿದ್ದ ಪತ್ರದಲ್ಲಿ ಉಲ್ಲೇಖಿಸಿದ್ದರು.

ಉನ್ನತ ಶಿಕ್ಷಣ ಇಲಾಖೆಯು ಸಹ ದೇವಸ್ಥಾನದ ಕಟ್ಟಡಕ್ಕೆ ಹಾನಿ ಮಾಡದಂತೆ 2021ರ ಜನವರಿ 25ರಂದು ಸಹ ಈ ಬಗ್ಗೆ ನಿರ್ದೇಶನ ನೀಡಿತ್ತು.

'ಸರ್ಕಾರ ಮತ್ತು ವಿಶ್ವವಿದ್ಯಾಲಯದ ಷರತ್ತುಗಳನ್ನು ಬಿಬಿಎಂಪಿ ಗಮನಿಸುತ್ತಿಲ್ಲ. ಸುಮಾರು 20 ವರ್ಷಗಳ ಹಿಂದೆ ಉದ್ಯೋಗಿಗಳು ಸೇರಿ ಗಣೇಶ ದೇವಸ್ಥಾನವನ್ನು ನಿರ್ಮಿಸಿದ್ದರು. ದೇವಸ್ಥಾನದ ಆವರಣದ ಗೋಡೆ ಮಾತ್ರ ಒಡೆಯಬಹುದು ಎಂದು ಸೂಚಿಸಲಾಗಿತ್ತು. ಆದರೆ, ಬಿಬಿಎಂಪಿ ತರಾತುರಿಯಲ್ಲಿ ದೇವಸ್ಥಾನ ತೆರವುಗೊಳಿಸಲು ಮುಂದಾಗಿದೆ' ಎಂದು ಉದ್ಯೋಗಿಗಳು ದೂರಿದ್ದಾರೆ.

'ಖಾಸಗಿ ಜಾಗ ಪಡೆದರೆ ಹೆಚ್ಚಿನ ಪರಿಹಾರ ನೀಡಬೇಕು ಎನ್ನುವ ಉದ್ದೇಶದಿಂದ ವಿಶ್ವವಿದ್ಯಾಲಯದ ಜಾಗವನ್ನು ಪಡೆಯಲು ಬಿಬಿಎಂಪಿ ಮುಂದಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಷರತ್ತಿನಂತೆ ವಸತಿ ಗೃಹಗಳನ್ನು ಸಹ ಇನ್ನೂ ನಿರ್ಮಿಸಿಲ್ಲ. ಆದರೆ, ಕಾಮಗಾರಿಯನ್ನು ಆರಂಭಿಸಬೇಕಾಗಿರುವುದರಿಂದ ಶೀಘ್ರ ಬಾಡಿಗೆ ಮನೆಗಳಿಗೆ ಸ್ಥಳಾಂತರವಾಗುವಂತೆ ಒತ್ತಡ ಹೇರಲಾಗುತ್ತಿದೆ' ಎಂದು ದೂರಿದ್ದಾರೆ.

ವಿದ್ಯಾರ್ಥಿಗಳ ಪ್ರತಿಭಟನೆ ವೈರಲ್

ಖಾನಾಪುರ: ತಾಲ್ಲೂಕಿನ ರಾಜವಾಳಾ ಗೌಳಿವಾಡಾ ಶಾಲೆಯ ಶಿಕ್ಷಕರ ವಿರುದ್ಧ ಶನಿವಾರ ಶಾಲೆಯ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಗೌಳಿವಾಡಾ ಶಾಲೆಯ ಮುಂಭಾಗದಲ್ಲಿ ಶಾಲೆಯ ವಿದ್ಯಾರ್ಥಿಗಳು ನಿಂತು ಶನಿವಾರ ಮಧ್ಯಾಹ್ನ 12ರವರೆಗೆ ಶಾಲೆ ಇದ್ದರೂ ಶಿಕ್ಷಕರು ಬೇಗ ಕೊಠಡಿಗಳಿಗೆ ಬೀಗ ಜಡಿದು ತೆರಳಿದ್ದನ್ನು ಖಂಡಿಸಿದ ದೃಶ್ಯಗಳು ಹರಿದಾಡುತ್ತಿವೆ. 1ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ಶಿಕ್ಷಕರು ನಿಯಮಿತವಾಗಿ ಶಾಲೆಗೆ ಬರುವುದಿಲ್ಲ, ಮಧ್ಯಾಹ್ನ ಬೇಗ ಮನೆಗೆ ತೆರಳುತ್ತಾರೆ, ಶಾಲಾ ಅವಧಿಯಲ್ಲಿ ವರ್ಗ ಕೊಠಡಿಯಲ್ಲಿ ಹಾಸಿಗೆ ಹಾಸಿ ಮಲಗುತ್ತಾರೆ. ತಮಗೆ ಶೌಚಾಲಯ ತೊಳೆಯುವಂತೆ, ನೀರು ತರುವಂತೆ ಕೆಲಸ ಹೇಳುತ್ತಾರೆ ಎಂದು ಅಳಲು ತೋಡಿಕೊಂಡಿದ್ದಾರೆ.

ಇಂಥ ಬೇಜವಾಬ್ದಾರಿ ಶಿಕ್ಷಕರಿಂದ ತಮ್ಮ ಶೈಕ್ಷಣಿಕ ಪ್ರಗತಿ ಕುಂಠಿತಗೊಂಡಿದೆ. ಕರ್ತವ್ಯಲೋಪ ಎಸಗುತ್ತಿರುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಂಡು ಬೇರೆ ಶಿಕ್ಷಕರ ವ್ಯವಸ್ಥೆ ಮಾಡುವಂತೆ ಹೇಳುವ ದೃಶ್ಯಗಳಿವೆ. ಮಾಹಿತಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಸಂಪರ್ಕ ಸಾಧ್ಯವಾಗಲಿಲ್ಲ.

ಖಾನಾಪುರ ತಾಲ್ಲೂಕು ಗೌಳಿವಾಡಾ ಶಾಲೆಯ ವಿದ್ಯಾರ್ಥಿಗಳು ಶನಿವಾರ ಶಾಲೆಯ ಮುಂದೆ ಪ್ರತಿಭಟಿಸಿದ ದೃಶ್ಯ

ಬಜೆಟ್‌ನಲ್ಲಿ ಅನುದಾನ ಮೀಸಲಿಗೆ 'ನಮ್ಮೂರ ಭೂಮಿ ನಮಗಿರಲಿ' ವೇದಿಕೆ ಒತ್ತಾಯ

ರೈತ ಯೋಜನೆ ಮರುಚಾಲನೆಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದಂತೆ ಕೈಬಿಟ್ಟಿರುವ ಹಲವು ಉತ್ತಮ ಯೋಜನೆಗಳಿಗೆ ಮರುಚಾಲನೆ ನೀಡಬೇಕು. ಈ ನಿಟ್ಟಿನಲ್ಲಿ ಮುಂಬರುವ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು ಎಂದು 'ನಮ್ಮೂರ ಭೂಮಿ ನಮಗಿರಲಿ' ವೇದಿಕೆ ಸರ್ಕಾರಕ್ಕೆ ಒತ್ತಾಯಿಸಿದೆ.

'ಕೃಷಿ ಭಾಗ್ಯ' ಯೋಜನೆಯಲ್ಲಿ ಕೃಷಿ ಹೊಂಡಗಳ ನಿರ್ಮಾಣಕ್ಕೆ 2014 ರಿಂದ 2018 ರವರೆಗೆ ₹600 ಕೋಟಿ ಮೀಸಲಿಡಲಾಗುತ್ತಿತ್ತು. ಈ ಯೋಜನೆಯನ್ನು ಸದ್ಯ ಸ್ಥಗಿತಗೊಳಿಸಲಾಗಿದೆ. ಜನಪ್ರಿಯವಾಗಿದ್ದ ಈ ಯೋಜನೆಯನ್ನು ಪುನರ್ ಪ್ರಾರಂಭಿಸಬೇಕು ಮತ್ತು ಎಲ್ಲ ಬಗೆಯ ರೈತರಿಗೂ ಅನುಕೂಲವಾಗುವಂತೆ ನಿಯಮಗಳನ್ನು ಸಡಿಲಿಸಬೇಕು ಎಂದು ವೇದಿಕೆ ಕೋರಿದೆ.

ಪಶು ಭಾಗ್ಯದಂತಹ ಉತ್ತಮ ಯೋಜನೆಗಳನ್ನು ಪುನರ್ ಆರಂಭಿಸಬೇಕು. ಜತೆಗೆ, ಎತ್ತು ಮತ್ತು ನಾಟಿ ಹಸುಗಳನ್ನು ಪಶುಭಾಗ್ಯ ಯೋಜನೆಯಲ್ಲಿ ಸೇರಿಸಬೇಕು ಎಂದು ಸಲಹೆ ನೀಡಿದೆ.

ಹಾಪ್‌ಕಾಮ್ಸ್‌ಗಳನ್ನು ಬಲಪಡಿಸುವ ಯೋಜನೆಯನ್ನು ಕೈಗೊಳ್ಳಬೇಕು ಮತ್ತು ಆವರ್ತ ನಿಧಿಯ ಮೊತ್ತವನ್ನು ಅವಶ್ಯಕತೆಗೆ ಅನುಗುಣವಾಗಿ ₹2,000 ಕೋಟಿಗಳಿಗೆ ಹೆಚ್ಚಿಸುವ ಯೋಜನೆಯನ್ನು ಮತ್ತೆ ಪ್ರಾರಂಭಿಸಬೇಕು ಎಂದು ತಿಳಿಸಿದೆ.

ರಾಜ್ಯದಲ್ಲಿ ಶೇ 75 ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ. ಇವರು ಬಹುತೇಕ ಮಳೆಯಾಶ್ರಿತರಾಗಿದ್ದಾರೆ. ಈ ರೈತರು ಹೊಸದಾಗಿ ತೋಟಗಾರಿಕೆ ಕೃಷಿ ಪದ್ಧತಿಗೆ ವರ್ಗಾವಣೆಯಾಗಲು ಬಯಸಿದಲ್ಲಿ ಅಂತಹವರಿಗೆ ಪ್ರತಿ ಹೆಕ್ಟೇರ್‌ಗೆ ₹ 5 ಸಾವಿರದಂತೆ ಗರಿಷ್ಠ ₹10 ಸಾವಿರಗಳನ್ನು ಅವರ ಖಾತೆಗೆ ವರ್ಗಾಯಿಸುವ ಯೋಜನೆಗೆ ಮರುಚಾಲನೆ ನೀಡಬೇಕು ಮತ್ತು ಮೊತ್ತವನ್ನು ಹೆಚ್ಚಿಸಬೇಕು ಎಂದು ತಿಳಿಸಿದೆ.

ರೈತರ ಸಂತೆಗಳ ಬಗ್ಗೆ ಒಲವು ಹೆಚ್ಚಾಗುತ್ತಿದೆ. ರಾಜ್ಯ ಹೆದ್ದಾರಿಗಳನ್ನೂ ಒಳಗೊಂಡಂತೆ ರೈತರು ಅಲ್ಲಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ರಾಜ್ಯದ ವಿವಿಧೆಡೆಗಳಲ್ಲಿ ಇಂತಹ ನೂರು ರೈತರ ಸಂತೆಗಳಿಗೆ ಸ್ಥಳಗಳನ್ನು ಗುರುತಿಸಿ ಅಲ್ಲಿ ಕುಡಿಯುವ ನೀರು, ಶೌಚಾಲಯಗಳನ್ನು ಒಳಗೊಂಡಂತೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು ಎಂದು ವೇದಿಕೆಯ ಪರವಾಗಿ ಗಾಯತ್ರಿ, ಸುರೇಶ್ ಕಂಜರ್ಪಣೆ, ಶಾರದಾ ಗೋಪಾಲ್, ಜ್ಯೋತಿ ರಾಜ್, ಎಸ್. ನವೀನ್, ಪಿ.ಆರ್.ಎಸ್. ಮಣಿ, ರಮೇಶ್ ಸಂಕ್ರಾಂತಿ, ವತ್ಸಲಾ, ಶಶಿಕುಮಾರ್, ಪ್ರಶಾಂತ್ ಜಯರಾಂ, ಸಿದ್ದಾರ್ಥ, ಹೇಮಲತಾ, ಶಿವಕುಮಾರ್, ಮಲ್ಲಿನಾಥ್ ಹೇಮಾಡಿ ಸೇರಿದಂತೆ 40 ಸಂಘಟನೆಗಳ ಪ್ರತಿನಿಧಿಗಳು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸಹ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದು, 'ವೇದಿಕೆಯ ಪ್ರಸ್ತಾಪಿಸಿರುವ ಬಹುಪಾಲು ಯೋಜನೆಗಳು ನಮ್ಮ ಸರ್ಕಾರದ ಅವಧಿಯಲ್ಲಿ ಜಾರಿಯಲ್ಲಿದ್ದವು. ಕೆಲವು ಹೊಸ ಯೋಜನೆಗಳಿವೆ. ಆದ್ದರಿಂದ, ರೈತರ ಪರವಾದ ಯೋಜನೆಗಳನ್ನು ಪರಿಶೀಲಿಸಿ ಈ ಬಜೆಟ್‌ನಲ್ಲಿ ಸೇರಿಸಿ ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ಕೃಷಿಕರ ಅಭಿವೃದ್ಧಿಗೆ ವೇದಿಕೆಯ ಸಲಹೆಗಳು

- ಕೆಎಂಎಫ್ ಮಾದರಿಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ(ಎಫ್‌ಪಿಒ) ಒಕ್ಕೂಟ ರಚಿಸಬೇಕು.
- ಸಣ್ಣ, ಅತಿಸಣ್ಣ ಮತ್ತು ಮಧ್ಯಮ ರೈತರ ಪ್ರತಿ ಕುಟುಂಬಕ್ಕೆ ಕನಿಷ್ಠ ₹10 ಸಾವಿರ ರೂಪಾಯಿ ನೇರ ನಗದು ನೀಡುವ ಯೋಜನೆ ಘೋಷಿಸಬೇಕು.
- ಬೆಳೆ ಹಾನಿಗೆ ನೀಡಬೇಕಾದ ಪರಿಹಾರವನ್ನು ನಿರ್ಧರಿಸುವ ಹೊಣೆಯನ್ನು ಪಂಚಾಯಿತಿಗಳಿಗೆ ವಹಿಸಬೇಕು.
- ಪ್ರತಿ ರಾಗಿ ಖರೀದಿ ಕೇಂದ್ರದಲ್ಲೂ ಸ್ವಚ್ಛಗೊಳಿಸುವ ಯಂತ್ರಗಳನ್ನು ಸ್ಥಾಪಿಸಬೇಕು.
- ರಾಜ್ಯದಲ್ಲಿ ಶೇ 47ರಷ್ಟು ಭೂರಹಿತರು ಇರುವುದಾಗಿ 2011ರ ಎನ್ಎಸ್‌ಎಸ್ ಸಮೀಕ್ಷೆ ತಿಳಿಸಿದೆ. ಈಗಾಗಲೇ ಅರ್ಜಿಗಳನ್ನು ಹಾಕಿ 10ರಿಂದ 50 ವರ್ಷಗಳಿಂದಲೂ ಕಾಯುತ್ತಿರುವ 10 ಲಕ್ಷಕ್ಕೂ ಹೆಚ್ಚು ಜನರಿಗೆ ತುರ್ತಾಗಿ ಭೂಮಿ ಮಂಜೂರು ಮಾಡಬೇಕು.
- ಎಲ್ಲ ಪಡಿತ ಕಾರ್ಡುದಾರರಿಗೆ ವರ್ಷದ 12 ತಿಂಗಳು ಪೂರೈಸುವಷ್ಟು ರಾಗಿ-ಜೋಳವನ್ನು ಕಡ್ಡಾಯವಾಗಿ ಖರೀದಿಸಬೇಕು. ತೊಗರಿಬೇಳೆ ಮತ್ತು ಅಡುಗೆ ಎಣ್ಣೆಗಳ ವಿತರಣೆಯನ್ನು ಮತ್ತೆ ಆರಂಭಿಸಬೇಕು.
- ಮಧ್ಯಾಹ್ನದ ಬಿಸಿಯೂಟದಲ್ಲಿ ಮೊಟ್ಟೆ ನೀಡುವುದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಬೇಕು.

ಕ್ಲಿನಿಕ್, ರೆಸ್ಟೋರೆಂಟ್ ಕೆಡವಲು ತಡೆ ನೀಡಿದ ಹೈಕೋರ್ಟ್

ಅಲಹಾಬಾದ್ (ಪಿಟಿಐ): ಪ್ರಯಾಗ್ ರಾಜ್ ವಿಮಾನನಿಲ್ದಾಣಕ್ಕೆ ಮೀಸಲಾದ ಕಾರಿಡಾರ್ ಯೋಜನೆಗಾಗಿ ಸ್ಥಳೀಯ ಸಂಸ್ಥೆಯು ಕ್ಲಿನಿಕ್ ಮತ್ತು ರೆಸ್ಟೋರೆಂಟ್ ಅನ್ನು ಕೆಡವಲು ಯೋಜಿಸಿದ್ದ ಕಾರ್ಯಾಚರಣೆಗೆ ಅಲಹಾಬಾದ್ ಹೈಕೋರ್ಟ್ ಭಾನುವಾರ ತುರ್ತು ವಿಚಾರಣೆಯಲ್ಲಿ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಪ್ರೀತಿಂಕರ್ ದಿವಾಕರ್ ಮತ್ತು ಅಶುತೋಷ್ ಶ್ರೀವಾಸ್ತವ ಅವರನ್ನೊಳಗೊಂಡ ಪೀಠವು ರಾಕೇಶ್ ಗುಪ್ತಾ ಮತ್ತು ಇತರ ಇಬ್ಬರು ಸಲ್ಲಿಸಿದ ಅರ್ಜಿಯ ಮೇರೆಗೆ ಈ ಆದೇಶವನ್ನು ನೀಡಿದೆ.

'ಯೋಜನೆಗಾಗಿ ವಶಪಡಿಸಿಕೊಳ್ಳಲು ಯೋಜಿಸಿರುವ ಜಾಗದಲ್ಲಿ 100 ವರ್ಷಗಳಿಂದ ಹೋಮಿಯೊಪಥಿ ಕ್ಲಿನಿಕ್, ರೆಸ್ಟೋರೆಂಟ್ ಹೊಂದಿದ್ದೇವೆ' ಎಂದು ಅರ್ಜಿದಾರರು ನ್ಯಾಯಾಲಯದ ಮುಂದೆ ವಾದ ಮಂಡಿಸಿದರು.

ಅರ್ಜಿದಾರರು ಭೂಮಿಯನ್ನು ಹೇಗೆ ಅತಿಕ್ರಮಿಸಿದ್ದಾರೆ ಮತ್ತು ಅದನ್ನು ಏಕೆ ನೆಲಸಮಗೊಳಿಸಬೇಕು ಎಂಬುದನ್ನು ಫೆ. 24ಕ್ಕೆ ನಿಗದಿಪಡಿಸಿದ ಮುಂದಿನ ವಿಚಾರಣೆಯೊಳಗೆ ಮಾಹಿತಿ ನೀಡಬೇಕು ಎಂದು ನ್ಯಾಯಾಲಯವು, ಸಂಬಂಧಿಸಿದ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಸೂಚನೆ ನೀಡಿತು.

ತ್ರಿವರ್ಣ ಧ್ವಜದೊಂದಿಗೆ ಕೇಸರಿ ಧ್ವಜ: ಸಚಿವೆ ಶಶಿಕಲಾ ಜೊಲ್ಲೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ತ್ರಿವರ್ಣ ಧ್ವಜವನ್ನು ಇಳಿಸಿ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಎಲ್ಲೂ ಹೇಳಿಲ್ಲ. ತ್ರಿವರ್ಣ ಧ್ವಜದೊಂದಿಗೆ ಕೇಸರಿ ಧ್ವಜ ಕೂಡ ಇರಬಹುದು ಎಂಬರ್ಥದಲ್ಲಿ ಹೇಳಿದ್ದಾರೆ. ಹೀಗಾಗಿ ಅವರು ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ್ದಾರೆ ಅಂತ ಅನಿಸುವುದಿಲ್ಲ' ಎಂದು ಮುಜರಾಯಿ ಮತ್ತು ವಕ್ಫ್ ಖಾತೆ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಭಾನುವಾರ ನಗರದಲ್ಲಿ 67 ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಕೊಟ್ಟಿರುವುದು ಬೇಜವಾಬ್ದಾರಿ ಹೇಳಿಕೆಯಲ್ಲ. ಅವರು ಹೇಳಿರುವುದು ಒಂದು ಅರ್ಥದಲ್ಲಿ. ನಾವು ಅರ್ಥ ಮಾಡಿಕೊಂಡಿದ್ದು ಬೇರೆ ರೀತಿಯಲ್ಲಿ' ಎಂದು ಪ್ರತಿಕ್ರಿಯಿಸಿದರು.

'ರಾಷ್ಟ್ರಧ್ವಜದ ಬಗ್ಗೆ ಯಾರೂ ಚಕಾರ ಎತ್ತುವಂತಹದ್ದಲ್ಲ. ಐದು ವರ್ಷದ ಮಗುವಿನಿಂದ 90 ವರ್ಷದ ವೃದ್ಧನ ವರೆಗೆ ಎಲ್ಲರೂ ಗೌರವಿಸುತ್ತಾರೆ. ಅವರು ಧ್ವಜವನ್ನು ಅಪಮಾನಿಸುವ ರೀತಿಯಲ್ಲಿ ಹೇಳಿಕೆ ಕೊಡುವ ಪ್ರೇಮಯವೇ ಇಲ್ಲ. ಅವರು ಬಹಳ ಹಿರಿಯರು. ವಿರೋಧ ಪಕ್ಷದವರು ಈಶ್ವರಪ್ಪನವರ ಹೇಳಿಕೆಯ ನೆಪ ಮಾಡಿಕೊಂಡು ಅಧಿವೇಶನ ನಡೆಯಲು ಬಿಡುತ್ತಿಲ್ಲ. ಹಾಗಾಗಿ ಅಭಿವೃದ್ಧಿ ಕುರಿತು ಚರ್ಚೆಗಳು ಆಗುತ್ತಿಲ್ಲ' ಎಂದರು.

ಅಂಜನಾದ್ರಿ ಬಗ್ಗೆ ಸರ್ಕಾರದಿಂದ ಅಧಿಕೃತ ಹೇಳಿಕೆ: 'ಅಂಜನಾದ್ರಿ ಪರ್ವತದ ಬಗ್ಗೆ ಅನೇಕ ಐತಿಹಾಸಿಕ ಉಲ್ಲೇಖಗಳಿವೆ. ರಾಮಾಯಣದಲ್ಲಿ ಕಿಷ್ಕಿಂಧೆಯ ಉಲ್ಲೇಖವಿದೆ. ಅಂಜನಾದ್ರಿ ಆಂಜನೇಯ ಹುಟ್ಟಿರುವ ಸ್ಥಳ. ನಿತ್ಯ ಅನೇಕ ಭಕ್ತರು ಹೋಗಿ ದರ್ಶನ ಪಡೆಯುತ್ತಾರೆ. ತಿರುಪತಿಯಲ್ಲಿ ಆಂಜನೇಯ ಹುಟ್ಟಿದ್ದು, ಅದನ್ನು ಅಭಿವೃದ್ಧಿ ಪಡಿಸುತ್ತೇವೆ ಎಂದು ಟಿಟಿಡಿ ಹೇಳುತ್ತಿರುವುದು ಸರಿಯಲ್ಲ. ಇಷ್ಟರಲ್ಲೇ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಧಾರ್ಮಿಕ ಪಂಡಿತರು, ಇತಿಹಾಸಕಾರರ ಸಭೆ ಕರೆದು, ಚರ್ಚಿಸಿದ ನಂತರ ರಾಜ್ಯ ಸರ್ಕಾರದಿಂದ ಅಧಿಕೃತ ಹೇಳಿಕೆ ಬಿಡುಗಡೆಗೊಳಿಸಲಾಗುವುದು' ಎಂದು ಜೊಲ್ಲೆ ಪ್ರಶ್ನೆಗೆ ಉತ್ತರಿಸಿದರು.

'ಅಂಜನಾದ್ರಿಯಲ್ಲಿ ಆಂಜನೇಯ ಹುಟ್ಟಿಲ್ಲ ಎಂದು ಆಂಧ್ರ ಸರ್ಕಾರ ಆಧಾರರಹಿತ ಹೇಳಿಕೆ ನೀಡುತ್ತಿದೆ. ಯಾರಿಂದಲೂ ಇತಿಹಾಸ ತಿರುಚಲು ಸಾಧ್ಯವಿಲ್ಲ. ರಾಮಾಯಣದಲ್ಲಿ ಬರುವ ಅನೇಕ ಸ್ಥಳಗಳು ನಮ್ಮೆದುರು ಜೀವಂತ ಸಾಕ್ಷಿಯಾಗಿ ಇವೆ. ಈ ವಿಷಯವನ್ನು ದೊಡ್ಡ ವಿವಾದ ಮಾಡುವುದು ಬೇಡ' ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಪ್ರತಿಕ್ರಿಯಿಸಿದರು.

ಆನ್‌ಲೈನ್ ಗೇಮಿಂಗ್: ದೂರಗಾಮಿ ಪರಿಣಾಮ

ದೇವನಹಳ್ಳಿ: ಕ್ರೀಡೆಯಲ್ಲಿ ಯುವಕರು ಆಸಕ್ತಿ ತೋರಿದರೆ ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ. ಆದರೆ, ಹೆಚ್ಚಿನ ಯುವಜನರು ದುಶ್ಚಟಗಳಿಂದ ತೊಂದರೆ ಅನುಭವಿಸುತ್ತಿರುವುದು ಬೇಸರದ ಸಂಗತಿ ಎಂದು ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆಟದ ಮೈದಾನದಲ್ಲಿ 'ಟೌನ್ ಗಜಾನನ ಗೆಳೆಯರ ಬಳಗ' ಆಯೋಜಿಸಿದ್ದ ದೇವನಹಳ್ಳಿ ಆರ್‌ಎಲ್‌ಆರ್ ಟ್ರೋಫಿ 2ನೇ ವರ್ಷದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡಾ ಚುಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ ಎಂದರು.

ಕುಂಕುಮ ಚರ್ಚೆ ಅನಗತ್ಯ: ಬಿ.ಸಿ.ನಾಗೇಶ್

ಪ್ರಜಾವಾಣಿ ವಾರ್ತೆ

ತುಮಕೂರು: ಕೆಲವು ಹೆಣ್ಣು ಮಕ್ಕಳು ಕುಂಕುಮ ಸಿಂಧೂರ ವಿಷಯದ ಬಗ್ಗೆ ಮಾತನಾಡಿ ಸಮಾಜದ ಸಾಮಾರಸ್ಯ ಕದಡುವ ಕೆಲಸ ಮಾಡುತ್ತಿದ್ದಾರೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಲ್ಲಿ ಭಾನುವಾರ ಹೇಳಿದರು.



ಬಿ.ಸಿ. ನಾಗೇಶ್

ಹಿಜಾಬ್ – ಕೇಸರಿ ಶಾಲು ವಿಷಯ ಮಾತ್ರ ಚರ್ಚೆಯಲ್ಲಿತ್ತು. ಆದರೆ ಅನಗತ್ಯವಾಗಿ ಕುಂಕುಮ ಸಿಂಧೂರ ವಿಷಯವನ್ನು ವಿವಾದಕ್ಕೆ ಎಳೆದು ತರುವ ಮೂಲಕ ಸಮಾಜದ ಶಾಂತಿ ಸುವ್ಯವಸ್ಥೆ ಕದಡುವ ಕೆಲಸವನ್ನು ಇಲ್ಲಿಗೆ ನಿಲ್ಲಿಸಬೇಕು. ವಿವಾದದ ಹಿಂದೆ ಕಾಣದ ಕೈ ಅಂತೇನಿಲ್ಲ ಕಾಣುವ ಕೈ ಎಲ್ಲವನ್ನೂ ಮಾಡುತ್ತಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಶಾಲಾ ಕಾಲೇಜುಗಳಿಗೆ ಸಮವಸ್ತ್ರವನ್ನು ಧರಿಸಿಕೊಂಡು ಹೋಗಬೇಕು. ಈ ಕುತಂತ್ರದ ಹಿಂದೆ ಕೆಲವು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಏನು ಮಾತನಾಡುತ್ತಿದ್ದಾರೆಂಬ ಬಗ್ಗೆ ಅರಿವಿದೆ. ಜನರು ಎಲ್ಲವನ್ನು ಗಮನಿಸುತ್ತಿದ್ದಾರೆ ಮುಂದಿನ ದಿನಗಳಲ್ಲಿ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಸಚಿವ ಬಿ.ಸಿ. ನಾಗೇಶ್ ಅವರು ಹೇಳಿದರು.

ಕೋಮುದ್ವೇಷ: ಯುವಕನ ಹತ್ಯೆ

ಶಿವಮೊಗ್ಗ: ಇಲ್ಲಿನ ಸೀಗೇಹಟ್ಟಿಯಲ್ಲಿ ಭಾನುವಾರ ರಾತ್ರಿ ಯುವಕರ ಗುಂಪೊಂದು ಅನ್ಯಕೋಮಿನ ಯುವಕನನ್ನು ಬರ್ಬರವಾಗಿ ಹತ್ಯೆ ಮಾಡಿದೆ.

ಹರ್ಷ (24) ಮೃತ ಯುವಕ. ಕೆಲವು ತಿಂಗಳ ಹಿಂದೆ ಮತ್ತೊಂದು ಧರ್ಮವನ್ನು ಅವಹೇಳನ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರ ಹಾಕಿದ್ದ ಪ್ರಕರಣ ದೊಡ್ಡಪೇಟೆ ಠಾಣೆಯಲ್ಲಿ ದಾಖಲಾಗಿತ್ತು.

ಟೈಲರಿಂಗ್ ವೃತ್ತಿ ಮಾಡಿಕೊಂಡಿದ್ದ ಆತನಿಗೆ ಆಗಾಗ ಬೆದರಿಕೆ ಕರೆಗಳು ಬರುತ್ತಿದ್ದವು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಆರೋಪಿಗಳನ್ನು ತಕ್ಷಣ ಬಂಧಿಸಬೇಕು. ಮೃತನ ಸಾವಿಗೆ ನ್ಯಾಯಕೊಡಿಸಬೇಕು ಎಂದು ಆಗ್ರಹಿಸಿ ವಿವಿಧ ಸಂಘಟನೆಗಳು ಮೆಗ್ಗಾನ್ ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದವು.

ಕಾಂಗ್ರೆಸ್ ಶಾಸಕ, ಸಂಸದರ ಆರೋಪ

ಬಳ್ಳಾರಿ ಪಾಲಿಕೆಯಲ್ಲಿ 'ಸದಸ್ಯರ ಖರೀದಿ'!

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಹೀನಾಯ ಸೋಲು ಅನುಭವಿಸಿರುವ ಬಿಜೆಪಿ ಹಿಂಬಾಗಿಲಿನಲ್ಲಿ ಅಧಿಕಾರ ಹಿಡಿಯಲು ಸದಸ್ಯರ ಖರೀದಿಗೆ ಕೈಹಾಕಿದ್ದು, ಕಾಂಗ್ರೆಸ್ ಸದಸ್ಯರಿಗೆ ಕೋಟಿಗಟ್ಟಲೆ ಹಣ, ಕಾರುಗಳ ಆಮಿಷವೊಡ್ಡಿದೆ' ಎಂದು ರಾಜ್ಯಸಭೆ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಮತ್ತು ವಿಧಾನಸಭೆ ಸದಸ್ಯ ಬಿ.ನಾಗೇಂದ್ರ ಆರೋಪಿಸಿದರು.

'ಬಿಜೆಪಿ ಮುಖಂಡರಿಗೆ ಆಪ್ತರಾದ ಆಲಿಖಾನ್, ಕಾಂಗ್ರೆಸ್ ಪಾಲಿಕೆ ಸದಸ್ಯರಾದ ಸಿಯಾಜ್ ಅಹಮ್ಮದ್ (ನಾಜು), ಕುಬೇರ, ಬಿ.ಆರ್.ಎಲ್. ಸೀನ, ಮಹಮ್ಮದ್, ಅಯಾಜ್ ಅಹಮದ್, ಜಬ್ಬಾರ್ ಅವರನ್ನು ಸಂಪರ್ಕಿಸಿ ₹ 1ರಿಂದ 2 ಕೋಟಿ ಹಣ, ಐಷಾರಾಮಿ ಕಾರು, ಹುದ್ದೆಗಳ ಆಮಿಷವೊಡ್ಡಿದ್ದಾರೆ. ಒಂದು ವಾರದಿಂದ ಸದಸ್ಯರ ಖರೀದಿ ಪಯತ್ನ ನಡೆಯುತ್ತಿದೆ' ಎಂದು ಅವರು ಭಾನುವಾರ ಸಂಜೆ ತರಾತುರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ರೆಡ್ಡಿಗಳಿಗೆ ಆಲಿಖಾನ್ ಆಪ್ತರು ಎಂದು ಗೊತ್ತು. ಆದರೆ, ಯಾವ ರೆಡ್ಡಿಗೆ ಎಂಬುದು ಗೊತ್ತಿಲ್ಲ. ಪಾಲಿಕೆ ಕಾಂಗ್ರೆಸ್ ಸದಸ್ಯರನ್ನು ಸಂಪರ್ಕಿಸಿ ಅವರು ಮಾತನಾಡಿರುವ ರೆಕಾರ್ಡ್ ನಮ್ಮಲ್ಲಿದೆ. ಅಗತ್ಯವಾದರೆ ಅದನ್ನು ಬಹಿರಂಗ ಮಾಡುತ್ತೇವೆ' ಎಂದು ಸಯ್ಯದ್ ನಾಸಿರ್ ಹುಸೇನ್ ಸ್ಪಷ್ಟಪಡಿಸಿದರು.

'ಪಾಲಿಕೆಯಲ್ಲಿ ಒಟ್ಟು 39 ಚುನಾಯಿತ ಸದಸ್ಯರಿದ್ದಾರೆ. ಇದರಲ್ಲಿ ಕಾಂಗ್ರೆಸ್‌ನ 21, ಐವರು ಪಕ್ಷೇತರ ಸದಸ್ಯರು (ಕಾಂಗ್ರೆಸ್ ಬಂಡಾಯ ಸದಸ್ಯರು) ಒಬ್ಬರು ರಾಜ್ಯಸಭೆ ಸದಸ್ಯರು, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ತಲಾ ಒಬ್ಬರು ಸದಸ್ಯರು ಸೇರಿದಂತೆ 29 ಸದಸ್ಯರಿದ್ದು, ಪಾಲಿಕೆಯಲ್ಲಿ ನಮಗೆ ಸ್ಪಷ್ಟ ಬಹುಮತವಿದೆ. ಬಿಜೆಪಿಯವರು ತಿಪ್ಪರಲಾಗ ಹಾಕಿದರೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ' ಎಂದು ನಾಸಿರ್ ಹುಸೇನ್ ಪ್ರತಿಪಾದಿಸಿದರು.

'ಕಾಂಗ್ರೆಸ್‌ನ ಪಾಲಿಕೆ ಸದಸ್ಯರನ್ನು ಪತ್ರಿಕಾಗೋಷ್ಠಿಗೆ ಕರೆತಂದು ಒಗ್ಗಟ್ಟು ಪ್ರದರ್ಶಿಸಿದರು. ನಾವೆಲ್ಲರೂ ಒಟ್ಟಾಗಿ ಇದ್ದೇವೆ. ನಮ್ಮ ಒಗ್ಗಟ್ಟು ಒಡೆಯಲು ಸಾಧ್ಯವಿಲ್ಲ. ಕೋವಿಡ್ ಕಾರಣ ಕೊಟ್ಟು 9 ತಿಂಗಳಿಂದ ಚುನಾವಣೆ ಮುಂದೂಡಲಾಗುತ್ತಿದೆ. ಕೋವಿಡ್ ನಡುವೆಯೇ ಎಷ್ಟೋ ರಾಜ್ಯಗಳಲ್ಲಿ ಚುನಾವಣೆ ನಡೆಸಲಾಗಿದೆ' ಎಂದು ಅವರು ಕಟುವಾಗಿ ಮಾತನಾಡಿದರು.

'ಕಾಂಗ್ರೆಸ್‌ಗೆ ಬಹುಮತವಿರುವ ಕಡೆಗಳಲ್ಲಿ ಉದ್ದೇಶಪೂರ್ವಕವಾಗಿ ಚುನಾವಣೆ ನಡೆಸುತ್ತಿಲ್ಲ. ಒಂದು ವಾರದೊಳಗಾಗಿ ಚುನಾವಣೆ ಅಧಿಸೂಚನೆ ಹೊರಡಿಸದಿದ್ದರೆ ನಾವು ಪ್ರತಿಭಟನೆ ಆರಂಭಿಸುತ್ತೇವೆ. ಪ್ರತಿದಿನ ಧರಣಿ, ಮೆರವಣಿಗೆ ಹಾಗೂ ಕಾನೂನಾತ್ಮಕ ಹೋರಾಟಗಳ ಮೂಲಕ ಇದನ್ನು ತಾರ್ಕಿಕ ಹಂತಕ್ಕೆ ತಲುಪಿಸುತ್ತೇವೆ' ಎಂದು ಎಚ್ಚರಿಸಿದರು.

ಮುಖಂಡರಾದ ಆಂಜನೇಯಲು, ವೆಂಕಟೇಶ್ ಹೆಗಡೆ, ಮುಂಡರಗಿ ನಾಗರಾಜ್ ಇದ್ದರು.

ರಾಜಕೀಯ ಬಣ್ಣ ಬೇಡ: ಆಲಿಖಾನ್

'ನನಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಸ್ನೇಹದಲ್ಲಿ ನಾನು ಕೆಲವರ ಜತೆ ಮಾತನಾಡಿರಬಹುದು. ಅದಕ್ಕೆ ರಾಜಕೀಯ ಬಣ್ಣ ಕೊಡುವುದು ಸರಿಯಲ್ಲ. ನಾನು ನಾಲ್ಕೈದು ದಿನಗಳಿಂದ ಬೆಂಗಳೂರಿನಲ್ಲಿ ಇದ್ದೇನೆ' ಎಂದು ಆಲಿಖಾನ್ ಸ್ಪಷ್ಟಪಡಿಸಿದರು.

'ನನಗೆ ರಾಜಕೀಯದ ಗಂಧಗಾಳಿ ಗೊತ್ತಿಲ್ಲ. ನಾನೊಬ್ಬ ಕೂಲಿ ಮಾಡುವವನು. ನಾನು ಹೇಗೆ ಕೋಟಿ, ಕೋಟಿ ಆಮಿಷವೊಡ್ಡಲಿ' ಎಂದು ಪ್ರಶ್ನಿಸಿದರು.

ದಕ್ಷಿಣದ ರೈತ ಪ್ರತಿನಿಧಿಗಳಿಗೆ ಆದ್ಯತೆಗೆ ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವ ಸಮಿತಿಗೆ ದಕ್ಷಿಣ ಭಾರತದ ರಾಜ್ಯಗಳ ರೈತ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದರು.

'ರೈತರ ಕಣ್ಣಿಗೆ ಮಣ್ಣೆರಚುವ ಬಜೆಟ್ ಈ ಬಾರಿ ಬೇಡ' ಎಂದು ಆಗ್ರಹಿಸಿದ ಅವರು, 'ತೆಲಂಗಾಣ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಪರಸ್ಪರ ಮಾತನಾಡಿಕೊಂಡು ಗೋದಾವರಿ ನದಿ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ನಮ್ಮ ಮುಖ್ಯಮಂತ್ರಿ ಮಾತನಾಡುವ ಗೋಜಿಗೆ ಹೋಗುವುದಿಲ್ಲ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

'ನದಿ ಜೋಡಣೆ ಕುರಿತು ವಿಸ್ತಾರವಾದ ಚರ್ಚೆ ನಡೆಯಬೇಕು. ಆತುರವಾಗಿ ಜೋಡಿಸುವ ಪ್ರಕ್ರಿಯೆ ನಡೆಸುವುದು ಬೇಡ' ಎಂದರು.

'ರೈತರಿಗಾಗಿಯೇ ಪ್ರತ್ಯೇಕವಾಗಿ ಆರೋಗ್ಯ ವಿಮೆ ಯೋಜನೆ ಜಾರಿಗೆ ತರಬೇಕು' ಎಂದು ಆಗ್ರಹಿಸಿದರು.

ಕಾಶಿ ಮಾದರಿಯಲ್ಲಿ ಹರಿಹರದಲ್ಲಿ ಅಭಿವೃದ್ಧಿಗೆ ಚಿಂತನೆ: ಬಸವರಾಜ ಬೊಮ್ಮಾಯಿ

ತುಂಗಭದ್ರಾ ಆರತಿ ಮಂಟಪಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ ಜಿಲ್ಲೆ): 'ದಕ್ಷಿಣ ಕಾಶಿ' ಎಂದು ಖ್ಯಾತಿ ಪಡೆದಿರುವ ಹರಿಹರದ ತುಂಗಭದ್ರಾ ನದಿಯ ತಟದಲ್ಲಿ ತುಂಗಭದ್ರಾ ಆರತಿ ಯೋಗ ಮಂಟಪ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು.

ಹರಿಹರ ನಗರದ ಹಳೆ ಸೇತುವೆ ಸಮೀಪ ರಾಘವೇಂದ್ರ ಸ್ವಾಮಿ ಮಠದ ಹಿಂಭಾಗದಲ್ಲಿ ತುಂಗಭದ್ರಾ ನದಿ ತೀರದಲ್ಲಿ ಮೊದಲು ಗಂಗಾಪೂಜೆ ಸಲ್ಲಿಸಲಾಯಿತು. ಬಳಿಕ 108 ಆರತಿ ಮಂಟಪಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಕೆಲ ಕಾಲ ಧ್ಯಾನ ಮಾಡಿದ ಮುಖ್ಯಮಂತ್ರಿ, ವಿಭೂತಿ ಧರಿಸಿ ಕೇಸರಿ ವಸ್ತ್ರದೊಂದಿಗೆ ಪೂಜಾ ಕಾರ್ಯಗಳನ್ನು ನೆರವೇರಿಸಿದರು.

ವೀರಶೈವ ಲಿಂಗಾಯತ ಪಂಚಮ ಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರಾದ ಮುರುಗೇಶ ನಿರಾಣಿ, ಶಂಕರ ಪಾಟೀಲ ಮುನೇನಕೊಪ್ಪ, ಬೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ ಅವರೂ ಭಾಗಿಯಾಗಿದ್ದರು.

ದಾವಣಗೆರೆ ಜಿಲ್ಲೆಯ ಹರಿಹರ ತುಂಗಭದ್ರಾ ನದಿ ತೀರದಲ್ಲಿ 108 ಯೋಗ ಮಂಟಪಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಸಚಿವರಾದ ಮುರುಗೇಶ ನಿರಾಣಿ, ಬೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ ಪ್ರಾರ್ಥನೆಯಲ್ಲಿ ತಲ್ಲೀನರಾಗಿರುವುದು. ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

₹30 ಕೋಟಿ ವೆಚ್ಚದ ಈ ಯೋಜನೆಗೆ ಆರಂಭಿಕ ಹಂತದಲ್ಲಿ ರಾಜ್ಯ ಸರ್ಕಾರವು ₹ 10 ಕೋಟಿ ಬಿಡುಗಡೆ ಮಾಡಿದೆ. ಕಾಶಿ ವಿಶ್ವನಾಥ ಕಾರಿಡಾರ್ ಮಾದರಿಯಲ್ಲಿ ದಕ್ಷಿಣ ಕಾಶಿ ಹರಿಹರದ ಹರಿಹರೇಶ್ವರ ದೇವಸ್ಥಾನ ಹಾಗೂ ತುಂಗಭದ್ರಾ ನದಿತೀರದ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಈ ಹಿಂದೆ ಕಾಶಿಯಲ್ಲಿ ವಿಶ್ವನಾಥ ದೇವಸ್ಥಾನವನ್ನು ಹುಡುಕುವ ಪರಿಸ್ಥಿತಿ ಇತ್ತು. ದೇವಸ್ಥಾನದ ಸುತ್ತಮುತ್ತ ಅಂಗಡಿಗಳೇ ತುಂಬಿ ಹೋಗಿದ್ದವು. ಪ್ರಧಾನಿ ನರೇಂದ್ರ ಮೋದಿ ಅವರು ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆ ಕೈಗೊಂಡು, ಇಡೀ ಪ್ರದೇಶವನ್ನು ಅಚ್ಚರಿಯ ರೀತಿಯಲ್ಲಿ ಅಭಿವೃದ್ಧಿ ಪಡಿಸಿದ್ದಾರೆ. ಅದೇ ಮಾದರಿಯಲ್ಲಿ ಹರಿಹರದಲ್ಲೂ ಅಭಿವೃದ್ಧಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಉದ್ಘಾಟನೆಗೆ ಪ್ರಧಾನಿ ಬರಲಿ: 'ತುಂಗಭದ್ರಾ ಆರತಿ 108 ಯೋಗಮಂಟಪ ನಿರ್ಮಾಣಕ್ಕೆ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಕಾಮಗಾರಿ ಮುಗಿದು ಉದ್ಘಾಟನೆಗೆ ತಯಾರಾದಾಗ ಚಾಲನೆ ನೀಡಲು ಪ್ರಧಾನಿ ಮೋದಿ ಅವರನ್ನೇ ಕರೆಸಬೇಕು. ಅದಕ್ಕೆ ಮುಖ್ಯಮಂತ್ರಿ ಮತ್ತು ಇತರ ಸಚಿವರು ಪ್ರಯತ್ನಿಸಬೇಕು' ಎಂದು ವಚನಾನಂದ ಸ್ವಾಮೀಜಿ ಮನವಿ ಮಾಡಿದರು.

ಸುದ್ದಿ 2 ನಿಮಿಷ

ಮೇಕೆದಾಟು: 5 ದಿನಕ್ಕೆ ಪಾದಯಾತ್ರೆ ಸೀಮಿತ

ರಾಮನಗರ: ಮೇಕೆದಾಟು ಎರಡನೇ ಹಂತದ ಪಾದಯಾತ್ರೆಗೆ ಇದೇ 27ರಂದು ಬೆಳಿಗ್ಗೆ 9ಕ್ಕೆ ರಾಮನಗರದಲ್ಲಿ ಚಾಲನೆ ದೊರೆಯಲಿದ್ದು, ಏಳು ದಿನಗಳ ಬದಲಿಗೆ ಐದು ದಿನಕ್ಕೆ ನಡಿಗೆಯನ್ನು ಸೀಮಿತಗೊಳಿಸಲಾಗುವುದು ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ಭಾನುವಾರ ಸಂಜೆ ಕೆಂಗಲ್‌ನಲ್ಲಿ ನಡೆದ ಪಾದಯಾತ್ರೆ ಪೂರ್ವಭಾವಿ ಸಭೆಯ ವೇಳೆ ಪತ್ರಕರ್ತರಿಗೆ ಅವರು ಮಾಹಿತಿ ನೀಡಿದರು. 'ಮೊದಲು ಬೆಂಗಳೂರಿನಲ್ಲೇ ಐದು ದಿನ ಪಾದಯಾತ್ರೆಗೆ ನಿರ್ಧರಿಸಿದ್ದೆವು. ಆದರೆ ರಾಜ್ಯ ಬಜೆಟ್ ಇರುವ ಕಾರಣ ಅಲ್ಲಿ ಮೂರು ದಿನ ಮಾತ್ರ ನೀರಿಗಾಗಿ ನಡಿಗೆ ನಡೆಯಲಿದೆ. ಮೊದಲ ದಿನ ರಾಮನಗರದಿಂದ ಬಿಡದಿ ಹಾಗೂ ಎರಡನೇ ದಿನ ಬಿಡದಿಯಿಂದ ಕೆಂಗೇರಿವರೆಗೆ ನಿಗದಿಯಂತೆ ಕಾರ್ಯಕ್ರಮ ನಡೆಯಲಿದೆ. ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರು ಪಾಲ್ಗೊಳ್ಳುತ್ತಾರೆ' ಎಂದು ಮಾಹಿತಿ ನೀಡಿದರು.

ಕಾಂಗ್ರೆಸ್ ಪಾದಯಾತ್ರೆ ಬಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯದ ಬಗ್ಗೆ ಪ್ರತಿಕ್ರಿಯಿಸಿ 'ಅವರು ಪ್ರಧಾನಮಂತ್ರಿ ಕುಟುಂಬದವರು. ಅವರಿಗಿರುವ ಬುದ್ಧಿ, ತಿಳಿವಳಿಕೆ ರಾಜ್ಯದಲ್ಲಿ ಮತ್ಯಾರಿಗೂ ಇಲ್ಲ. ರಾಜ್ಯ– ರಾಷ್ಟ್ರಕ್ಕಾಗಿ ಅವರು ಏನು ಹೇಳುತ್ತಾರೋ ಅದನ್ನೆಲ್ಲ ನಾವು ಕೇಳಬೇಕು ಅಷ್ಟೇ. ಅದನ್ನು ಪ್ರಶ್ನಿಸಬಾರದು' ಎಂದು ವ್ಯಂಗ್ಯವಾಡಿದರು.

ಬಿಜೆಪಿ ರಾಜ್ಯ ಪದಾಧಿಕಾರಿಗಳ ಮಹತ್ವದ ಸಭೆ ಇಂದು

ಬೆಂಗಳೂರು: 'ವಸ್ತ್ರ ರಾಜಕೀಯ'ದ ಸಂಘರ್ಷ ಜೋರಾಗುತ್ತಿರುವುದರ ನಡುವೆಯೇ ಬಿಜೆಪಿ ರಾಜ್ಯ ಪದಾಧಿಕಾರಿಗಳು ಮತ್ತು ಪ್ರಮುಖರ ಮಹತ್ವದ ಸಭೆಗಳು ಸೋಮವಾರ ನಡೆಯಲಿವೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆಯಲ್ಲಿ ಪದಾಧಿಕಾರಿಗಳ ಸಭೆ ನಡೆಯಲಿದೆ. ಬೆಳಿಗ್ಗೆ 10ಕ್ಕೆ ಆರಂಭವಾಗುವ ಈ ಸಭೆ ಮಧ್ಯಾಹ್ನದವರೆಗೂ ನಡೆಯಲಿದೆ. ಪಕ್ಷ ಸಂಘಟನೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸಂಜೆ ಪ್ರಮುಖ ನಾಯಕರ ಸಭೆ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ನಳಿನ್ ಕುಮಾರ್ ಕಟೀಲ್ ಹಾಗೂ ಕೆಲವು ಪ್ರಮುಖ ಸಚಿವರು ಭಾಗವಹಿಸುವರು. ರಾಜ್ಯ ರಾಜಕಾರಣದಲ್ಲಿನ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಯುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿರುವುದು, ರಾಷ್ಟ್ರಧ್ವಜಕ್ಕೆ ಅವಮಾನ ಆರೋಪದ ಮೇಲೆ ಈಶ್ವರಪ್ಪ ಅವರ ರಾಜೀನಾಮೆ ಪಡೆಯುವಂತೆ ಕಾಂಗ್ರೆಸ್ ಪಟ್ಟು ಹಿಡಿದಿರುವುದು, ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಪಾದಯಾತ್ರೆ ಪುನರಾರಂಭಿಸಲು ಕಾಂಗ್ರೆಸ್ ನಾಯಕರು ಸಿದ್ಧತೆ ನಡೆಸಿರುವ ವಿಚಾರಗಳು ಎರಡೂ ಸಭೆಯಲ್ಲಿ ಚರ್ಚೆಗೆ ಬರಬಹುದು ಎಂದು ಪಕ್ಷದ ಮೂಲಗಳು ಹೇಳಿವೆ.

₹2.40 ಕೋಟಿಯ ರಕ್ತಚಂದನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರದೇಶಕ್ಕೆ ವಿಮಾನದ ಮೂಲಕ ಕಳುಹಿಸುತ್ತಿದ್ದ ₹ 2.40 ಕೋಟಿ ಮೌಲ್ಯದ ರಕ್ತಚಂದನದ ತುಂಡುಗಳನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಅಂತರರಾಷ್ಟ್ರೀಯ ಸರಕು ಸಾಗಣೆ ವಿಭಾಗದಲ್ಲಿ (ಕಾರ್ಗೊ) ಪಾರ್ಸೆಲ್ ಮೂಲಕ ರಕ್ತಚಂದನ ಸಾಗಿಸುತ್ತಿದ್ದ ಮಾಹಿತಿ ಲಭ್ಯವಾಗಿತ್ತು. ವಿಭಾಗದಲ್ಲಿ ತಪಾಸಣೆ ನಡೆಸಿದಾಗ, ರಕ್ತಚಂದನ ತುಂಡುಗಳಿದ್ದ ಬಾಕ್ಸ್‌ಗಳು ಪತ್ತೆಯಾದವು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತೈವಾನ್‌ಗೆ ಬಾಕ್ಸ್‌ಗಳನ್ನು ಕಳುಹಿಸಲಾಗುತ್ತಿತ್ತು. ಈ ಜಾಲದ ರೂವಾರಿ ಸೇರಿ ಮೂವರನ್ನು ಬಂಧಿಸಲಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು' ಎಂದೂ ತಿಳಿಸಿವೆ.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಕ್ತಚಂದನಕ್ಕೆ ಬೇಡಿಕೆ ಇದೆ. ಪ್ಲೈವುಡ್‌ನಿಂದ ತಯಾರಿಸಿದ್ದ ಬಾಕ್ಸ್‌ಗಳಲ್ಲಿ ಪೀಠೋಪಕರಣಗಳನ್ನು ರಫ್ತು ಮಾಡುತ್ತಿರುವುದಾಗಿ ಆರೋಪಿಗಳು ಹೇಳಿಕೊಂಡಿದ್ದರು. ಇದೇ ರೀತಿ ಆರೋಪಿಗಳು, ಹಲವು ಬಾರಿ ರಕ್ತಚಂದನ ಸಾಗಿಸಿರುವ ಮಾಹಿತಿ ಇದೆ' ಎಂದೂ ಹೇಳಿವೆ.

ರಾಜ್ಯ ಕೋವಿಡ್ ಅಂಕಿ–ಅಂಶ

39,36,586 ▲	ಒಟ್ಟು ಸೋಂಕಿತರು (39,35,585 ನಿನ್ನೆಯ ವಿವರ)
12,634 ▼	ಸಕ್ರಿಯ ಪ್ರಕರಣಗಳು
38,84,120 ▲	ಗುಣಮುಖರಾದವರು
39,795 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,001	▼
ಗುಣಮುಖ	1,780	▼
ಸಾವು	18	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಆರೋಪ

'ಬಿಜೆಪಿಯಿಂದ ಹಿಜಾಬ್ ವಿವಾದ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಗೋಕಾಕ: 'ಬಿಜೆಪಿಯವರೇ ಹಿಜಾಬ್ ವಿವಾದ ಸೃಷ್ಟಿಸಿದ್ದಾರೆ. ಹತ್ತಾರು ವರ್ಷಗಳಿಂದ ಹಿಜಾಬ್ ಧರಿಸಲಾಗುತ್ತಿದೆ. ಆಗ ಯಾವ ವಿವಾದವೂ ಸೃಷ್ಟಿಯಾಗಿರಲಿಲ್ಲ. ಈಗ ಉದ್ದೇಶ ಪೂರ್ವಕವಾಗಿ ಬಿಜೆಪಿಯೇ ಈ ವಿಷಯ ತಿರುಚುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತದ ಸಂವಿಧಾನ ಪ್ರತಿಯೊಬ್ಬರಿಗೂ ತಮ್ಮ ಇಚ್ಛೆಯಂತೆ ದಿರಿಸು ಧರಿಸುವ ಅವಕಾಶ ಕಲ್ಪಿಸಿದೆ. ಹಾಗಾಗಿ ಹಿಜಾಬ್ ಧರಿಸಿ ಶಾಲಾ-ಕಾಲೇಜುಗಳಲ್ಲಿ ತರಗತಿಗೆ ಹಾಜರಾಗಲು ವಿದ್ಯಾರ್ಥಿನಿಯರಿಗೆ ಅವಕಾಶ ನೀಡಬೇಕು' ಎಂದು ಕೋರಿದರು.

'ಸಚಿವ ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆಯಿಂದ ರಾಜ್ಯದಲ್ಲಿ ಗೊಂದಲ ಸೃಷ್ಟಿಯಾಗಿದೆ. ಅವರ ಬೇಜವಾಬ್ದಾರಿ ಹೇಳಿಕೆ ಖಂಡಿಸಿ ಕಾಂಗ್ರೆಸ್‌ನಿಂದ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದರು.

'ಸಿಂಧೂರ, ಹಿಜಾಬ್ ಬಲವಂತದಿಂದ ತಡೆಯುವುದು ತಪ್ಪು'

ಬೆಂಗಳೂರು: 'ಸಿಂಧೂರ ಆಗಲಿ, ಹಿಜಾಬ್ ಆಗಲಿ ಎರಡೂ ನಮ್ಮ ಸಂಸ್ಕೃತಿ ಮತ್ತು ನಂಬಿಕೆ. ಕುಂಕುಮ ಇಡುವುದರಿಂದ, ಹಿಜಾಬ್ ಹಾಕುವುದರಿಂದ ಯಾರಿಗೂ ತೊಂದರೆ ಇಲ್ಲ. ಯಾವುದೇ ಸಂಸ್ಕೃತಿಯನ್ನು ಬಲವಂತದಿಂದ ತಡೆಯುವುದು ತಪ್ಪು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಹಿಂದಿನಿಂದಲೂ ಹಿಜಾಬ್ ಧರಿಸಿಕೊಂಡು ಬರುತ್ತಿದ್ದರು. ಕೇಸರಿ ಶಾಲು ಹಿಂದಿನಿಂದ ಯಾರೂ ಹಾಕುತ್ತಿರಲಿಲ್ಲ. ಹಿಜಾಬ್ ಅನ್ನು ವಿರೋಧಿಸಲು ಕೇಸರಿ ಶಾಲು ಹಾಕಿಸುವುದು ಅತ್ಯಂತ ಸಣ್ಣತನ. ಇದು ಕೇಸರಿ ಶಾಲಿಗೂ ಮಾಡುವ ಅವಮಾನ' ಎಂದರು.

'ಕೇಸರಿ ಶಾಲನ್ನು ಅಮಾನವೀಯ, ಅನಾಗರಿಕ ಕಾರಣಗಳಿಗೆ ಬಳಸಬಾರದು. ಬಿಜೆಪಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೆ, ಅವರು ನಮ್ಮ ರಾಷ್ಟ್ರಧ್ವಜವನ್ನು ಹಿಡಿದು ಬ್ರಿಟಿಷರ ವಿರುದ್ಧ ಹೋರಾಡಿದ್ದರೆ ಅವರಿಗೆ ನಮ್ಮ ರಾಷ್ಟ್ರಧ್ವಜ ಮತ್ತು ರಾಷ್ಟ್ರೀಯ ಲಾಂಛನಗಳ ಬಗ್ಗೆ ನಿಜವಾದ ಗೌರವ, ಭಕ್ತಿ ಇರುತ್ತಿತ್ತು' ಎಂದು ಹೇಳಿದರು.

ಕಾಂಗ್ರೆಸ್‌ಗೆ ಗೆಲುವು

'ಪಂಚರಾಜ್ಯಗಳಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ. ಗೋವಾದಲ್ಲೂ ಕಾಂಗ್ರೆಸ್ ಪರವಾಗಿ ಜನರು ಒಲವು ತೋರಿದ್ದಾರೆ ಎಂದು ಸತೀಶ ಜಾರಕಿಹೊಳಿ ಹೇಳಿದರು.
ಈ ಬಾರಿ ಬಜೆಟ್‌ನಲ್ಲಿ ಉತ್ತರ ಕರ್ನಾಟಕ ಹಾಗೂ ಬೆಳಗಾವಿ ಜಿಲ್ಲೆ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಅನುದಾನ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

'ಮಾಧ್ಯಮ ವೃತ್ತಿ ಧರ್ಮ ಪಾಲಿಸಿ'

ಉಡುಪಿ: 'ಮಾಧ್ಯಮಗಳು ವೃತ್ತಿಧರ್ಮ ಮರೆತು ಎಲ್ಲೆ ಮೀರಿ ವರ್ತಿಸುತ್ತಿವೆ' ಎಂದು ಉಡುಪಿಯಲ್ಲಿ ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರಲ್ಲಿ ಒಬ್ಬರಾದ ಅಲಿಯಾ ಅಸಾದಿ ಟ್ವಿಟ್ಟರ್‌ನಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈಚೆಗೆ ಖಾಸಗಿ ವಾಹಿನಿಯೊಂದು ವೃತ್ತಿಧರ್ಮ ಮೀರಿ ಬಲವಂತವಾಗಿ ಮನೆಯೊಳಗೆ ಪ್ರವೇಶಿಸಿದ್ದು, ಬಹಳ ನೋವು ತಂದಿದೆ' ಎಂದು ನೋವು ತೋಡಿಕೊಂಡಿದ್ದಾರೆ.

'ಇದರ ಜತೆಗೆ ಉಡುಪಿ ಸರ್ಕಾರಿ ಪದವಿಪೂರ್ವ ಕಾಲೇಜು ವೈಯಕ್ತಿಕ ವಿವರಗಳನ್ನು ಬಹಿರಂಗಪಡಿಸಿದ್ದು, ಅಪರಿಚಿತ ವ್ಯಕ್ತಿಗಳು ಕರೆ ಮಾಡಿ ನಿಂದಿಸುತ್ತಿದ್ದಾರೆ. ಈಗ ಮಾಧ್ಯಮಗಳು ಕಿರುಕುಳ ನೀಡುತ್ತಿವೆ. ಸಣ್ಣತನ ಬಿಟ್ಟು ಸಭ್ಯರಂತೆ ವರ್ತಿಸಿ' ಎಂದಿದ್ದಾರೆ. ಹಲವರು ಆಲಿಯಾ ಅಭಿಪ್ರಾಯ ಬೆಂಬಲಿಸಿದ್ದಾರೆ.

'ಕೃಷಿ ಕಾಯ್ದೆ ಹಿಂಪಡೆಯಲ್ಲ'

ತೀರ್ಥಹಳ್ಳಿ: 'ಕೇಂದ್ರ ಸರ್ಕಾರ ಕೃಷಿ ಕಾಯ್ದೆ ವಾಪಸ್ ಪಡೆದಿದೆ. ರಾಜ್ಯ ಸರ್ಕಾರ ಜಾರಿಗೊಳಿಸಿದ ಕೃಷಿ ಕಾಯ್ದೆ ವಾಪಸ್ ಪಡೆಯುವಂತೆ ದೂರು ಬಂದಿಲ್ಲ. ಕಾಯ್ದೆ ಹಿಂಪಡೆಯುವುದು ಬೇಡವೆಂದು ಸರ್ಕಾರ ನಿರ್ಧರಿಸಿದೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ತಾಲ್ಲೂಕಿನ ಯೋಗಿನರಸೀಪುರದಲ್ಲಿ ತೀರ್ಥಹಳ್ಳಿ ಎಪಿಎಂಸಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನಲ್ಲಿ ಅಡಮಾನ ಸಾಲದ ಚಿನ್ನ ವಂಚನೆ ಪ್ರಕರಣ ಪರಿಶೀಲಿಸಲಾಗಿದೆ. ಸಹಕಾರ ಸಂಘಕ್ಕೆ ವಂಚಿಸಲು ಸಹಕರಿಸಿದ ಲೆಕ್ಕ ಪರಿಶೋಧಕರಿಗೆ ವೃತ್ತಿ ಮಾಡದಂತೆ ನಿಷೇಧಿಸಲಾಗಿದೆ. ಪಾರದರ್ಶಕ ಲೆಕ್ಕ ಪರಿಶೋಧನೆಗೆ ಕಠಿಣ ಕಾನೂನು ಜಾರಿಗೊಳಿಸಲಾಗುತ್ತದೆ' ಎಂದರು.

ರಾಗಿ ಖರೀದಿ ನಿರ್ಬಂಧ ಬೇಡ: ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಬೆಂಬಲ ಬೆಲೆ ಯೋಜನೆಯಲ್ಲಿ ರಾಗಿ ಖರೀದಿಸಲು ವಿಧಿಸಿರುವ ನಿರ್ಬಂಧಗಳನ್ನು ತಕ್ಷಣ ತೆಗೆದು ಹಾಕುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಬೇಕು' ಎಂದು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಕೇವಲ 2.10 ಲಕ್ಷ ಟನ್ ಖರೀದಿಸಲು ವಿಧಿಸಿರುವ ನಿರ್ಬಂಧ ತೆಗೆದುಹಾಕಬೇಕು. ಸ್ಥಗಿತಗೊಳಿಸಿರುವ ನೋಂದಣಿ ಕೇಂದ್ರಗಳನ್ನು ಮತ್ತೆ ಆರಂಭಿಸಬೇಕು. ರಾಗಿ, ಭತ್ತ ಮುಂತಾದ ಉತ್ಪನ್ನಗಳಿಗೆ ಬೆಂಬಲ ಬೆಲೆ ಹೆಚ್ಚಿಸಬೇಕು' ಎಂದೂ ಆಗ್ರಹಪಡಿಸಿದ್ದಾರೆ.

'ದೊಡ್ಡಬಳ್ಳಾಪುರ ಮುಂತಾದ ಕಡೆ ರೈತರು, ರೈತಸಂಘದವರು ರಾಗಿ ಖರೀದಿಗೆ ವಿಧಿಸಿರುವ ನಿಬಂಧನೆಗಳನ್ನು ತೆಗೆಯುವಂತೆ ಪ್ರತಿಭಟನೆ ನಡೆಸುತ್ತಿದ್ದಾರೆ. ಕಳೆದ ವರ್ಷ ಸುಮಾರು 4.7 ಲಕ್ಷ ಟನ್ ರಾಗಿಯನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದರೆ, ಈ ಬಾರಿ ರಾಜ್ಯದಿಂದ ಕೇವಲ 2.10 ಲಕ್ಷ ಟನ್ ಖರೀದಿಸಲು ಅನುಮತಿ ನೀಡಲಾಗಿದೆ. ಸಣ್ಣ ರೈತರಿಂದ ಕೇವಲ 20 ಕ್ವಿಂಟಲ್ ಖರೀದಿ ಮಾಡಲಾಗುವುದೆಂದು ಆದೇಶ ಹೊರಡಿಸಲಾಗಿದೆ' ಎಂದಿದ್ದಾರೆ.

'ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡುವುದನ್ನು ನಿಲ್ಲಿಸಿರುವುದರಿಂದ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ರಾಗಿಗೆ ₹ 1,800 ರಿಂದ ₹ 2,180ಕ್ಕೆ ಮಾರಾಟವಾಗುತ್ತಿದೆ. ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸದಿದ್ದರೆ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರುತ್ತಾರೆ. ಹೀಗಾದರೆ ರೈತರ ಹಿತಾಸಕ್ತಿ ಕಾಪಾಡುವುದು ಹೇಗೆ' ಎಂದೂ ಪ್ರಶ್ನಿಸಿದ್ದಾರೆ.

'ಕೃಷಿ ಇಲಾಖೆಯ ಅಂದಾಜಿನಂತೆ ರಾಜ್ಯದಲ್ಲಿ ಈ ವರ್ಷ ಸುಮಾರು 19.35 ಲಕ್ಷ ಎಕರೆಯಲ್ಲಿ ರಾಗಿ ಬೆಳೆದಿದ್ದಾರೆ. ಎಕರೆಗೆ ಕನಿಷ್ಠ 1 ಟನ್ ಎಂದರೂ, 19.3 ಲಕ್ಷ ಟನ್ ಟನ್ ರಾಗಿ ಇಳುವರಿ ಬರುತ್ತದೆ. ಈ ವರ್ಷ ಮಳೆಯಿಂದಾಗಿ 4.5 ಲಕ್ಷ ಟನ್ ಮಳೆ ಪಾಲಾದರೂ 15 ಲಕ್ಷ ಟನ್ ರೈತರ ಕೈಯಲ್ಲಿದೆ. ಹೀಗಾಗಿ ರೈತರು ಬೆಂಬಲ ಬೆಲೆಯಡಿ ರಾಗಿ ಮಾರಲು ಉತ್ಸುಕರಾಗಿದ್ದಾರೆ' ಎಂದು ಹೇಳಿದ್ದಾರೆ.

ಗವಿರಂಗನಾಥಸ್ವಾಮಿ ದೇವಾಲಯದ ಬಳಿ ವಿದ್ಯಮಾನ

ಮೇವು, ನೀರಿಲ್ಲದೆ ಕರುಗಳ ಸಾವು

ಪ್ರಜಾವಾಣಿ ವಾರ್ತೆ

ಸಂತೇಬಾಚಹಳ್ಳಿ (ಮಂಡ್ಯ): ರಾಜ್ಯ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ನಂತರ ಕೆಲ ರೈತರು ಇಲ್ಲಿನ ಗವಿರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಗಂಡು ಕರು ಮತ್ತು ವಯಸ್ಸಾದ ದನಗಳನ್ನು ಬಿಟ್ಟು ಹೋಗುತ್ತಿದ್ದಾರೆ. ಆದರೆ, ಅವು ಮೇವು, ನೀರಿಲ್ಲದೆ ಸಾಯುತ್ತಿವೆ.

'ಗಂಡು ಕರುಗಳಿಂದ ಉಪಯೋಗವಿಲ್ಲ, ಅವುಗಳ ಸಾಕಣೆಗೂ ಹೆಚ್ಚು ವೆಚ್ಚವಾಗುತ್ತದೆ' ಎಂದು ರೈತರು ಗಂಡು ಕರು ಹುಟ್ಟಿದ ಮೂರು ದಿನಗಳಲ್ಲೇ ಈ ದೇವಾಲಯದ ಬಳಿ ಬಿಟ್ಟು ಹೋಗುತ್ತಿದ್ದಾರೆ. ಸರಿಯಾಗಿ ನಡೆದಾಡಲು ಆಗದ ಸ್ಥಿತಿಯಲ್ಲಿರುವ ಕರುಗಳನ್ನು ನಾಯಿಗಳು ಎಳೆದಾಡಿ ತಿಂದು ಹಾಕುತ್ತಿವೆ. ಹಾಲು, ನೀರು, ಮೇವು ಸಿಗದೆ ಕೆಲವು ಕರುಗಳು ಸಾಯುತ್ತಿವೆ.

'ಪ್ರತಿ ವಾರ ಸುಮಾರು 10 ಗಂಡು ಕರುಗಳನ್ನು ಬಿಟ್ಟು ಹೋಗುತ್ತಾರೆ. ಗೋಶಾಲೆ ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ತಾಲ್ಲೂಕು ಆಡಳಿತ ಹೇಳುತ್ತಿದೆ. ಆದರೆ, ಇದುವರೆಗೆ ಪ್ರಾರಂಭವಾಗಿಲ್ಲ. ಪ್ರಾಣಿದಯಾ ಸಂಘದ ಕಾರ್ಯಕರ್ತರು ಸೇರಿ ಯಾರೂ ಕರುಗಳ ರಕ್ಷಣೆಗೆ ಮುಂದಾಗಿಲ್ಲ' ಎಂದು ಬಿಲ್ಲೇನಹಳ್ಳಿ ಗ್ರಾಮದ ರೈತ ಹರೀಶ್ ಲಕ್ಕೇಗೌಡ ದೂರಿದರು.

ಸಂತೇಬಾಚಹಳ್ಳಿ ಹೋಬಳಿಯ ಗವಿರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಗಂಡು ಕರುಗಳು ಮೇವು, ನೀರು ಇಲ್ಲದೆ ಸಾಯುತ್ತಿವೆ

'ಬಿಲ್ಲೇನಹಳ್ಳಿ ಗವಿರಂಗನಾಥಸ್ವಾಮಿ ದೇವಾಲಯದಿಂದ ಪ್ರತಿವರ್ಷ ಸುಮಾರು ₹ 50 ಲಕ್ಷ ಆದಾಯ ಸರ್ಕಾರಕ್ಕೆ ಬರುತ್ತಿದೆ. ದೇವಾಲಯದ ಆದಾಯ ಬಳಸಿಕೊಂಡೇ ಕ್ಷೇತ್ರದಲ್ಲಿ ಗೋಶಾಲೆ ಆರಂಭಿಸಬೇಕು' ಎಂದು ಅವರು ಆಗ್ರಹಿಸಿದರು.

'ಕ್ಷೇತ್ರದ ಧಾರ್ಮಿಕ ಪದ್ಧತಿಯಂತೆ ರೈತರು ಹರಕೆ ಹೊತ್ತ ಗೋವುಗಳನ್ನು ಕ್ಷೇತ್ರಕ್ಕೆ ತಂದು ಬಿಡುತ್ತಿದ್ದರು. ಈಚೆಗೆ ವಯಸ್ಸಾದ ಮತ್ತು ಎಳೆಯ ಕರುಗಳನ್ನು ಮಾಹಿತಿ ನೀಡದೆ ಬಿಟ್ಟು ಹೋಗುತ್ತಿದ್ದಾರೆ. ಮೇವು, ನೀರು ಕುಡಿಯಲು ಶಕ್ತವಾದ ಬಳಿಕ ಕ್ಷೇತ್ರಕ್ಕೆ ಕರುಗಳನ್ನು ತಂದು ರಶೀದಿ ಪಡೆದರೆ ಅಂಥ ಕರುಗಳನ್ನು ಸಮೀಪದ ಗೋಶಾಲೆಗಳಿಗೆ ಅಧಿಕಾರಿಗಳು ಬಿಡುತ್ತಾರೆ. ಸರ್ಕಾರದ ಮಟ್ಟದಲ್ಲಿ ಗೋಶಾಲೆ ತೆರೆಯುವ ಚರ್ಚೆ ನಡೆಯುತ್ತಿದೆ. ರೈತರು ಎಳೆಯ ಕರುಗಳನ್ನು ಬಿಟ್ಟುಹೋಗಬಾರದು' ಎಂದು ಕೆ.ಆರ್.ಪೇಟೆ ತಹಶೀಲ್ದಾರ್ ಎಂ.ವಿ.ರೂಪಾ ಮನವಿ ಮಾಡಿದರು.

ಕೋವಿಡ್: ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಸದ್ಯ 12,634 ಮಂದಿ ಸೋಂಕಿತರು ಇದ್ದಾರೆ.

ಸೋಂಕು ದೃಢ ಪ್ರಮಾಣ ಶೇ 1.42ಕ್ಕೆ ಇಳಿಕೆಯಾಗಿದ್ದು, 1,001 ಮಂದಿ ಹೊಸದಾಗಿ ಕೋವಿಡ್ ಪೀಡಿತರಾಗಿರುವುದು ವರದಿಯಾಗಿದೆ.

ಬೆಂಗಳೂರಿನಲ್ಲಿ 485 ಪ್ರಕರಣಗಳು ದೃಢಪಟ್ಟಿವೆ. 13 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆ ವರದಿಯಾಗಿವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.36 ಲಕ್ಷಕ್ಕೆ ಏರಿಕೆಯಾಗಿದೆ. ಕೊರೊನಾ ಸೋಂಕಿತರಲ್ಲಿ 18 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲೇ 12 ಮಂದಿ ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ಶೇ 1.79ರಷ್ಟಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 39,795ಕ್ಕೆ ತಲುಪಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 737 ಮಂದಿ ಸೇರಿದಂತೆ ರಾಜ್ಯದಲ್ಲಿ 1,780 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.84 ಲಕ್ಷಕ್ಕೆ ತಲುಪಿದೆ. ಒಂದು ದಿನದ ಅವಧಿಯಲ್ಲಿ 70,290 ಮಾದರಿಗಳ ಕೋವಿಡ್ ಪರೀಕ್ಷೆ ಮಾಡಲಾಗಿದೆ.

ಆಧಾರ್ ದತ್ತಾಂಶ ಕೇಂದ್ರಕ್ಕೆ ಕನ್ನ!

ಒಂದನೇ ಪುಟದಿಂದ

ಸಂಪೂರ್ಣವಾಗಿ ಇಡೀ ಕಟ್ಟಡ ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿದೆ. ಸ್ಮಾರ್ಟ್ ಕಾರ್ಡ್ ಹೊಂದಿರುವವರಷ್ಟೇ ಆಧಾರ್ ದತ್ತಾಂಶ ಕೇಂದ್ರದ ಕಟ್ಟಡ ಮತ್ತು ಸರ್ವರ್ ಕೊಠಡಿಗಳನ್ನು ಪ್ರವೇಶಿಸಲು ಸಾಧ್ಯ. ಈ ಎಲ್ಲವನ್ನೂ ಮೀರಿ ಚಿಪ್‌ಗಳನ್ನು ಕಳವು ಮಾಡಿದ್ದು ಯಾರು ಎಂಬುದು ನಿಗೂಢವಾಗಿಯೇ ಉಳಿದಿದೆ.

'ಸಾಮಾನ್ಯ ವ್ಯಕ್ತಿಯೊಬ್ಬ ಆಧಾರ್ ದತ್ತಾಂಶ ಕೇಂದ್ರದ ಕಟ್ಟಡ ಪ್ರವೇಶಿಸುವುದು ಸಾಧ್ಯವೇ ಇಲ್ಲ. ಈ ಪ್ರಕರಣದಲ್ಲಿ ಕಂಪ್ಯೂಟರ್ ಚಿಪ್‌ಗಳನ್ನು ಕಳವು ಮಾಡಿರುವವರು ಸಾಮಾನ್ಯ ವ್ಯಕ್ತಿಗಳಾಗಿರಲು ಸಾಧ್ಯವಿಲ್ಲ. ತಂತ್ರಜ್ಞಾನ ಕುರಿತು ಹೆಚ್ಚು ಜ್ಞಾನವುಳ್ಳವರು, ಚಿಪ್‌ಗಳನ್ನು ನಿಖರವಾಗಿ ಗುರುತಿಸಬಲ್ಲ ಸಾಮರ್ಥ್ಯ ಇರುವವರೇ ಕೃತ್ಯ ಎಸಗಿದ್ದಾರೆ. ಅತ್ಯಾಧುನಿಕ ಯಂತ್ರೋಪಕರಣ ಬಳಸಿ ಚಿಪ್ ಕಳವು ಮಾಡಿದ್ದು, ಇದಕ್ಕಾಗಿ ಗಂಟೆಗಟ್ಟಲೆ ಸಮಯ ವ್ಯಯಿಸಿರುವ ಸಾಧ್ಯತೆ ಇದೆ' ಎನ್ನುತ್ತವೆ ಮೂಲಗಳು.

ವಿದೇಶಿ ಮಾರುಕಟ್ಟೆ ನಂಟಿನ ಶಂಕೆ: ಕೋವಿಡ್ ಕಾರಣದಿಂದ ಜಗತ್ತಿನಾದ್ಯಂತ ಕಂಪ್ಯೂಟರ್ ಚಿಪ್‌ಗಳ ಉತ್ಪಾದನೆ ಕುಂಠಿತವಾಗಿತ್ತು. 2021ರ ಆರಂಭದಿಂದಲೇ ಕಂಪ್ಯೂಟರ್ ಚಿಪ್‌ಗಳಿಗೆ ಅತಿಯಾದ ಬೇಡಿಕೆ ಸೃಷ್ಟಿಯಾಗಿತ್ತು. ಆಧಾರ್ ದತ್ತಾಂಶ ಕೇಂದ್ರದಿಂದ ಕಳವು ಮಾಡಿರುವ ಚಿಪ್‌ಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದುಬಾರಿ ದರಕ್ಕೆ ಮಾರಾಟ ಮಾಡಿರುವ ಶಂಕೆ ವ್ಯಕ್ತವಾಗಿದೆ.

'ದೂರುದಾರರು ಸೇರಿದಂತೆ ಕೆಲವರನ್ನು ವಿಚಾರಣೆ ಮಾಡಲಾಗಿದೆ. ಆರೋಪಿಗಳ ಕುರಿತು ಇನ್ನೂ ಮಾಹಿತಿ ದೊರಕಿಲ್ಲ. ತನಿಖೆ ಪ್ರಗತಿಯಲ್ಲಿದೆ. ಪೂರ್ಣಗೊಳಿಸಿದ ಬಳಿಕ ಮಾಹಿತಿ ಹಂಚಿಕೊಳ್ಳಲಾಗುವುದು' ಎನ್ನುತ್ತಾರೆ ಕೊಡಿಗೆಹಳ್ಳಿ ಠಾಣೆ ಪೊಲೀಸ್ ಅಧಿಕಾರಿಗಳು.

ಪುನೀತ್ ಮಾವ ರೇವನಾಥ್ ನಿಧನ

ರೇವನಾಥ್

ಚಿಕ್ಕಮಗಳೂರು: ಅಶ್ವಿನಿ ಪುನೀತ್ ರಾಜಕುಮಾರ್ ಅವರ ತಂದೆ ರೇವನಾಥ್ (78) ಭಾನುವಾರ ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ನಿಧನರಾದರು.

ರೇವನಾಥ್ ಅವರು ಚಿಕ್ಕಮಗಳೂರು ತಾಲ್ಲೂಕಿನ ಭಾಗಮನೆ ಗ್ರಾಮದವರು. ಬೆಂಗಳೂರಿನಲ್ಲಿ ನೆಲೆಸಿದ್ದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅವರಿಗೆ ಪತ್ನಿ ವಿದ್ಯಾ, ಪುತ್ರಿಯರಾದ ಅಶ್ವಿನಿ, ಡಿಂಪಲ್, ಪುತ್ರ ವಿನಯ್ ಇದ್ದಾರೆ.

'ರೇವನಾಥ್ ಅವರು ಚಿಕ್ಕಮಗಳೂರಿನಲ್ಲಿ ಪೂರ್ವ ಪ್ರಾಥಮಿಕ ವಿದ್ಯಾಭ್ಯಾಸ, ಕನಕಪುರದಲ್ಲಿ ಶಾಲಾಭ್ಯಾಸ, ಹಾಸನದಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದರು. ನಾಲ್ಕೈದು ದಶಕಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರು' ಎಂದು ಕುಟುಂಬದ ಒಡನಾಡಿ ಉಮಾ ಐಬಿ ಶಂಕರ್ ತಿಳಿಸಿದರು.

ರೇವನಾಥ್ ಅವರ ನೇತ್ರಗಳನ್ನು ಕುಟುಂಬ ಸದಸ್ಯರು ನಾರಾಯಣ ನೇತ್ರಾಲಯಕ್ಕೆ ದಾನ ನೀಡಿದರು.

ವರ ಮೂರಡಿ ಮೂರಿಂಚು ಎತ್ತರ; ವಧು ಐದಡಿ ಒಂಬತ್ತಿಂಚು

ಕುಬ್ಜನ ಕೈ ಹಿಡಿದ ರುಕ್ಮಿಣಿ

• ರಾಮಕೃಷ್ಣ ಕುಲಕರ್ಣಿ

ಕುಳಗೇರಿ ಕ್ರಾಸ್ (ಬಾಗಲಕೋಟೆ ಜಿಲ್ಲೆ): ವರನ ಎತ್ತರ ಮೂರಡಿ ಮೂರಿಂಚು; ವಧುವಿನೆತ್ತರ ಐದಡಿ ಒಂಬತ್ತಿಂಚು. ಬಾದಾಮಿ ತಾಲ್ಲೂಕಿನ ನೀಲಗುಂದ ಗ್ರಾಮದಲ್ಲಿ ಭಾನುವಾರ ಸಂಭ್ರಮದಿಂದ ನಡೆದ ಮದುವೆಯಲ್ಲಿ ಈ ವಿಶೇಷ ಜೋಡಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವರ ನೀಲಗುಂದ ಗ್ರಾಮದ ಮಹಾದೇವಪ್ಪ ಕುಂಬಾರ ಹಾಗೂ ಶಾಂತವ್ವ ದಂಪತಿಯ ಪುತ್ರ ಬಸವರಾಜ. ವಧು ವಿಜಯಪುರ ಜಿಲ್ಲೆಯ ಗಣಿ ಗ್ರಾಮದ ಮಲ್ಲಪ್ಪ ಹಾಗೂ ಬಂಗಾರೆವ್ವ ಕುಂಬಾರ ದಂಪತಿಯ ಏಳನೇ ಪುತ್ರಿ ರುಕ್ಮಿಣಿ.

ನೀಲಗುಂದ ಗ್ರಾಮದ ಬಸ್ ನಿಲ್ದಾಣದ ಪಕ್ಕದಲ್ಲಿ ಪಾನ್‌ಶಾಪ್ ನಡೆಸುತ್ತಿರುವ ಬಸವರಾಜ ಏಳೆಂಟು ವರ್ಷಗಳಿಂದ ಕನ್ಯಾನ್ವೇಷಣೆಯಲ್ಲಿದ್ದರು. ಗಣಿ ಗ್ರಾಮದ ರುಕ್ಮಿಣಿ ಸಂಗಾತಿಯಾಗಿ ಸಿಕ್ಕರು. ಸಮಾಜದ ಗುರು ಹಿರಿಯರ ಸಮ್ಮುಖದಲ್ಲಿ ಭಾನುವಾರ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ವಧು–ವರರ ಕುಟುಂಬ ಸದಸ್ಯರ ಸಮ್ಮುಖದಲ್ಲಿ ನವ ಜೀವನಕ್ಕೆ ಕಾಲಿಟ್ಟರು.

ವಧುವಿಗೆ ದೃಷ್ಟಿದೋಷವಿದೆ. ಮಗನಿಗೆ ಸಂಗಾತಿಯಾಗಿ ಸಿಕ್ಕಳಲ್ಲ ಎಂದು ಬಸವರಾಜನ ತಾಯಿ ಶಾಂತವ್ವ 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

ಬಾದಾಮಿ ತಾಲ್ಲೂಕಿನ ನೀಲಗುಂದ ಗ್ರಾಮದಲ್ಲಿ ಭಾನುವಾರ ಬಸವರಾಜ ಮತ್ತು ರುಕ್ಮಿಣಿ ವಿವಾಹ ನೆರವೇರಿತು

ಒಳನೋಟ

ಶೇ 20ರಷ್ಟು ಅರಣ್ಯ ಇದೆಯೇ?

ಬೆಂಗಳೂರು: 'ಅರಣ್ಯದ ಅರಣ್ಯರೋದನ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಫೆ.20) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಅರಣ್ಯ ನಾಶ ಮನುಕುಲಕ್ಕೆ ಮಾರಕ

ನಿಸರ್ಗದ ಅತ್ಯಮೂಲ್ಯ ಕೊಡುಗೆ ಅರಣ್ಯ. ಪ್ರಾಣಿಗಳು ಮತ್ತು ಪಕ್ಷಿಗಳ ಅಳಿವು- ಉಳಿವು ಅರಣ್ಯದ ಅಸ್ತಿತ್ವದ ಮೇಲೆ ಅವಲಂಬಿಸಿರುತ್ತವೆ. ಅರಣ್ಯ ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡೇ ಅರಣ್ಯವನ್ನು ದೊಡ್ಡ ಪ್ರಮಾಣದಲ್ಲಿ ನಾಶ ಮಾಡುತ್ತಿದ್ದಾರೆ. ಇದಕ್ಕೆ ಕಾರಣರಾದವರನ್ನು ಕಾನೂನಿನ ಮೂಲಕ ಶಿಕ್ಷಿಸಬೇಕು.

ಸುರೇಶ ಚೌಗಲಾ, ಹುಕ್ಕೇರಿ

ಹವಾಮಾನ ಸ್ಥಿತಿ ಬದಲು

ನಿರಂತರವಾಗಿ ಅರಣ್ಯ ನಾಶ ನಡೆಯುತ್ತಿರುವುದರಿಂದ ಹವಾಮಾನದಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿದೆ. ಹಸಿರುಮನೆ ಪರಿಣಾಮ ಮತ್ತು ತಾಪಮಾನ ಏರಿಕೆಗೆ ಅರಣ್ಯ ನಾಶವೇ ಕಾರಣ. ಪ್ರಕೃತಿ ವಿಕೋಪಕ್ಕೂ ಇದೇ ಕಾರಣವಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ಪ್ರಶಾಂತ್, ಕಬಿನಿ

ಕಾಡನ್ನು ಹುಡುಕಬೇಕು

ಅರಣ್ಯರೋದನ ವರದಿ ವಸ್ತುನಿಷ್ಠವಾಗಿದೆ. ಕುವೆಂಪು ಕಾವ್ಯಗಳಲ್ಲಿ ಬಣ್ಣಿಸಿದ, ಪೂರ್ಣಚಂದ್ರ ತೇಜಸ್ವಿ ಅವರಿಗೆ ಸ್ಫೂರ್ತಿಯಾದ ಮಲೆನಾಡು ಇಂದು ಬರಿದಾಗುತ್ತಿದೆ. ಒತ್ತುವರಿ, ಮರ ಕಡಿತದ ವೇಗ ಎಷ್ಟಿದೆ ಎಂದರೆ ಮುಂದಿನ ಐದು ವರ್ಷಗಳಲ್ಲಿ ಕಾಡು ಎಲ್ಲಿತ್ತು? ಎಂದು ಹುಡುಕುವ ಸಂದರ್ಭ ಬರಲಿದೆ. ಜೀವ ಸಂಕುಲ ನಾಶವಾಗಿ ಪ್ರಕೃತಿ ಸಮತೋಲನ ಹಳಿ ತಪ್ಪುತ್ತಿದೆ. ಭವಿಷ್ಯ ಭೀಕರವಾಗಲಿದೆ.

ಎನ್.ಎಸ್.ರುದ್ರೇಶ್, ಭದ್ರಾವತಿ

'ಮರ ಕಡಿದು ಸಸಿ ನೆಡುವುದಲ್ಲ'

ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ವನ್ಯ ಸಂಪತ್ತನ್ನು ಅಭಿವೃದ್ಧಿಯ ನೆಪದಲ್ಲಿ ನಾಶ ಮಾಡಲಾಗುತ್ತಿದೆ. 'ಹಸಿರೇ ಉಸಿರು' ಎಂಬ ಹೇಳಿಕೆ ಕೇವಲ ಬೊಗಳೆಯಾಗಿದೆ. ನೈಸರ್ಗಿಕ ಅರಣ್ಯ ನಾಶ ಮಾಡಿ, ಒಂದಷ್ಟು ಸಸಿಗಳನ್ನು ನೆಟ್ಟು ಕೈ ತೊಳೆದುಕೊಳ್ಳುವುದೇ ಅರಣ್ಯಾಭಿವೃದ್ಧಿಯಾಗಿದೆ. ಅರಣ್ಯ ನಾಶಕ್ಕೆ ಕೊನೆಯಿಲ್ಲ.

ಚನ್ನಬಸವ, ಉಡುಪಿ

ಅಭಿವೃದ್ಧಿ ಹೆಸರಲ್ಲಿ ಹಾನಿ ಬೇಡ

ಪರಿಸರ ಈಗಾಗಲೇ ಸಾಕಷ್ಟು ನಾಶವಾಗಿದೆ. ಅಭಿವೃದ್ಧಿಯ ಹೆಸರಲ್ಲಿ ಪರಿಸರ ನಾಶ ಸಲ್ಲದು. ಪಶ್ಚಿಮಘಟ್ಟ ನಮ್ಮ ರಾಜ್ಯದ ಜೀವನಾಡಿ. ಪರಿಸರ ಸಂರಕ್ಷಣಾ ದೃಷ್ಟಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ತರಬೇಕು. ಈ ಬಗ್ಗೆ ಸರ್ಕಾರಗಳು ಗಂಭೀರ ಚಿಂತನೆ ನಡೆಸಬೇಕು.

ಮಾಳಿಂಗರಾಯ, ಕೆಂಭಾವಿ, ಯಾದಗಿರಿ

ಆಧುನಿಕ ತಂತ್ರಜ್ಞಾನಕ್ಕೆ ಉದ್ಯೋಗದ ಅಭಯ

ಗುರುರಾಜ್ ಎಸ್. ದಾವಣಗೆರೆ

ಕೋವಿಡ್ ಸಾಂಕ್ರಾಮಿಕದಿಂದ ಶಿಕ್ಷಣ ಕ್ಷೇತ್ರದಲ್ಲಿ ತೀರಾ ಏರುಪೇರಾದಾಗ ಹೆಚ್ಚು ಆತಂಕಕ್ಕೆ ಒಳಗಾದವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು. ಆನ್‌ಲೈನ್ ತರಗತಿಗಳಲ್ಲೇ ವರ್ಷದ ಎರಡೂ ಸೆಮಿಸ್ಟರ್‌ಗಳನ್ನೂ ಪೂರೈಸಿದ ಲಕ್ಷಾಂತರ ವಿದ್ಯಾರ್ಥಿಗಳು, ಪ್ರಾಯೋಗಿಕವಾಗಿ ಏನನ್ನೂ ಕಲಿಯಲಾಗಲಿಲ್ಲ. ಸಿವಿಲ್, ಮೆಕ್ಯಾನಿಕಲ್, ಇಂಡಸ್ಟ್ರಿಯಲ್ ಪ್ರೊಡಕ್ಷನ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ಸ್ ವಿಭಾಗದ ವಿದ್ಯಾರ್ಥಿಗಳ ಕಲಿಕೆಗೆ ಪ್ರಯೋಗಾಲಯಗಳೇ ಜೀವಾಳ. ಕಾಲೇಜುಗಳೆಲ್ಲ ಬಾಗಿಲು ಹಾಕಿಕೊಂಡು ಕೇವಲ ಪರೀಕ್ಷೆ ನಡೆಸಿದ್ದು ಗೊತ್ತಾಗುತ್ತಿದ್ದಂತೆ, ಈ ಬ್ರಾಂಚ್‌ಗಳಿಗೆ ಕ್ಯಾಂಪಸ್ ನೇಮಕಾತಿಯೂ (ರಿಕ್ರೂಟ್‌ಮೆಂಟ್) ಕಡಿಮೆಯಾಯಿತು. ಬಹುತೇಕರು ತಮ್ಮ ವಿದ್ಯಾರ್ಹತೆಗಿಂತ ಕಡಿಮೆ ಕೌಶಲ ಬಯಸುವ ಹಾಗೂ ಓದಿದ್ದಕ್ಕೂ, ಕೆಲಸಕ್ಕೂ ಸಂಬಂಧವಿಲ್ಲದ ನೌಕರಿ ಸೇರಲು ಪ್ರವೇಶ ಪರೀಕ್ಷೆ ಬರೆಯಲು ಸಜ್ಜಾಗತೊಡಗಿದರು.

ಆದರೆ ಈಗ 'ಐ.ಟಿ ಉದ್ಯಮ ಚೇತರಿಕೆ ಕಂಡಿದೆ. ಕಂಪ್ಯೂಟರ್ ಸೈನ್ಸ್, ಇನ್‌ಫಾರ್ಮೇಶನ್ ಸೈನ್ಸ್(ಐಎಸ್) ಆಧಾರಿತ ಅತ್ಯಾಧುನಿಕ ಕೌಶಲಗಳಾದ ಮಶೀನ್‌ಲರ್ನಿಂಗ್(ಎಂಎಲ್), ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(ಎಐ), ಕ್ಲೌಡ್ ಕಂಪ್ಯೂಟಿಂಗ್(ಸಿಸಿ), ಪೈಥಾನ್ ಸ್ಕ್ರಿಪ್ಟಿಂಗ್, ರೊಬಾಟಿಕ್ ಪ್ರೊಸೆಸ್ ಆಟೋಮೇಶನ್ (ಆರ್‌ಪಿಎ), ನೆಕ್ಸ್ಟ್ ಜೆಎಸ್ (Next .Js) ಕಲಿತವರಿಗೆ ಭಾಗ್ಯದ ಬಾಗಿಲುಗಳೇ ತೆರೆದಿವೆ. ದೇಶದ ಮಾಹಿತಿ ತಂತ್ರಜ್ಞಾನ ಕಂಪನಿಗಳು ವಾರ್ಷಿಕ ₹75 ಲಕ್ಷ ಸಂಬಳವನ್ನೂ ನೀಡಿ, ಇನ್ನಷ್ಟು ಹೆಚ್ಚಿನ ವಿದ್ಯಾಭ್ಯಾಸ ಹೊಂದಿರುವ (ಕ್ವಾಲಿಫೈಯ್ಡ್) ಅಭ್ಯರ್ಥಿಗಳು ಬೇಕು ಎನ್ನುತ್ತಿವೆ.

> ಕೋವಿಡ್‌ನಿಂದ ಮಂಕಾಗಿದ್ದ ಐಟಿ ಉದ್ಯಮದಲ್ಲಿ ಮತ್ತೆ ಉದ್ಯೋಗಾವಕಾಶಗಳು ಗರಿಗೆದರುತ್ತಿವೆ. ವಿದೇಶಿ ವಿವಿಗಳು, ಕಾರ್ಪೊರೇಟ್ ಕಂಪನಿಗಳು ನೀಡುವ ಕೌಶಲ ಆಧಾರಿತ ಆನ್‌ಲೈನ್ ತರಬೇತಿ, ಅಭ್ಯರ್ಥಿಗಳಿಗೆ ಕೆಲಸ ಕೊಡಿಸುವಲ್ಲಿ ನೆರವಾಗುತ್ತಿವೆ.

ಈ ಸನ್ನಿವೇಶಕ್ಕೆ ಪೂರಕವಾಗಿ ದೇಶದಾದ್ಯಂತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮೇಲೆ ತಿಳಿಸಿದ ಕೋರ್ಸ್‌ಗಳು ಶುರುವಾಗಿವೆ. ಈ ಕೋರ್ಸ್‌ಗಳ ಕಲಿಕೆಗೆ ಕಾಲೇಜಿಗೆ, ಲ್ಯಾಬ್‌ಗೆ ಹೋಗಬೇಕಿಲ್ಲ. ಇಂಟರ್‌ನೆಟ್ ವ್ಯವಸ್ಥೆಯ ಜೊತೆ ಹೈ ಎಂಡ್ ಲ್ಯಾಪ್‌ಟಾಪ್ ಇದ್ದರೆ ಸಾಕು. ದೇಶ–ವಿದೇಶಗಳ ವಿಶ್ವವಿದ್ಯಾಲಯಗಳು ನಡೆಸುವ ತರಗತಿ, ಕಾರ್ಪೊರೇಟ್ ಕಂಪನಿಗಳು ನೀಡುವ ಕೌಶಲ್ಯ ಆಧಾರಿತ ಆನ್‌ಲೈನ್ ತರಬೇತಿ, ಅಭ್ಯರ್ಥಿಗಳಿಗೆ ಕೆಲಸ ಕೊಡಿಸುವಲ್ಲಿ ಸಹಾಯ ಮಾಡುತ್ತಿವೆ.

ಡೇಟಾ ಸೈನ್ಸ್ ಮತ್ತು ಪರಿಮಾಣಾತ್ಮಕ ವಿಶ್ಲೇಷಣೆಯಲ್ಲಿ (Quantative analysis) ಪರಿಣತಿ ಹೊಂದಿದವರಿಗೆ ಮೊದಲ ಆದ್ಯತೆ ನೀಡುತ್ತಿರುವ ಬೃಹತ್ ಐಟಿ ಕಂಪನಿಗಳು ಈಗಾಗಲೇ ದೇಶದ ಐಐಟಿ, ಎನ್‌ಐಟಿ, ಸ್ವಾಯತ್ತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿತವರಿಗೆ ಭಾರೀ ಸಂಬಳದ ಕೆಲಸ ನೀಡಿವೆ. ಅಷ್ಟೇ ಅಲ್ಲ, ಕೆಲಸಕ್ಕೂ ಮುನ್ನವೇ, ತಮ್ಮ ಕಂಪನಿಯ ಉತ್ಪನ್ನಗಳ ಉತ್ಪಾದನೆಗೆ ಬೇಕಾದ ತರಬೇತಿ ನೀಡಲು ಇಂಟರ್ನ್‌ಶಿಪ್ ನೀಡಿ ಪಿ.ಪಿ.ಒ (ಪ್ರಿ ಪ್ಲೇಸ್‌ಮೆಂಟ್ ಆಫರ್) ಮೂಲಕ ಅಭ್ಯರ್ಥಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿವೆ.

ಬ್ಯಾಂಕಿಂಗ್, ಕನ್ಸಲ್ಟಿಂಗ್, ಇನ್ಶೂರೆನ್ಸ್, ಮ್ಯಾನೇಜ್‌ಮೆಂಟ್ ಕ್ಷೇತ್ರಕ್ಕೂ ಬೇಕಾಗುವ ಸಾಫ್ಟ್‌ವೇರ್ ಜ್ಞಾನ–ಕೌಶಲ ಕಲಿತ ಬಹು ಸಂಖ್ಯೆಯ ಪದವೀಧರರಿಗೆ ವಿವಿಧ ಕಂಪನಿಗಳು ವಿಪುಲ ಉದ್ಯೋಗಾವಕಾಶ ಕಲ್ಪಿಸುತ್ತಿವೆ. ಉದ್ಯಮಗಳು ಬೇಡುವ ಕೆಲವು ಕೋರ್ಸ್‌ಗಳ ಪರಿಣತಿಯನ್ನು ಯಾವ ಕಾಲೇಜು ವಿವಿಗಳೂ ಕಲಿಸುವುದಿಲ್ಲ. ಅದಕ್ಕೆಂದೇ ಮ್ಯಾಸಿವ್ ಓಪನ್ ಆನ್‌ನೈನ್ ಕೋರ್ಸ್(MOOC massive open online course)ಗಳನ್ನು ಹುಡುಕಿಕೊಂಡಿರುವ ಬಹುತೇಕ ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳು ಆರಂಭಿಸಿರುವ ಆನ್‌ಲೈನ್ ಕೋರ್ಸ್ ಕಲಿತು ಬೇಕೆನಿಸಿದ ಉದ್ಯೋಗ ಪಡೆಯುವ ಕ್ಷಮತೆ ಸಂಪಾದಿಸುತ್ತಿದ್ದಾರೆ.

ಈ ಯಶಸ್ಸು ಕೇವಲ ಐಐಟಿ–ಎನ್‌ಐಟಿ ವಿದ್ಯಾರ್ಥಿಗಳಿಗಷ್ಟೇ ಸೀಮಿತಗೊಂಡಿಲ್ಲ. ಬೆಂಗಳೂರು, ಮುಂಬೈ, ಚೆನ್ನೈ, ಹೈದರಾಬಾದ್‌ನ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿಎಸ್, ಐಟಿ, ಐಎಸ್ ಕೋರ್ಸ್‌ಗಳನ್ನು ಕಲಿತ ವಿದ್ಯಾರ್ಥಿಗಳೂ ಉದ್ಯೋಗ ಗಳಿಸುವಲ್ಲಿ (ಪ್ಲೇಸ್‌ಮೆಂಟ್ ಗಿಟ್ಟಿಸುವಲ್ಲಿ) ಯಶಸ್ವಿಯಾಗಿದ್ದಾರೆ.

ಹೆಚ್ಚಿದ ಉದ್ಯೋಗ ನಿಯೋಜನೆ

ವಿವಿಧ ಶಿಕ್ಷಣ ಸಂಸ್ಥೆಗಳ ಜಾಲತಾಣಗಳಲ್ಲಿರುವ ಮಾಹಿತಿ ಪ್ರಕಾರ ಮದ್ರಾಸ್ ಐಐಟಿಯ ಜಾಲತಾಣದ ಮಾಹಿತಿ ಪ್ರಕಾರ, ಕಳೆದೆರಡು ತಿಂಗಳುಗಳಲ್ಲಿ ಪ್ಲೇಸ್‌ಮೆಂಟ್(ಉದ್ಯೋಗ ನಿಯೋಜನೆ) ನ ಪ್ರಮಾಣ ಶೇ 43 ರಷ್ಟು ಹೆಚ್ಚಾಗಿದೆ. ಇತ್ತೀಚೆಗೆ ನಡೆದ ಉದ್ಯೋಗ ಮೇಳದ ಮೊದಲ ದಿನದ ಮಧ್ಯಾಹ್ನದ ವೇಳೆಗೆ 179 ವಿದ್ಯಾರ್ಥಿಗಳಿಗೆ ಕೆಲಸ ಸಿಕ್ಕರೆ ಸಂಜೆ ಹೊತ್ತಿಗೆ ಆ ಸಂಖ್ಯೆ 470ಕ್ಕೆ ಏರಿತ್ತು. 180 ವಿದ್ಯಾರ್ಥಿಗಳಿಗೆ ಕೆಲಸ ನೀಡಿದ ಗುವಾಹಟಿಯ ಐಐಟಿ, ತನ್ನ ಮೂರು ವರ್ಷಗಳ ಹಿಂದಿನ ದಾಖಲೆಯನ್ನು ಮುರಿದಿದೆ. ಐಐಟಿ ಜೋಧ್‌ಪುರದ 128 ವಿದ್ಯಾರ್ಥಿಗಳು ಕೆಲಸ ಗಿಟ್ಟಿಸಿಕೊಂಡರೆ, ಬನಾರಸ್ ಹಿಂದೂ ವಿವಿ–ಐಐಟಿಯ (ಸ್ವಾಯತ್ತ) ಮೊದಲ ಹಂತದ ಪ್ಲೇಸ್‌ಮೆಂಟ್‌ನಲ್ಲಿ 1185 ಉದ್ಯೋಗ ನೀಡಿ, ದಾಖಲೆ ಮಾಡಿದೆ. ರೂರ್ಕೆಲಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ(NIT) ಮೂರು ವಿದ್ಯಾರ್ಥಿಗಳು ತಲಾ ₹45 ಲಕ್ಷ ಸಂಬಳ ಗಿಟ್ಟಿಸಿ ಸಾಫ್ಟ್‌ವೇರ್ ಉದ್ಯಮದ ಸಾಮರ್ಥ್ಯವನ್ನು ದೇಶಕ್ಕೆ ಮೊತ್ತೊಮ್ಮೆ ಪರಿಚಯಿಸಿದ್ದಾರೆ.

ಕೋರ್ಸ್ ಕಾರ್ನರ್

ಆಭರಣ ವಿನ್ಯಾಸಕ್ಕೆ ಡಿಪ್ಲೊಮಾ ಕೋರ್ಸ್‌ಗಳು

ಆರ್.ಬಿ.ಗುರುಬಸವರಾಜ

ಆಭರಣಗಳು ಎಲ್ಲರಿಗೂ ಪ್ರಿಯವಾಗುತ್ತವೆ. ವಿಶಿಷ್ಟ ವಿನ್ಯಾಸದ ಆಭರಣಗಳಿಗೆ ಜನರು ಬಹುಬೇಗ ಆಕರ್ಷಿತರಾಗುತ್ತಾರೆ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಹೊಸ ಬಗೆಯ ವಿನ್ಯಾಸದ ಆಭರಣಗಳು ಮಾರುಕಟ್ಟೆಗೆ ದಾಂಗುಡಿ ಇಡುತ್ತಿವೆ. ಇದರಿಂದ ಆಭರಣ ತಯಾರಿಕಾ ಕ್ಷೇತ್ರದಲ್ಲಿ ಕ್ರಿಯಾಶೀಲ ವಿನ್ಯಾಸಕಾರರಿಗೆ ಸಾಕಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಇಂಥ ವಿನ್ಯಾಸಕಾರನ್ನು ಅಣಿಗೊಳಿಸಲು ಕೆಲವು ಸಂಸ್ಥೆಗಳು ಡಿಪ್ಲೊಮಾ ಹಾಗೂ ಕಡಿಮೆ ಅವಧಿಯ ವೃತ್ತಿಪರ ಕೋರ್ಸ್‌ಗಳನ್ನು ಆರಂಭಿಸಿವೆ.

ಈ ಕೋರ್ಸ್‌ನಲ್ಲಿ ಚಿನ್ನ, ಬೆಳ್ಳಿ ಸೇರಿದಂತೆ ವಿವಿಧ ರೀತಿಯ ಲೋಹಗಳನ್ನು ಆಧುನಿಕ ಶೈಲಿಗೆ ಅನುಗುಣವಾಗಿ ವಿನ್ಯಾಸಗೊಳಿಸುವ ಕೌಶಲ ಕಲಿಸಲಾಗುತ್ತದೆ. ಕಂಪ್ಯೂಟರ್ ಸಹಾಯದಿಂದ ಆಭರಣಗಳನ್ನು ವಿನ್ಯಾಸಗೊಳಿಸುವ ಜ್ಞಾನವನ್ನು ಈ ಕೋರ್ಸ್ ಕಲಿಸುತ್ತದೆ.

ಅರ್ಹತೆ ಮತ್ತು ಇತರೆ ಕೌಶಲಗಳು: 10 + 2ನಲ್ಲಿ ಶೇ 45ರಷ್ಟು ಅಂಕ ಪಡೆದು ಉತ್ತೀರ್ಣರಾದ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರಿಗೆ ಅವಕಾಶವಿದೆ. ಕಲೆ ಬಗ್ಗೆ ಅರಿವಿದ್ದ ವಿದ್ಯಾರ್ಥಿಗಳಿಗೆ ಈ ಕೋರ್ಸ್ ಹೆಚ್ಚು ಸೂಕ್ತವಾಗಿದೆ. ಚಿತ್ರಕಲೆಯಲ್ಲಿ ಆಸಕ್ತಿಯುಳ್ಳವರಿಗೆ ಹೆಚ್ಚು ಆದ್ಯತೆ.

ವೃತ್ತಿ ಅವಕಾಶಗಳು: ಆಭರಣ ವಿನ್ಯಾಸದಲ್ಲಿ ಡಿಪ್ಲೊಮಾ ಪೂರ್ಣಗೊಳಿಸಿದ ನಂತರ, ಆಭರಣ ವಿನ್ಯಾಸಕರು, ಬ್ರಾಂಡ್ ಮ್ಯಾನೇಜರ್, ಆಭರಣ ಸಲಹೆಗಾರರು, ಜೆಮ್ ಪಾಲಿಶರ್, ಜೆಮ್‌ಸ್ಟೋನ್ ಮೌಲ್ಯಮಾಪಕರು ಇತ್ಯಾದಿಯಾಗಿ ಕೆಲಸ ಮಾಡಲು ಅವಕಾಶಗಳಿವೆ. ಉತ್ತಮ ವೇತನವೂ ಇದೆ.

ದೇಶದಲ್ಲಿ ಆಭರಣ ವಿನ್ಯಾಸದಲ್ಲಿ ಡಿಪ್ಲೊಮಾವನ್ನು ಒದಗಿಸುವ ಸಾಕಷ್ಟು ಕಾಲೇಜುಗಳಿವೆ. ಅದರಲ್ಲಿ ದೆಹಲಿ ಮತ್ತು ಗುಜರಾತ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ(ಎನ್‌ಐಎಫ್‌ಟಿ) ಹಾಗೂ ಸಿಂಬಯೋಸಿಸ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಪ್ರಮುಖವಾದವು.

ಆನ್‌ಲೈನ್‌ನಲ್ಲಿ ಡಿಪ್ಲೊಮಾ

ಆನ್‌ಲೈನ್‌ನಲ್ಲಿ ಆಭರಣ ವಿನ್ಯಾಸದಲ್ಲಿ ಡಿಪ್ಲೊಮಾ ಕಲಿಯಲು ಅವಕಾಶವಿದೆ. ಈ ತರಬೇತಿಯಲ್ಲಿ 3D ತಂತ್ರಾಂಶವನ್ನು(ಸಾಫ್ಟ್‌ವೇರ್) ಬಳಸಿಕೊಂಡು ಕಂಪ್ಯೂಟರ್‌ನಲ್ಲಿ ಆಭರಣ ವಿನ್ಯಾಸ ಮಾಡುವುದನ್ನು ಕಲಿಸಲಾಗುತ್ತದೆ. ಆಫ್‌ಲೈನ್(ಭೌತಿಕ) ತರಗತಿಗೆ ಹೋಗಲು ಆಗದವರು, ಆನ್‌ಲೈನ್‌ನಲ್ಲೇ ಕಲಿಯಬಹುದು. ಕೆಲವು ಆರ್ಕಿಟೆಕ್ಚರ್ ಕಾಲೇಜುಗಳು, ಕಂಪ್ಯೂಫೀಲ್ಡ್, ಐಐಜೆ, ಐಐಜಿಜೆ(ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜೆಮ್ಸ್ ಅಂದ ಜ್ಯೂವೆಲ್ಸ್) ಕಾಲೇಜುಗಳಲ್ಲಿ ಆನ್‌ಲೈನ್‌ನಲ್ಲಿ ಕೋರ್ಸ್‌ಗಳು ಲಭ್ಯವಿವೆ.

ಹೆಚ್ಚಿನ ಮಾಹಿತಿಗೆ: http://iigjdelhi.org, https://aaftonline.com/program/diploma-in-jewelry-design/ ಜಾಲತಾಣ ನೋಡಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೆ. ಸಿ. ಮಹೀಂದ್ರ ಸ್ಕಾಲರ್‌ಷಿಪ್

- **ವಿವರ:** ಕೆ. ಸಿ. ಮಹೀಂದ್ರ ಸ್ಕಾಲರ್‌ಷಿಪ್ಸ್ ಫಾರ್ ಪೋಸ್ಟ್-ಗ್ರ್ಯಾಜುಯೇಟ್ ಸ್ಟಡೀಸ್ ಅಬ್ರಾಡ್ 2022, ಸ್ನಾತಕಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮುಂದುವರಿಸಲು ಕೆ. ಸಿ. ಮಹೀಂದ್ರ ಶಿಕ್ಷಣ ಟ್ರಸ್ಟ್ ನೀಡುವ ಅವಕಾಶವಾಗಿದೆ.
- **ಅರ್ಹತೆ:** ಆಗಸ್ಟ್ 2022 ರಿಂದ ಆದರೆ ಫೆಬ್ರವರಿ 2023 ರ ನಂತರ ಪ್ರಾರಂಭವಾಗುವ ಕೋರ್ಸ್‌ಗಳಿಗೆ ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮುಂದುವರಿಸಲು ವಿದೇಶದಲ್ಲಿ ಪ್ರವೇಶ ಪಡೆದ ಅಥವಾ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವ ಭಾರತೀಯ ಅಭ್ಯರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ಪ್ರಥಮ ದರ್ಜೆ ಪದವಿ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಇದೇ ದರ್ಜೆಯ ತತ್ಸಮಾನ ಡಿಪ್ಲೊಮಾ ಹೊಂದಿರಬೇಕು.
- **ಆರ್ಥಿಕ ನೆರವು:** ₹8 ಲಕ್ಷದ ವರೆಗೆ ಬಡ್ಡಿ ರಹಿತ ಸಾಲದ ರೂಪದಲ್ಲಿ ವಿದ್ಯಾರ್ಥಿವೇತನ ನೀಡಲಾಗುವುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮಾರ್ಚ್ 31, 2022
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ: www.b4s.in/praja/KMG2**

ಎಸ್‌ಇಆರ್‌ಬಿ ಸ್ಟಾರ್ಟ್-ಅಪ್ ರಿಸರ್ಚ್ ಗ್ರಾಂಟ್ 2022

- **ವಿವರ:** ಎಸ್‌ಇಆರ್‌ಬಿ ಸ್ಟಾರ್ಟ್-ಅಪ್ ರಿಸರ್ಚ್ ಗ್ರಾಂಟ್ 2022 , ಪಿಎಚ್.ಡಿ ಅಥವಾ ಎಂ.ಡಿ. / ಎಂ.ಎಸ್. / ಎಂ.ಡಿ.ಎಸ್. / ಎಂ.ವಿ.ಎಸ್‌ಸಿ. ಪದವೀಧರರು ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿದ್ದಾರೆ. ಹೊಸ ಸಂಸ್ಥೆಯಲ್ಲಿ ತಮ್ಮ ಸಂಶೋಧನಾ ವೃತ್ತಿಯನ್ನು ಪ್ರಾರಂಭಿಸಲು ದೇಶದ ಸಂಶೋಧಕರಿಗೆ ಸಹಾಯ ಮಾಡುವುದು ಈ ಯೋಜನೆಯ ಗುರಿಯಾಗಿದೆ.
- **ಅರ್ಹತೆ:** ಸೈನ್ಸ್ ಅಥವಾ ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ. ಪದವಿ ಅಥವಾ ಎಂ.ಡಿ. / ಎಂ.ಎ. / ಎಂ.ಡಿ. ಎಸ್. / ಎಂ.ವಿ.ಎಸ್‌ಸಿ ಪದವಿ ಮತ್ತು ಯಾವುದೇ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆ ಅಥವಾ ರಾಷ್ಟ್ರೀಯ ಪ್ರಯೋಗಾಲಯ ಅಥವಾ ಯಾವುದೇ ಇತರ ಮಾನ್ಯತೆ ಪಡೆದ ಆರ್ ಅಂಡ್ ಡಿ ಸಂಸ್ಥೆಯಲ್ಲಿ ನಿಯಮಿತ ಶೈಕ್ಷಣಿಕ / ಸಂಶೋಧನಾ ಸ್ಥಾನವನ್ನು ಹೊಂದಿರುವ ಭಾರತೀಯ ನಾಗರಿಕರಿಗೆ ಮುಕ್ತವಾಗಿದೆ.
- **ಆರ್ಥಿಕ ನೆರವು:** ₹30 ಲಕ್ಷದ ಸಂಶೋಧನಾ ಅನುದಾನ ಮತ್ತು 2 ವರ್ಷಗಳವರೆಗೆ ಓವರ್‌ಹೆಡ್‌ಗಳು
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮಾರ್ಚ್ 01, 2022
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ: www.b4s.in/praja/SRB2**

ಬಿಸಿಎ– ಬಿ.ಇ ನಡುವೆ ಏನು ವ್ಯತ್ಯಾಸ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಬಿಸಿಎ ಕೂಡ ನಾಲ್ಕು ವರ್ಷ ಹಾಗೂ ಬಿಇ (ಕಂಪ್ಯೂಟರ್ ಸೈನ್ಸ್) ಕೂಡ 4 ವರ್ಷ. ಈ ಎರಡರಲ್ಲೂ ಇರುವ ವ್ಯತ್ಯಾಸವೇನು? ಉದ್ಯೋಗಾವಕಾಶಗಳಿಗೆ ಯಾವುದು ಉತ್ತಮ?

ಹೆಸರು, ಊರು ತಿಳಿಸಿಲ್ಲ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಬಿಸಿಎ ಪದವಿಯನ್ನು ಮೂರು ವರ್ಷಗಳಲ್ಲಿ ಪಡೆಯಬಹುದು. ಬಿಸಿಎ (ಆನರ್ಸ್) ನಾಲ್ಕನೇ ವರ್ಷ ಸಂಶೋಧನೆಗೆ ಮೀಸಲಾಗಿದ್ದು ಪಿಎಚ್‌ಡಿ ಮಾಡುವ ಅರ್ಹತೆಯಿರುತ್ತದೆ. ಬಿಸಿಎ ಮತ್ತು ಬಿಇ ಕೋರ್ಸ್‌ಗಳಲ್ಲಿನ ವ್ಯತ್ಯಾಸಗಳ ಕುರಿತು ಈ ವರ್ಷದ ಜನವರಿ 3 ರ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ವೃತ್ತಿಯ ಅವಕಾಶಗಳ ದೃಷ್ಟಿಯಿಂದ ಬಿಇ ಉತ್ತಮವೆನ್ನುವುದು ನನ್ನ ಅಭಿಪ್ರಾಯ. ಮಾಹಿತಿಗಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯದಲ್ಲಿ ವಿಚಾರಿಸಿ.

2. ನಾನು ದೂರ ಶಿಕ್ಷಣದ ಮೂಲಕ ಬಿಕಾಂ ಮಾಡಿದ್ದೇನೆ. ರಾಷ್ಟ್ರೀಕೃತ ಬ್ಯಾಂಕಿನ ಉದ್ಯೋಗ ಪಡೆಯಲು ತೊಡಕಾಗುತ್ತದೆಯೇ? ಸಂಜೆ ಕಾಲೇಜಿನ ಮೂಲಕ ಎಂಬಿಎ ಮಾಡಬಹುದೇ?

ಹೆಸರು, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ, ಯುಜಿಸಿ ಮಾನ್ಯತೆ ಪಡೆದ ಯಾವುದೇ ವಿವಿಯ ದೂರ ಶಿಕ್ಷಣದ ಪದವಿ ಗಳಿಸಿದ ನಂತರ ರಾಷ್ಟ್ರೀಕೃತ ಬ್ಯಾಂಕ್ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಅರ್ಹತೆ ಇರುತ್ತದೆ. ಸಂಜೆ ಕಾಲೇಜಿನ ಮೂಲಕ ಎಂಬಿಎ ಮಾಡಬಹುದು.

3. ನನ್ನ ಮಗಳಿಗೆ 38 ವರ್ಷ. ಅವಳು ಅಂಗವಿಕಲೆ. ಬಿಎ ಪದವಿ ಮುಗಿಸಿ ಇಗ್ನೊ ಮೂಲಕ ಜರ್ಮನ್ ಭಾಷೆಯಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗೆ ಸೇರಿದ್ದಾಳೆ. ಕೋರ್ಸ್ ಮುಗಿದ ಮೇಲೆ ಬೆಂಗಳೂರಿನಲ್ಲಿ ಯಾವ ರೀತಿಯ ಉದ್ಯೋಗ ಸಿಗಬಹುದು?

ಮದನ್ ಮೋಹನ್, ಬೆಂಗಳೂರು.

ಜರ್ಮನ್ ಭಾಷೆಯ ತಜ್ಞತೆಯ ಆಧಾರದ ಮೇಲೆ ವೈದ್ಯಕೀಯ ಮತ್ತು ಆರೋಗ್ಯ, ಶಿಕ್ಷಣ, ಲಾಜಿಸ್ಟಿಕ್ಸ್, ಆಟೊಮೊಬೈಲ್, ಮಾಧ್ಯಮ, ಮನರಂಜನೆ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಹಣಕಾಸು ಸೇವೆಗಳು ಇತ್ಯಾದಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ನಿರೀಕ್ಷಿಸಬಹುದು. ಜರ್ಮನ್ ಭಾಷೆಯ ಪ್ರೌಢಿಮೆಯಿದ್ದರೆ, ಮನೆಯಿಂದಲೇ ಮಾಡಬಹುದಾದ ವಿಷಯಾಭಿವೃದ್ಧಿ, ಅನುವಾದ, ಸಬ್‌ಟೈಟಲ್ಸ್, ಟ್ರಾನ್‌ಸ್ಕ್ರಿಪ್ಷನ್ ಇತ್ಯಾದಿ ಅವಕಾಶಗಳೂ ಇವೆ.

4. ನಾನು ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಸರ್ಕಾರಿ ಕೋಟಾದಲ್ಲಿ ಬಿಪಿಟಿ ಓದಬೇಕೆಂದಿದ್ದೇನೆ. ಇದಕ್ಕೆ ಅರ್ಜಿ ಸಲ್ಲಿಸುವುದು ಯಾವಾಗ?

ಬಾಂಧವ್ಯ, ಬೆಂಗಳೂರು.

2021-2022 ನೇ ಶೈಕ್ಷಣಿಕ ವರ್ಷದ ಪ್ರಕ್ರಿಯೆ 2021 ರ ಡಿಸೆಂಬರ್‌ನಲ್ಲಿ ಶುರುವಾಗಿತ್ತು. ಬಿಪಿಟಿ ಕೋರ್ಸ್ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಗಮನಿಸಿ: *https://www.karnatakaphysio.org/*

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ: ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು *shikshana@prajavani.co.in* ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Prose - 7 Colours of Silence

English

ಎಸ್ಸೆಸ್ಸೆಲ್ಸಿ

1. Sathish Gujral became popular all over the world in spite of his physical disability. Support the statement with your answer.

Sathish Gujral met with an accident and became deaf. He was refused by schools and he remained at home. One day he saw a beautiful bird that made him take up drawing and painting. Sathish Gujral is one among the foremost artists of India. He is accomplished in several art forms like painting, sculpture, and architecture. Exhibitions of his works have been held all over the world and displayed in prestigious museums like the museum of Modern Art,the New York, the Hiroshima Collection, Washington, and the National Gallery of Modern Art, New Delhi. As a writer, he published four books of his works in various arts. The Govt of India has honoured him with the Padma Vibhushan. His silent life of achievement is an absolute proof that physical disability is not a barrier to success.



2. Explain the incident that forced Sathish stay back at home. How did it affect his formal education?

Sathish had gone hiking with his father and brother on a holiday in Kashmir. As they were crossing a rickety bridge over some rapids, he looked down at the swirling water. Just then his foot slipped and losing his balance, he fell into the rapids. As a result of this, his legs and head were injured. His legs became weak. He lost his hearing. The head master did not allow him to school because he could not hear and frequently absent for the class. His father could not get admission for him in some other school. Besides, he was teased by children while playing as they would make fun of him. Therefore he was forced to stay at home.

3. "If you want to get on in life, you have to read a lot. You can learn a great deal of things just by reading."

a) Who said these words?

Father Avatar Narain said these words.

b) How did the speaker encourage reading?

Father provided him an armful of books.

c) Which books did Satish read?

'The life of Garibaldi', translated into Urdu by Lala Lajpat Rai, the works of Munshi Prem Chand,Sarathchandra and several others.

4. How did Sathish's brother Inder try to help him?

When Sathish became very moody and couldn't talk freely with anyone because he was unable to hear a single word. Even he was unable to bear the truants and teasing of the children. His brother Inder every time sat beside him for hours and talked to him, taughthim new words and pronunciation. Inder spent most of his time with his brother to help him.

Annappa Shetty MA,M.Ed,
SRP in English,Hassan

ಮಾದರಿ ಪ್ರಶ್ನೋತ್ತರ

ಪ್ರಜಾವಾಣಿ ನೋಡಿಯ

ದ್ವಿತೀಯ ಪಿಯುಸಿ ಭೌತಶಾಸ್ತ್ರದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್' ವಿಷಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಭೌತಶಾಸ್ತ್ರ

ಪಿಯುಸಿ

ಹಿಂದಿನ ಸಂಚಿಕೆಯಿಂದ

10) ಕಿರ್ಖಾಫ್ ನಿಯಮ (a) ಸಂಧಿ ನಿಯಮ ಮತ್ತು (b) ಕುಣಿಕೆ ನಿಯಮ ಕುರಿತು ಬರೆಯಿರಿ

ಉತ್ತರ:- ಕಿರ್ಖಾಫ್ ನಿಯಮಗಳು:

(ಚಿ) ಸಂಧಿ ನಿಯಮ: ಮಂಡಲ ಘಟಕಗಳ ಯಾವುದೇ ಸಂಧಿಯಲ್ಲಿ ಸಂಧಿಯನ್ನು ಪ್ರವೇಶಿಸುತ್ತಿರುವ ಪ್ರವಾಹಗಳ ಮೊತ್ತ ಸಂಧಿಯಿಂದ ಹೊರ ಹೋಗುತ್ತಿರುವ ಪ್ರವಾಹಗಳ ಮೊತ್ತಕ್ಕೆ ಸಮವಾಗಿರಬೇಕು.

(b) ಕುಣಿಕೆ ನಿಯಮ: ಒಂದು ಪೂರ್ಣಮಂಡಲದಲ್ಲಿ ವಿಭವದಲ್ಲಿನ ಬದಲಾವಣೆಗಳ ಬೀಜಗಣಿತೀಯ ಮೊತ್ತ ಶೂನ್ಯ

11) ಒಂದು ವಿದ್ಯುತ್ ಟೋಸ್ಟರ್ ಅದರ ಶಾಖದ ಘಟಕದಲ್ಲಿ ನಿಕ್ರೋಮ್ ಉಪಯೋಗಿಸುತ್ತದೆ. ಒಂದು ನಿರ್ಲಕ್ಷಿಸಬಹುದಾದ ಸಣ್ಣ ಪ್ರಮಾಣದ ವಿದ್ಯುತ್ ಅದರಲ್ಲಿ ಹರಿದಾಗ ಕೊಠಡಿಯ ತಾಪಮಾನದಲ್ಲಿ (27.0°C) ಅದರ ರೋಧವು 75.3 Ω ಆಗಿ ಕಂಡುಬರುತ್ತದೆ. ಟೋಸ್ಟರ್‌ನ್ನು ಒಂದು 230V ಮೂಲಕ್ಕೆ ಜೋಡಿಸಿದಾಗ ಕೆಲವು ಕ್ಷಣಗಳ ನಂತರ ಪ್ರವಾಹವು ಒಂದು ಸ್ಥಿಮಿತ ಮೌಲ್ಯ 2.68A ನಿಲ್ಲುತ್ತದೆ. ಹಾಗಾದರೆ ನೈಕ್ರೋಮ್ ಘಟಕದ ಸ್ಥಿರ ಉಷ್ಣಾಂಶ ಎಷ್ಟು (ಒಳಪಡುವ ಉಷ್ಣಾಂಶದ ಶ್ರೇಣಿಯಲ್ಲಿ ನೈಕ್ರೋಮ್‌ನ ಸರಾಸರಿ ಉಷ್ಣತಾ ಗುಣಾಂಕ $1.70 \times 10^{-4}\ C^{-1}$.)

ಪರಿಹಾರ : ತಂತಿಯಲ್ಲಿ ಪ್ರವಾಹದ ಪ್ರಮಾಣ ಕಡಿಮೆಯಿದ್ದಾಗ, ಶಾಖದ ಪರಿಣಾಮಗಳನ್ನು ನಿರ್ಲಕ್ಷಿಸಬಹುದು ಮತ್ತು ತಂತಿಯ ಉಷ್ಣಾಂಶ T_1 ಕೊಠಡಿಯ ಉಷ್ಣಾಂಶಕ್ಕೆ ಸಮವಾಗಿರುತ್ತದೆ. ಮೂಲಕ್ಕೆ ಟೋಸ್ಟರ್ ಅನ್ನು ಜೋಡಿಸಿದಾಗ ಅದರಲ್ಲಿನ ಪ್ರಾರಂಭಿಕ ಪ್ರವಾಹವು ಅದರ ಸ್ಥಿರ ಮೌಲ್ಯವಾದ 2.68A ಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಆದರೆ ಪ್ರವಾಹ ಶಾಖ ಪರಿಣಾಮದಿಂದ ಉಷ್ಣಾಂಶ ಹೆಚ್ಚುತ್ತದೆ. ಇದರಿಂದ ರೋಧದ ಹೆಚ್ಚಳ ಮತ್ತು ಪ್ರವಾಹವು ಸಣ್ಣ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಕೆಲವು ಕ್ಷಣಗಳಲ್ಲಿ ಉಷ್ಣಾಂಶ ಇನ್ನೂ ಹೆಚ್ಚಾಗದ ಒಂದು ಸ್ಥಿಮಿತ ಸ್ಥಿತಿಯನ್ನು ತಲುಪುತ್ತದೆ. ತಂತಿಯ ರೋಧ ಮತ್ತು ಎಳೆಯಲ್ಪಡುವ ವಿದ್ಯುತ್ ಪ್ರವಾಹವು ಸ್ಥಿಮಿತ ಮೌಲ್ಯ ತಲುಪುತ್ತದೆ ಸ್ಥಿಮಿತ ಉಷ್ಣಾಂಶ T_2 ದಲ್ಲಿ ರೋಧ R_2

$$R_2 = \frac{230\ V}{2.68\ A} = 85.8\ \Omega$$

ಇದರಲ್ಲಿ $R_2 = R_1\,[1 + \alpha\,(T_2 - T_1)]$ ಸಂಬಂಧವನ್ನು ಉಪಯೋಗಿಸಿಕೊಂಡು $\alpha = 1.70 \times 10^{-4}\ ^\circ C^{-1}$

$$T_2 - T_1 = \frac{(85.8\quad 75.3)}{(75.3)\times 1.70\times 10^{4}} = 820\ ^\circ C$$

ಅಂದರೆ, $T_2 = (820 + 27.0)\ ^\circ C = 847\ ^\circ C$

ಆದುದರಿಂದ ಶಾಖದ ತಂತಿಯ ಸ್ಥಿಮಿತ ಉಷ್ಣಾಂಶ 847°C ಆಗಿರುತ್ತದೆ. (ಪ್ರವಾಹದಿಂದಾಗುವ ಶಾಖದ ಪರಿಣಾಮ ಪರಿಸರಕ್ಕಾಗುವ ಶಾಖದ ನಷ್ಟಕ್ಕೆ ಸಮವಾಗಿದ್ದಾಗ).

12) ಅರೋರಾ ಬೊರಿಯಾಲಿಸ್ ಬಗ್ಗೆ ಬರೆಯಿರಿ.

ಉತ್ತರ:- ಸೌರಜ್ವಾಲೆಗಳು ಉಂಟಾದಾಗ, ದೊಡ್ಡ ಪ್ರಮಾಣದಲ್ಲಿ ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳು ಸೂರ್ಯನಿಂದ ಹೊರಹಾಕಲ್ಪಡುತ್ತವೆ. ಕೆಲವೊಂದು ಭೂಮಿಯ ಕಾಂತಕ್ಷೇತ್ರದಲ್ಲಿ ಸಿಕ್ಕಿಬಿದ್ದು, ಕ್ಷೇತ್ರ ರೇಖೆಗಳೊಂದಿಗೆ ಸುರುಳಿಯ ಪಥದಲ್ಲಿ ಚಲಿಸುತ್ತವೆ. ಭೂಮಿಯ ಕಾಂತೀಯ ಧ್ರುವಗಳ ಸಮೀಪ ಕ್ಷೇತ್ರ ರೇಖೆಗಳು ಪರಸ್ಪರ ಹತ್ತಿರ ಬರುತ್ತವೆ. ಆದ್ದರಿಂದ ಧ್ರುವಗಳಲ್ಲಿ ಆವೇಶಗಳ ಸಾಂದ್ರತೆ ಹೆಚ್ಚುತ್ತದೆ. ಈ ಕಣಗಳು ವಾತಾವರಣದಲ್ಲಿರುವ ಪರಮಾಣುಗಳು ಮತ್ತ ಅಣುಗಳೊಂದಿಗೆ ಡಿಕ್ಕಿ ಹೊಡೆಯುತ್ತವೆ. ಉದ್ರೇಚಿತ ಆಮ್ಲಜನಕ ಪರಮಾಣುಗಳಿಂದ ಹಸಿರು ಬಣ್ಣ ಮತ್ತು ಉದ್ರೇಚಿತ ಸಾರಜನಕ ಪರಮಾಣುಗಳಿಂದ ಗುಲಾಬಿ ಬಣ್ಣ ಉತ್ಸರ್ಜಿಸಲ್ಪಡುತ್ತದೆ. ಭೌತಶಾಸ್ತ್ರದಲ್ಲಿ ಈ ವಿದ್ಯಮಾನವನ್ನು ಅರೋರಾ ಬೊರಿಯಾಲಿಸ್ ಎನ್ನುತ್ತಾರೆ.

13) ಸೈಕ್ಲೋಟ್ರಾನ್ ಯಂತ್ರದ ಬಗ್ಗೆ ಬರೆಯಿರಿ

ಉತ್ತರ:- ಆವೇಶ ಕಣಗಳಿಗೆ ಅಥವಾ ಅಯಾನುಗಳಿಗೆ ಹೆಚ್ಚಿನ ಶಕ್ತಿಯನ್ನು ಪಡೆಯಲು ವೇಗವನ್ನು ಹೆಚ್ಚಿಸುವ ಯಂತ್ರವನ್ನು ಸೈಕ್ಲೋಟ್ರಾನ್ ಎನ್ನುತ್ತಾರೆ. 1934ರಲ್ಲಿ ಈ. ಓ. ಲಾರೆನ್ಸ್ ಮತ್ತು ಎಂ. ಎಸ್. ಲಿವಿಂಗ್ಸ್ಟನ್ ಬೈಜಿಕ ರಚನೆಯನ್ನು ಅಧ್ಯಯನ ಮಾಡಲು ಇದನ್ನು ಕಂಡುಹಿಡಿದರು. ಸೈಕ್ಲೋಟ್ರಾನ್‌ನಲ್ಲಿ ವಿದ್ಯುತ್ ಮತ್ತು ಕಾಂತಕ್ಷೇತ್ರಗಳೆರಡರ ಸಂಯೋಜನೆಯನ್ನು ಬಳಸಿ ಆವೇಶ ಕಣಗಳ ಶಕ್ತಿಯನ್ನು ಹೆಚ್ಚಿಸಲಾಗುತ್ತದೆ. ಕ್ಷೇತ್ರಗಳು ಪರಸ್ಪರ ಲಂಬವಾಗಿರುವುದರಿಂದ ಇವುಗಳನ್ನು ಅಡ್ಡಹಾಯು ಕ್ಷೇತ್ರಗಳು ಎನ್ನುತ್ತಾರೆ. ಆವೇಶ ಕಣದ ಪರಿಭ್ರಮಣೆಯ ಆವೃತ್ತಿಯು, ಅದರ ಶಕ್ತಿಯ ಮೇಲೆ ಅವಲಂಬಿತವಾಗದಿರುವ ಅಂಶವನ್ನು ಸೈಕ್ಲೋಟ್ರಾನ್‌ನಲ್ಲಿ ಬಳಸುತ್ತಾರೆ.

1953ರಲ್ಲಿ ಕೋಲ್ಕತ್ತದ ಸಹಾ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ, ಡಾ. ಮೇಘನಾಥ್ ಸಹಾ ಇವರ ಕಲ್ಪನೆಯಿಂದಾಗಿ ಸೈಕ್ಲೋಟ್ರಾನ್ ನಿರ್ಮಿಸಲಾಯಿತು. ನಂತರ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (TIFR), ಮುಂಬೈ, ಅಲಿಗಢ ಮುಸ್ಲಿಂ ಯುನಿವರ್ಸಿಟಿ (AMU), ಅಲಿಗಢ, ಬೋಸ್ ಇನ್‌ಸ್ಟಿಟ್ಯೂಟ್, ಕೋಲ್ಕತ್ತ ಮತ್ತು ಆಂಧ್ರ ಯುನಿವರ್ಸಿಟಿ, ವಾಲ್ಟೈರ್‌ಗಳಲ್ಲಿ ಕಾಕ್ರೋಫ್ಟ್-ವಾಲ್ಟನ್ ಮಾದರಿಯ ವೇಗೋತ್ಕರ್ಷಕಗಳ ಸರಣಿಯನ್ನು ನಿರ್ಮಿಸಲಾಯಿತು.

14) ಯಾವುದಕ್ಕೆ ಲೊರೆಂಟ್ಜ್ ಬಲ ಎನ್ನುತ್ತಾರೆ.

ಉತ್ತರ:- ಕಾಂತಕ್ಷೇತ್ರ $\overline{B}$ ಯೊಂದಿಗೆ $\overline{E}$ ವಿದ್ಯುತ್‌ಕ್ಷೇತ್ರ ಉಪಸ್ಥಿತಿಯಲ್ಲಿ $\overline{U}$ ವೇಗದಲ್ಲಿ ಚಲಿಸುತ್ತಿರುವ ಯಾವುದೇ ಆವೇಶ q ಮೇಲೆ ಬೀಳುವ ಒಟ್ಟು ಬಲವನ್ನು ಲೊರೆಂಟ್ಜ್ ಬಲ ಎನ್ನುತ್ತಾರೆ. ಇದನ್ನು ಕೆಳಕಂಡ ಸಮೀಕರಣದಿಂದ ವ್ಯಕ್ತಪಡಿಸಬಹುದು.

$$\vec{F} = q(\vec{v} \times \vec{B} + \vec{E})$$

ಕಾಂತೀಯ ಬಲ $q(\vec{v} \times \vec{B})$ ಯು $\vec{v}$ ಗೆ ಲಂಬವಾಗಿರುತ್ತದೆ ಮತ್ತು ಇದರಿಂದಾದ ಕೆಲಸವು ಶೂನ್ಯವಾಗಿದೆ.

15) ಅಯಸ್ಕಾಂತೀಯ ಕ್ಷೇತ್ರದ ರೇಖೆಗಳ ಲಕ್ಷಣಗಳನ್ನು ತಿಳಿಸಿ

ಉತ್ತರ:-ಅಯಸ್ಕಾಂತೀಯ ಕ್ಷೇತ್ರದ ರೇಖೆಗಳು ಕಾಂತಕ್ಷೇತ್ರದ ದೃಶ್ಯ ಮತ್ತು ಅಂತದೃಷ್ಟಿಯ ಸಾಕ್ಷಾತ್ಕಾರವಾಗಿವೆ. ಅವುಗಳ ಗುಣಲಕ್ಷಣಗಳೆಂದರೆ

(i) ಅಯಸ್ಕಾಂತ (ಅಥವಾ ಸಾಲೆನಾಯ್ಡ್)ದ ಕಾಂತಕ್ಷೇತ್ರದ ರೇಖೆಗಳು ನಿರಂತರ ಮುಚ್ಚಿದ ಕುಣಿಕೆಗಳನ್ನು ರೂಪಿಸುತ್ತವೆ. ಇದು ವಿದ್ಯುತ್ ಕ್ಷೇತ್ರದ ದ್ವಿಧ್ರುವಿಗಿಂತಲೂ ಭಿನ್ನವಾಗಿರುತ್ತದೆ, ಈ ಕ್ಷೇತ್ರದಲ್ಲಿ ರೇಖೆಗಳು ಧನಾತ್ಮಕ ಆವೇಶದಿಂದ ಪ್ರಾರಂಭವಾಗುತ್ತವೆ ಮತ್ತು ಋಣಾತ್ಮಕ ಆವೇಶದಲ್ಲಿ ಕೊನೆಗೊಳ್ಳುತ್ತವೆ ಅಥವಾ ಅನಂತದ ಕಡೆ ಸೇರುತ್ತವೆ.

(ii) ಕ್ಷೇತ್ರ ರೇಖೆಯ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಎಳೆದ ಸ್ಪರ್ಶಕವು ಆ ಬಿಂದುವಿನಲ್ಲಿ ನಿವ್ವಳ ಕಾಂತಕ್ಷೇತ್ರ B ನ ದಿಕ್ಕನ್ನು ಪ್ರತಿನಿಧಿಸುತ್ತದೆ.

(iii) ಏಕಪ್ರಮಾಣದ ಪ್ರದೇಶವನ್ನು ದಾಟುವ ಕ್ಷೇತ್ರರೇಖೆಗಳು ಅಧಿಕವಾಗಿದ್ದಲ್ಲಿ ಕಾಂತಕ್ಷೇತ್ರ B ನ ಪರಿಮಾಣವೂ ಬಲವಾಗಿರುತ್ತದೆ.

(iv) ಕಾಂತಕ್ಷೇತ್ರದ ರೇಖೆಗಳು ಛೇಧಿಸುವುದಿಲ್ಲ, ಹಾಗೆ ಅವು ಮಾಡಿದಲ್ಲಿ, ಛೇದಿಸಲ್ಪಟ್ಟ ಆ ಬಿಂದುವಿನಲ್ಲಿ ಕಾಂತ ಕ್ಷೇತ್ರದ ದಿಕ್ಕು ಅನನ್ಯವಾಗಿರುವುದಿಲ್ಲ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಅದೃಷ್ಟ ಎಂದರೆ ಅವಕಾಶವನ್ನು ಪಡೆಯುವವನು,
ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
–ಸ್ವಾಮಿ ವಿವೇಕಾನಂದ

ಕೆಪಿಎಸ್‌ಸಿ: ಆಯ್ಕೆಪಟ್ಟಿ ಊರ್ಜಿತಕ್ಕೆ ಮಸೂದೆ ಅಕ್ರಮವನ್ನು ಸಕ್ರಮಗೊಳಿಸುವ ಪ್ರಯತ್ನ

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ 362 ಅಭ್ಯರ್ಥಿಗಳ ನೇಮಕಾತಿಗೆ ಎದುರಾಗಿದ್ದ ತೊಡರುಗಳನ್ನು ನಿವಾರಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದೆ. ಅಕ್ರಮ, ಭ್ರಷ್ಟಾಚಾರದ ಆರೋಪಗಳ ಸುಳಿಗೆ ಸಿಲುಕಿ ತನಿಖೆ, ವಿಚಾರಣೆಗೆ ಒಳಗಾಗಿ, ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿ ಎಂಟು ವರ್ಷಗಳಿಂದ ಅತಂತ್ರ ಸ್ಥಿತಿಯಲ್ಲಿರುವ ಈ ಆಯ್ಕೆಪಟ್ಟಿಗೆ ಸಿಂಧುತ್ವ ಮುದ್ರೆ ಒತ್ತಲು ಸರ್ಕಾರವು 'ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಮಸೂದೆ- 2022' ರೂಪಿಸಿದೆ. ಇದೊಂದು ರೀತಿಯಲ್ಲಿ ಅಕ್ರಮವನ್ನು ಸಕ್ರಮಗೊಳಿಸುವ ಪ್ರಯತ್ನ. ಸಿಐಡಿ ತನಿಖೆಯು ಅಕ್ರಮಗಳನ್ನು ಬಯಲುಗೊಳಿಸಿತ್ತು. ಇದನ್ನು ಆಧಾರವಾಗಿ ಇರಿಸಿಕೊಂಡು ರಾಜ್ಯ ಸರ್ಕಾರವು 2011ನೇ ಸಾಲಿನ ನೇಮಕಾತಿ ಅಧಿಸೂಚನೆಯನ್ನೇ ಹಿಂದಕ್ಕೆ ಪಡೆದಿತ್ತು. ಸರ್ಕಾರದ ಈ ಕ್ರಮವನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎತ್ತಿಹಿಡಿದಿವೆ. ಇಷ್ಟೆಲ್ಲ ಆದ ಬಳಿಕ ನೇಮಕಾತಿಗೆ ಸಿಂಧುತ್ವ ತರಲು ಸರ್ಕಾರ ಈಗ ಮಸೂದೆಯ ಮೊರೆ ಹೋಗಿರುವುದು ಸರಿಯಲ್ಲ. ಇದಕ್ಕೆ ಸರ್ಕಾರ ಏನೇ ಕಾರಣ ನೀಡಿದರೂ, ಯಾವುದೇ ತಾಂತ್ರಿಕ ನೆಪ ಮುಂದಿಟ್ಟರೂ ಅದನ್ನು ಒಪ್ಪಲಾಗದು.

ಇಂತಹದೊಂದು ನಿರ್ಧಾರವು ರವಾನಿಸುವ ಸಂದೇಶವಾದರೂ ಏನು ಎಂಬುದರ ಬಗೆಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕಿತ್ತು. 362 ಹುದ್ದೆಗಳ ಭರ್ತಿಗೆ ಲೋಕ ಸೇವಾ ಆಯೋಗವು 2011ರ ನವೆಂಬರ್‌ನಲ್ಲಿ ಅಧಿ ಸೂಚನೆ ಹೊರಡಿಸಿತ್ತು. ಆ ಬಳಿಕ ಪರೀಕ್ಷೆಗಳನ್ನು ನಡೆಸಿತು. ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಯಿತು. ಪಟ್ಟಿ ಪ್ರಕಟಗೊಳ್ಳುತ್ತಲೇ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಅಭ್ಯರ್ಥಿಯೊಬ್ಬರು ಅಂದಿನ ಅಡ್ವೊಕೇಟ್ ಜನರಲ್‌ಗೆ (ಎ.ಜಿ.) ಪತ್ರ ಬರೆದಿದ್ದರು. ಎ.ಜಿ. ಶಿಫಾರಸಿನ ಅನ್ವಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತು. ನಂತರ 2014ರ ಜೂನ್ ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಕ್ರಮಗಳ ತನಿಖೆಯ ಹೊಣೆಯನ್ನು ಸಿಐಡಿಗೆ ವಹಿಸಿತು. ತನಿಖೆ ನಡೆಸಿದ ಸಿಐಡಿ ಮಧ್ಯಂತರ ವರದಿ ನೀಡಿತು. ಅದರ ಆಧಾರದಲ್ಲಿ ಆಗಿನ ಸರ್ಕಾರವು ನೇಮಕಾತಿ ಅಧಿಸೂಚನೆಯನ್ನು ವಾಪಸು ಪಡೆಯಿತು. ಈ ಕ್ರಮದ ವಿರುದ್ಧ ಕೆಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಮೊರೆ ಹೋದರು. ಸರ್ಕಾರದ ಆದೇಶವನ್ನು ರದ್ದುಗೊಳಿಸಿದ ಕೆಎಟಿಯು ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿಪತ್ರ ಕೊಡುವಂತೆ ಸೂಚಿಸಿತ್ತು. ಆದರೆ, ಕೆಎಟಿ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿಹಿಡಿದಿದೆ. ಇಷ್ಟೆಲ್ಲ ಬೆಳವಣಿಗೆಗಳ ಹೊರತಾಗಿಯೂ ನೇಮಕಾತಿ ಆದೇಶ ನೀಡುವುದಕ್ಕೆ ಪೂರಕವಾಗಿ ಮಸೂದೆ ರೂಪಿಸಿ, ಮಂಡಿಸಿರುವುದು ಏನನ್ನು ಸೂಚಿಸುತ್ತದೆ?

ಇಬ್ಬಗೆ ಧೋರಣೆಯಿಂದ ಕೆಪಿಎಸ್‌ಸಿ ಶುದ್ಧೀಕರಣ ಸಾಧ್ಯವಿಲ್ಲ. ಅದಕ್ಕೆ ಬಲವಾದ ಸಂಕಲ್ಪ ಬೇಕು. ಅದನ್ನು ಸಾಧ್ಯವಾಗಿಸಲು ಅಷ್ಟೇ ದೃಢವಾದ ಇಚ್ಛಾಶಕ್ತಿ ಬೇಕು

ಕರ್ನಾಟಕ ಲೋಕಸೇವಾ ಆಯೋಗವು ಒಂದು ಸಾಂವಿಧಾನಿಕ ಸಂಸ್ಥೆ. ಆದರೆ ಈ ಸಂಸ್ಥೆ ಕೆಲವು ವರ್ಷಗಳಿಂದ ಅಕ್ರಮ, ಅದಕ್ಷತೆ, ಭ್ರಷ್ಟಾಚಾರದಂತಹ ಕಾರಣಗಳಿಗಾಗಿಯೇ ಸುದ್ದಿಯಾಗುತ್ತಿದೆ. 2011ನೇ ಸಾಲಿನ ನೇಮಕಾತಿ ಪ್ರಕ್ರಿಯೆಗೆ ಮೊದಲೂ ಅಕ್ರಮಗಳು ನಡೆದಿದ್ದವು. ಆನಂತರ ಕೂಡ ನಡೆದಿವೆ. ಹೀಗಾಗಿ ಈ ನಿರ್ದಿಷ್ಟ ಸಾಲಿನ ಅಭ್ಯರ್ಥಿಗಳನ್ನು ಮಾತ್ರ ಬಲಿಪಶು ಮಾಡುವುದು ಬೇಡ ಎಂದು ಕೆಲವು ರಾಜಕೀಯ ಮುಖಂಡರು ವಾದ ಮಾಡುತ್ತಿದ್ದಾರೆ. ಈ ಬಗೆಯಲ್ಲಿ ಸಮರ್ಥನೆಗಳನ್ನು ನೀಡುತ್ತಾ ಹೋದಲ್ಲಿ ಅಕ್ರಮಗಳ ಬಗೆಗೆ ತನಿಖೆ ನಡೆಸಬೇಕಾದ ಅಗತ್ಯವೇ ಬರಲಾರದು. ಯಾವುದೋ ಒಂದು ಬ್ಯಾಚ್‌ನ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದರೆ ಆಯ್ಕೆಯಾದ ಎಲ್ಲರೂ ವಾಮಮಾರ್ಗದಿಂದಲೇ ದಡ ಸೇರಿದ್ದಾರೆ ಎಂದು ಅರ್ಥವಲ್ಲ. 2011ನೇ ಸಾಲಿನ ನೇಮಕಾತಿ ಅಧಿಸೂಚನೆಯನ್ನು ಸರ್ಕಾರವು ಹಿಂದಕ್ಕೆ ಪಡೆದಿದ್ದರಿಂದ ಅಭ್ಯರ್ಥಿಗಳಿಗೆ ನಿರಾಶೆಯಾಗಿರುವುದು ನಿಜ. ಅದರಲ್ಲೂ ದುಡ್ಡು, ಪ್ರಭಾವ ಬಳಸದೇ ಆಯ್ಕೆಯಾದವರಿಗೆ ಇನ್ನೂ ಹೆಚ್ಚಿನ ನಿರಾಶೆ ಆಗಿರುತ್ತದೆ. ಆದರೆ, ಅದನ್ನು ನೆಪವಾಗಿಸಿಕೊಂಡು ಅಕ್ರಮಗಳನ್ನು ಸಮರ್ಥಿಸಲಾಗದು. ಅಕ್ರಮ ಎಸಗಿದವರಿಗೆ ರಕ್ಷಣೆ ನೀಡಲಾಗದು. ಹಾಗೆ ಮಾಡಿದರೆ ಅದು ಮತ್ತೂ ದೊಡ್ಡ ಅಪರಾಧ. ಉದ್ಯೋಗ ಆಕಾಂಕ್ಷಿಗಳ ಭರವಸೆಯ ಬೆಳಕಾಗಬೇಕಿರುವ ಕೆಪಿಎಸ್‌ಸಿ ಭ್ರಷ್ಟಾಚಾರದ ಕೂಪವಾಗಿದೆ. ಇದನ್ನು ಶುದ್ಧೀಕರಿಸಲೇಬೇಕಿದೆ. ನೇಮಕಾತಿ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕಗೊಳಿಸಬೇಕಾಗಿದೆ. ಈ ಸಲುವಾಗಿಯೇ ಪಿ.ಸಿ. ಹೋಟಾ ನೇತೃತ್ವದಲ್ಲಿ ಸಮಿತಿ ರಚಿಸಲಾಯಿತು. 2011ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಕೇಳಿಬಂದ ಆರೋಪಗಳೇ ಈ ಸಮಿತಿ ರಚನೆಗೆ ಕಾರಣ. ಹೋಟಾ ಸಮಿತಿಯು 2013ರ ಆಗಸ್ಟ್‌ನಲ್ಲಿಯೇ ವರದಿ ನೀಡಿತು. ಸುಧಾರಣೆಗೆ ಅನೇಕ ಶಿಫಾರಸುಗಳನ್ನು ಸಮಿತಿ ಮಾಡಿದೆ. ಆದರೆ, ಸರ್ಕಾರವು ತನಗೆ ಅನುಕೂಲ ಎನಿಸಿದ ಶಿಫಾರಸುಗಳನ್ನಷ್ಟೇ ಜಾರಿಗೆ ತಂದಿದೆ. ಅದೂ ಕಂತುಗಳಲ್ಲಿ ಜಾರಿಗೆ ಬರುತ್ತಿವೆ. 362 ಅಭ್ಯರ್ಥಿಗಳ ಆಯ್ಕೆಪಟ್ಟಿ ಊರ್ಜಿತಕ್ಕೆ ಶುಕ್ರವಾರ ವಿಧಾನ ಸಭೆಯಲ್ಲಿ ಮಸೂದೆ ಮಂಡನೆಯಾಗಿದೆ. ಅದೇ ದಿನ ಸಚಿವ ಸಂಪುಟ ಸಭೆಯು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ (ಗ್ರೂಪ್ ಎ ಮತ್ತು ಬಿ) ಭರ್ತಿಗೆ ಕೆಪಿಎಸ್‌ಸಿ ನಡೆಸುವ ವ್ಯಕ್ತಿತ್ವ ಪರೀಕ್ಷೆ ಅರ್ಥಾತ್ ಸಂದರ್ಶನದ ಅಂಕಗಳನ್ನು 50ರಿಂದ 25ಕ್ಕೆ ಇಳಿಸಲು ತೀರ್ಮಾನ ತೆಗೆದುಕೊಂಡಿದೆ. ಒಂದೆಡೆ ಅಕ್ರಮ ತಡೆಗೆ ಪ್ರಯತ್ನ; ಮತ್ತೊಂದೆಡೆ ಅಕ್ರಮ ಮುಚ್ಚಿಹಾಕುವ ಯತ್ನ. ಎಂತಹ ವಿರೋಧಾಭಾಸ! ಇಂತಹ ಇಬ್ಬಗೆ ಧೋರಣೆಯಿಂದ ಕೆಪಿಎಸ್‌ಸಿ ಶುದ್ಧೀಕರಣ ಸಾಧ್ಯವಿಲ್ಲ. ಅದಕ್ಕೆ ಬಲವಾದ ಸಂಕಲ್ಪ ಬೇಕು. ಅದನ್ನು ಸಾಧ್ಯವಾಗಿಸಲು ಅಷ್ಟೇ ದೃಢವಾದ ಇಚ್ಛಾಶಕ್ತಿ ಬೇಕು.

ದಿನದ ಟ್ವೀಟ್

ವಿಚಾರಣೆ ತ್ವರಿತಗೊಳ್ಳಲಿ

ಏಳು ವರ್ಷಗಳ ಹಿಂದೆ ಹತ್ಯೆಗೀಡಾದ ಕಾಮ್ರೇಡ್ ಗೋವಿಂದ ಪಾನ್ಸರೆ ಅವರಿಗೆ ನಮನ. ವಿಚಾರಣೆ ಇನ್ನಷ್ಟೇ ಆರಂಭವಾಗಬೇಕಿದೆ. ನ್ಯಾಯ ವಿತರಣೆಯು ದಾಭೋಲ್ಕರ್, ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರ ವಿಷಯದಲ್ಲೂ ಬಾಕಿ ಉಳಿದಿದೆ. ವಿಳಂಬಿತ ನ್ಯಾಯವೆಂದರೆ ನ್ಯಾಯ ನಿರಾಕರಣೆ ಎಂದರ್ಥ.
#govindpansare

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಕಿಡಿನುಡಿ

ಕೇಸರಿ ಶಾಲನ್ನು ಅಮಾನವೀಯ, ದ್ವೇಷ ಹರಡುವ ಕಾರಣಗಳಿಗೆ ಬಳಸಬಾರದು. ಕೇಸರಿ 'ತ್ಯಾಗದ ಸಂಕೇತ', ಅದನ್ನು ದ್ವೇಷ ಸಾಧನೆಗೆ ಬಳಸುವುದೇ 'ಧರ್ಮದ್ರೋಹ'. ಎಳೆಯ ಮಕ್ಕಳಲ್ಲಿ ದ್ವೇಷ ತುಂಬುವವರು 'ಜೀವವಿರೋಧಿಗಳು'.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 21-2-1997

• ಭ್ರಷ್ಟಾಚಾರ ನಿರ್ಮೂಲಕ್ಕೆ ಶೀಘ್ರ ಸಮಗ್ರ ಮಸೂದೆ

ನವದೆಹಲಿ, ಫೆ. 20– ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ ಸಮಗ್ರ ಮಸೂದೆ, ಆಕಾಶವಾಣಿ ಮತ್ತು ದೂರದರ್ಶನಕ್ಕೆ ಪೂರ್ಣ ಸ್ವಾಯತ್ತತೆಗೆ ಪ್ರಸಾರ ಭಾರತಿ ಮಸೂದೆಯನ್ನು ಪ್ರಸಕ್ತ ಅಧಿವೇಶನದಲ್ಲಿಯೇ ತರುವುದಾಗಿ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರು ಪ್ರಕಟಿಸಿದರು.

ಕೃಷಿ ಕ್ಷೇತ್ರಕ್ಕೆ ನೀಡಿರುವ ಆದ್ಯತೆಯಿಂದ ದೇಶದ ಆರ್ಥಿಕ ಪ್ರಗತಿ ಊರ್ಧ್ವಮುಖ-ವಾಗಿರುವ ಆಶಯ ವ್ಯಕ್ತಪಡಿಸಿದ ಅವರು, ನೆರೆಹೊರೆ ರಾಷ್ಟ್ರಗಳ ಬಾಂಧವ್ಯವನ್ನೂ ಪ್ರಸ್ತಾಪಿಸಿ, ಪಾಕಿಸ್ತಾನದೊಂದಿಗೆ ಮಾತುಕತೆ ಪುನರಾರಂಭಿಸಲು ಭಾರತ ಉತ್ಸುಕವಾಗಿರುವುದನ್ನು ಉದಾಹರಿಸಿದರು.

ಸಂಸತ್‌ನ ಬಜೆಟ್ ಅಧಿವೇಶನದ ಜಂಟಿ ಸಭೆಯನ್ನು ಇಂದು ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಉದ್ದೇಶಿಸಿ ಮಾತನಾಡಿದ ಅವರು, ಅಪರೂಪಕ್ಕೆ ಕೆಲವು ಸದಸ್ಯರಿಂದ ತಮ್ಮ ಭಾಷಣಕ್ಕೆ ನಾಲ್ಕು ಬಾರಿ ಆಕ್ಷೇಪಗಳನ್ನು ಎದುರಿಸಬೇಕಾಯಿತು. ಸಾಮಾನ್ಯವಾಗಿ ರಾಷ್ಟ್ರಪತಿ ಅವರು ಭಾಷಣ ಮಾಡುವಾಗ ತುಟಿಪಿಟಕ್ಕೆನ್ನದೆ ಕುಳಿತುಕೊಳ್ಳುವ ಸಂಪ್ರದಾಯವಿದ್ದು ಈ ಬಾರಿ, ತ್ರಿಪುರಾದಲ್ಲಿ ಹದಗೆಟ್ಟಿರುವ ಪರಿಸ್ಥಿತಿ, ಮಹಿಳೆಯರಿಗೆ ಸಂಸತ್ ಮತ್ತು ಶಾಸನಸಭೆಗಳಲ್ಲಿ ಮೀಸಲಾತಿಯ ಪ್ರಶ್ನೆ ಬಂದಾಗ ಕಾಂಗ್ರೆಸ್, ಬಿಜೆಪಿ ಮತ್ತು ಎಸ್‌ಪಿಯ ಸದಸ್ಯರು ಮಧ್ಯೆಮಧ್ಯೆ ಸಮಜಾಯಿಷಿ ಕೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 21-2-1972

• ಅಮೆರಿಕ ಧೋರಣೆ ಬದಲಾದಲ್ಲಿ ಮಾತ್ರ ಉಪಯುಕ್ತ ಮಾತುಕತೆ

ಮುಂಬಯಿ, ಫೆ. 20– ಭಾರತ ಮತ್ತು ಅಮೆರಿಕದ ನಡುವೆ ನಡೆಯುವ ಯಾವುದೇ ಮಾತುಕತೆಗಳ ಉಪಯುಕ್ತತೆಯು ಪಾಕಿಸ್ತಾನಕ್ಕೆ ಅಮೆರಿಕನ್ ಶಸ್ತ್ರಾಸ್ತ್ರ ಸರಬರಾಜನ್ನಷ್ಟೇ ಅಲ್ಲದೆ ಭಾರತದ ಕಡೆಗೆ ಅದು ಅನುಸರಿಸುವ ಧೋರಣೆಯನ್ನೂ ಅವಲಂಬಿಸಿದೆ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

ಪತ್ರಿಕಾಗೋಷ್ಠಿಯೊಂದರಲ್ಲಿ ಪ್ರಧಾನಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟು, 'ಅಧ್ಯಕ್ಷ ನಿಕ್ಸನ್ ಅವರು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ನೆರವು ಪುನರಾರಂಭಿಸಿರುವಾಗ ಅಮೆರಿಕದೊಡನೆ ನಾವು ಉಪಯುಕ್ತ ಮಾತುಕತೆ ನಡೆಸಲು ಸಾಧ್ಯವೇ?' ಎಂದು ಕೇಳಿದರು.

ಉಡುಗೆ– ತೊಡುಗೆಯು ಸಾಮಾಜಿಕ ಧ್ರುವೀಕರಣಕ್ಕೆ ಬಳಕೆಯಾಗುವುದು ಬೇಡ

ಸಮವಸ್ತ್ರ: ಇಷ್ಟು ರಾದ್ಧಾಂತ ಬೇಕಿತ್ತೇ?

ವಿಶ್ಲೇಷಣೆ

ಪ್ರೊ. ಬಿ.ಕೆ.ಚಂದ್ರಶೇಖರ್

ಸಮವಸ್ತ್ರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರತಿಭಟನೆಗಳು ನಮ್ಮ ದೇಶದಾದ್ಯಂತ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲೂ ಚರ್ಚೆಗೆ ಗ್ರಾಸವಾಗಿವೆ. ಕಳೆದ ಆರೇಳು ವರ್ಷಗಳ ಚಾಳಿಯಂತೆ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ವಿಷಯದ ಮೂಲವನ್ನು ಗಮನಿಸುವ ಬದಲು, ಪಿತೂರಿಯನ್ನೇ ಕಂಡಿದ್ದರಿಂದ ಕೀಳು ಅಭಿರುಚಿಯ ಮಾತಿನ ಬಾಣಗಳು ಸ್ಪರ್ಧಾತ್ಮಕವಾಗಿ ಪ್ರಯೋಗವಾಗುತ್ತಿವೆ. ಸಮಸ್ಯೆಯನ್ನು ಪರಿಹರಿಸುವ ಪ್ರಥಮ ಜವಾಬ್ದಾರಿ ಸರ್ಕಾರದ್ದು. ಆದರೆ ಸರ್ಕಾರ ಕೆಲವು ವಾರಗಳ ಹಿಂದೆಯೇ ಎಚ್ಚರ ವಹಿಸಿ ಸಕ್ರಿಯವಾಗಿದ್ದರೆ ವಿವಾದವನ್ನು ಬಗೆಹರಿಸಲು ಸಾಧ್ಯವಿತ್ತು.

ಸಮವಸ್ತ್ರದ ಕಲ್ಪನೆ ಮೊತ್ತಮೊದಲಿಗೆ ಬ್ರಿಟನ್‌ನಲ್ಲಿ ಸಾಕಾರಗೊಂಡಿದ್ದು, ಇದನ್ನು ಶಿಕ್ಷಣ ಸಂಸ್ಥೆಗಳು ತಮ್ಮ ತಮ್ಮ ವೈಶಿಷ್ಟ್ಯದ ಹೆಗ್ಗುರುತಾಗಿ ಬಳಸಿಕೊಂಡವು. ಕಾಲಕ್ರಮೇಣ ಸಮವಸ್ತ್ರವು ಏಕರೂಪತೆಯ ಸಂಕೇತವಾಗಿ ಬೆಳೆದು ಭಾರಿ ಟೀಕೆಗೆ ಒಳಗಾಯಿತು. ಮಿಲಿಟರಿ ಪೋಷಾಕು ಹಾಗೂ ಶಿಸ್ತಿಗೆ ಸಮಾನ ನೆಲೆಯಲ್ಲಿರುವಂತೆ ಕಾಣಿಸಿತು. ಇತ್ತೀಚಿನ ದಶಕಗಳಲ್ಲಂತೂ ಅದನ್ನು ಸಮಾಜದ ಧ್ರುವೀಕರಣಕ್ಕೂ ಬಳಸಿಕೊಳ್ಳಲಾಗುತ್ತಿದೆ. ಜರ್ಮನಿ, ಫ್ರಾನ್ಸ್, ಅಮೆರಿಕ ಮತ್ತಿತರ ದೇಶಗಳಲ್ಲಿ ಸಮವಸ್ತ್ರಕ್ಕೆ ತೀವ್ರ ವಿರೋಧ ಕಂಡುಬಂದಿದ್ದು, ಉಡುಪು ಧರಿಸುವಲ್ಲಿ ವಿದ್ಯಾರ್ಥಿಗಳಿಗೆ ಇರಬೇಕಾದ ಸ್ವಾತಂತ್ರ್ಯವನ್ನು ಗುರುತಿಸಲಾಯಿತು.

ಭಾರತದ ಸಂದರ್ಭದಲ್ಲಿ ಕಲಿಕೆ, ಶಿಸ್ತು, ಸಮಾನತೆ ಮತ್ತು ಏಕತೆಗೇ ಒತ್ತುಕೊಡಲಾಯಿತು. ಶಿಸ್ತಿನ ಕಲ್ಪನೆ ನಮ್ಮ ಕೌಟುಂಬಿಕ ಚೌಕಟ್ಟಿನಲ್ಲಿಯೇ ಇದೆ. ಕಲಿಕೆಗೆ ಅತ್ಯವಶ್ಯಕವಾದ ಪ್ರಕ್ರಿಯೆಯೆಂದರೆ ಪ್ರಶ್ನೆ ಕೇಳುವುದು. ಆದರೆ ನಮ್ಮಲ್ಲಿ ಸಾಮಾನ್ಯವಾಗಿ ಪ್ರಶ್ನೆ ಕೇಳುವುದನ್ನು ಹಿರಿಯರಿಗೆ ತೋರುವ 'ಅವಿಧೇಯತೆ' ಎಂದೇ ಭಾವಿಸಲಾಗುತ್ತದೆ. ನಮ್ಮ ಶಾಲಾ ತರಗತಿಗಳಲ್ಲಿ ಈಗಲೂ ಇಂತಹ ಧೋರಣೆ ಇರುವುದನ್ನು ಕಾಣುತ್ತೇವೆ. 'ಪಾಠ ಹೇಳುವ' ಸಂಪ್ರದಾಯದಲ್ಲಿ ವಿದ್ಯಾರ್ಥಿಸ್ನೇಹಿ ಶಿಕ್ಷಕರಿದ್ದರೂ (ಅಂತಹವರು ಬಹಳಷ್ಟು ಮಂದಿ ಇದ್ದಾರೆ) ಮಕ್ಕಳ ಕುತೂಹಲ, ಸಂದೇಹ ಮತ್ತು ಗ್ರಹಿಕೆಯ ಕೊರತೆಯನ್ನು ಹೊರಹಾಕುವ ಒಟ್ಟಾರೆ ವಾತಾವರಣವನ್ನು ಇನ್ನೂ ರುಜುವಾತುಪಡಿಸಬೇಕಿದೆ.

ಅತಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಪ್ರಶ್ನೆ- ಸ್ಪಷ್ಟೀಕರಣಕ್ಕೆ ಅವಕಾಶ ಕೊಡುವುದು ಶಿಕ್ಷಕರಿಗೂ ಕಷ್ಟ! ಆದರೂ ಶಿಸ್ತಿನ ಹೆಸರಿನಲ್ಲಿ ಮಕ್ಕಳ ಕುತೂಹಲಕ್ಕೆ ಕಡಿವಾಣ ಹಾಕುವುದರಿಂದ ಅವರ ಬೆಳವಣಿಗೆ ಕುಂಠಿತವಾಗುತ್ತದೆ (ಈ ಸಂದರ್ಭದಲ್ಲಿ ನನಗೆ ನೆನಪಾಗುವುದು ನ್ಯಾಷನಲ್ ಹೈಸ್ಕೂಲಿನ ಒಳಗೆ ಡಾ. ಎಚ್.ನರಸಿಂಹಯ್ಯ ಅವರು ಕುಳಿತುಕೊಳ್ಳುತ್ತಿದ್ದ ಕುರ್ಚಿಯ ಹಿಂದಿನ ಗೋಡೆಯ ಮೇಲಿದ್ದ ಪ್ರಶ್ನಾರ್ಥಕ ಚಿಹ್ನೆಯ ಫಲಕ!)

ಭಾರತವು ಸಮವಸ್ತ್ರಕ್ಕೆ ಸಂಬಂಧಿಸಿದಂತೆ ಅನುಸರಿಸಿದ್ದ ಬ್ರಿಟನ್ನಿನಲ್ಲಿಯೇ ಏಕತಾಭಾವ, ಸಾಮರಸ್ಯ, ಶಿಸ್ತು, ಗುಣಮಟ್ಟದ ಶಿಕ್ಷಣ ಇವ್ಯಾವುವೂ ಸಮವಸ್ತ್ರದ ಪರಿಣಾಮ ಅಲ್ಲವೆಂಬ ಅಭಿಪ್ರಾಯವು ಬಲವಾಗಿದೆ. ಹಲವು ದೇಶಗಳಿಂದ, ವಿವಿಧ ಸಾಂಸ್ಕೃತಿಕ ಹಿನ್ನೆಲೆಯಿಂದ ಅಲ್ಲಿಗೆ ವಲಸೆ ಬಂದ ಭಾರಿ ಸಂಖ್ಯೆಯ ಜನ, ವಿವಿಧ ಭಾಷೆಗಳು, ವಿಭಿನ್ನ ಜೀವನಶೈಲಿಯ ಸಮುದಾಯಗಳಲ್ಲಿ ಮಕ್ಕಳಿಗೆ ಸಮವಸ್ತ್ರದ ಆಕರ್ಷಣೆಯಾಗಲೀ ಅದನ್ನು ಅವರ ಮೇಲೆ ಹೇರುವ ಪರಿಪಾಟವಾಗಲೀ ಇಲ್ಲದಿರುವುದು ಗಮನಾರ್ಹ. 'ಸಮವಸ್ತ್ರದವರೊಂದಿಗಿದ್ದಾಗ ಸಮಭಾವಗಳು ಉದ್ಭವಿಸಿಬಿಡುತ್ತವೆ ಎನ್ನುವುದು ಕೇವಲ ಭ್ರಮೆ' ಎಂದು ಮನೋವಿಜ್ಞಾನಿ ಎ. ಶ್ರೀಧರ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಫೆ. 12). ಸಮಾಜಶಾಸ್ತ್ರಜ್ಞರ ಅಧ್ಯಯನಗಳೂ ಇದನ್ನೇ ಪ್ರತಿಪಾದಿಸುತ್ತವೆ.

ಕಲಿಕೆಗೆ ಮುಕ್ತ ವಾತಾವರಣ ಸೃಷ್ಟಿಸಿರುವ ರವೀಂದ್ರನಾಥ ಟ್ಯಾಗೋರ್ ಅವರ 'ಶಾಂತಿನಿಕೇತನ', ಜಿಡ್ಡು ಕೃಷ್ಣಮೂರ್ತಿ ಅವರ 'ವ್ಯಾಲಿ ಸ್ಕೂಲ್'ಗಳಂತೆಯೇ ಬ್ರಿಟನ್ನಿನಲ್ಲೂ ಹಲವಾರು ಶಾಲೆಗಳು ಜನಪ್ರಿಯವಾಗಿವೆ. ಶ್ರೀಮಂತರು, ಪ್ರತಿಷ್ಠಿತರ ಮಕ್ಕಳ ಖ್ಯಾತ ಖಾಸಗಿ ಶಾಲೆಗಳಾದ 'ಈಟನ್' ಮತ್ತು 'ಹ್ಯಾರೋ' ಇತರ ಶಾಲೆಗಳಿಗೆ ಮಾದರಿಯಾಗಿ ಉಳಿದಿಲ್ಲ. ಬದಲಾಗಿ, ವ್ಯಕ್ತಿವೈಶಿಷ್ಟ್ಯಕ್ಕೆ (ಸಮಾನತೆಗಲ್ಲ) ಮತ್ತು ವಿವಿಧತೆಗೆ ಪ್ರಾಮುಖ್ಯ ನೀಡಲಾಗುತ್ತಿದೆ.

ಲಂಡನ್‌ನಲ್ಲಿರುವ ಪ್ರಸಿದ್ಧ ಹಾಗೂ ಜನಪ್ರಿಯ ಅಂತರರಾಷ್ಟ್ರೀಯ ಶಾಲೆಯೊಂದರಲ್ಲಿ ಪೋಷಾಕು ಸಂಹಿತೆಯನ್ನು (dress code) ಪ್ರಕಟಿಸಲಾಗಿದೆ. ಆದರೂ ಅದು, 'ಸಮವಸ್ತ್ರವಲ್ಲ, ಕಾರಣ- ತಮ್ಮ ಉಡುಪನ್ನು ತಾವೇ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗಿರಲಿ; ತೊಡುವ ಬಟ್ಟೆಯು ಕಲಿಕೆಯ ಮೇಲೆ ಪ್ರಭಾವ ಬೀರಲಾರದು. ಪರೀಕ್ಷೆಗಳಲ್ಲಿ ನಮ್ಮ ಶಾಲೆಯ ಫಲಿತಾಂಶ ಅತ್ಯಂತ ಮೇಲ್ಮಟ್ಟದಲ್ಲಿದೆ. ಪೋಷಕರು ನಮ್ಮನ್ನು ಗುರುತಿಸಿರುವುದು ಶಿಕ್ಷಣದಲ್ಲಿ ನಾವು ಸಾಧಿಸಿರುವ ಗುಣವಿಶೇಷಕ್ಕೇ ಹೊರತು ಸಮವಸ್ತ್ರದಿಂದಲ್ಲ' ಎಂದು ಸ್ಪಷ್ಟಪಡಿಸಿದೆ. ನಮ್ಮ ಮಕ್ಕಳು ಶಾಲಾ ಕಾಲೇಜುಗಳಲ್ಲಿ ಹಾಜರಿರುವುದು ಕೆಲವೇ ಗಂಟೆಗಳು. ಅದರ ನಾಲ್ಕರಷ್ಟು ಸಮಯವನ್ನು ಮನೆಯೂ ಒಳಗೊಂಡಂತೆ ಕಣ್ಣಿಗೆ ರಾಚುವಂಥ ಅಸಮತೆಯ ಸಮಾಜದಲ್ಲಿ ಕಳೆಯುತ್ತಾರೆ. ಅಂತಲ್ಲಿ ಈ ಮಕ್ಕಳಿಗೆ ಸಮಾನತೆ, ಸಮಾನ ಅವಕಾಶ ಎಂಬುದು ಗಗನಕುಸುಮದಂತಿವೆ.

ಧರ್ಮಾಂಧತೆಯಿಂದ ಪ್ರೇರಿತವಾದ ಧ್ರುವೀಕರಣದ ಅಧಿಕೇಂದ್ರವಾದ ದಕ್ಷಿಣ ಕನ್ನಡ ಪ್ರದೇಶದಲ್ಲಿ ಹಲವು ವರ್ಷಗಳಿಂದ ಶಿಕ್ಷಕಿಯಾಗಿರುವ ಪರಿಣೀತಾ ಶೆಟ್ಟಿ ಅವರು ಒಂದು ವಾರದ ಹಿಂದೆ ದಾಖಲಿಸಿರುವ ಅನುಭವ ಇಂದಿನ ಸಂದಿಗ್ಧದ ಮೇಲೆ ಬೆಳಕು ಚೆಲ್ಲುತ್ತದೆ. 'ಬಾಹ್ಯ ನೋಟಕ್ಕೆ ಕಾಣುವ ಬದಲಾವಣೆಗಳು, ವಿವಿಧ ಧಾರ್ಮಿಕ ಹಿನ್ನೆಲೆ, ನಂಬಿಕೆಗಳು, ವ್ಯವಹಾರ ಪದ್ಧತಿ, ಆಲೋಚನಾ ಕ್ರಮಗಳು ಹಾಗೂ ಮಾತಿನ ಶೈಲಿ ಯಾವುವೂ ತರಗತಿಯಲ್ಲಿ ಒಳಗೊಳ್ಳುವಿಕೆಗೆ ಅಡ್ಡಬಂದಿಲ್ಲ. ತರಗತಿಯೊಳಗಿನ ವಿವಿಧತೆ ಹೊರಗಿನ ವಾಸ್ತವದ ಒಂದು ತುಣುಕು ಇದ್ದಂತೆ' ಎಂದಿದ್ದಾರೆ.

ಮುಂದೆ ಆಸ್ಪತ್ರೆ, ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುವ ಉದ್ದೇಶವಿರುವ ವಿದ್ಯಾರ್ಥಿಗಳು ಪ್ರೌಢಶಾಲೆ ಮತ್ತು ಪಿಯು ಹಂತದಲ್ಲಿ ಸಮವಸ್ತ್ರ ಧರಿಸುವುದು ಸೂಕ್ತ. ಶಿಕ್ಷಣ ಸಂಸ್ಥೆಗಳ ಶಿಕ್ಷಕೇತರ ಉದ್ಯೋಗಿಗಳೂ ಸಮವಸ್ತ್ರ ಧರಿಸುವುದು ಅವರನ್ನು ಗುರುತಿಸುವ ದೃಷ್ಟಿಯಿಂದ ಅನುಕೂಲಕರ. ಹಾಗೇ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳುವ ಕ್ರೀಡಾಸ್ಪರ್ಧೆಗಳಲ್ಲಿ ವಿವಿಧ ತಂಡಗಳು ಸಮವಸ್ತ್ರ ತೊಡುವುದು ಅನಿವಾರ್ಯ. ಸಮವಸ್ತ್ರದ ವಿಷಯವು ಕಾನೂನು ಸುವ್ಯವಸ್ಥೆಯ ಜೊತೆಗೆ ರಾಜಕೀಯ, ಧಾರ್ಮಿಕ ಸಮಸ್ಯೆಯಾಗಿ ಪರಿವರ್ತನೆಗೊಂಡಿದೆ. ಇದರಿಂದ ಮೂಡಿರುವ ದ್ವೇಷ, ಸೇಡು ತೀರಿಸಿಕೊಳ್ಳುವ ಹಟಮಾರಿ ಧೋರಣೆ ಇನ್ನೂ ಕೆಲವು ಕಾಲ ನಮ್ಮ ಜನಸಮುದಾಯಗಳ ಸಂಬಂಧಗಳಲ್ಲಿ ಉಳಿಯಲಿವೆ ಎನ್ನುವುದು ಆತಂಕಕಾರಿ ವಿಷಯ.

'ಭಾರತದ ಆಡಳಿತವು ಸಂವಿಧಾನಕ್ಕೆ ಅನುಗುಣವಾಗಿ ನಡೆಯುತ್ತಿದೆ. ಅದು ಇಸ್ಲಾಂ ಧರ್ಮದ ಪ್ರಕಾರ ನಡೆಯಲು ಸಾಧ್ಯವಿಲ್ಲ... ಸಮವಸ್ತ್ರವನ್ನು ಕಡ್ಡಾಯಗೊಳಿಸಬೇಕು' ಎಂಬ ಪ್ರಚೋದನಕಾರಿ ಮಾತನ್ನು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇತ್ತೀಚೆಗೆ ಹೇಳಿದ್ದಾರೆ. ಸಮವಸ್ತ್ರದ ಸಂಗತಿಯನ್ನು ದೊಡ್ಡ ಸಮಸ್ಯೆಯಾಗಿ ಬಿಂಬಿಸುವ ಅಗತ್ಯವಾದರೂ ಏನಿತ್ತು? ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇತ್ತೀಚೆಗೆ ಪತ್ರಕರ್ತರೊಂದಿಗೆ ಮಾತನಾಡುತ್ತಾ ಅತ್ಯಂತ ಸಮಯೋಚಿತವಾದ ಬುದ್ಧಿವಾದ ಹೇಳಿದ್ದಾರೆ: 'ಹಿಜಾಬ್ ಕುರಿತ ವಿವಾದ ಒಂದು ಸಮಸ್ಯೆಯೇ ಅಲ್ಲ. ನನ್ನನ್ನು ಕಾಣಲು ಕೆಲವರು ಹಣೆಗೆ ಗಂಧ ಹಚ್ಚಿಕೊಂಡು ಬರುತ್ತಾರೆ, ಇನ್ನು ಕೆಲವರು ತಮ್ಮ ಧಾರ್ಮಿಕ ಚಿಹ್ನೆಗಳನ್ನು ಧರಿಸಿ ಬರುತ್ತಾರೆ. ನಾವು ಎಲ್ಲಾ ಧರ್ಮದ ಜನರ ಧಾರ್ಮಿಕ ಆಚರಣೆಗಳನ್ನು ಗೌರವಿಸುತ್ತಲೇ ಅವರೊಡನೆ ಕೆಲಸ ಮಾಡುತ್ತೇವೆ. ಅವರ ಧರ್ಮಾಚರಣೆ ಮತ್ತು ಸಂಸ್ಕೃತಿಗಳಲ್ಲಿ ಮೂಗು ತೂರಿಸುವುದಿಲ್ಲ. ಇಂಥ ವಿಷಯಗಳನ್ನು ಪರಿಗಣಿಸದಿರುವುದೇ ಸರಿ'.

ಸರ್ಕಾರವು ಶಿಕ್ಷಣ ಕಾಯ್ದೆಯ ಅಡಿಯಲ್ಲಿ ಸುತ್ತೋಲೆ ಹೊರಡಿಸಿ, ಸಮವಸ್ತ್ರವು ವಿದ್ಯಾರ್ಥಿಗಳಿಗೆ ಇತರ ಲಾಭಗಳನ್ನು ತಂದುಕೊಡುವುದರ ಜೊತೆಗೆ 'ಒಂದು ಕುಟುಂಬ'ದಂತೆ ನಡೆದುಕೊಳ್ಳುವ ಮನೋಧೋರಣೆಯನ್ನು ಬೆಳೆಸುತ್ತದೆ ಎಂದು ಹೇಳಿಕೊಂಡಿದೆ. ಇದು, ಪ್ರಾಮಾಣಿಕ ನಂಬಿಕೆಯಾಗಲು ಸಾಧ್ಯವೇ?

ಪ್ರಾಥಮಿಕ ಹಂತ ದಾಟುವ ವೇಳೆಗೆ, 'ಒಂದು ಕುಟುಂಬ'ದಂತೆ ಬೆಳೆಯಬೇಕಾದ ಮಕ್ಕಳು ಓದುವ ಪಠ್ಯದಲ್ಲಿ– ವಿಶೇಷವಾಗಿ ಚರಿತ್ರೆ, ಸಮಾಜ ವಿಜ್ಞಾನದಲ್ಲಿ– 'ಅಲ್ಪಸಂಖ್ಯಾತ ಸಾಮಂತರ' ವಿರುದ್ಧದ ಮನೋಭಾವಕ್ಕೆ ಪೂರಕವಾದ ಪಠ್ಯಗಳೇ ಇರುವಾಗ, ಮಕ್ಕಳು ಇಂತಹ ವೈರುಧ್ಯಗಳನ್ನು ಗ್ರಹಿಸುವುದಾದರೂ ಹೇಗೆ?

ಚುರುಮುರಿ

ಸೋತವನೇ ಶ್ರೀಸಾಮಾನ್ಯ!

• ಸುಮಂಗಲಾ

'ಒಂದ್ ಹೊಸ ಆಟ ಆಡೂಣು. ನಮ್ಮ ದೇಶದ ಇತ್ತೀಚಿನ ಪ್ರಚಂಡ ಸುದ್ದಿ ನಾ ಒಂದ್ ಹೇಳ್ತೀನಿ, ಅದನ್ನು ಮೀರಿಸುವಂಥದು ನೀ ಒಂದ್ ಹೇಳಬಕು, ಇಸ್ಪೀಟ್ ಎಲೆ ಹಾಕಿದಂಗೆ. ರೆಡಿನಾ' ಬೆಕ್ಕಣ್ಣ ಆಟದ ಹುರುಪಿನಲ್ಲಿತ್ತು.

'ಎಲ್ಲಾ ಕಡಿಗಿ ಬುಲೆಟ್ ರೈಲು ಬಿಟ್ಟಿದ್ದಾಯ್ತು. ಈಗ ನಮ್ಮ ಗಡ್ಕರಿ ಮಾಮಾರು ಬಸ್ ಹಾರಿಸತಾರಂತ. ದಿಲ್ಲಿಯಿಂದ ಪ್ರಯಾಗ್ ರಾಜ್ ತನಕ ಹಾರೋ ಬಸ್ ಶುರು ಮಾಡ್ತಾರಂತ. ಎಂಥಾ ಪ್ರಚಂಡ ಸುದ್ದಿ, ಹೌದಿಲ್ಲೋ'.

'ಕೋವಿಡ್ ಬಂದಾಗಿನಿಂದ ಹಣಕಾಸು ಸ್ಥಿತಿ ಮಕಾಡೆ ಮಲಗೈತಿ ಅನ್ನೂದೆಲ್ಲ ಸುಳ್ಳು. ನಮ್ಮ ದೇಶದಾಗೆ ಜನಸಾಮಾನ್ಯರ ಸಂತೋಷದ ಸೂಚ್ಯಂಕ ಇಳಿದರೇನಾತು, ಕೋಟ್ಯಧೀಶರ ಸಂಖ್ಯೆ ಕಳೆದ ವರ್ಷಕ್ಕಿಂತ ಹನ್ನೊಂದು ಪರ್ಸೆಂಟ್ ಹೆಚ್ಚಾಗೈತಂತ ಹರೂನ್ ಇಂಡಿಯಾ ಸಮೀಕ್ಷೆ ಹೇಳೈತಿ. ಎಂಥಾ ಅದ್ಭುತ ಪ್ರಗತಿ...' ನಾ ಹೆಮ್ಮೆಯಿಂದ ಹೇಳಿದೆ.

'ಅದಕ್ಕಿಂತ ಅದ್ಭುತ ಪ್ರಗತಿ ಯೋಗಿ ಮಾಮಾನ ರಾಜ್ಯದಾಗೆ ಆಗೈತಿ. ಸ್ವಾತಂತ್ರ್ಯ ಬಂದಾಗಿನಿಂದ ಕಳೆದ ಎಪ್ಪತ್ತು ವರ್ಷದಾಗೆ ಯುಪಿವಳಗೆ ಎಷ್ಟು ಹೈವೇ ಮಾಡಿದ್ರೋ ಅದ್ರ ಮೂರು ಪಟ್ಟು ಯೋಗಿ ಮಾಮಾ ಬಂದ ಮ್ಯಾಗೆ ಐದೇ ವರ್ಷದಾಗೆ ಮಾಡ್ಯಾನ ಅಂತ ನಮ್ಮ ತೇಜಸ್ವಿಯಣ್ಣ ಹೇಳ್ಯಾನೆ' ಎಂದು ಮತ್ತೊಂದು ಇಸ್ಪೀಟಿನ ಎಲೆ ಒಗೆಯಿತು.

'ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಗೊತ್ತೈತಿಲ್ಲೋ... ದಿನಕ್ಕೆ ಸುಮಾರು 64,000 ಕೋಟಿ ರೂಪಾಯಿ ವ್ಯವಹಾರ ನಡೆಸತ್ತೈತೆ. ಹಿಂಥಾ ದೊಡ್ಡ ಸಂಸ್ಥೇನ ಆತ್ಮಾವತಾರದಲ್ಲಿರೋ ಹಿಮಾಲಯದ ನಿಗೂಢ ಯೋಗಿಯೊಬ್ಬರ ನಿರ್ದೇಶನದಂತೆ ನಡೆಸ್ತಿದ್ದೆ ಅಂತ ಮಾಜಿ ಸಿಇಒ ಚಿತ್ರಕ್ಕ ಹೇಳ್ಯಾಳೆ. ನಿಗೂಢ ಯೋಗಿಯ ಇ-ಮೇಲ್ ಸಿಕ್ಕಿ ಮೂರು ವರ್ಷ ಆಗಿದ್ರೂ, ಯಾರು ಅಂತ ಪತ್ತೆ ಮಾಡಾಕೆ ಸೆಬಿಗೆ ಇನ್ನಾತನಾ ಆಗಿಲ್ಲಂತ' ಇಸ್ಪೀಟಿನ ಟ್ರಂಪ್ ಕಾರ್ಡ್ ಎಸೆದು 'ನಾನೇ ಗೆದ್ದೆ' ಎಂದೆ.

'ಗೆದ್ದಿದ್ದು ಆ ಹಿಮಾಲಯದ ಯೋಗಿ... ಯಾವಾಗ್ಲೂ, ಎಲ್ಲಾದ್ರಲ್ಲೂ ಸೋತುಸುಣ್ಣ ಆಗೋರು ನೀವು ಶ್ರೀಸಾಮಾನ್ಯರು' ಬೆಕ್ಕಣ್ಣ ಮುಸಿಮುಸಿ ನಕ್ಕಿತು!

ಸಂಗತ

ಶಾಲೆ, ಓದು ಮತ್ತು ಜೀವನಮೌಲ್ಯ

ಬದುಕಿನ ಪಾಠವನ್ನು ಕಲಿಸದ ಕೊರತೆಯಿಂದಾಗಿ, ಅಕ್ಷರವಂತರು ಕೂಡ ಕಲಿತ ವಿದ್ಯೆಯ ಸಾರವನ್ನು ಮರೆತು ತಪ್ಪೆಸಗುವ ಪ್ರಸಂಗಗಳು ಹೆಚ್ಚಾಗುತ್ತಿವೆ

• ಪ. ರಾಮಕೃಷ್ಣ ಶಾಸ್ತ್ರಿ

ವರಕವಿ ಬೇಂದ್ರೆ ಅವರು ಒಂದೆಡೆ, 'ಸಾಲಿ ಮನುಷ್ಯಗ ಅಕ್ಷರಜ್ಞಾನ ಕೊಡ್ತದ, ಅನುಭವ ಬಾಳಿನ ಪಾಠ ಕಲಿಸ್ತದ' ಎಂದು ಹೇಳಿದ್ದಾರೆ. ಇತ್ತೀಚಿನ ಘಟನೆಯೊಂದನ್ನು ಕಂಡಾಗ ಇದು ನಿಜ ಅನಿಸಿತು.

ಸರ್ಕಾರಿ ಬಸ್ಸೊಂದು ಮೊದಲೇ ಜನರಿಂದ ತುಂಬಿ ತುಳುಕುತ್ತಿತ್ತು. ಅದು ಒಂದು ಊರಲ್ಲಿ ಹೋಗಿ ನಿಂತ ಕೂಡಲೇ ಶಾಲೆಗೆ ಹೋಗುವ ಮಕ್ಕಳು, ನಾ ಮುಂದು ತಾ ಮುಂದು ಎಂಬಂತೆ ಶರವೇಗದಿಂದ ಒಳಗೆ ನುಗ್ಗಿದರು. ಆಗ ಒಬ್ಬ ವಿದ್ಯಾರ್ಥಿಯ ಬೆನ್ನಿಗೆ ಕಟ್ಟಿಕೊಂಡಿದ್ದ ಭಾರವಾದ ಚೀಲ ವಯೋವೃದ್ಧೆಯೊಬ್ಬರ ಮೂಗಿಗೆ ಅಪ್ಪಳಿಸಿ ಮೂಗಿನಿಂದ ರಕ್ತ ಸುರಿದು ಪ್ರಜ್ಞಾಹೀನರಾದರು. ವಿದ್ಯಾರ್ಥಿ ಉದ್ದೇಶಪೂರ್ವಕವಾಗಿ ಅದನ್ನು ಮಾಡಿರಲಿಲ್ಲ. ಆದರೆ ಆತ ಇದರ ಕಡೆಗೆ ಗಮನವನ್ನೇ ಹರಿಸದೆ ಮುಂದೆ ಹೋಗಿಬಿಟ್ಟ.

ಹೀಗೆ ಬಸ್ಸಿಗೆ ನುಗ್ಗಿ ತಮ್ಮ ಆಸನ ಹಿಡಿಯುವುದನ್ನೇ ಜೀವನದ ಪರಮ ಗುರಿಯಾಗಿಸಿಕೊಂಡ ವಿದ್ಯಾರ್ಥಿಗಳ ಮೂಟೆಯಂತಹ ಚೀಲಗಳ ಹಿಂಸೆ ಒಂದೆಡೆಯಾದರೆ, ಅವರು ಕುಳಿತವರ ಕಾಲು ತುಳಿಯುವುದು, ಚೀಲಗಳಿಂದ ಚುಚ್ಚುವುದು ಬೇರೆಯವರಿಗೆ ತೊಂದರೆಯಾಗುತ್ತದೆಂದು ಭಾವಿಸಿದ ಹಾಗೆಯೇ ಕಾಣುವುದಿಲ್ಲ. ಸಾಮಾನ್ಯವಾಗಿ ಬಸ್ಸುಗಳಲ್ಲಿ ಒಂದು ಆಸನ ಹಿರಿಯ ನಾಗರಿಕರಿಗೇ ಮೀಸಲಾಗಿರುತ್ತದೆ. ಅಂಗವಿಕಲರು, ಮಹಿಳೆಯರು ಎಂದು ಬೇರೆ ಬೇರೆ ಆಸನಗಳ ಮೇಲ್ಭಾಗದ ಫಲಕಗಳಲ್ಲಿ ಬರೆದಿಡಲಾಗಿದೆ. ತನ್ನ ಆಸನವನ್ನು ಅಲ್ಲಿ ಹಿಡಿದಿಟ್ಟುಕೊಳ್ಳುವ ಒಬ್ಬ ವಿದ್ಯಾರ್ಥಿ ಕೂಡ ಅರ್ಹರು ಬಂದಾಗ ಅದನ್ನು ಅವರಿಗೆ ಬಿಟ್ಟುಕೊಡುವ ಕರ್ತವ್ಯಪ್ರಜ್ಞೆಯನ್ನು ಪ್ರದರ್ಶಿಸುವುದಿಲ್ಲ.

ಬಸ್ಸಿನ ನಿರ್ವಾಹಕರು ಅವಿದ್ಯಾವಂತರಲ್ಲ. ತಾವು ಉಣ್ಣುವ ಅನ್ನ ಬಸ್ಸಿನಲ್ಲಿ ಪ್ರಯಾಣಿಸುವ ಜನರಿಂದ ಬರುತ್ತದೆ ಎಂಬ ಸತ್ಯ ಅವರಿಗೆ ಗೊತ್ತಿರಬೇಕು. ಅವರ ಮುಂದೆಯೇ ಸರ್ಕಾರಿ ಬಸ್ಸುಗಳಲ್ಲಿ, 'ಹಿರಿಯರನ್ನು ಗೌರವಿಸಿದರೆ ದೇವರನ್ನು ಗೌರವಿಸಿದಂತೆ' ಎಂಬ ವಾಕ್ಯ ಬರೆದಿರುತ್ತದೆ. ಆದರೂ ಎಷ್ಟೋ ಸಂದರ್ಭಗಳಲ್ಲಿ ಅವರು ವಯಸ್ಸನ್ನೂ ನೋಡದೆ ಹಿರಿಯರಿಗೆ ದಬಾಯಿಸಿಬಿಡುತ್ತಾರೆ.

ಶಾಲೆಗಳು ಅಕ್ಷರವನ್ನು ಕಲಿಸುವ ಕಮ್ಮಾರಶಾಲೆಗಳಾಗುತ್ತವೆಯೇ ವಿನಾ ಬದುಕಿನ ಕತ್ತಲು ಕಳೆಯುವ ದಾರಿದೀಪಗಳಾಗುವುದಿಲ್ಲ ಎಂದು ಹಲವು ಸಲ ಭಾವಿಸಬೇಕಾಗುತ್ತದೆ. ಕನಿಷ್ಠ ನಾಗರಿಕ ಪ್ರಜ್ಞೆಯಾದರೂ ಓದಿನಿಂದ ಪ್ರಾಪ್ತವಾಗಿದ್ದರೆ, 'ಇಲ್ಲಿ ಕಸ ಹಾಕಬಾರದು' ಎಂಬ ಫಲಕದ ಕೆಳಗೆ ವಿದ್ಯಾವಂತರು ಕೂಡ ಪ್ಲಾಸ್ಟಿಕ್ ತ್ಯಾಜ್ಯದ ರಾಶಿ ಹಾಕುತ್ತಿರಲಿಲ್ಲ. 'ದೇಶಕ್ಕಾಗಿ ಉಳಿಸಿ, ಮಿತವ್ಯಯವನ್ನು ಬೆಳೆಸಿ' ಎಂದು ಫಲಕ ಹಾಕಿರುವ ಸರ್ಕಾರಿ ಕಚೇರಿಯಲ್ಲಿ ಮಧ್ಯಾಹ್ನ ಎಲ್ಲ ನೌಕರರೂ ಭೋಜನಕ್ಕಾಗಿ ಹೊರಗೆ ಹೋಗುತ್ತಾರೆ. ಆಗ ಖಾಲಿಯಾಗಿರುವ ಕಚೇರಿಯ ಹತ್ತಾರು ಕೋಣೆಗಳ ಒಳಗೆ ತಿರುಗುವ ಫ್ಯಾನುಗಳನ್ನು ನಿಲ್ಲಿಸಿ ಹೋದರೆ ಕನಿಷ್ಠ ಅಲ್ಲಿರುವ ಮಿತವ್ಯಯವನ್ನು ಸಾರುವ ಫಲಕವನ್ನಾದರೂ ಗೌರವಿಸಿದಂತೆ ಆಗುತ್ತದೆಂಬ ಭಾವನೆ ಅವರಲ್ಲಿ ಇರುವುದಿಲ್ಲ.

ಸರ್ಕಾರದ ಕೆಲಸ ದೇವರೆನ್ನುವ ಉದ್ಯೋಗಿಗಳು ಸಾರ್ವಜನಿಕರ ಕಡೆಗೆ ತಲೆಯೆತ್ತಿಯೂ ನೋಡುವುದಿಲ್ಲ. ಮಧ್ಯವರ್ತಿಗಳ ಮೂಲಕ ಅವರು ಹೇಳುವಷ್ಟು ಹಣ ಕೊಟ್ಟ ಮೇಲೆ ಕಡತ ಸುಖಾಂತ್ಯವಾಗುತ್ತದೆ.

ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ನಿರ್ದಯೆಯಿಂದ ವರ್ತಿಸಿದ ಫಲವಾಗಿ ರೋಗಿಯೊಬ್ಬನ ಪ್ರಾಣ ಹೋಗುತ್ತದೆ. ರಕ್ಷಣೆ ನೀಡಬೇಕಾದ ಪೊಲೀಸರೇ ಹೊಲ ಮೇಯುತ್ತಾರೆ. ಶಿಕ್ಷಕನೇ ವಿದ್ಯಾರ್ಥಿನಿಯರನ್ನು ಕಾಡುತ್ತಾನೆ. ಕಾಯ್ದೆಯನ್ನು ರೂಪಿಸುವ ಮಂತ್ರಿಮಾಗಧರ ಮಗನೇ ಹಿಟ್ ಆ್ಯಂಡ್ ರನ್ ಮಾಡಿ ಅಮಾಯಕರ ಜೀವಹರಣಕ್ಕೆ ಕಾರಣನಾಗುತ್ತಾನೆ... ಹೀಗೆ ಎಷ್ಟೋ ವೇಳೆ ಕಲಿತವರೇ ಎಸಗುವ ಅಪಚಾರಗಳನ್ನು ಹೇಳುವುದಾದರೆ ಮುಗಿಯುವುದಿಲ್ಲ.

ಎಲ್ಲವನ್ನೂ ಗಮನಿಸಿದರೆ, ಕೇವಲ ಶಾಲೆಯ ಓದುವಿಕೆಯು ಬದುಕಿನ ನಡೆಯನ್ನು ಹೇಳಿಕೊಡುವುದಿಲ್ಲ, ನಡತೆಯನ್ನು ರೂಪಿಸುವುದಿಲ್ಲ ಎಂಬ ಕಹಿ ಸತ್ಯದ ಅರಿವಾಗುತ್ತದೆ. 'ಶಾಲೆಯಲ್ಲಿ ಕಲಿತದ್ದು ಮನೆತನಕ ಬರಲಿಲ್ಲ, ಬೀದಿಯಲ್ಲಿ ದೊರಕಿದ್ದು ಕೊನೆತನಕ ಬಿಡಲಿಲ್ಲ' ಎಂಬ ಹಾಗೆ ಕೇವಲ ಓದು, ಬರಹಗಳಷ್ಟೇ ಮಾನವೀಯ ಕರ್ತವ್ಯಪ್ರಜ್ಞೆಯ ಪಾಠ ಕಲಿಸುವುದಿಲ್ಲ ಎನಿಸುತ್ತದೆ.

ವಿದ್ಯಾರ್ಥಿ ದೆಸೆಯಿಂದಲೇ ಬದುಕಿನ ಅಮೂಲ್ಯ ಪಾಠವನ್ನು ಮನದಟ್ಟು ಮಾಡುವ ಪ್ರಯತ್ನ ಬೇಕಾಗಿದೆ. ಅಕ್ಷರವಂತರು ಕೂಡ ಕಲಿತ ವಿದ್ಯೆಯ ಸಾರವನ್ನು ಮರೆತು ತಪ್ಪೆಸಗುವ ಪ್ರಸಂಗಗಳೇ ಹೆಚ್ಚುತ್ತಿರುವುದನ್ನು ಕಾಣುತ್ತಿದ್ದೇವೆ. ಎಲ್ಲ ಕಡೆಯೂ ವ್ಯತಿರಿಕ್ತ ಅನುಭವವೇ ಆಗುವ ಕಾರಣ ಎಲ್ಲೋ ಒಂದೆಡೆ ಜೀವನಮೌಲ್ಯವನ್ನು ಪ್ರತಿಪಾದಿಸುವ ವ್ಯಕ್ತಿ ಗೋಚರಿಸಿದಾಗ, 'ಓಹ್, ಓಯಸಿಸ್!' ಎಂಬ ಉದ್ಗಾರ ಹೊರಡುತ್ತದೆ.

ಬದುಕಿನ ಪಾಠವನ್ನು ಕಲಿಸದ ಕೊರತೆಯಿಂದಾಗಿ ಕೌಟುಂಬಿಕ ಸೌಖ್ಯವೂ ಮಾಯವಾಗುತ್ತಿದೆ. ಮಕ್ಕಳಿಂದ ದೂರವಾಗಿ ವೃದ್ಧಾಶ್ರಮಗಳಲ್ಲಿ ಕೊನೆಯ ದಿನಗಳನ್ನು ಎಣಿಸುತ್ತಿರುವ ಹಿರಿಯರ ಕಂಬನಿಯು ಎದೆಹಾಲು ಕುಡಿದ ಮಕ್ಕಳ ಕರ್ತವ್ಯಪ್ರಜ್ಞೆಯನ್ನು ಜಾಗೃತಗೊಳಿಸುವುದಿಲ್ಲ. ಪತಿ, ಪತ್ನಿ ಸಾಮರಸ್ಯವೆಂಬುದು ಮರೀಚಿಕೆಯಾಗುತ್ತಿದೆ. ಅಮೆರಿಕದಲ್ಲಿ ಬೆಳಿಗ್ಗೆ ಮದುವೆ, ಸಂಜೆ ವಿಚ್ಛೇದನ ಎಂಬ ಲೇಖನ ಅರವತ್ತು ವರ್ಷಗಳ ಹಿಂದೆ ನಮ್ಮಲ್ಲಿನ ಮಾಸಿಕವೊಂದರಲ್ಲಿ ಬಂದಿತ್ತು. ಓದಿ ನಕ್ಕವರಿದ್ದರು. ಆದರೆ ಈಗ ಭಾರತವೂ ಅಲ್ಲಿಗೆ ತಲುಪಿದೆ.

ನಾವು ಕಲಿಯುವ ಓದು ಮನುಷ್ಯತ್ವದ ಪ್ರಜ್ಞೆಯನ್ನು ಜಾಗೃತಗೊಳಿಸದಿದ್ದಲ್ಲಿ ಓದಿದ್ದು ವ್ಯರ್ಥ ಎಂದೇ ಪರಿಗಣಿಸಬೇಕಾಗುತ್ತದೆ.

ವಾಚಕರ ವಾಣಿ

ವಿವಾದಾತ್ಮಕ ಹೇಳಿಕೆ: ಶಾಸಕರ ಸಮಿತಿ ರಚಿಸಿ

ರಾಜಕಾರಣಿಗಳ ವಿವಾದಾತ್ಮಕ ಹೇಳಿಕೆಗಳು ನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕವಾಗಿ ಅನಗತ್ಯ ಘರ್ಷಣೆಗಳಿಗೆ ಕಾರಣವಾಗುತ್ತಿವೆ. ಅವರ ಇಂಥ ನಡೆಯು ಜನರ ನಿತ್ಯದ ಬದುಕಿನ ಸಮಸ್ಯೆಗಳ ಪರಿಹಾರಕ್ಕಾಗಲಿ ಅಥವಾ ರಾಜ್ಯದ ಅಭಿವೃದ್ಧಿಗಾಗಲಿ ಉಪಯೋಗಕ್ಕೆ ಬರುವುದಿಲ್ಲ. ರಾಜಕಾರಣಿಗಳು ಸದನದ ಹೊರಗೆ ನೀಡುವ ವೈಯಕ್ತಿಕ ಹೇಳಿಕೆಗಳಿಂದ ಉದ್ಭವವಾಗುವ ವಿವಾದಗಳು ಶಾಸನಸಭೆಗಳಲ್ಲಿ ಚರ್ಚೆಯಾಗಬೇಕೆ? ಬೇಕು ಎನ್ನುವುದಾದರೆ ಇದಕ್ಕೊಂದು ಶಾಸಕರ ಸಮಿತಿ ರಚಿಸಿ, ಅದರ ಮೂಲಕವೇ ಇಂಥ ವಿವಾದಗಳನ್ನು ಪರಿಹರಿಸಿಕೊಳ್ಳುವಂತೆ ಆಗಬೇಕು. ಆಗ ಆರೋಪ, ಪ್ರತ್ಯಾರೋಪ, ಸಮರ್ಥನೆ, ಕ್ಷಮೆಯಾಚನೆಯಂಥ ಅನಗತ್ಯವಾದ ನಾಟಕೀಯ ಬೆಳವಣಿಗೆಗಳು ಮಾಧ್ಯಮಗಳ ಮುಖಾಂತರ ಯುವಜನರನ್ನು ತಲುಪುವುದು, ಅದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುವುದು ತಪ್ಪುತ್ತದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಮಾಸ್ಕ್ ದಂಡ: ಇರಲಿ ಮಾನವೀಯ ಸಂವೇದನೆ

ಬೆಂಗಳೂರಿನ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣದಲ್ಲಿ ಹೊರಜಿಲ್ಲೆಗಳಿಂದ ಬರುವ ಬಸ್‌ಗಳು ಬಂದು ನಿಲ್ಲುವ ಸ್ಥಳಗಳಲ್ಲಿ ಬಿಬಿಎಂಪಿ ಮಾರ್ಷಲ್‌ಗಳು ನಿಂತು, ಮಾಸ್ಕ್‌ರಹಿತರಿಗೆ ದಂಡ ಹಾಕುತ್ತಾರೆ. ಈ ಪ್ರಯಾಣಿಕರು ಬಸ್‌ನಿಂದ ಇಳಿದು ನಾಲ್ಕು ಹೆಜ್ಜೆ ಮುಂದೆ ಇಡುವಷ್ಟರಲ್ಲಿ ಮಾರ್ಷಲ್‌ಗಳು ಬಂದು ಹಿಡಿಯುತ್ತಾರೆ. ಎಷ್ಟೋ ಸಲ ಪ್ರಯಾಣಿಕರ ಕಿಸೆಯಲ್ಲಿ ಮಾಸ್ಕ್ ಇರುತ್ತದೆ. ರಾತ್ರಿಯಿಡೀ ನಿದ್ದೆಯಲ್ಲಿ ಬಸ್‌ನಲ್ಲಿ ಪ್ರಯಾಣಿಸಿ, ಬೆಳಿಗ್ಗೆ ಇಳಿಯುವಾಗ ತರಾತುರಿಯಲ್ಲಿ ಮಾಸ್ಕ್ ಹಾಕಲು ಮರೆಯುವುದು ಸಹಜ. ಅದರಲ್ಲೂ ಇವರು ಹೊರ ಜಿಲ್ಲೆಯವರೆಂದು ಗೊತ್ತಾದರೆ, ಮಾರ್ಷಲ್‌ಗಳ ಮಾತಿನ ವರಸೆಯೇ ಬದಲಾಗುತ್ತದೆ. ಉತ್ತರ ಕರ್ನಾಟಕದಿಂದ ಕೂಲಿಗೆಂದು ಬರುವ ಎಷ್ಟೋ ಮಂದಿ ಈ ರೀತಿ ಮಾಸ್ಕ್ ಧರಿಸದ ಕಾರಣಕ್ಕೆ ಅಸಹಾಯಕರಾಗಿ ದಂಡ ತೆರುತ್ತಿರುವುದನ್ನು ನೋಡಿದ್ದೇನೆ.

ಮಾಸ್ಕ್ ಹಾಕುವುದರ ಬಗ್ಗೆ ಬೆಂಗಳೂರಿನಲ್ಲಿ ಇರುವಷ್ಟು ಬಿಗಿ ಕ್ರಮ ಬೇರೆ ಜಿಲ್ಲೆಗಳಲ್ಲಿ ಇರುವುದಿಲ್ಲ. ಹೀಗಾಗಿ, ಸಾರ್ವಜನಿಕರು ಅದೇ ಭಾವನೆಯಲ್ಲಿ ಬೆಂಗಳೂರಿಗೆ ಬಂದಿರುವ ಸಾಧ್ಯತೆ ಇರುತ್ತದೆ. ಮಾಸ್ಕ್ ಇದ್ದೂ ಹಾಕಲು ಮರೆತವರಿಗೆ ಹೀಗೆ ದಂಡ ಹಾಕುವ ಬದಲು, ಹಾಕಿಕೊಳ್ಳುವಂತೆ ಸೂಚನೆ ನೀಡಿ ಕಳುಹಿಸಬಾರದೇಕೆ? ಕೋವಿಡ್ ಪ್ರಕರಣಗಳು ಇಳಿಮುಖವಾಗಿರುವುದರಿಂದ ಬಹುತೇಕ ನಿಯಮಗಳನ್ನು ಸರ್ಕಾರ ಕೈಬಿಡುತ್ತಾ ಬಂದಿದೆ. ಮಾಸ್ಕ್ ಧರಿಸುವುದು ಉತ್ತಮವಾದರೂ, ಧರಿಸದವರಿಗೆ ಹೀಗೆ ನಿರ್ದಾಕ್ಷಿಣ್ಯವಾಗಿ ದಂಡ ವಿಧಿಸುವ ಬದಲು ಅದನ್ನು ಧರಿಸಲು ಪ್ರೇರೇಪಿಸುವುದು ಉತ್ತಮವಲ್ಲವೇ? ಅಥವಾ ಹಣ ಪಡೆದು ಮಾರ್ಷಲ್‌ಗಳೇ ಅವರಿಗೆ ಮಾಸ್ಕ್ ನೀಡಬಹುದಲ್ಲವೇ?

ಅಬ್ದುಲ್ ಖಾದರ್, ಚಿಕ್ಕಮಗಳೂರು

ಕಸಾಪ: ಕನ್ನಡಿಗರ ಆಸ್ತಿಯಾಗಲಿ

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಹಾಗೂ ಕನ್ನಡಿಗರ ಹೆಮ್ಮೆ. ಅದು ಸ್ಥಾಪನೆಗೊಂಡಾಗ ಇದ್ದ ಕೆಲವು ಉಪನಿಯಮಗಳಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಗಳು ಮನೆಯ ಅಡಿಗಲ್ಲನ್ನು ಮತ್ತಷ್ಟು ಗಟ್ಟಿ ಮಾಡುವಂತೆ ಇರಬೇಕು. ಸದಸ್ಯತ್ವ ಶುಲ್ಕವನ್ನು ₹ 250ಕ್ಕೆ ಇಳಿಸುವ ಉದ್ದೇಶವು ಸ್ವಾಗತಾರ್ಹ. ಹೊಸದಾಗಿ ನೋಂದಣಿಯಾಗುವವರು ಆನ್‌ಲೈನ್ ಮೂಲಕ ಅರ್ಜಿ, ಹಣ ಪಾವತಿಸಿ ಸುಲಭವಾಗಿ ನೋಂದಣಿಯಾಗಲು ಪರಿಷತ್ತಿನ ವೆಬ್‌ಸೈಟ್‌ನಲ್ಲಿ ಅವಕಾಶ ಕಲ್ಪಿಸಿಕೊಡಬೇಕು. ಯುವಪೀಳಿಗೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ಸೆಳೆಯುವುದು ಅತ್ಯಂತ ಜರೂರಾದ ಕೆಲಸವಾಗಿದ್ದು, ಇದಕ್ಕೆ ಸಮೂಹ ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಬೇಕು.

ನೋಂದಣಿಯಾದ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪುಸ್ತಕಗಳು ಸಿಗುವಂತೆ ನೋಡಿಕೊಳ್ಳಬೇಕು. ರಾಷ್ಟ್ರೀಯ ಹಬ್ಬಗಳು, ಕನ್ನಡ ರಾಜ್ಯೋತ್ಸವ, ಸಾಂಸ್ಕೃತಿಕ ಹಬ್ಬದ ಸಂದರ್ಭಗಳಲ್ಲಿ ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬರವಣಿಗೆಯಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸಬೇಕು. ನೋಂದಣಿಯಾಗುವವರಿಗೆ ಕನ್ನಡ ರಾಜ್ಯೋತ್ಸವ, ಕನ್ನಡ ಸಾಹಿತ್ಯ ಸಮ್ಮೇಳನದಂತಹ ಹಬ್ಬಗಳಲ್ಲಿ ವಿಶೇಷ ರಿಯಾಯಿತಿ ದರದಲ್ಲಿ ಪುಸ್ತಕಗಳು ದೊರಕುವಂತೆ ಮಾಡಬೇಕು. ವಿದ್ಯುನ್ಮಾನ ಪ್ರಪಂಚದಲ್ಲಿ ಹಣ ಪಾವತಿ ಡಿಜಿಟಲ್ ರೂಪದಲ್ಲಿರುವಾಗ, ಸಾಹಿತ್ಯ ಕ್ಷೇತ್ರದ ಅಭಿವೃದ್ಧಿಗೆ ದೇಣಿಗೆ ನೀಡುವವರಿಗೆ ಸರಳ ರೀತಿಯಲ್ಲಿ ಹಣ ಪಾವತಿ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ, ಪರಿಷತ್ತು ಆರ್ಥಿಕ ಚೈತನ್ಯ ಹೊಂದಲು ಅನುಕೂಲವಾಗುತ್ತದೆ. ಅಷ್ಟಲ್ಲದೆ ಕನ್ನಡ ಸಾಹಿತ್ಯ ಸಮ್ಮೇಳನದಂತಹ ಕನ್ನಡ ಹಬ್ಬದಲ್ಲಿ ಅಗತ್ಯವಿರುವ ಆರ್ಥಿಕ ಸಂಪನ್ಮೂಲವನ್ನು ಕನ್ನಡಿಗರಿಂದಲೇ ಕ್ರೋಡೀಕರಿಸಲು ಸಹ ಸಹಾಯಕವಾಗುತ್ತದೆ. ಇದರಿಂದ ಯಾರನ್ನೂ ಅವಲಂಬಿಸದೆ ಕನ್ನಡಿಗರಿಂದಲೇ ಕನ್ನಡದ ಹಬ್ಬವನ್ನು ಆಚರಿಸಲು ಸಾಧ್ಯವಾಗುವುದು.

ಗಣೇಶ ಆರ್., ಮಂಗಳೂರು

ರಾಗಿ ಖರೀದಿ: ರಾಜ್ಯ ಆಸ್ಥೆ ವಹಿಸಲಿ

ಒಕ್ಕೂಟ ಸರ್ಕಾರವು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಅಡಿಯಲ್ಲಿ ರಾಗಿ ಕ್ವಿಂಟಲ್‌ಗೆ ₹ 3,377ರಂತೆ 2.1 ಲಕ್ಷ ಟನ್ನುಗಳನ್ನು ಖರೀದಿಸುವ ಮಿತಿ ನಿಗದಿಪಡಿಸಿದೆ. 2021-22ರಲ್ಲಿ ಅಂದಾಜು 15 ಲಕ್ಷ ಟನ್ ರಾಗಿ ಬೆಳೆದಿದ್ದಾರೆ ರೈತರು. ಖರೀದಿ ಕೇಂದ್ರಗಳು ಮುಚ್ಚಿರುವುದರಿಂದ ಅನಿವಾರ್ಯವಾಗಿ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹ 1,500ರಿಂದ ₹ 2,000 ದರದಲ್ಲಿ ಮಾರಾಟ ಮಾಡಿ ಅಪಾರ ನಷ್ಟ ಅನುಭವಿಸುತ್ತಿದ್ದಾರೆ. ರೈತರು ಬೆಳೆದ ಬೆಳೆಯಲ್ಲಿ ಶೇ 50ರಷ್ಟನ್ನು ಸ್ವಂತಕ್ಕೆ, ಬೀಜಕ್ಕೆ ಮತ್ತು ಇತರ ಉಪಯೋಗಕ್ಕೆ ಬಳಸಿ ಉಳಿದದ್ದನ್ನು ಮಾರಾಟ ಮಾಡುತ್ತಾರೆ. ಅಂದರೆ ಸರ್ಕಾರ ಪ್ರೊಕ್ಯೂರ್ ಮಾಡಬೇಕಾದದ್ದು 7.5 ಲಕ್ಷ ಟನ್ನುಗಳು. ಇದರಲ್ಲಿ ಒಕ್ಕೂಟದ ಪಾಲು 2.1 ಲಕ್ಷ ಟನ್ನು. ರಾಜ್ಯ ಖರೀದಿಸಬೇಕಾದದ್ದು 5.4 ಲಕ್ಷ ಟನ್ನುಗಳು.

ಕ್ವಿಂಟಲ್‌ಗೆ ₹ 3,377ರಂತೆ 5.4 ಲಕ್ಷ ಟನ್ನುಗಳಿಗೆ ಅಗತ್ಯವಾದ ಹಣ ₹ 1,823.58 ಕೋಟಿ. ರಾಜ್ಯ ಸರ್ಕಾರದ ವಾರ್ಷಿಕ ಬಜೆಟ್ ₹ 2.5 ಲಕ್ಷ ಕೋಟಿಯಲ್ಲಿ ಇದು ಅತಿ ಸಣ್ಣ ಮೊತ್ತ (ಶೇ 4.56). ಆದರೆ, ಇದು ರಾಗಿ ಬೆಳೆದ ರೈತರಿಗೆ ಸಾವು-ಬದುಕಿನ ಪ್ರಶ್ನೆ. ಆದ್ದರಿಂದ ಒಕ್ಕೂಟ ಸರ್ಕಾರವನ್ನು ಹಣಕ್ಕಾಗಿ ಮತ್ತು ಹಿಂದಿನ ವರ್ಷಗಳ ಎಂಎಸ್‌ಪಿ ಬಾಕಿಗಾಗಿ (₹ 3,000 ಕೋಟಿ) ಬೇಡುವುದನ್ನು ಬಿಟ್ಟು ರಾಜ್ಯವು ನೇರವಾಗಿ ತನ್ನ ಹಣದಿಂದಲೇ ರಾಗಿಯನ್ನು ಎಂಎಸ್‌ಪಿ ದರದಲ್ಲಿ ಖರೀದಿಸಿ ರೈತರ ಬದುಕನ್ನು ಕಾಪಿಡುವುದು ಅಗತ್ಯ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿದ್ಧಪುರುಷನ ಕೈಗೊಂಬೆಯಾಗಿದ್ದ ಷೇರುಪೇಟೆ ಮುಖ್ಯಸ್ಥೆ!

ಚಿತ್ರಾ ರಾಮಕೃಷ್ಣ (ಪಿಟಿಐ ಚಿತ್ರ)

• ವಿಜಯ್ ಜೋಷಿ

ದೇಶದ ಅತ್ಯಂತ ಪ್ರಮುಖ ಷೇರುಪೇಟೆಗಳಲ್ಲಿ ಒಂದಾಗಿರುವ ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮತ್ತು ವ್ಯವಸ್ಥಾಪಕ ನಿರ್ದೇಶಕಿ ಆಗಿ 2013ರ ಏಪ್ರಿಲ್ 1ರಿಂದ 2016ರ ಡಿಸೆಂಬರ್ 2ರವರೆಗೆ ಕರ್ತವ್ಯ ನಿಭಾಯಿಸಿದ್ದ ಚಿತ್ರಾ ರಾಮಕೃಷ್ಣ ಈಗ ದೇಶದಾದ್ಯಂತ ಸುದ್ದಿಯಾಗಿದ್ದಾರೆ. 'ಹಿಮಾಲಯದಲ್ಲಿ ಎಲ್ಲೋ ಒಂದು ಕಡೆ ಇರುವ ಯೋಗಿ'ಯೊಬ್ಬರ ಸಲಹೆ ಪಡೆದು ತಮ್ಮ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದ ಆರೋಪವು ಅವರ ಮೇಲೆ ಇದೆ. ಆ 'ಯೋಗಿ' ಯಾರು ಎಂಬುದು ಬಹುಶಃ ಚಿತ್ರಾ ಅವರಿಗೆ ಮಾತ್ರ ಗೊತ್ತಿರಬಹುದು.

ಚಿತ್ರಾ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ), ಫೆಬ್ರುವರಿ 11ರಂದು ನೀಡಿರುವ ಆದೇಶದಲ್ಲಿ ಈ 'ಯೋಗಿ'ಯ ಕುರಿತು ಕೆಲವು ಕುತೂಹಲಕರ ಅಂಶಗಳು ಇವೆ. 'ಚಿತ್ರಾ ಅವರು ಎನ್‌ಎಸ್‌ಇಯ ಆಂತರಿಕ, ಗೋಪ್ಯ ಮಾಹಿತಿಯನ್ನು ಅನಾಮಧೇಯ ವ್ಯಕ್ತಿಯೊಬ್ಬರ ಜೊತೆ ನಿರಂತರವಾಗಿ ಹಂಚಿಕೊಳ್ಳುತ್ತಿದ್ದರು. ಎನ್‌ಎಸ್‌ಇ ಕಾರ್ಯಗಳಿಗೆ ಸಂಬಂಧಿಸಿದಂತೆ ತಾವು ತೆಗೆದುಕೊಳ್ಳುವ ತೀರ್ಮಾನಗಳ ಮೇಲೆ ಆ ಅನಾಮಧೇಯ ವ್ಯಕ್ತಿ ಪ್ರಭಾವ ಬೀರಲು ಅವಕಾಶ ಕೊಟ್ಟಿದ್ದರು' ಎಂಬುದು ಅವರ ಮೇಲಿರುವ ಪ್ರಮುಖ ಆರೋಪಗಳಲ್ಲಿ ಒಂದು. ಇದು ಚಿತ್ರಾ ಅವರಿಗೆ ನೀಡಲಾಗಿದ್ದ ಶೋಕಾಸ್ ನೋಟಿಸ್‌ನಲ್ಲಿ ಅಡಕವಾಗಿದೆ.

ನೇಮಕಾತಿ ಪ್ರಕ್ರಿಯೆಯಲ್ಲಿನ ಲೋಪ, ಸಂಭಾವನೆ ಹೆಚ್ಚಿಸುವಲ್ಲಿನ ಲೋಪ ಸೇರಿದಂತೆ ಹಲವು ಆರೋಪಗಳ ಬಗ್ಗೆ ವಿಚಾರಣೆ ನಡೆಸಿರುವ ಸೆಬಿಯ ಪೂರ್ಣಾವಧಿ ಸದಸ್ಯ ಅನಂತ ಬರುವಾ ಅವರು ತಮ್ಮ ವರದಿಯಲ್ಲಿ ಚಿತ್ರಾ ಹಾಗೂ 'ಯೋಗಿ' ಕುರಿತ ಕೆಲವು ವಿವರಗಳನ್ನು ನೀಡಿದ್ದಾರೆ. ಕೋಟ್ಯಂತರ ಮಂದಿ ಹೂಡಿಕೆದಾರರ ಷೇರು ಹೂಡಿಕೆ ವಹಿವಾಟುಗಳಿಗೆ ವೇದಿಕೆಯಾಗಿರುವ, ಕಂಪನಿಗಳ ಪಾಲಿಗೆ ಬಂಡವಾಳ ಸಂಗ್ರಹಕ್ಕೆ ವೇದಿಕೆ ಆಗಿರುವ ರಾಷ್ಟ್ರೀಯ ಷೇರುಪೇಟೆಯ ಸಿಇಒ, ಅನಾಮಧೇಯ 'ಯೋಗಿ'ಯೊಬ್ಬರ ಪ್ರಭಾವಕ್ಕೆ ಎಷ್ಟರಮಟ್ಟಿಗೆ ಒಳಗಾಗಿದ್ದರು ಎಂಬುದನ್ನು ಇದು ಚಿತ್ರಿಸುತ್ತದೆ.

'ಯೋಗಿ'ಯ ಇ-ಮೇಲ್ ವಿಳಾಸ 'rigyajursama@outlook.com'. ಋಗ್ ವೇದ, ಯಜುರ್ವೇದ ಮತ್ತು ಸಾಮ ವೇದಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ಇದೆ ಈ ಇ-ಮೇಲ್ ವಿಳಾಸ!

ಈ ವಿಳಾಸ ಹೊಂದಿರುವ ವ್ಯಕ್ತಿ ಸಿದ್ಧಪುರುಷ/ಯೋಗಿ ಎಂದು ಚಿತ್ರಾ ಹೇಳಿದ್ದಾರೆ. ಅವರು ಒಬ್ಬ ಪರಮಹಂಸ. ಅವರು ಹಿಮಾಲಯ ಪರ್ವತ ಶ್ರೇಣಿಯಲ್ಲಿ ಇರುತ್ತಾರೆ. ತಮಗೆ ಕಳೆದ 20 ವರ್ಷಗಳಿಂದ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ. ಅವರು ಆಧ್ಯಾತ್ಮಿಕ ಶಕ್ತಿಯಾಗಿರುವ ಕಾರಣ, ಅವರಿಗೆ ಭೌತಿಕ ವಿಳಾಸವೊಂದು ಇರಲೇಬೇಕು ಎಂದೇನೂ ಇಲ್ಲ. ಅವರು ತಮ್ಮ ಮನಸ್ಸು ಬಯಸಿದಂತೆ ಪ್ರಕಟಗೊಳ್ಳಬಲ್ಲರು ಎಂದು ಚಿತ್ರಾ ವಿವರಿಸಿದ್ದಾರೆ. 'ಯೋಗಿ'ಯು ಚಿತ್ರಾ ಅವರಿಗೆ ವೈಯಕ್ತಿಕ ಮಟ್ಟದಲ್ಲಿಯೂ, ವೃತ್ತಿಯ ವಿಚಾರಗಳಲ್ಲಿಯೂ ಮಾರ್ಗದರ್ಶನ ನೀಡುತ್ತ ಬಂದಿದ್ದಾರೆ.

'ಯೋಗಿ'ಯ ಕುರಿತು ಯಾವ ಹೆಚ್ಚಿನ ವಿವರವನ್ನೂ ಒದಗಿಸದ ಚಿತ್ರಾ, ಅವರ ಜೊತೆ ತಾವು ವೃತ್ತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಕೇಳುತ್ತಿದ್ದುದನ್ನು, ಎನ್‌ಎಸ್‌ಇಗೆ ಸಂಬಂಧಿಸಿದ ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದನ್ನು ಸಮರ್ಥಿಸಿಕೊಂಡಿದ್ದಾರೆ.

ಎನ್‌ಎಸ್‌ಇಗೆ ಸಂಬಂಧಿಸಿದ ವಿವರಗಳನ್ನು ಅನಾಮಧೇಯ ವ್ಯಕ್ತಿಯ ಜೊತೆ ಹಂಚಿಕೊಂಡಿದ್ದನ್ನು ಚಿತ್ರಾ ಅವರು ಸಮರ್ಥಿಸಿಕೊಂಡಿದ್ದಾರೆ ಸಹ. 'ದೊಡ್ಡ ಸ್ಥಾನಗಳಲ್ಲಿ ಇರುವವರು ತಮ್ಮ ಮಾರ್ಗದರ್ಶಕರ ಜೊತೆ ಆಗಾಗ ಸಮಾಲೋಚನೆ ನಡೆಸುವುದಿದೆ. ಇದು ಅನೌಪಚಾರಿಕ ಮಾತುಕತೆ ಮಾತ್ರ. ಈ ರೀತಿಯ ಮಾತುಕತೆಯಂತೆಯೇ, ಅವರ ಮಾರ್ಗದರ್ಶನವು ನನಗೆ ನನ್ನ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಲು ನೆರವಾಗಬಹುದು ಎಂದು ಅನ್ನಿಸಿತು. ಇದು ಆಧ್ಯಾತ್ಮಿಕ ಮಾತುಕತೆಯಾಗಿರುವ ಕಾರಣದಿಂದಾಗಿ, ಗೋಪ್ಯ ಮಾಹಿತಿ ಸೋರಿಕೆಯಾಗುವ ಅಥವಾ ಪ್ರಾಮಾಣಿಕತೆಗೆ ಸಂಬಂಧಿಸಿದ ಪ್ರಶ್ನೆಗಳು ಇಲ್ಲಿ ಮೂಡುವುದೇ ಇಲ್ಲ. ಇಲ್ಲಿ ಹಂಚಿಕೊಂಡಿರುವ ಮಾಹಿತಿಯಿಂದಾಗಿ ವೈಯಕ್ತಿಕವಾಗಿ ಯಾವುದೇ ಲಾಭ ಇಲ್ಲ' ಎಂದು ಚಿತ್ರಾ ಹೇಳಿದ್ದಾರೆ.

ಆದರೆ, 'ಆಧ್ಯಾತ್ಮಿಕ ಶಕ್ತಿ'ಯೊಂದರ ಜೊತೆ ಎನ್‌ಎಸ್‌ಇ ಕುರಿತ ಗೋಪ್ಯ ಮಾಹಿತಿಗಳನ್ನು ಹಂಚಿಕೊಳ್ಳಲು ಸೆಬಿ ಕಾಯ್ದೆಯಲ್ಲಾಗಲಿ ಅಥವಾ ಎನ್‌ಎಸ್‌ಇಗೆ ಸಂಬಂಧಿಸಿದ ಇತರ ಕಾಯ್ದೆಗಳಲ್ಲಾಗಲಿ ಅವಕಾಶ ಇಲ್ಲ! ಅಲ್ಲದೆ, ಆನಂದ್ ಸುಬ್ರಮಣಿಯನ್ ಅವರಿಗೆ ಅಧಿಕಾರ ಹಂಚುವಿಕೆಯಲ್ಲಿ, ಅವರಿಗೆ ಹುದ್ದೆ ನೀಡುವಲ್ಲಿ ಹಾಗೂ ಅವರ ಸಂಭಾವನೆಯನ್ನು ಹೆಚ್ಚಿಸುವಲ್ಲಿ ಚಿತ್ರಾ ಅವರು ಯೋಗಿಯಿಂದ ಸಲಹೆ ಪಡೆದಿದ್ದು ಮಾತ್ರವೇ ಅಲ್ಲದೆ, ಅವರ ಸಲಹೆಯಂತೆ ನಡೆದುಕೊಂಡಿದ್ದಾರೆ ಕೂಡ ಎಂದು ಸೆಬಿ ಆದೇಶ ಸ್ಪಷ್ಟಪಡಿಸಿದೆ.

2015ರ ಡಿಸೆಂಬರ್ 4ರ ಇ-ಮೇಲ್‌ನಲ್ಲಿ ಚಿತ್ರಾ ಅವರು 'ಯೋಗಿ'ಯ ಜೊತೆ ಆಡಿರುವ ಮಾತುಗಳನ್ನು ಉಲ್ಲೇಖಿಸಿ ಸೆಬಿ, 'ಚಿತ್ರಾ ಅವರು ಅನಾಮಧೇಯನ ಕೈಗೊಂಬೆಯಂತೆ ಆಗಿದ್ದರು' ಎಂದು ಹೇಳಿದೆ. 'ಕಂಪನಿಯು ನಿಮ್ಮ ಆಶೀರ್ವಾದದಿಂದ ನಡೆಯುತ್ತಿದೆ' ಎಂದು ಇನ್ನೊಂದು ಇ-ಮೇಲ್‌ನಲ್ಲಿ ಚಿತ್ರಾ ಹೇಳಿದ್ದರು. 'ಎನ್‌ಎಸ್‌ಇಯನ್ನು ನಡೆಸುತ್ತ ಇದ್ದುದು ಆ ಯೋಗಿ' ಎಂಬುದನ್ನು ಇದು ಸಾಬೀತುಮಾಡುತ್ತದೆ' ಎಂದು ಸೆಬಿ ಅಭಿಪ್ರಾಯಪಟ್ಟಿದೆ.

ರಾಷ್ಟ್ರೀಯ ಷೇರುಪೇಟೆಯ ಹಣಕಾಸು ಮತ್ತು ವಹಿವಾಟಿಗೆ ಸಂಬಂಧಿಸಿದ ಯೋಜನೆಗಳನ್ನು ಅನಾಮಧೇಯ 'ಯೋಗಿ'ಯ ಜೊತೆ ಹಂಚಿಕೊಂಡಿರುವುದು ಕಣ್ಣಿಗೆ ರಾಚುವಂತೆ ಇದೆ. ಈ ಕೃತ್ಯವು ಷೇರು ಮಾರುಕಟ್ಟೆಯ ಅಡಿಪಾಯವನ್ನೇ ಅಲುಗಾಡಿಸಬಲ್ಲದು ಎಂದು ಆದೇಶದಲ್ಲಿ ಹೇಳಲಾಗಿದೆ.

ಎನ್‌ಎಸ್‌ಇ

ಎನ್‌ಎಸ್‌ಇ ಅರ್ಥಾತ್ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ವಿಶ್ವದ 10 ಅತಿದೊಡ್ಡ ಷೇರುವಿನಿಮಯ ಕೇಂದ್ರಗಳಲ್ಲಿ ಒಂದು ಎನಿಸಿದೆ. 1992ರಲ್ಲಿ ಅಸ್ತಿತ್ವಕ್ಕೆ ಬಂದು, 1994ರಲ್ಲಿ ಕಾರ್ಯಾರಂಭ ಮಾಡಿದ ಎನ್‌ಎಸ್‌ಇಯ ಈಗಿನ ಮಾರುಕಟ್ಟೆ ಮೌಲ್ಯ ₹256.92 ಲಕ್ಷ ಕೋಟಿಗೂ ಹೆಚ್ಚು. 'ದೇಶದ ಜನರ ಹಣಕಾಸು ಸಮೃದ್ಧಿಯನ್ನು ಹೆಚ್ಚಿಸಬೇಕು' ಎಂಬ ಧ್ಯೇಯದೊಂದಿಗೆ ಎನ್‌ಎಸ್‌ಇ ಕಾರ್ಯಾರಂಭ ಮಾಡಿತ್ತು. 26 ವರ್ಷಗಳ ದೀರ್ಘ ಪಯಣದಲ್ಲಿ ಇದು ದೇಶದ ಪ್ರಮುಖ ವಿನಿಮಯ ಕೇಂದ್ರವಾಗಿ ಬೆಳೆದಿದೆ.

1994ರಲ್ಲಿ ಡೆಟ್ ಮಾರ್ಕೆಟ್ ಮತ್ತು ಕ್ಯಾಷ್ ಮಾರ್ಕೆಟ್‌ನಲ್ಲಿ ಮಾತ್ರ ಎನ್‌ಎಸ್‌ಇ ವಹಿವಾಟು ನಡೆಸುತ್ತಿತ್ತು. ನಂತರದ ವರ್ಷಗಳಲ್ಲಿ ಈಕ್ವಿಟಿ, ಇಂಡೆಕ್ಸ್ ಫ್ಯೂಚರ್ಸ್ ಮತ್ತು ಇಂಡೆಕ್ಸ್ ಆಪ್ಷನ್ಸ್, ಮ್ಯೂಚುವಲ್ ಫಂಡ್ ಹೀಗೆ ತನ್ನ ವಹಿವಾಟಿನ ವ್ಯಾಪ್ತಿಯನ್ನು ಎನ್‌ಎಸ್‌ಇ ವಿಸ್ತರಿಸಿಕೊಂಡಿದೆ. ಈಗ ಕರೆನ್ಸಿ ಫ್ಯೂಚರ್ಸ್ ಮತ್ತು ಕರೆನ್ಸಿ ಆಪ್ಷನ್ಸ್, ಕಮಾಡಿಟಿ ಮಾರ್ಕೆಟ್ ಸೇರಿದಂತೆ 10ಕ್ಕೂ ಹೆಚ್ಚು ಮಾರ್ಕೆಟ್‌ಗಳನ್ನು (ಉತ್ಪನ್ನಗಳು) ಎನ್‌ಎಸ್‌ಇ ನಿರ್ವಹಿಸುತ್ತದೆ.

ಎನ್‌ಎಸ್‌ಇಯಲ್ಲಿ ಪ್ರತಿದಿನ ಲಕ್ಷಾಂತರ ಕೋಟಿ ರೂಪಾಯಿಯ ವಹಿವಾಟುಗಳು ನಡೆಯುತ್ತವೆ. ಪ್ರತಿದಿನ 100 ಕೋಟಿಗೂ ಹೆಚ್ಚು ಷೇರುಗಳು ವಿನಿಮಯವಾಗುತ್ತವೆ. ಈ ಕಾರಣದಿಂದಲೇ ಎನ್‌ಎಸ್‌ಇ ಜಗತ್ತಿನ ಅತ್ಯಂತ ದೊಡ್ಡ ಷೇರು ವಿನಿಮಯ ಕೇಂದ್ರಗಳಲ್ಲಿ ಒಂದು ಎನಿಸಿದೆ. ಫೆಬ್ರುವರಿ 18ರ ಶುಕ್ರವಾರ ಎನ್‌ಎಸ್‌ಇಯಲ್ಲಿ ಒಟ್ಟು ₹2.26 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿದೆ. ಇದೇ ಅವಧಿಯಲ್ಲಿ 187.11 ಕೋಟಿ ಷೇರುಗಳು ವಿನಿಮಯವಾಗಿವೆ. ಈ ಎರಡು ದತ್ತಾಂಶಗಳೇ ಎನ್‌ಎಸ್‌ಇಯ ವಹಿವಾಟಿನ ಬೃಹತ್ ಗಾತ್ರವನ್ನು ತೋರಿಸುತ್ತವೆ.

ಚಿತ್ರಾ ಹೇಳಿದ್ದೇನು?

ಚಿತ್ರಾ ಅವರು 'ಯೋಗಿ'ಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ನೀಡಿದ್ದ ಉತ್ತರಗಳನ್ನು ಸೆಬಿ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪ್ರಶ್ನೆ: 'rigyajursama@outlook.com' ಇ-ಮೇಲ್ ವಿಳಾಸ ಹೊಂದಿರುವ ವ್ಯಕ್ತಿಯ ಗುರುತನ್ನು ತಿಳಿಸಬಹುದೇ?

ಚಿತ್ರಾ ಉತ್ತರ: ನಾನು ಅವರನ್ನು ಹಲವು ಸಂದರ್ಭಗಳಲ್ಲಿ ಪವಿತ್ರ ಸ್ಥಳಗಳಲ್ಲಿ ಭೇಟಿ ಮಾಡಿದ್ದೇನೆ. ಅವರು ಹಿಮಾಲಯ ಪರ್ವತ ಶ್ರೇಣಿಯಲ್ಲಿ ಇರಬಹುದು. ಸ್ಥಳದ ವಿವರ ಕೊಟ್ಟಿಲ್ಲ.

ಪ್ರಶ್ನೆ: ಅವರು ಹಿಮಾಲಯ ಪರ್ವತ ಶ್ರೇಣಿಯಲ್ಲಿ ಇರುತ್ತಾರೆ ಎಂದಾದರೆ, ಇ-ಮೇಲ್ ಓದಿ ನಿಮ್ಮ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇರುವುದು ಹೇಗೆ?

ಉತ್ತರ: ನನಗೆ ಗೊತ್ತಿರುವಮಟ್ಟಿಗೆ, ಅವರ ಆಧ್ಯಾತ್ಮಿಕ ಶಕ್ತಿಯ ಕಾರಣದಿಂದಾಗಿ ಅವರಿಗೆ ಭೌತಿಕ ವಿಳಾಸ ಇರಬೇಕು ಎಂದೇನೂ ಇಲ್ಲ.

ಪ್ರಶ್ನೆ: ನೀವು ಅವರನ್ನು ಭೇಟಿ ಮಾಡಿದ್ದು ಯಾವಾಗ? ಅವರನ್ನು ನಿಮಗೆ ಪರಿಚಯಿಸಿದ್ದು ಯಾರು?

ಉತ್ತರ: ಸರಿಸುಮಾರು 20 ವರ್ಷಗಳ ಹಿಂದೆ ಗಂಗಾ ನದಿಯ ತೀರದಲ್ಲಿ ಅವರನ್ನು ನೇರವಾಗಿ ಭೇಟಿಯಾದೆ. ನಂತರದ ವರ್ಷಗಳಲ್ಲಿ ನಾನು ಅವರಿಂದ ವೈಯಕ್ತಿಕ ಬದುಕು ಹಾಗೂ ವೃತ್ತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಪಡೆದಿದ್ದೇನೆ. ಈ ನಡುವೆ, ಅವರು ತಮ್ಮ ಇಚ್ಛೆಗೆ ಅನುಗುಣವಾಗಿ ರೂಪ ಧರಿಸುತ್ತಿದ್ದುದರಿಂದ ಹಾಗೂ ನನ್ನಲ್ಲಿ ಅವರ ಭೌತಿಕ ವಿಳಾಸ ಇಲ್ಲದಿದ್ದುದರಿಂದ ನನಗೆ ಅಗತ್ಯವೆನಿಸಿದಾಗಲೆಲ್ಲ ಮಾರ್ಗದರ್ಶನ ಪಡೆಯುವ ಬಗೆ ಯಾವುದು ಎಂದು ಅವರಲ್ಲಿ ಕೇಳಿಕೊಂಡೆ. ಆಗ ಅವರು ಇ-ಮೇಲ್ ವಿಳಾಸ ನೀಡಿದರು. ಅಲ್ಲಿಗೆ ನಾನು ನನ್ನ ಕೋರಿಕೆಗಳನ್ನು ಕಳುಹಿಸಬಹುದಿತ್ತು.

ಪ್ರಶ್ನೆ: ಆ ಸಿದ್ಧಪುರುಷ ಎನ್‌ಎಸ್‌ಇಗೆ ಸೇರಿದವರೇ ಅಥವಾ ಎನ್‌ಎಸ್‌ಇಯ ಆಡಳಿತ ಮಂಡಳಿಯಲ್ಲಿ ಯಾವುದಾದರೂ ಕಾಲಘಟ್ಟದಲ್ಲಿ ಇದ್ದವರೇ?

ಉತ್ತರ: ಇಲ್ಲ. ಅವರು ಒಂದು ಆಧ್ಯಾತ್ಮಿಕ ಶಕ್ತಿ.

ಪ್ರಶ್ನೆ: ಸಿದ್ಧಪುರುಷನಿಗೆ ಎನ್‌ಎಸ್‌ಇ ಕಾರ್ಯಗಳು ಹಾಗೂ ಇಲ್ಲಿನ ಸಿಬ್ಬಂದಿ ಹಂತಗಳ ಕುರಿತ ಸಂಕೀರ್ಣ ವಿವರಗಳು ಗೊತ್ತಿದ್ದುದು ಹೇಗೆ?

ಉತ್ತರ: ಆ ವಿವರಗಳನ್ನು ಬಹುತೇಕ ನಾನೇ ಕೊಟ್ಟಿದ್ದು...

2015ರಲ್ಲಿ ಸಿದ್ಧಪುರುಷನ ಭೇಟಿ

2015ನೆಯ ಇಸವಿಯಲ್ಲಿ ಚಿತ್ರಾ ಮತ್ತು 'ಸಿದ್ಧಪುರುಷ' ಹಲವು ಬಾರಿ ಭೇಟಿ ಆಗಿದ್ದರು ಎಂದು ಸೆಬಿ ಆದೇಶ ಹೇಳುತ್ತದೆ.

ಅನಾಮಧೇಯ 'ಯೋಗಿ'ಯನ್ನು ಚಿತ್ರಾ ಅವರು ದೆಹಲಿಯ ಸ್ವಾಮಿಮಲೈ ದೇವಸ್ಥಾನದಲ್ಲಿ ಭೇಟಿ ಆಗಿದ್ದರು ಎಂದು ಚಿತ್ರಾ ಅವರೇ ಸೆಬಿಗೆ ನೀಡಿರುವ ಹೇಳಿಕೆಯೊಂದರಲ್ಲಿ ವಿವರಿಸಿದ್ದಾರೆ. 2015ರ ಫೆಬ್ರುವರಿ 18ರಂದು ಸಿದ್ಧಪುರುಷನಿಂದ ಬಂದ ಇ-ಮೇಲ್‌ನಲ್ಲಿ 'ಇಂದು ನೀವು ಅದ್ಭುತವಾಗಿ ಕಾಣಿಸುತ್ತಿದ್ದಿರಿ' ಎಂಬ ಮಾತು ಇದೆ.

ಇ-ಮೇಲ್‌ಗಳನ್ನು ಪರಿಶೀಲಿಸಿದಾಗ, ಅನಾಮಧೇಯ ವ್ಯಕ್ತಿಗೆ ಭೌತಿಕ ಅಸ್ತಿತ್ವ ಇದೆ ಎಂಬುದು ಗೊತ್ತಾಗುತ್ತದೆ, ಆ ವ್ಯಕ್ತಿ ಚಿತ್ರಾ ಅವರ ಜೊತೆ ಪ್ರವಾಸಕ್ಕೆ ಕೂಡ ಹೋಗಿದ್ದ ಎಂದು ಸೆಬಿ ಆದೇಶದಲ್ಲಿ ಹೇಳಲಾಗಿದೆ. ಆದರೆ, ಆ ವ್ಯಕ್ತಿ ಯಾರು ಎಂಬುದನ್ನು ತಿಳಿಸಲು ಚಿತ್ರಾ ನಿರಾಕರಿಸಿದ್ದಾರೆ. ಹಾಗಾಗಿ, ಆತ ಒಂದು ಆಧ್ಯಾತ್ಮಿಕ ಶಕ್ತಿ ಎನ್ನುತ್ತಿದ್ದಾರೆ ಎಂದು ಆದೇಶವು ವಿವರಿಸಿದೆ.

ಆಧಾರ: ಎನ್‌ಎಸ್‌ಇ, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 50

ಮಹಿಷನ ಮೇಲೆ ಕುಳಿತಿದೆ ಕಾಲಚಕ್ರ

ಬ್ರಹ್ಮಾಂಡದಲ್ಲಿ ಪೃಥ್ವಿ ಮತ್ತಿತರ ಮಹಾಭೂತಗಳಿಂದ ಲೋಕಗಳು ನಿರ್ಮಿಸಲ್ಪಟ್ಟಿವೆ ಎಂದು ಸೂತಮುನಿ ತಿಳಿಸುತ್ತಾನೆ.

ಪಾತಾಳದಿಂದ ಸತ್ಯಲೋಕದವರೆಗಿರುವ ಹದಿನಾಲ್ಕು ಲೋಕಗಳು ಬ್ರಹ್ಮಲೋಕಗಳು. ಸತ್ಯಲೋಕದಿಂದ ಮೇಲಿನ ಕ್ಷಮಾಲೋಕದವರೆಗಿನ ಹದಿನಾಲ್ಕು ಲೋಕಗಳು ವಿಷ್ಣುಲೋಕಗಳು. ಈ ಕ್ಷಮಾಲೋಕದಲ್ಲಿ ಕಾರ್ಯ(ಕಲ್ಪಾಂತದಲ್ಲಿ ಪ್ರಳಯವನ್ನು ಹೊಂದುವಂತಹ) ವೈಕುಂಠವೆಂಬ ವರನಗರದವಿದೆ. ಇಲ್ಲಿ ವಿಷ್ಣುವು ಲಕ್ಷ್ಮೀದೇವಿಯೊಡನೆ ಆದಿಶೇಷನನ್ನು ರಕ್ಷಿಸುತ್ತಾ, ಅವನ ಮೇಲೆ ಮಲಗಿದ್ದಾನೆ. ಆ ವೈಕುಂಠಕ್ಕಿಂತಲೂ ಮೇಲೆ ಶುಚಿಲೋಕವಿದೆ. ಇಲ್ಲಿ ಇಪ್ಪತ್ತೆಂಟು ಲೋಕಗಳು ಇವೆ. ಶುಚಿಲೋಕದಲ್ಲಿ ಭೂತನಾಥನಾದ ರುದ್ರನಿದ್ದಾನೆ.

ಕೈಲಾಸಕ್ಕಿಂತಲೂ ಮೇಲೆ ಅಹಿಂಸಾಲೋಕವಿದೆ. ಅಲ್ಲಿ ಐವತ್ತಾರು ಲೋಕಗಳಿವೆ. ಅಹಿಂಸಾಲೋಕದಲ್ಲಿ ಜ್ಞಾನಕೈಲಾಸವೆಂಬ ನಗರದಲ್ಲಿ ಕಾರ್ಯೇಶ್ವರನಿದ್ದಾನೆ. ಇವನು ಎಲ್ಲ ವಸ್ತುವನ್ನೂ ನಾಶಮಾಡುತ್ತಿರುತ್ತಾನೆ. ಲೋಕದ ಕೊನೆಯಲ್ಲಿ ಕಾಲಚಕ್ರವಿದೆ. ಅದರ ಮುಂದೆ ಕಾಲಾತೀತವೆಂಬ ಲೋಕವಿದೆ. ಆ ಲೋಕದಲ್ಲಿ ಶಿವನಿಂದ ನಿಯಮಿಸಲ್ಪಟ್ಟ ಶಿವಸ್ವರೂಪನಾದ ಚಕ್ರೇಶ್ವರನೆಂಬ ಕಾಲನು (ಮಹಿಷರೂಪನಾದ ಈಶ್ವರ) ಇದ್ದಾನೆ. ಆತ ಮಾಹಿಷಧರ್ಮದಂತೆ ಎಲ್ಲರನ್ನೂ ಕಾಲನೊಡನೆ ಸೇರಿಸುತ್ತಿರುತ್ತಾನೆ. ಅಂದರೆ ಸಂಹಾರ ಮಾಡುತ್ತಿರುತ್ತಾನೆ. ಮಹಿಷರೂಪವಾದ ಈಶ್ವರನಿಗೆ ಅಸತ್ಯ, ಅಶುಚಿ, ಹಿಂಸೆ ನಿರ್ಘೃಣಾ (ಕೊರತೆ) ಎಂಬ ನಾಲ್ಕು ಪಾದಗಳು ಇವೆ. ಕಾಲಾತೀತಲೋಕದ ಕೆಳಗಿನ ಲೋಕಗಳಲ್ಲಿ ಕರ್ಮಭೋಗವಿದ್ದರೆ, ಕಾಲಾತೀತಲೋಕದ ಮೇಲಿನ ಲೋಕಗಳಲ್ಲಿ ಜ್ಞಾನಭೋಗವಿದೆ. ಈ ಜ್ಞಾನಭೋಗದಲ್ಲಿ ಮುಕ್ತಿ ಸಿಗುತ್ತದೆ.

ಕಾಲಾತೀತಲೋಕದ ಕೆಳಗಿನ ಲೋಕಗಳಲ್ಲಿ ಕರ್ಮಮಾಯೆ ಮತ್ತು ಅದರ ಮೇಲೆ ಜ್ಞಾನಮಾಯೆ ಇದೆ. ಕರ್ಮಮಾಯೆ ಎಂದರೆ ಹೆಚ್ಚಾಗಿ ಕರ್ಮಾನುಭವವನ್ನುಂಟು ಮಾಡುವುದೆಂದು ಅರ್ಥ. ಜ್ಞಾನಮಾಯೆ ಎಂದರೆ ಜ್ಞಾನಸಂಪತ್ತು ಹೆಚ್ಚಾಗಿರುತ್ತದೆ ಎಂದು ಅರ್ಥ. ಕಾಲಾತೀತಲೋಕಕ್ಕಿಂತ ಮೇಲೆ ನಿತ್ಯವಾದ ಆನಂದವಿದ್ದರೆ, ಕೆಳಗಿನ ಲೋಕಗಳಲ್ಲಿ ಅನಿತ್ಯವಾದುವುಗಳಿವೆ. ಆದರೆ ಕಾಲಾತೀತಲೋಕಕ್ಕಿಂತ ಮೇಲೆ ಇರುವ ನಿತ್ಯಾನಂದ ನಾಶವಾಗುವುದಿಲ್ಲ. ಕಾಲಾತೀತ ಲೋಕಕ್ಕಿಂತ ಕೆಳಗಿನ ಲೋಕಗಳಲ್ಲಿ ಸಂಸಾರಪಾಶ ಮತ್ತು ಯಮಪಾಶ ಬಂಧನವಿರುತ್ತದೆ; ನಿತ್ಯಾನಂದಲೋಕದಲ್ಲಿ ಆ ಬಂಧನಗಳಿರುವುದಿಲ್ಲ. ಕಾಮ್ಯಕರ್ಮಗಳನ್ನು ಮಾಡಿದವರು ಕೆಳಗಿನ ಲೋಕಗಳಲ್ಲಿ ಕರ್ಮಫಲಭೋಗಕ್ಕಾಗಿ ಸಂಚರಿಸುತ್ತಾರೆ. ಮೇಲಿನ ಲೋಕದಲ್ಲಿರುವವರು ಪುನರಾವೃತ್ತಿ ಇಲ್ಲದಂತಹ ಮುಕ್ತಿ ಪಡೆಯುತ್ತಾರೆ.

ಕೆಳಗಿನ ಲೋಕಗಳಲ್ಲಿ ಬಿಂದು(ಲಿಂಗ)ಪೂಜೆಯನ್ನು ಮಾಡುವವರು ಇದ್ದರೆ, ಫಲೇಚ್ಛೆ ಇಲ್ಲದೆ ಶಿವಲಿಂಗವನ್ನು ಪೂಜಿಸಿದವರು ಮೇಲಿನ ಲೋಕದಲ್ಲಿರುತ್ತಾರೆ. ಕಾಲಾತೀತಲೋಕಕ್ಕಿಂತ ಕೆಳಗಿನ ಲೋಕಗಳಲ್ಲಿರುವವರೆಲ್ಲರೂ ಜೀವರು. ಮೇಲಿನ ಲೋಕದಲ್ಲಿರುವವರು ದೇವರು. ಅಲ್ಲಿ ಪರಮೇಶ್ವರನಿರುವುದರಿಂದ ದೈವತ್ವ ಹೊಂದಿರುತ್ತಾರೆ. ಕೆಳಗಿನ ಲೋಕಗಳಲ್ಲಿರುವವರು ಸಂಸಾರಿಕರಾದರೆ, ಮೇಲಿನ ಲೋಕದಲ್ಲಿ ಸಂಸಾರಬಂಧನಗಳಿಂದ ಮುಕ್ತರಾದವರು. ಇವರು ನಿತ್ಯಪ್ರಕೃತಿಮಯವಾದ ಅನಿತ್ಯ ದ್ರವ್ಯಗಳಿಂದ ಶಿವನನ್ನು ಪೂಜಿಸುತ್ತಾರೆ.

ಕೆಳಗಿನ ಲೋಕಗಳಲ್ಲಿ ಶಕ್ತಿಲಿಂಗ ಇದ್ದರೆ, ಮೇಲಿನ ಲೋಕಗಳಲ್ಲಿ ಶಿವಲಿಂಗವಿದೆ. ಕೆಳಗಿನ ಲೋಕಗಳಲ್ಲಿ ಲಿಂಗದ ಸ್ವರೂಪವು ಮುಚ್ಚಲ್ಪಟ್ಟಿದ್ದರೆ, ಮೇಲಿನ ಲೋಕದಲ್ಲಿ ಮುಚ್ಚಿರುವುದಿಲ್ಲ; ಸ್ವಯಂಪ್ರಕಾಶಮಾನವಾಗಿ ಬೆಳಗುತ್ತಿರುತ್ತದೆ. ಮನುಷ್ಯರಿಂದ ನಿರ್ಮಿತವಾದ ಲಿಂಗವು ಕೆಳಗಿನ ಲೋಕಗಳಲ್ಲಿದ್ದರೆ, ಮೇಲಿನ ಲೋಕದಲ್ಲಿ ಮನುಷ್ಯ ಕಲ್ಪಿತವಲ್ಲದ ಬ್ರಹ್ಮಲಿಂಗ ಇರುತ್ತದೆ. ಕೆಳಗಿನ ಲೋಕಗಳಲ್ಲಿ ಬಹಿರಂಗಲಿಂಗಗಳಿದ್ದರೆ, ಮೇಲಿನ ಲೋಕದಲ್ಲಿ ಚರ್ಮಚಕ್ಷುಸ್ಸುಗಳಿಗೆ ಮಾತ್ರ ಕಾಣಿಸುವ ಅಂತರಂಗ ಲಿಂಗ'ವಿದೆ. ಒಟ್ಟಾರೆ, ನೂರ ಹನ್ನೆರಡು ಶಕ್ತಿಲೋಕಗಳು ಆ ಕಾಲಾತೀತಲೋಕದ ಕೆಳಗಿವೆ.

ಕೆಳಗಿನ ಲೋಕಗಳಲ್ಲಿ ಬಿಂದುಲಿಂಗವು ಇದ್ದರೆ, ನಾದಲಿಂಗವು ಮೇಲಿನ ಲೋಕದಲ್ಲಿದೆ. ಕೆಳಗಿನ ಲೋಕಗಳು ಕರ್ಮಲೋಕಗಳು. ಇಲ್ಲಿ ಕರ್ಮವನ್ನನುಭವಿಸಲೇಬೇಕು. ಮೇಲಿನ ಲೋಕದಲ್ಲಿ ಜ್ಞಾನಲೋಕ ಇದೆ. ಇದಕ್ಕು ಮೇಲೆ ಅಹಂಕಾರಗಳನ್ನು ನಾಶಗೊಳಿಸುವ ನಮಸ್ಕಾರಲೋಕವಿದೆ. ಪಂಚಮಹಾಭೂತಗಳನ್ನು ಪೂಜಿಸುವವರು, ಆ ಕೆಳಗಿನ ಲೋಕಗಳಲ್ಲಿಯೇ ಪರಿವರ್ತನೆಯನ್ನು ಮಾಡುವರು. ಚೈತನ್ಯಸ್ವರೂಪವನ್ನು ಪೂಜಿಸುವವರು ಮೇಲಿನ ಲೋಕವನ್ನು ಪಡೆಯುವರು. ಮೇಲಿನ ಲೋಕದಲ್ಲಿ ಆತ್ಮಲಿಂಗದಲ್ಲಿ ವೇದಿಭಾಗವು ಇರುತ್ತದೆ. ಆ ವೇದಿಯ ಕೊನೆಯಲ್ಲಿ ಪ್ರಕೃತಿ ಮೊದಲಾದ ಎಂಟು ಬಂಧಗಳು ಪ್ರತಿಷ್ಠಾಪಿಸಲ್ಪಟ್ಟಿವೆ.

ವೈದಿಕ ಮತ್ತು ಲೌಕಿಕ ಕರ್ಮವನ್ನೆಲ್ಲಾ ಸಂಪೂರ್ಣವಾಗಿ ತಿಳಿದವರು ಮತ್ತು ಧರ್ಮನಿರತರಾಗಿ ಶಿವಪೂಜೆಯನ್ನು ಮಾಡುವವರು ಅಧರ್ಮವೆಂಬ ಮಹಿಷವನ್ನೇರಿರುವ ಕಾಲಚಕ್ರವನ್ನು ದಾಟಿ ಮುಕ್ತಿ ಪಡೆಯುತ್ತಾರೆ ಎಂದು ಸೂತಮುನಿ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶ ವಿಧಾನಸಭೆಗೆ ಮೂರನೇ ಹಂತದ ಮತದಾನ ನಡೆಯುತ್ತಿರುವಂತೆಯೇ ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಎಸ್‌ಪಿಗೆ ಮತ ನೀಡಿ ಎಂದು ಅಪರಾಧಿಗಳಿಗೆ ಅಖಿಲೇಶ್ ಅವರು ಮನವಿ ಮಾಡುತ್ತಿರುವುದು ವಿಡಿಯೊದಲ್ಲಿ ಇದೆ. 'ಯಾರು ಕಾನೂನನ್ನು ಕೈಗೆ ತೆಗೆದುಕೊಳ್ಳಲು ಬಯಸುತ್ತೀರಿ, ಆದರೆ ಕಾನೂನು ಪಾಲಿಸುವುದಿಲ್ಲ ಅಂಥವರು ಎಸ್‌ಪಿಗೆ ಮತ ನೀಡಿ. ಬಡವರಿಗೆ ಅನ್ಯಾಯ ಮಾಡಲು ಬಯಸುವವರು ಎಸ್‌ಪಿಗೆ ಮತ ನೀಡಿ' ಎಂದು ಅಖಿಲೇಶ್ ಹೇಳಿರುವುದು ವಿಡಿಯೊದಲ್ಲಿ ಸೆರೆ ಆಗಿದೆ.

ವೈರಲ್ ಆಗಿರುವ ವಿಡಿಯೊ ತಿರುಚಲಾಗಿರುವ ವಿಡಿಯೊ ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ಈ ವಿಡಿಯೊ 2022ರ ಫೆ. 16ರಂದು ನ್ಯೂಸ್ 18 ಹಿಂದಿ ಸೇರಿ ಹಲವು ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗಿದೆ. ಔರೈಯಾ ಕ್ಷೇತ್ರದಲ್ಲಿ ಚುನಾವಣಾ ರ್‍ಯಾಲಿ ನಡೆಸಿದ್ದ ಅಖಿಲೇಶ್ ಅವರು, 'ಯಾರು ಕಾನೂನನ್ನು ಕೈಗೆತ್ತಿಕೊಳ್ಳಲು ಬಯಸುತ್ತೀರಿ, ಆದರೆ ಕಾನೂನು ಪಾಲಿಸುವುದಿಲ್ಲ ಅಂಥವರು ಎಸ್‌ಪಿಗೆ ಮತ ನೀಡಬೇಡಿ. ಯಾರು ಬಡವರಿಗೆ ಅನ್ಯಾಯ ಮಾಡಲು ಬಯಸುತ್ತೀರಿ ಅಂಥವರು ಎಸ್‌ಪಿಗೆ ಮತ ನೀಡಬೇಡಿ' ಎಂದಿದ್ದರು. ಇದೇ ರೀತಿಯ ಹೇಳಿಕೆಯನ್ನು ಅವರು ಫೆ.12 ರಂದು ಬರೇಲಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೂಡಾ ನೀಡಿದ್ದರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 21, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 09 ನೇ ದಿನ
ತಿಥಿ: (ಮಾಘ ಕೃಷ್ಣ) ಪಂಚಮಿ ಗಂ. 19-58 ನಕ್ಷತ್ರ: ಚಿತ್ತಾ ಗಂ. 16-17 ಯೋಗ: ಗಂಡ ಗಂ. 13-05, ಕರಣ: ಕೌಲವ ಗಂ. 08-34. ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 06-54 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 19 ರಜಬ್ ಅದೃಷ್ಟ ಸಂಖ್ಯೆ: 4, 11

ಮೇಷ: ಕೈಗಾರಿಕೆ ನಡೆಸುವವರಿಗೆ ಅಧಿಕ ಖರ್ಚು. ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಶ್ರಮ ಪಡಬಹುದು. ಸಹೋದ್ಯೋಗಿಗಳ ಅಥವಾ ನೆರೆಹೊರೆಯವರ ಉಪಟಳದಿಂದ ಅಗೌರವವಾಗುವ ಸನ್ನಿವೇಶಗಳು ಎದುರಾಗಬಹುದು.

ವೃಷಭ: ಶಿಕ್ಷಕ ವೃತ್ತಿಯನ್ನು ಮಾಡುವವರಿಗೆ ಭೋದನಾ ಕೆಲಸಕ್ಕಿಂತ ಮುಖ್ಯವಾಗಿ ದಾಖಲೆಯ ನಿರ್ವಹಣೆ ತಲೆಬಿಸಿ ಎನಿಸಲಿದೆ. ನಿರ್ಮಾಣ ಕಾರ್ಯಗಳಿಗೆ ಹಣಕಾಸಿನ ಹೊಂದಾಣಿಕೆ ಸುಲಭವಾಗಿ ಆಗುವುದು.

ಮಿಥುನ: ನ್ಯಾಯಾಲಯದ ವಿಚಾರಗಳಲ್ಲಿ ಮಧ್ಯಸ್ಥಿಕೆ, ರಾಜೀ ಮನೋಭಾವ ಕಾರ್ಯಾನುಕೂಲಕ್ಕೆ ಸಾಧಕವಾಗುತ್ತದೆ. ಚಿತ್ರಕಲೆ, ಗಣಿತದಂತಹ ವಿಚಾರದಲ್ಲಿ ಆಸಕ್ತಿ ಮೂಡುವುದು. ವಾಣಿಜ್ಯ ಒಪ್ಪಂದಗಳು ಏರ್ಪಡುವುದು.

ಕರ್ಕಾಟಕ: ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತ ಸಮಯ. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರಿಗೆ ಅಧಿಕ ಕಮಿಶನ್ ದೊರೆಯಲಿದೆ. ತರಕಾರಿ ಅಥವಾ ಹಣ್ಣುಗಳ ಬೆಳೆಗಾರರಿಗೆ ಲಾಭಾಂಶ ಹೆಚ್ಚಲಿದೆ.

ಸಿಂಹ: ಅವಿವಾಹಿತರಿಗೆ ಕಂಕಣಬಲ ಕೂಡಲಿದೆ. ಹಿತಶತ್ರುಗಳ ಪರಾಜಯವನ್ನು ನೋಡಿ ಸಂತಸ. ಮನೆಯಲ್ಲಿ ಮಂಗಳಕಾರ್ಯ ನಡೆಯುವುದು. ಜೀವನದಲ್ಲಿ ನಾಲ್ಕಾರು ದೋಣಿಯ ಪ್ರಯಾಣ ಬೇಡವೆನಿಸಲಿದೆ.

ಕನ್ಯಾ: ಆರಂಭಿಸಿದ ಕಾರ್ಯ ಆರ್ಥಿಕ ಸಮಸ್ಯೆಗಳಿಂದ ಸ್ಥಗಿತಗೊಳ್ಳುವ ಸಾಧ್ಯತೆ. ವೃತ್ತಿರಂಗದಲ್ಲಿ ಪ್ರತಿ ಹೆಜ್ಜೆಗೂ ಎಚ್ಚರವಿರಲಿ. ಷೇರು ವ್ಯವಹಾರಗಳ ಹೂಡಿಕೆ ಸತ್ಫಲ ನೀಡಲಾರದು. ತಾಯಿಯ ಆರೋಗ್ಯದ ಬಗ್ಗೆ ಗಮನವಿರಲಿ.

ತುಲಾ: ಸತ್ಕಾರ್ಯಗಳಲ್ಲಿ ಆದಾಯವನ್ನು ಮೀರಿ ಖರ್ಚುಗಳಿದ್ದರೂ ಚಿಂತಿಸುವ ಅಗತ್ಯವಿಲ್ಲ. ಪುಣ್ಯ ಸಂಪಾದನೆ ಮುಖ್ಯ ಧ್ಯೇಯವಾಗಿರಲಿ. ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಿ ಸ್ನೇಹಿತರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ವೃಶ್ಚಿಕ: ಮಹಿಳೆಯರಿಗೆ ತವರಿನವರ ಆಗಮನ ಸಂತೋಷಕ್ಕೆ ಕಾರಣವಾಗುವುದು. ಸಂಘ ಸಂಸ್ಥೆಗಳ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಧನು: ಅರ್ಚಕ, ವೈದಿಕ ವೃತ್ತಿಯವರಿಗೆ ಕಾರ್ಯದೊತ್ತಡ ಅಧಿಕ ಮಟ್ಟದಲ್ಲಿದ್ದರೂ, ಸರಿಸಮಾನವಾದ ಗೌರವಧನಕ್ಕೆ ಕೊರತೆ ಕಾಣುವುದಿಲ್ಲ. ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿಯಾಗುವುದು.

ಮಕರ: ಸಾಂಸಾರಿಕ ಸಮಸ್ಯೆಗಳಿಂದ ವೃತ್ತಿಯಲ್ಲಿ ಬಿಡುವು ಮಾಡಿಕೊಳ್ಳಬೇಕಾದ ಸಂದರ್ಭ ಎದುರಾಗಬಹುದು. ಭೂ ವ್ಯವಹಾರದ ಬಂಡವಾಳದಲ್ಲಿ ಪಾಲುದಾರನಿಂದ ಮೋಸ ಹೋಗುವ ಸ್ಥಿತಿ. ಆರ್ಥಿಕ ಸ್ಥಿತಿ ಸುಧಾರಿಸುವುದು.

ಕುಂಭ: ಸರ್ಕಾರಿ ಕೆಲಸಗಳು ಸುಗಮವಾಗಿ ಸಾಗಲಿವೆ. ಈ ದಿನ ಆದಾಯದಲ್ಲಿ ಸಣ್ಣ ಹೊಡೆತವನ್ನು ಎದುರಿಸುವಂತಾಗಬಹುದು. ಅವಿವಾಹಿತರು ಮನೋಕಾಮನೆಗಳು ಪೂರ್ಣಗೊಳ್ಳಲು ದುರ್ಗಾಪರಮೇಶ್ವರಿಯ ಆರಾಧನೆ ಮಾಡಿ.

ಮೀನ: ಕುಟುಂಬದ ಆಂತರಿಕ ಸಮಸ್ಯೆಯೊಂದು ಸಾಮರಸ್ಯದಿಂದ ಬಗೆಹರಿಯಲಿದೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನವಹಿಸಿ. ಮೀನುಗಾರರು ಅಥವಾ ಸಮುದ್ರ ಪ್ರಯಾಣ ಮಾಡುವವರು ಜಾಗ್ರತರಾಗಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಜನ್ಮ ಜನ್ಮಾಂತರಗಳ ಪೇಚಾಟ

ಮನದ ಭಾವಿತಕೊಪ್ಪುವುಪಕರಣ ನಮಗಿಲ್ಲ |
ಎಣಿಕೆಗಳ ಪೂರಯಿಪ ಸಾಧನಗಳಿಲ್ಲ ||
ಜನುಮಜನುಮಗಳಿಂತು ಪೇಚಾಟ, ತಿಣಕಾಟ |
ಮುನಿವುದಾರಲಿ, ಪೇಳು – ಮಂಕುತಿಮ್ಮ || 568 ||

ಪದ-ಅರ್ಥ: ಭಾವಿತಕೊಪ್ಪುವುಪಕರಣ = ಭಾವಿತಕೆ(ಭಾವನೆಗಳಿಗೆ) + ಒಪ್ಪುವ + ಉಪಕರಣ, ಪೂರಯಿಪ = ಪೂರೈಸುವ, ಜನುಮಜನುಮಗಳಿಂತು = ಜನುಮ(ಜನ್ಮ) + ಜನುಮಗಳು + ಇಂತು, ಮುನಿವುದಾರಲಿ = ಮುನಿವುದು(ಕೋಪ ಮಾಡಿಕೊಳ್ಳುವುದು) + ಆರಲಿ (ಯಾರಲ್ಲಿ)

ವಾಚ್ಯಾರ್ಥ: ಮನಸ್ಸಿನ ಭಾವನೆಗಳನ್ನು ಹೊರತರುವ ಉಪಕರಣ ನಮಗೆ ಇಲ್ಲ. ನಮ್ಮ ಅಪೇಕ್ಷೆಗಳನ್ನು ಪೂರೈಸುವ ಸಾಧನಗಳೂ ಇಲ್ಲ. ಜನ್ಮಜನ್ಮಾಂತರಗಳಲ್ಲಿ ಇದೇ ಪೇಚಾಟ, ತಿಣುಕಾಟ. ಯಾರ ಮೇಲೆ ಕೋಪ ಮಾಡಿಕೊಳ್ಳುವುದು ಹೇಳು?

ವಿವರಣೆ: ನಮ್ಮ ಇಂದಿನ ಪ್ರಪಂಚ 'ಫಾಸ್ಟ್ ಫುಡ್' ಕಾಲದ್ದು. ಎಲ್ಲದಕ್ಕೂ ಆತುರ. ಒಳ್ಳೆಯದು ಎಂದು ಭಾವಿಸಿದ್ದೆಲ್ಲ ತಕ್ಷಣವೇ ನಡೆದುಬಿಡಬೇಕು. ತಡವಾದರೆ ಪ್ರತಿಕ್ರಿಯೆ, ಕ್ರಾಂತಿಯ ಮಾತು. ಇಂದು ಕ್ರಾಂತಿ ಎಂದರೆ ಅವಿಧೇಯತೆ, ದಂಗೆ, ಬಂಡಾಯ. ಇರುವ ವ್ಯವಸ್ಥೆಯನ್ನು ಬುಡಮೇಲು ಮಾಡಿಬಿಡುವುದು. ಹೊಸದನ್ನು ಆಮೇಲೆ ನೋಡಿಕೊಳ್ಳೋಣ. ಇದು ಕೆಲವು ಪ್ರಗತಿಯ ಆತುರಗಾರರ ತರ್ಕ. ಪ್ರಗತಿಸಾಧನೆ ಒಂದು ಜೀವಮಾನದಲ್ಲಿ, ಒಂದೇ ದಿನದಲ್ಲಿ ನಡೆಯುವ ಕೆಲಸವಲ್ಲ. ಅದು ಪ್ರತಿದಿನವೂ, ಪ್ರತಿಕ್ಷಣವೂ ಹಂತಹಂತವಾಗಿ ನಡೆಯುವಂಥದ್ದು. ಅದಕ್ಕಾಗಿ ನಾವು ಪ್ರತಿದಿನವೂ ಶ್ರಮ ಪಡಲೇಬೇಕು. ಪ್ರಗತಿ ಆಯಿತು ಎಂದುಕೊಳ್ಳುವಾಗಲೇ ಅದರ ಹಿಂದೆಯೇ ಒಂದು ಅಪಗತಿ ಬಂದು ವಕ್ಕರಿಸುತ್ತದೆ. ಅದನ್ನು ನಿವಾರಿಸಲು ಮತ್ತೆ ಪ್ರಯತ್ನ. ಇದೇ ಮಾನವ ವಿಧಿ.

ಮನುಷ್ಯನ ಕೈಯ ಯೋಜನೆ ಮಂಗನ ಕೈಯಲ್ಲಿ ಸಿಕ್ಕ ಹೂಮಾಲೆ ಇದ್ದಂತೆ. ಎಂಥ ಒಳ್ಳೆಯ ವ್ಯವಸ್ಥೆಯನ್ನು ನಾವು ಮನಸ್ಸಿನಲ್ಲಿ ಕಲ್ಪಿಸಿಕೊಂಡರೂ, ಯಾವುದೋ ಮನುಷ್ಯ ಸ್ವಭಾವದಲ್ಲಿಯ ಒಂದು ಅಲ್ಪ ಗುಣ ಎದ್ದು ಬಂದು ನಮ್ಮ ಯೋಜನೆಗಳಿಗೆ ವಿಷ ಬೆರೆಸುತ್ತದೆ. ನಾವು ಎಷ್ಟು ವಿವೇಕ ಮತ್ತು ಎಚ್ಚರಗಳಿಂದ ಜೀವನದ ಕಾರ್ಯವನ್ನು ನಡೆಸಿದರೂ ಒಂದಷ್ಟು ಕಷ್ಟ ಶೇಷ ನಮ್ಮ ಪಾಲಿಗೆ ಉಳಿದೇ ತೀರುತ್ತದೆ. ಅದೇ ಪ್ರಕೃತಿಯ ನಿಯಮ.

ಈ ಹತಾಶೆಯನ್ನೇ ಕಗ್ಗ ನಮ್ಮ ಮುಂದೆ ಇಡುತ್ತದೆ. ನಮ್ಮ ಮನಸ್ಸಿನಲ್ಲಿ ಭಾವಿಸಿಕೊಂಡ ಏನೆಲ್ಲ ಯೋಜನೆಗಳನ್ನು ಕಾರ್ಯಗತ ಮಾಡುವ ಸರಿಯಾದ ಉಪಕರಣಗಳು ನಮ್ಮ ಬಳಿ ಇಲ್ಲ. ನಮ್ಮ ಅಪೇಕ್ಷೆಗಳು ಸಾವಿರಾರು. ಅವುಗಳ ಪೂರೈಕೆಗೆ ಒದ್ದಾಡುತ್ತೇವೆ. ಆದರೆ ಅವುಗಳನ್ನು ಪೂರೈಸಲು ನಮ್ಮ ಬಳಿ ಸರಿಯಾದ ಸಾಧನಗಳಿಲ್ಲ. ಇದು ಈ ಒಂದು ಜನ್ಮದ ಪರಿಪಾಟಲ್ಲ. ಜನ್ಮ ಜನ್ಮಾಂತರಗಳಲ್ಲೂ ಇದೇ ನಮ್ಮ ಕಷ್ಟ. ಇದಕ್ಕಾಗಿ ಯಾರಲ್ಲಿ ದೂರುವುದು?

ಹಾಗೆಂದರೆ ನಮ್ಮ ಪ್ರಯತ್ನಗಳು ಎಂದಿಗೂ ಸಫಲವಾಗುವುದೇ ಇಲ್ಲವೆ? ಕಷ್ಟಪಡುವುದೊಂದೇ ನಮ್ಮ ಕರ್ಮವೆ? ಈ ಕಗ್ಗ ಕೇವಲ ಪ್ರಶ್ನೆ ಕೇಳಿದಂತೆ ಕಂಡರೂ, ಅದು ನಮ್ಮನ್ನು ಉತ್ತರವನ್ನು ಕಂಡುಕೊಳ್ಳುವಂತೆ ಪ್ರಚೋದಿಸುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, 'ಯಾವ ವ್ಯಕ್ತಿಯೂ ಸಂಪೂರ್ಣ ತೃಪ್ತನಾಗುವುದು ಸಾಧ್ಯವಿಲ್ಲ. ಅದೇ ದುಃಖದ ಮೂಲ. ಆದರೆ ಅದೇ ಒಂದು ದೊಡ್ಡ ಸೌಭಾಗ್ಯವೂ ಕೂಡ. ಈ ಪ್ರಪಂಚದಲ್ಲಿ ಅವನು ತೃಪ್ತಿಯಿಂದಿರಲು ಹೇಗೆ ಸಾಧ್ಯ? ನಾಳೆ ಈ ಪ್ರಪಂಚವೇ ಸ್ವರ್ಗವಾದರೂ ಕೂಡ, ನಾವು ಹೇಳುತ್ತೇವೆ. ಇದನ್ನು ತೆಗೆದುಕೊಂಡು ಹೋಗಿ ನಮಗೆ ಇದಕ್ಕಿಂತ ಶ್ರೇಷ್ಠವಾದ ಸ್ವರ್ಗವನ್ನು ಕೊಡು ಎಂದು. ಇದಕ್ಕೆ ಕಾರಣ ಮನುಷ್ಯನ ಮನಸ್ಸು ಅನಂತವನ್ನೇ ಅರಸುತ್ತದೆ. ಈ ಅರಸುವಿಕೆಯೇ ಧರ್ಮ'.

ಅನಂತತೆಯ ಹುಡುಕಾಟ ಸದಾಕಾಲದ್ದು. ಕೊನೆಮೊದಲಿಲ್ಲದ್ದು. ಆದ್ದರಿಂದ ಪೇಚಾಟ, ತಿಣುಕಾಟಗಳು ಜನ್ಮ ಜನ್ಮಾಂತರಗಳಲ್ಲಿ ನಮ್ಮೊಡನೆಯೇ ಇರುವಂಥವುಗಳು.

ಪದಬಂಧ 4876

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಂದೆಯ ತಂದೆ (4)
3.ಕೊನೆಗೆ ರೋಷವಿದ್ದರೆ ಬಹಿರಂಗವಾಗಿ ವ್ಯವಹರಿಸುವುದು! (4)
5.ಒಳ್ಳೆಯ ಅದೃಷ್ಟವನ್ನು ಹೊಂದಿರುವುದು (3)
7.ನಾಟಕದಲ್ಲಿ ಕಾಣಿಸಿದ ಸ್ವರ್ಗ! (2)
8.ಮಹಿಮಾವಂತನ ಮೇಲೆ ಬಿದ್ದಿರುವ ಮಂಜು (2)
11.ಪುಢಾರಿ ಹತ್ತಿರವಿರುವ ಶತ್ರು (2)
13.ಕೀವು, ರಕ್ತಗಳಿಂದ ಕೂಡಿ ಮೈಮೇಲೆ ಏಳುವ ಗುಳ್ಳೆ (2)
14.ಕತ್ತಿ ಇತ್ಯಾದಿಗಳನ್ನಿಡುವ ಕೋಶ (3)
16.ಸಮುದ್ರಕ್ಕಿರುವ ಇನ್ನೊಂದು ಹೆಸರು (4)
17.ಮರಳುಗಾಡಿದು (4)

ಮೇಲಿಂದ ಕೆಳಕ್ಕೆ
1.ಈಕೆ ತಂದೆಯ ತಾಯಿ (4)
2.ಹರಸುವಾಗ ಕಾಣಿಸಿದ ಆಕಳು (2)
3.ಹಾಡಿನ ಧಾಟಿ (2)
4.ಹೆಂಡತಿಯ ಸೋದರಿಯ ಗಂಡ (3)
6.ಮುಂದೆ ಬರಲಿರುವ ಕಾಲ (3)
7.ನಾಮವನ್ನು ಧರಿಸಿದವನು (4)
9.ಮಜವಾಗಿ ಆರಂಭವಾಗಿರುವ ಸುದ್ದಿ (4)
10.ಕುರು ವಂಶದಲ್ಲಿ ಹುಟ್ಟಿದವನು (3)
12.ಈತ ಪ್ರಗತಿಶೀಲ ಸ್ವಭಾವದವನು (4)
13.ಗುಡಿಸಲು ಇಲ್ಲಿದೆ (3)
14.ಪಗಡೆ ದಾಳದಲ್ಲಿ ಸೂಚಿತವಾಗುವ ಸಂಖ್ಯೆ (2)
15.ಸುಗಮವಾಗಿ ಕಿತ್ತಿರುವ ಹೂವು (2)



4875ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಪ್ರೇಮ 5.ಪಳಿಯುಳಿಕೆ 6.ಗಡವ 7.ಪಾರ್ಥಿವ 8.ಸಾರ್ವಜನಿಕ 9.ಸಂಧಾನ 10. ಪ್ರಶಾಂತ 13.ಉಪಕರಣ 14.ನಿಜ
ಮೇಲಿಂದ ಕೆಳಕ್ಕೆ: 1.ಮನೋರೋಗ 2.ಸಾಯುಜ್ಯ 4.ಮಹೋತ್ಸವ 5.ಪರ್ಯವಸಾನ 7.ಪಾಕಪ್ರವೀಣ 9.ಸಂಜೀವಿನಿ 11.ತಪಸೀಲು 12.ಸಂಕರ

ಸುಡೊಕು 5262

7	5			1	6		8	
		6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5261 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಅಹೋರಾತ್ರಿ ಧರಣಿ: ‘ಕೈ’ ನಾಯಕರ ಅಸ್ತ್ರಕ್ಕೆ ಪ್ರತ್ಯಸ್ತ್ರ ಪ್ರಯೋಗಿಸಲು ಸರ್ಕಾರದ ಚಿಂತನೆ

ಸಂಧಾನ ಫಲಿಸದಿದ್ದರೆ ಅಧಿವೇಶನ ಮೊಟಕು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟದಿಂದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ವಜಾ ಮಾಡುವಂತೆ ಪಟ್ಟು ಹಿಡಿದು ವಿಧಾನಮಂಡಲದ ಉಭಯ ಸದನಗಳಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿರುವ ಕಾಂಗ್ರೆಸ್, ಸೋಮವಾರದಿಂದ ಸದನದ ಹೊರಗೂ ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ‘ಕೈ’ ನಾಯಕರ ಈ ಅಸ್ತ್ರಕ್ಕೆ ಪ್ರತ್ಯಸ್ತ್ರ ಪ್ರಯೋಗಿಸಲು ಮುಂದಾಗಿರುವ ಸರ್ಕಾರ, ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಸಾಧ್ಯತೆ ಇದೆ.

ಮಾತುಕತೆ ಅಥವಾ ಸಂಧಾನಕ್ಕೆ ಬಗ್ಗದೆ ಪ್ರತಿಭಟನೆ ಮುಂದುವರೆಸಲು ಕಾಂಗ್ರೆಸ್ ತೀರ್ಮಾನಿಸಿದೆ. ಅಹೋರಾತ್ರಿ ಧರಣಿ ಈಗಾಗಲೇ ನಾಲ್ಕನೇ ದಿನಕ್ಕೆ ಕಾಲಿಟ್ಟಿದ್ದು, ‘ರಾಷ್ಟ್ರ ಧ್ವಜಕ್ಕೆ ಮಾಡಿದ ಅವಮಾನವನ್ನು ಸಹಿಸಿಕೊಳ್ಳಿ ಎಂದು ಬಿಜೆಪಿಯವರು ಹೇಳಿದರೆ, ನಾವು ಸಹಿಸಿಕೊಳ್ಳಲು ಸಿದ್ಧರಿಲ್ಲ’ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಅಲ್ಲದೆ, ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡುತ್ತೇವೆ ಎಂದೂ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ, ಸೋಮವಾರ (ಫೆ. 21) ಕೂಡಾ ಉಭಯ ಸದನಗಳಲ್ಲಿ ಆರೋಪ-ಪ್ರತ್ಯಾರೋಪ, ಮಾತಿನ ಚಕಮಕಿ, ಗದ್ದಲ, ಕೋಲಾಹಲ ಉಂಟಾಗುವ ಸಾಧ್ಯತೆ ಇದೆ.

ಮುಖ್ಯಾಂಶಗಳು

- ವಂದನಾ ನಿರ್ಣಯದ ಭಾಷಣ: ಚರ್ಚೆಗೆ ಲಿಖಿತ ಉತ್ತರ ಸಾಧ್ಯತೆ
- ಗದ್ದಲದ ನಡುವೆಯೇ ಪ್ರಮುಖ ಮಸೂದೆಗಳ ಮಂಡನೆ ಸಂಭವ
- ಬಿಜೆಪಿಯವರಿಗೆ ಹೋರಾಟದ ಮೌಲ್ಯ ಗೊತ್ತಿಲ್ಲ –ಪ್ರತಿಪಕ್ಷ ಟೀಕೆ

ಸೋಮವಾರ ಅಥವಾ ಮಂಗಳವಾರ ರಾಜ್ಯಪಾಲರ ವಂದನಾ ನಿರ್ಣಯದ ಭಾಷಣದ ಮೇಲಿನ ಚರ್ಚೆಗೆ ಲಿಖಿತ ಉತ್ತರವನ್ನು ಸದನದಲ್ಲಿ ಮಂಡಿಸಿ ಅನಿರ್ದಿಷ್ಟಾವಧಿ ಮುಂದೂಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವಿಧಾನಸಭೆಯಲ್ಲಿ ಸಭಾಧ್ಯಕ್ಷರು, ವಿಧಾನ ಪರಿಷತ್‌ನಲ್ಲಿ ಸಭಾಪತಿ ಇಬ್ಬರೂ ಕಾಂಗ್ರೆಸ್ ಶಾಸಕರ ಮನವೊಲಿಕೆ ಪ್ರಯತ್ನ ಮುಂದುವರಿಸುವ ಸಾಧ್ಯತೆ ಇದೆ. ಕೆಲವು ಮಸೂದೆಗಳಿಗೆ ಸದನದ ಅನುಮೋದನೆ ಸಿಗಬೇಕಿದೆ. ಸೋಮವಾರದ ಕಾರ್ಯಕಲಾಪಪಟ್ಟಿಯಲ್ಲಿನಾಲ್ಕುಪ್ರಮುಖಮಸೂದೆಗಳನ್ನು ಮಂಡಿಸುವ ಪ್ರಸ್ತಾವವೂ ಇದೆ. ಆದರೆ, ಗದ್ದಲ ಉಂಟಾದರೆ, ಅದರ ನಡುವೆಯೇ ಪ್ರಶ್ನೋತ್ತರ ಕಲಾಪ ನಡೆಸುವುದರ ಜತೆಗೆ ಮಸೂದೆಗಳನ್ನು ಮಂಡಿಸಲು ಸರ್ಕಾರ ಚಿಂತನೆ ನಡೆಸಿದೆ.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ರಾಷ್ಟ್ರ ಧ್ವಜಕ್ಕಿಂತ ಸಚಿವ ಸ್ಥಾನವೇ ಮುಖ್ಯ ಎಂದು ಬಿಜೆಪಿ ಹಟಹಿಡಿದು ಕುಳಿದಿದೆ. ರಾಷ್ಟ್ರೀಯ ಲಾಂಛನಗಳಿಗೆ ಅವಮಾನ ಮಾಡುವುದು ರಾಷ್ಟ್ರದ್ರೋಹ ಮತ್ತು ಸ್ಪಷ್ಟ ಕಾನೂನಿನ ಉಲ್ಲಂಘನೆ. ರಾಷ್ಟ್ರ ಧ್ವಜಕ್ಕಾದರೂ ಅವಮಾನ ಮಾಡುತ್ತೇವೆ. ಕಾನೂನನ್ನೂ ಉಲ್ಲಂಘಿಸುತ್ತೇವೆ, ನಮ್ಮನ್ನು ಯಾರು ಪ್ರಶ್ನಿಸಬಾರದು ಎನ್ನುವ ಬಿಜೆಪಿ ಧೋರಣೆಯನ್ನು ನಾವು ಪ್ರತಿಭಟಿಸುತ್ತಿದ್ದೇವೆ’ ಎಂದರು.

‘ರಾಷ್ಟ್ರ ಧ್ವಜಕ್ಕೆ ಅವಮಾನ ಮಾಡುವುದು ಬಿಜೆಪಿಯವರಿಗೆ ಸಣ್ಣ ವಿಷಯ ಇರಬಹುದು. ಆದರೆ, ನಮಗೆ ಇದು ಬಹಳ ಗಂಭೀರ ಸಂಗತಿ. ರಾಷ್ಟ್ರಧ್ವಜ ಹಿಡಿದು ಲಕ್ಷಾಂತರ ಮಂದಿ ಪ್ರಾಣ ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟದ ಮೌಲ್ಯ ಬಿಜೆಪಿಯವರಿಗೆ ಗೊತ್ತಿಲ್ಲವಾದ್ದರಿಂದ ಅವರಿಗೆ ಹುತಾತ್ಮರ ಬೆಲೆ ಕೂಡ ಗೊತ್ತಿಲ್ಲ. ಹುತಾತ್ಮರು ಹಿಡಿದ ರಾಷ್ಟ್ರ ಧ್ವಜದ ಬೆಲೆಯೂ ಗೊತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿರೋಧ ಪಕ್ಷಕ್ಕೆ ನೈತಿಕತೆ ಇಲ್ಲ ಎನ್ನುವ ಮುಖ್ಯಮಂತ್ರಿ ಬೊಮ್ಮಾಯಿ ಅವರ ಮಾತಿಗೆ ಪ್ರತಿಕ್ರಿಯಿಸಿ, ‘ನಮಗೆ ಬೊಮ್ಮಾಯಿ ಅವರಿಗಿಂತ ಹೆಚ್ಚು ಹೋರಾಟದ ಅನುಭವವಿದೆ. ಸ್ವಾತಂತ್ರ್ಯ ಹೋರಾಟದ ತ್ಯಾಗ, ಬಲಿದಾನ ನಮಗೆ ಗೊತ್ತಿದೆ. ಅವರಿಗೇನು ಗೊತ್ತಿದೆ ಇದೆಲ್ಲ’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಈಶ್ವರಪ್ಪ ಅವರನ್ನು ಒಂದೆರಡು ದಿನಗಳಲ್ಲಿ ವಜಾ ಮಾಡುತ್ತಾರೆ ಎಂದು ಭಾವಿಸಿ ರಾಜ್ಯಪಾಲರಿಗೆ ಗೌರವ ಕೊಟ್ಟು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ಮಾಡಿದ್ದೆವು. ಇಲ್ಲದಿದ್ದರೆ ರಾಜ್ಯಪಾಲರ ಭಾಷಣಕ್ಕೂ ಅವಕಾಶ ನೀಡುತ್ತಿರಲಿಲ್ಲ. ಮುಖ್ಯಮಂತ್ರಿಗೆ ಸ್ವಾಭಿಮಾನ ಇದ್ದಿದ್ದರೆ, ಮುರುಗೇಶ್ ನಿರಾಣಿ ಮುಂದಿನ ಮುಖ್ಯಮಂತ್ರಿ ಎಂದು ಹರಕು ಬಾಯಿ ಈಶ್ವರಪ್ಪ ಹೇಳಿದಾಗಲೇ ವಜಾ ಮಾಡಬೇಕಿತ್ತು. ಇನ್ನು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ವಿರುದ್ಧವೇ ರಾಜ್ಯಪಾಲರಿಗೆ ಪತ್ರ ಬರೆದು ದೂರು ನೀಡಿದ್ದರು. ಈಶ್ವರಪ್ಪನಿಗೆ ಅವರ ಸರ್ಕಾರದವರ ಮೇಲೆ ನಿಷ್ಠೆ ಇಲ್ಲ’ ಎಂದರು.

ಕಾಂಗ್ರೆಸ್ ಹೋರಾಟಕ್ಕೆ ಬಗ್ಗಲ್ಲ: ಈಶ್ವರಪ್ಪ

ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ‘ರಾಷ್ಟ್ರಧ್ವಜ ನನ್ನ ತಾಯಿಗೆ ಸಮಾನ. ಅದಕ್ಕೆ ಯಾರಾದರೂ ಅವಮಾನ ಮಾಡಿದರೆ ಸಹಿಸಲಾಗದು. ಅಂತಹವರು ರಾಷ್ಟ್ರದ್ರೋಹಿ ಎನಿಸಿಕೊಳ್ಳುತ್ತಾರೆ. ಹೀಗಾಗಿ, ದೇಶದ ಹಿತದೃಷ್ಟಿಯಿಂದ ಹೇಳಿಕೆ ನೀಡಿದ್ದೇನೆ’ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಸ್ಪಷ್ಟಪಡಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸದನದ ಸಂದರ್ಭದಲ್ಲಿ ಆಡಿದ ಮಾತನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಹೋರಾಟ ಮಾಡುತ್ತಿದ್ದಾರೆ. ಅವರು ಹೋರಾಟ ಮಾಡಲಿ, ಅದಕ್ಕೆ ನಾನು ಬಗ್ಗುವುದಿಲ್ಲ’ ಎಂದರು.

‘ಇದೇ ವಿಚಾರವನ್ನು ಇಟ್ಟುಕೊಂಡು ಕಲಾಪದ ಸಮಯವನ್ನು ಹಾಳು ಮಾಡುವುದು ಬೇಡ. ಈಗಾಗಲೇ ಒಂದು ವಾರ ಹಾಳಾಗಿದೆ. ಇನ್ನೊಂದು ವಾರವಾದರೂ ಅಧಿವೇಶನದಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ, ಜನರ ತೊಂದರೆಗಳ ಕುರಿತು ಚರ್ಚಿಸೋಣ’ ಎಂದು ಹೇಳಿದರು.

‘ಭಗವಾಧ್ವಜದ ವಿವಾದವನ್ನು ಇಲ್ಲಿಗೆ ಬಿಡಿ ಎಂದು ನಾನು ಹೇಳುವುದಿಲ್ಲ. ಎರಡೂ ಪಕ್ಷದವರು ರಾಜ್ಯದ ಜನರ ಬಳಿಗೆ ಹೋಗೋಣ. ಜನರೇ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿ. ಮತ್ತೊಮ್ಮೆ ಈ ಕುರಿತು ಮಾತನಾಡುವುದಿಲ್ಲ. ಕಲಾಪದಲ್ಲಿ ಈ ವಿಷಯವನ್ನು ಕೈಬಿಡಿ’ ಎಂದು ತಿಳಿಸಿದರು.

ಶಿರಸಿ: ಡಿ.ಎಸ್.ಶ್ರೀಧರಗೆ ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಶಿರಸಿ: ಯಕ್ಷಗಾನ ಅಕಾಡೆಮಿ ವತಿಯಿಂದ 2020ನೇ ಸಾಲಿಗೆ ನೀಡಲಾಗುವ ಪ್ರತಿಷ್ಠಿತ ಪಾರ್ತಿಸುಬ್ಬ ಪ್ರಶಸ್ತಿಯನ್ನು ಯಕ್ಷಗಾನ ಅರ್ಥಧಾರಿ ಶಿವಮೊಗ್ಗದ ಡಿ.ಎಸ್.ಶ್ರೀಧರ ಅವರಿಗೆ ಹಾಗೂ ಮೂವರಿಗೆ ಗೌರವ ಪ್ರಶಸ್ತಿ, ಹತ್ತು ಮಂದಿಗೆ ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗಳನ್ನು ಇಲ್ಲಿನ ಟಿ.ಆರ್.ಸಿ. ಸಭಾಂಗಣದಲ್ಲಿ ಭಾನುವಾರ ಪ್ರದಾನ ಮಾಡಲಾಯಿತು.

ಅಕಾಡೆಮಿ ಅಧ್ಯಕ್ಷ ಡಾ.ಜಿ. ಎಲ್.ಹೆಗಡೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷೆ ವೀಣಾ ಶೆಟ್ಟಿ, ಅಕಾಡೆಮಿ ಸದಸ್ಯರು ಪ್ರಶಸ್ತಿ ನೀಡಿದರು. ಯಾವೊಬ್ಬ ಸಚಿವ, ಶಾಸಕರೂ ಕಾರ್ಯಕ್ರಮಕ್ಕೆ ಹಾಜರಾಗದಿರುವುದು ಕಲಾಸಕ್ತರಲ್ಲಿ ಬೇಸರ ಮೂಡಿಸಿತು. ಗೌರವ ಪ್ರಶಸ್ತಿಯನ್ನು ಶಿರಸಿಯ ಡಾ.ವಿಜಯ ನಳಿನಿ ರಮೇಶ್, ಹರಪನಹಳ್ಳಿಯ ಬಿ.ಪರಶುರಾಮ್ ಹಾಗೂ ಮಂಗಳೂರಿನ ದಿ.ತಿಮ್ಮಪ್ಪ ಗುಜರನ್ ಅವರ ಪರವಾಗಿ ಪತ್ನಿ ಗುಲಾಬಿ ಗುಜರನ್ ಅವರಿಗೆ ಪ್ರದಾನ ಮಾಡಲಾಯಿತು.

ಯಕ್ಷಗಾನ ಅಕಾಡೆಮಿ ವತಿಯಿಂದ ನೀಡಲಾಗುವ ಪ್ರತಿಷ್ಠಿತ ಪಾರ್ತಿಸುಬ್ಬ ಪ್ರಶಸ್ತಿಯನ್ನು ಯಕ್ಷಗಾನ ಅರ್ಥಧಾರಿ ಶಿವಮೊಗ್ಗದ ಡಿ.ಎಸ್.ಶ್ರೀಧರ ಅವರಿಗೆ ಹಾಗೂ ಮೂವರಿಗೆ ಗೌರವ ಪ್ರಶಸ್ತಿ, ಹತ್ತು ಮಂದಿಗೆ ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗಳನ್ನು ಶಿರಸಿಯ ಟಿ.ಆರ್.ಸಿ. ಸಭಾಂಗಣದಲ್ಲಿ ಭಾನುವಾರ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರು (ಕುಳಿತವರು): ಗುಲಾಬಿ ಗುಜರನ್ (ದಿ.ತಿಮ್ಮಪ್ಪ ಗುಜರನ್ ಅವರ ಪರವಾಗಿ ಪತ್ನಿಯಿಂದ ಸ್ವೀಕಾರ), ಶ್ರೀಧರ ಡಿ.ಎಸ್, ಬಿ.ಪರಶುರಾಮ, ಡಾ.ವಿಜಯನಳಿನಿ ರಮೇಶ, ಹನುಮಂತ ರಾಯಪ್ಪ. ನಿಂತವರು: ಗೋಪಾಲ ಆಚಾರ್ಯ, ಬೇಲ್ತೂರು ರಮೇಶ, ಅವರ್ಸಾ ಶ್ರೀನಿವಾಸ ದುಡಿಪಾಳ, ಹರಿನಾರಾಯಣ ಬೈಪಾಡಿತ್ತಾಯ, ಎ.ಎಂ. ಮುಳುವಾಗಲಪ್ಪ, ಎಂ.ಆರ್.ಹೆಗಡೆ ಕಾನಗೋಡ, ಶಂಭು ಶರ್ಮಾ ವಿಟ್ಲ, ಸುಬ್ರಹ್ಮಣ್ಯ ಧಾರೇಶ್ವರ, ಸಂಜಯ ಕುಮಾರ ಶೆಟ್ಟಿ. ಜಿ.ಎಸ್.ಭಟ್ ಮೈಸೂರು, ಎಚ್.ಎಸ್. ಶಿವರುದ್ರಪ್ಪ (ರಿಜಿಸ್ಟ್ರಾರ್), ಜಿ.ಎಲ್.ಹೆಗಡೆ (ಅಧ್ಯಕ್ಷ), ವೀಣಾ ಶೆಟ್ಟಿ, ನಿರ್ಮಲಾ ಹೆಗಡೆ ಹಾಗೂ ಇತರರು ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಂಬ್ ಕಚ್ಚಾ ವಸ್ತು ಪೂರೈಸುತ್ತಿದ್ದ ನಾಲ್ವರ ಬಂಧನ

ಗಡ್ಚಿರೋಲಿ (ಪಿಟಿಐ): ಬಾಂಬ್ ಸ್ಫೋಟ ಮತ್ತು ಅದರ ತಯಾರಿಕೆಗೆ ಅಗತ್ಯ ವಸ್ತುಗಳನ್ನು ನಕ್ಸಲರಿಗೆ ಪೂರೈಕೆ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಇಲ್ಲಿನ ಪೊಲೀಸರು ನಾಲ್ವರು ನಕ್ಸಲ್ ಸಹಚರರನ್ನು ಬಂಧಿಸಿದ್ದಾರೆ.

ದಾಮ್ರಾಂಚ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ಮಧ್ಯರಾತ್ರಿ ಬಂಗಾರ್‌ಪೇಟೆ ಗ್ರಾಮದ ಬಳಿ ನಕ್ಸಲ್ ಸಹಚರರ ಗುಂಪು ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿರುವಾಗಲೇ ನಕ್ಸಲ್ ವಿರೋಧ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಒಬ್ಬ ತಪ್ಪಿಸಿಕೊಂಡಿರುವುದಾಗಿ ಭಾನುವಾರ ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತೆಲಂಗಾಣದಿಂದ ಛತ್ತೀಸಗಡಕ್ಕೆ ಸರಬರಾಜು ಆಗುತ್ತಿದ್ದ 3,500 ಮೀಟರ್ ಉದ್ದದ 10 ಬಂಡಲ್ ಕಾರ್ಡೆಕ್ಸ್ ತಂತಿಯನ್ನು ವಶಪಡಿಸಿಕೊಳ್ಳಲಾಗಿದೆ. ಇದನ್ನು ಬ್ಯಾರೆಲ್ ಗ್ರೆನೇಡ್ ಲಾಂಚರ್ ಮತ್ತು ಕೈನಿಂದ ಎಸೆಯುವ ಗ್ರೆನೇಡ್ ಮತ್ತು ಸುಧಾರಿತ ಸ್ಫೋಟಕ ಸಾಧನಗಳ ತಯಾರಿಕೆಯಲ್ಲಿ ಬಳಸಲಾಗುತ್ತಿತ್ತು ಎಂದು ಗಡ್ಚಿರೋಲಿಯ ಎಸ್ಪಿ ಅಂಕಿತ್ ಗೋಯಲ್ ತಿಳಿಸಿದ್ದಾರೆ.

ಇದೇ ಗಡ್ಚಿರೋಲಿ ಜಿಲ್ಲೆಯಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ಪೊಲೀಸರು ಎನ್‌ಕೌಂಟರ್ ಮೂಲಕ 26 ನಕ್ಸಲರನ್ನು ಕೊಂದು ಹಾಕಿದ್ದರು.

‘ಸಾಮ್ಯತೆ ಇಲ್ಲ, ಹೋಲಿಕೆ ಸರಿಯಲ್ಲ’

ನವದೆಹಲಿ: ಭಾರತ ಮತ್ತು ಚೀನಾ ಗಡಿಭಾಗದ ಸ್ಥಿತಿ ಮತ್ತು ಉಕ್ರೇನ್ ಗಡಿಯಲ್ಲಿ ರಷ್ಯಾದ ಸೇನೆಯ ನಿಯೋಜನೆಯನ್ನು ಪರಸ್ಪರ ಹೋಲಿಕೆ ಮಾಡುವ ಅಮೆರಿಕದ ತರ್ಕವನ್ನು ಭಾರತ ತಿರಸ್ಕರಿಸಿದೆ.

ಈ ಎರಡರ ನಡುವೆ ಸಾಮ್ಯತೆ ಇದೆ ಎಂದು ನಾನು ಭಾವಿಸುವುದಿಲ್ಲ. ಎರಡೂ ಭಿನ್ನವಾದುದು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು. ಅವರು ಮ್ಯುನಿಚ್‌ನ ಭದ್ರತಾ ಸಮ್ಮೇಳನದಲ್ಲಿ ಮಾತನಾಡಿದರು.

ಉಕ್ರೇನ್‌ನಲ್ಲಿ ರಷ್ಯಾವು ಸೇನೆ ನಿಯೋಜನೆ ಮಾಡುತ್ತಿರುವುದನ್ನು ವಿರೋಧಿಸುವಲ್ಲಿ ಭಾರತ ತನ್ನ ಬೆಂಬಲಕ್ಕೆ ನಿಲ್ಲಬೇಕು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕೋರಿದ್ದರು.

2023ರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ವರಿಷ್ಠರ ಸಿದ್ಧತೆ

25ಕ್ಕೆ ದೆಹಲಿಯಲ್ಲಿ ‘ಕೈ’ ನಾಯಕರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ ಒಂದು ವರ್ಷ ಎರಡು ತಿಂಗಳು ಬಾಕಿ ಇರುವಾಗಲೇ ಅತ್ತ ಕಣ್ಣಿಟ್ಟು ಕಾರ್ಯತಂತ್ರ ರೂಪಿಸಲು ಮುಂದಾಗಿರುವ ಕಾಂಗ್ರೆಸ್ ಹೈಕಮಾಂಡ್, ಈ ಬಗ್ಗೆ ಚರ್ಚಿಸಲು ಇದೇ 25ರಂದು ದೆಹಲಿಗೆ ಬರುವಂತೆ ಪಕ್ಷದ ರಾಜ್ಯ ಮುಖಂಡರಿಗೆ ಆಹ್ವಾನ ನೀಡಿದೆ.

25ರಂದು ಸಂಜೆ 4 ಗಂಟೆಗೆ ದೆಹಲಿಯಲ್ಲಿ ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಸಭೆ ನಡೆಯಲಿದೆ. ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅವರಿಗೆ ಸಭೆಗೆ ಬರುವಂತೆ ಆಹ್ವಾನ ಬಂದಿದೆ. ಪಕ್ಷದ ಕಾರ್ಯಾಧ್ಯಕ್ಷರು, ಇತರ ಹಿರಿಯ ನಾಯಕರೂ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ‘ನಾನು ಪಕ್ಷದ ಅಧ್ಯಕ್ಷನಾದ ಸಮಯದಲ್ಲೇ ಪಕ್ಷದ ಎಲ್ಲ ನಾಯಕರನ್ನು ಕರೆದುಕೊಂಡು ದೆಹಲಿಯಲ್ಲಿ ಹೈಕಮಾಂಡ್ ಜತೆ ಚರ್ಚೆ ಮಾಡಬೇಕು ಎಂದು ಸಮಯ ಕೇಳಿದ್ದೆ. ಅಧ್ಯಕ್ಷನಾದ ಬಳಿಕ ನನ್ನನ್ನು ಮತ್ತು ಸಿದ್ದರಾಮಯ್ಯ ಅವರನ್ನು ಕರೆದು ಪಕ್ಷ ಹೇಗೆ ಕೆಲಸ ಮಾಡಬೇಕು ಎಂಬ ವಿಚಾರವಾಗಿ ವರಿಷ್ಠರು ಚರ್ಚಿಸಿದ್ದರು. ಈಗ ಎಲ್ಲ ನಾಯಕರಿಂದ ಅಭಿಪ್ರಾಯ ಪಡೆಯಲು ಆಹ್ವಾನಿಸಿದ್ದಾರೆ. ನಮ್ಮ ಶಾಸಕರು, ಕಾರ್ಯಕರ್ತರಿಗೆ ಪಕ್ಷದ ವಿಚಾರಗಳ ಬಗ್ಗೆ ತರಬೇತಿ ನೀಡಬೇಕಾಗಿದೆ’ ಎಂದರು.

ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡಾ ಇರಲಿದ್ದಾರೆ. ರಾಜ್ಯ ರಾಜಕೀಯದ ಸದ್ಯದ ವಿದ್ಯಮಾನಗಳನ್ನು ಅವಲೋಕಿಸುವ ಜೊತೆಗೆ ಚುನಾವಣೆಗೆ ಸಿದ್ಧವಾಗುವ ನಿಟ್ಟಿನಲ್ಲಿ ಪಕ್ಷವನ್ನು ಸಂಘಟಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ. ಅಲ್ಲದೆ, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ವರಿಷ್ಠರು ರಾಜ್ಯ ನಾಯಕರಿಗೆ ಸಲಹೆ, ಸೂಚನೆ ನೀಡುವ ಸಾಧ್ಯತೆಯೂ ಇದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕೆಪಿಸಿಸಿ ಪ್ರಚಾರ ಸಮಿತಿಗೆ ಎಂ.ಬಿ. ಪಾಟೀಲ ಅವರ ನೇಮಕ ಹೊರತುಪಡಿಸಿದರೆ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ಇನ್ನೂ ಅಂತಿಮವಾಗಿಲ್ಲ. ಚುನಾವಣೆಗೆ ಸಿದ್ಧತೆ ನಡೆಸಲು ಪದಾಧಿಕಾರಿಗಳನ್ನು ನೇಮಿಸಿ, ಹೊಣೆಗಾರಿಕೆ ಹಂಚಬೇಕಿದೆ. ಜೊತೆಗೆ, ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಮುಂದಿಟ್ಟು ಹೋರಾಟಗಳನ್ನು ಹಮ್ಮಿಕೊಂಡು ಜನರ ಒಲವು ಗಳಿಸಬೇಕಿದೆ. ಜೊತೆಗೆ, ವಿವಿಧ ವಿಚಾರಗಳಲ್ಲಿ ಪಕ್ಷಕ್ಕೆ ಅನುಕೂಲವಾಗುವಂತೆ ರಾಜಕೀಯವಾಗಿ ತೆಗೆದುಕೊಳ್ಳಬೇಕಾದ ನಿಲುವುಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯುವ ನಿರೀಕ್ಷೆ ಇದೆ ಎಂದೂ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಚಂಬಲ್ ನದಿಗೆ ಬಿದ್ದ ದಿಬ್ಬಣದ ಕಾರು: ವರ ಸಹಿತ 9 ಜನರ ಸಾವು

ಕೋಟಾ (ಪಿಟಿಐ): ಮದುವೆ ದಿಬ್ಬಣದ ಕಾರು ಇಲ್ಲಿನ ಚಂಬಲ್ ನದಿಗೆ ಬಿದ್ದ ಪರಿಣಾಮ ವರ ಸೇರಿ ಒಂಬತ್ತು ಮಂದಿ ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿವಾಹ ಸಮಾರಂಭಕ್ಕೆ ಮಾರುತಿ ಎರ್ಟಿಗಾ ಕಾರಿನಲ್ಲಿ ಮಧ್ಯಪ್ರದೇಶದತ್ತ ಸಾಗುತ್ತಿದ್ದಾಗ, ಚಾಲಕನ ನಿಯಂತ್ರಣ ತಪ್ಪಿದ ಕಾರು ಮುಂಜಾನೆ ಸೇತುವೆಯಿಂದ ನದಿಗೆ ಬಿದ್ದು ಈ ದುರಂತ ಸಂಭವಿಸಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೇಸರ್ ಸಿಂಗ್ ಶೇಖಾವತ್ ತಿಳಿಸಿದ್ದಾರೆ. ಈ ದುರಂತ ಕುರಿತು ಬೆಳಿಗ್ಗೆ 7.50ರ ಸಮಯದಲ್ಲಿ ಮಾಹಿತಿ ದೊರೆಯಿತು. ಕೂಡಲೇ ರಕ್ಷಣಾ ಕಾರ್ಯ ಕೈಗೊಳ್ಳಲಾಯಿತು. ಮೊದಲಿಗೆ ಏಳು ಮೃತದೇಹಗಳನ್ನು ನದಿಯಿಂದ ಹೊರತೆಗೆಯಲಾಯಿತು. ಬಳಿಕ ಎರಡು ಶವಗಳನ್ನು ತೆಗೆಯಲಾಯಿತು ಎಂದು ಅವರು ಹೇಳಿದ್ದಾರೆ.

ವಿವಾಹದ ದಿಬ್ಬಣವು ರಾಜಸ್ಥಾನದ ಸವಾಯಿ ಮಾಧೋಪುರ್ ಜಿಲ್ಲೆಯ ಚೌತ್ ಕಾ ಬರ್ವಾಡ ಗ್ರಾಮದಿಂದ ಮಧ್ಯಪ್ರದೇಶದ ಉಜ್ಜಯಿನಿಯತ್ತ ಸಾಗುತ್ತಿತ್ತು ಎಂದು ಅವರು ವಿವರಿಸಿದ್ದಾರೆ.

‘ತನುಜಾ’ ಸಿನಿಮಾದಲ್ಲಿ ಯಡಿಯೂರಪ್ಪ ಅಭಿನಯ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ‘ತನುಜಾ’ ಚಿತ್ರಕ್ಕಾಗಿ ಬಣ್ಣ ಹಚ್ಚಿದ್ದಾರೆ.

ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ತನುಜಾ ಎಂಬ ವಿದ್ಯಾರ್ಥಿನಿ ಕೋವಿಡ್ ಕಾರಣದಿಂದ ನೀಟ್ ಪರೀಕ್ಷೆ ಬರೆಯಲಾಗದೆ ಅಸಹಾಯಕತೆ ತೋಡಿಕೊಂಡಿದ್ದರು. ವಿದ್ಯಾರ್ಥಿನಿಯ ಕಷ್ಟವನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಪತ್ರಕರ್ತರೊಬ್ಬರು ನೆರವಾಗಿದ್ದರು.

ಸುಮಾರು 350 ಕಿ.ಮೀ ದೂರ ಪ್ರಯಾಣ ಮಾಡಿ ಬಂದು ಪರೀಕ್ಷೆ ಬರೆದಿದ್ದೇ ರೋಚಕವಾಗಿದ್ದು, ಎಲ್ಲರ ಕುತೂಹಲ ಕೆರಳಿಸಿತ್ತು. ಇದನ್ನೇ ಒಂದು ಸಾಲಿನ ಕಥೆಯಾಗಿಸಿ ಚಿತ್ರ ಮಾಡಲಾಗುತ್ತಿದೆ. ಹರೀಶ್ ಎಂ.ಡಿ ಹಳ್ಳಿ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಚಿತ್ರದ ಮೊದಲ ಭಾಗದ ಚಿತ್ರೀಕರಣ ನಡೆದಿದೆ. ಯಡಿಯೂರಪ್ಪ ಅವರು ಬೆಳ್ಳಿತೆರೆಯಲ್ಲಿ ಹೇಗೆ ಕಾಣಿಸಿಕೊಳ್ಳಲಿದ್ದಾರೆ ಎಂಬ ಕುತೂಹಲ ಅವರ ಅಭಿಮಾನಿಗಳದ್ದು.

ಬಿಯಾಂಡ್ ವಿಷನ್ಸ್ ಸಿನಿಮಾಸ್ ಲಾಂಛನದಲ್ಲಿ ‘ತನುಜಾ’ ಚಿತ್ರ ನಿರ್ಮಾಣಗೊಳ್ಳುತ್ತಿದೆ. ಸಪ್ತ ಪಾವೂರು ಈ ಚಿತ್ರದ ಮುಖ್ಯಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ತಾರಾಗಣದಲ್ಲಿ ಬಿ.ಎಸ್.ಯಡಿಯೂರಪ್ಪ, ವಿಶ್ವೇಶ್ವರ ಭಟ್, ಡಾ.ಕೆ.ಸುಧಾಕರ್, ರಾಜೇಶ್ ನಟರಂಗ, ಕೈಲಾಶ್, ಸಂಧ್ಯಾ ಅರಕೆರೆ, ಬೇಬಿ ಶ್ರೀ ಅಭಿನಯಿಸುತ್ತಿದ್ದಾರೆ. ಪ್ರದ್ಯೋತನ ಸಂಗೀತ ನಿರ್ದೇಶನ ಹಾಗೂ ರವೀಂದ್ರನಾಥ್ ಅವರ ಛಾಯಾಗ್ರಹಣ, ಉಮೇಶ್ ಆರ್.ಬಿ ಸಂಕಲನವಿದೆ. ಆರ್.ಚಂದ್ರಶೇಖರ್ ಪ್ರಸಾದ್ ಹಾಗೂ ಜೆ.ಎಂ ಪ್ರಹ್ಲಾದ್ ಸಂಭಾಷಣೆ ಬರೆದಿದ್ದಾರೆ.

ಹೋರಾಟಗಾರನ ಸಾವು–ವ್ಯಾಪಕ ಪ್ರತಿಭಟನೆಗೆ ಸಜ್ಜು

ಕೋಲ್ಕತ್ತ (ಪಿಟಿಐ): ಹೌರಾ ಜಿಲ್ಲೆಯಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿ ಹೋರಾಟಗಾರ ಹಾಗೂ ವಿದ್ಯಾರ್ಥಿ ಮುಖಂಡ ಅನೀಶ್ ಖಾನ್ ಅವರ ನಿಗೂಢ ಸಾವು ಖಂಡಿಸಿ ಸಿಪಿಎಂನ ವಿದ್ಯಾರ್ಥಿ ಘಟಕ ಎಸ್‌ಎಫ್‌ಐ ಪಶ್ಚಿಮ ಬಂಗಾಳದಾದ್ಯಂತ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಶುಕ್ರವಾರ ರಾತ್ರಿ ಅಮಟಾದಲ್ಲಿನ ತಮ್ಮ ನಿವಾಸಕ್ಕೆ ಪೊಲೀಸ್ ಸಮವಸ್ತ್ರದಲ್ಲಿ ಕೆಲವರು ಒಳನುಗ್ಗಿ ಅನೀಶ್ ಅವರನ್ನು ಮಹಡಿಗೆ ಎಳೆದೊಯ್ದು ಅಲ್ಲಿಂದ ಕೆಳಕ್ಕೆ ತಳ್ಳಿ ಹತ್ಯೆ ಮಾಡಿದ್ದಾರೆ ಎಂದು ಅವರ ಕುಟುಂಬ ಆರೋಪಿಸಿದೆ.

ಆದರೆ ಪೊಲೀಸರು ಈ ಆರೋಪವನ್ನು ತಳ್ಳಿ ಹಾಕಿದ್ದು, ಖಾನ್ ಅವರು ಅವರ ನಿವಾಸದ ಬಳಿ ಶವವಾಗಿ ಪತ್ತೆಯಾಗಿದ್ದರು ಎಂದು ಹೇಳಿದ್ದಾರೆ.

ಆಡಳಿತಾರೂಢ ಟಿಎಂಸಿಯ ಮುಖಂಡರೊಬ್ಬರು ಹತ್ಯೆಗೆ ಸಂಚು ರೂಪಿಸಿರುವುದಾಗಿ ಆರೋಪಿಸಿ ಕಾಂಗ್ರೆಸ್, ಸಿಪಿಎಂ ಮತ್ತು ಬಿಜೆಪಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8, ಚುನಾವಣೆ ವಾರ್ತೆ: ರಾತ್ರಿ 9
ಹಿಸ್ಟರಿ ಆಫ್ ಹೇಟ್
ಕಲಹಕ್ಕೆ ‘ಹಿಜಾಬ್’ ಒಂದೇ ಕಾರಣವಲ್ಲ!
Prajavani.net Prajavani Prajavani

ಅಹಮದಾಬಾದ್ ಸ್ಫೋಟ: ರಾಜ್ಯದ ಮೂವರಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಹಮದಾಬಾದ್ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದ 38 ಜನರಲ್ಲಿ ಮಂಗಳೂರಿನ ಇಬ್ಬರು ಸೇರಿದ್ದಾರೆ. ಇಲ್ಲಿನ ಸೈಯದ್ ಮೊಹಮ್ಮದ್ ನೌಷಾದ್‌ಗೆ ಜೀವಾವಧಿ ಶಿಕ್ಷೆ ಹಾಗೂ ಅಹ್ಮದ್ ಬಾವಾಗೆ ಮರಣ ದಂಡನೆ ವಿಧಿಸಲಾಗಿದೆ. ವಿಜಯಪುರದ ಮಹಮ್ಮದ್ ಅದಾನ್‌ಗೂ ಮರಣದಂಡನೆ ವಿಧಿಸಲಾಗಿದೆ.

ಇಂಡಿಯನ್ ಮುಜಾಹಿದ್ದೀನ್ ಸಂಘಟನೆಯ ರಿಯಾಜ್ ಭಟ್ಕಳ್, ಉಳ್ಳಾಲದಲ್ಲಿ ತಲೆಮರೆಸಿಕೊಂಡಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಈ ಹಿನ್ನೆಲೆಯಲ್ಲಿ 2008ರ ಅಕ್ಟೋಬರ್ 3 ರಂದು ಮಹಾರಾಷ್ಟ್ರ ಪೊಲೀಸರು ಉಳ್ಳಾಲದ ಮುಕ್ಕಚ್ಚೇರಿ, ತೊಕ್ಕೊಟ್ಟು ಸಮೀಪದ ಚೆಂಬುಗುಡ್ಡೆ ಮತ್ತು ನಗರದ ಪಾಂಡೇಶ್ವರದ ಸುಭಾಸ್‌ನಗರ ಹಾಗೂ ಇತರ ಕಡೆಗಳಲ್ಲಿ ದಾಳಿ ನಡೆಸಿದ್ದರು.

ಈ ವೇಳೆ ಮುಕ್ಕಚ್ಚೇರಿಯ ಮೊಹಮ್ಮದ್ ಅಲಿ, ಜಾವೇದ್ ಅಲಿ, ಸುಭಾಸ್ ನಗರದ ನೌಷಾದ್ ಮತ್ತು ಹಳೆಯಂಗಡಿಯ ಅಹ್ಮದ್ ಬಾವಾನನ್ನು ಬಂಧಿಸಿದ್ದರು. ಆರೋಪಿಗಳಿಂದ 5 ಬಾಂಬ್, ₹11.39 ಲಕ್ಷ ನಗದು, ಗುಜರಾತ್‌ನ ನಕ್ಷೆ, 21 ಮೊಬೈಲ್ ಫೋನ್, ಸಿಮ್ ಕಾರ್ಡ್, ಜಿಹಾದಿ ಸಾಹಿತ್ಯ, ಲ್ಯಾಪ್ ಟಾಪ್, ಹಾರ್ಡ್ ಡಿಸ್ಕ್, 4 ಪಾಸ್‌ಪೋರ್ಟ್ ಇತ್ಯಾದಿಗಳನ್ನು ಪೊಲೀಸರು ವಶವಡಿಸಿಕೊಂಡಿದ್ದರು. ಕೆಲವು ದಿನಗಳ ಬಳಿಕ ಮತ್ತೆ ಪಡುಬಿದ್ರಿಯ ಉಚ್ಚಿಲ, ಚಿಕ್ಕಮಗಳೂರು ಹಾಗೂ ಗುಜರಾತ್, ಮಹಾರಾಷ್ಟ್ರದಲ್ಲಿ ಮತ್ತೆ 6 ಮಂದಿಯನ್ನು ಬಂಧಿಸಿದ್ದರು.

ಯಾಸಿನ್ ಭಟ್ಕಳ ಹಾಗೂ ರಿಯಾಜ್ ಭಟ್ಕಳರ ಆಪ್ತನಾಗಿದ್ದ ನೌಷಾದ್ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ. ಆತನಿಗೆ ಸರ್ಕೀಟ್ ತಯಾರಿಕೆ ಗೊತ್ತಿತ್ತು. ನಗರದಲ್ಲಿ ಅಮೋನಿಯಂ ನೈಟ್ರೇಟ್ ಬಳಸಿ ಸರ್ಕೀಟ್ ತಯಾರಿಸಿ, ಸೂರತ್‌ಗೆ ಸಾಗಿಸಲಾಗುತ್ತಿತ್ತು.ಅಲ್ಲಿಇಕ್ಬಾಲ್‌ಭಟ್ಕಳಡೆಟೋನೇಟರ್‌ಗಳನ್ನು ಜೋಡಿಸಿ ಸ್ಫೋಟಕ್ಕೆ ಬಳಸುತ್ತಿದ್ದ ಎನ್ನುವ ಮಾಹಿತಿ ಈ ಹಿಂದೆ ವಿಚಾರಣೆಯಲ್ಲಿ ಬೆಳಕಿಗೆ ಬಂದಿತ್ತು.

2017ರ ಏಪ್ರಿಲ್ 12ರಂದು ಸೈಯದ್ ಮೊಹಮ್ಮದ್ ನೌಷಾದ್, ಅಹ್ಮದ್ ಬಾವಾ ಮತ್ತು ಪಡುಬಿದ್ರಿಯ ಇನ್ನೊಬ್ಬ ಅಪರಾಧಿಗೆ ಮಂಗಳೂರಿನ ನ್ಯಾಯಾಲಯವು ಕಠಿಣ ಜೀವಾವಧಿ ಶಿಕ್ಷೆ ವಿಧಿಸಿತ್ತು.

‘ಗಲ್ಲು ಶಿಕ್ಷೆಗೆ ಅರ್ಹರು, ಬಿಟ್ಟರೆ ನರಭಕ್ಷಕರಾಗುತ್ತಾರೆ...’

ಅಹಮದಾಬಾದ್ (ಪಿಟಿಐ): ‘ಅಹಮದಾಬಾದ್‌ನಲ್ಲಿ 2008ರಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ 38 ಜನರು ಗಲ್ಲು ಶಿಕ್ಷೆಗೆ ಅರ್ಹರಾಗಿದ್ದರು. ಅವರು ಸಮಾಜದಲ್ಲಿ ಇದ್ದರೆ ನರಭಕ್ಷಕ ಚಿರತೆಯಂತೆ ವರ್ತಿಸಬಹುದು’ ಎಂದು ಕೋರ್ಟ್ ಹೇಳಿದೆ.

ಸರಣಿ ಬಾಂಬ್ ಸ್ಫೋಟ ಪ್ರಕರಣ ಸಂಬಂಧ 38 ಜನರಿಗೆ ಗಲ್ಲುಶಿಕ್ಷೆ, 11 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಇಲ್ಲಿನ ವಿಶೇಷ ನ್ಯಾಯಾಲಯ ಆದೇಶಿಸಿತ್ತು. ಸ್ಫೋಟದಲ್ಲಿ 56 ಜನರು ಮೃತಪಟ್ಟಿದ್ದರು ಮತ್ತು 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಗಲ್ಲು ಶಿಕ್ಷೆಗೆ ಒಳಗಾದ ಎಲ್ಲರೂ ಇಂಡಿಯನ್ ಮುಜಾಹಿದೀನ್ ಸಂಘಟನೆಯವರು.

ಪ್ರಕರಣ ಕುರಿತ ತೀರ್ಪಿನಲ್ಲಿ ಈ ಉಲ್ಲೇಖವಿದೆ. ಅಪರೂಪದಲ್ಲಿ ಅಪರೂಪದ ಪ್ರಕರಣ ಇದಾಗಿದ್ದು, ಗಲ್ಲು ಶಿಕ್ಷೆಯು ಸೂಕ್ತವಾದುದಾಗಿದೆ ಎಂದೂ ಕೋರ್ಟ್ ಅಭಿಪ್ರಾಯಪಟ್ಟಿದೆ. ಗರಿಷ್ಠ ಸಂಖ್ಯೆಯ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ ಪ್ರಕರಣ ಇದಾಗಿದೆ.

‘ಶಾಂತಿಯುತ ಸಮಾಜಕ್ಕೆ ಭಂಗ ತಂದಿದ್ದಾರೆ. ದೇಶವಿರೋಧಿ ಕೃತ್ಯ ಎಸಗಿದ್ದಾರೆ. ಕೆಲವರಿಗೆ ಅಲ್ಲಾಹು ಮೇಲಷ್ಟೇ ವಿಶ್ವಾಸವಿತ್ತು, ಸರ್ಕಾರ, ನ್ಯಾಯಾಂಗ ವ್ಯವಸ್ಥೆ ಮೇಲಲ್ಲ’ ಎಂದು ವಿಶೇಷ ನ್ಯಾಯಾಧೀಶ ಎ.ಆರ್.ಪಟೇಲ್ ತೀರ್ಪಿನ ಆದೇಶದಲ್ಲಿ ತಿಳಿಸಿದ್ದಾರೆ.

‘ದೇವರು ಹೊರತುಪಡಿಸಿ ಯಾರೊಬ್ಬರ ಮೇಲೂ ವಿಶ್ವಾಸವಿಲ್ಲ ಎಂದು ಹೇಳುವವರನ್ನು ಜೈಲಿನಲ್ಲಿ ಇಡುವ ಅಗತ್ಯವಿಲ್ಲ. ಅವರಿಗೆ ಇಡುವಂತಹ ಜೈಲು ದೇಶದಲ್ಲಿ ಇಲ್ಲ. ಇಂತಹವರು ಸಮಾಜದಲ್ಲಿ ಇದ್ದರೆ ನರಭಕ್ಷಕ ಚಿರತೆಯಂತೆ ವರ್ತಿಸಬಹುದು. ಸಮಾಜದಲ್ಲಿರುವ ಮಕ್ಕಳು, ಮಹಿಳೆಯರು ಸೇರಿದಂತೆ ಅಮಾಯಕರನ್ನು ಕೊಲ್ಲಬಹುದು’ ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಸಾಕ್ಷ್ಯವಾಗಿ ಪರಿವರ್ತನೆಗೆ ಅಸೂಯೆ ಕಾರಣ: ಸರಣಿ ಸ್ಫೋಟ ಪ್ರಕರಣದಲ್ಲಿ ಕೆಲವರು ಸರ್ಕಾರಿ ಸಾಕ್ಷ್ಯವಾಗಿ ಪರಿವರ್ತನೆಯಾಗಲು ದ್ವೇಷ, ಅಸೂಯೆ, ಧಾರ್ಮಿಕ ನಂಬಿಕೆಗಳಲ್ಲಿನ ಭಿನ್ನಾಭಿಪ್ರಾಯ ಕಾರಣ ಎಂದು ಮೂವರು ಅಪರಾಧಿಗಳು ಹೇಳಿದ್ದಾರೆ.

ನಕ್ಸಲ್ ಕಮಾಂಡರ್ ಹತ್ಯೆ

ದಾಂತೇವಾಡ (ಪಿಟಿಐ): ಛತ್ತೀಸಗಡ ದಾಂತೇವಾಡದಲ್ಲಿ ₹ 5 ಲಕ್ಷ ಬಹುಮಾನ ಘೋಷಿಸಲಾಗಿದ್ದ ಕುಖ್ಯಾತ ನಕ್ಸಲ್ ಕಮಾಂಡರ್ ಅರ್ಜುನ್ ಅಲಿಯಾಸ್ ಲಖ್ಮಾ ಸೋಡಿ (34) ಎಂಬಾತ ಶನಿವಾರ ಮಧ್ಯರಾತ್ರಿ ಪೊಲೀಸರೊಂದಿಗಿನ ಎನ್‌ಕೌಂಟರ್‌ನಿಂದ ಹತನಾಗಿದ್ದಾನೆ.

ಮಾವೋವಾದಿಗಳ ಮಲಂಗೇರ್ ಪ್ರದೇಶ ಸಮಿತಿಯ ಉಸ್ತುವಾರಿಯಾಗಿದ್ದ ಈತ 13 ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಕಾರ್ಯಾಚರಣೆ ನಡೆದ ಸ್ಥಳದಲ್ಲಿ ಐದು ಕೆಜಿ ಟಿಫಿನ್ ಬಾಂಬ್, ನಕ್ಸಲ್ ಸಮವಸ್ತ್ರ, ಎಲೆಕ್ಟ್ರಿಕ್ ವೈರ್, ವೈರ್ ಕಟರ್, ನಕ್ಸಲ್ ಸಾಹಿತ್ಯದ ಪುಸ್ತಕಗಳು ಮತ್ತು ಪ್ರಚಾರ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದಾಂತೇವಾಡ ಎಸ್‌ಪಿ ಸಿದ್ಧಾರ್ಥ ತಿವಾರಿ ತಿಳಿಸಿದ್ದಾರೆ.

ಎತ್ತಿನ ಗಾಡಿ ಓಟದ ಸ್ಪರ್ಧೆ ಮೈಸೂರಿನ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದ ಬಳಿ ಭಾನುವಾರ ನಡೆದ ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ ಯುವ ರೈತ – ಪಿಟಿಐ ಚಿತ್ರ

ನಿಧನ ವಾರ್ತೆ

ಟಿಎಂಸಿ ನಾಯಕ, ಸಚಿವ ಸಾಧನ್ ಪಾಂಡೆ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಪಶ್ಚಿಮ ಬಂಗಾಳದ ಹಿರಿಯ ಸಚಿವ ಸಾಧನ್ ಪಾಂಡೆ (71) ಅವರು ಭಾನುವಾರ ಮುಂಬೈ ಆಸ್ಪತ್ರೆಯಲ್ಲಿ ನಿಧನರಾದರು. ಅವರು ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪುತ್ರಿ ಇದ್ದಾರೆ.

‘ಹಿರಿಯ ಸಹೋದ್ಯೋಗಿಯನ್ನು ನಾವು ಕಳೆದುಕೊಂಡಿದ್ದಾವೆ. ಅವರ ಅಗಲಿಕೆಯಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟ್ವೀಟ್ ಮಾಡಿದ್ದಾರೆ.

ನಕಲಿ ಎನ್‌ಕೌಂಟರ್: 18 ಪೊಲೀಸರ ವಿರುದ್ಧ ಎಫ್‌ಐಆರ್‌ಗೆ ಆದೇಶ

ಶಹಜಹಾನ್‌ಪುರ್, ಉತ್ತರಪ್ರದೇಶ (ಪಿಟಿಐ): ಹದಿನೆಂಟು ವರ್ಷದ ಹಿಂದೆ ನಡೆದಿದ್ದ ನಕಲಿ ಎನ್‌ಕೌಂಟರ್ ಪ್ರಕರಣಕ್ಕೆ ಸಂಬಂಧಿಸಿ ಆಗಿನ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ 18 ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ಆದೇಶಿಸಿದೆ.

ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸ್ಥಳೀಯ ಜಲಾಲಬಾದ್ ಠಾಣೆಯಲ್ಲಿ 18 ಜನರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಅಪರಾಧ ವಿಭಾಗವು ತನಿಖೆ ನಡೆಸಲಿದೆ ಎಂದು ಶಹಜಹಾನ್‌ಪುರ್ ಎಸ್‌ಪಿ ಎಸ್. ಆನಂದ್ ಅವರು ತಿಳಿಸಿದರು.

ಬಾಧಿತರ ಪರ ವಕೀಲ ಇಜಾಜ್ ಹಸನ್ ಖಾನ್ ಈ ಬಗ್ಗೆ ಮಾಹಿತಿ ನೀಡಿ, ಕೃತ್ಯವು ಅಕ್ಟೋಬರ್ 3, 2004ರಲ್ಲಿ ನಡೆದಿತ್ತು. ಡಕಾಯಿತಿ ಪ್ರಕರಣದಲ್ಲಿ ಭಾಗಿಯಾಗಿದ್ದ ಶಂಕೆ ಮೇಲೆ ಚಾಚುಪುರ್‌ನ ನಿವಾಸಿಗಳಾದ ಪ್ರಹ್ಲಾದ್ ಮತ್ತು ಧನ್‌ಪಾಲ್ ಅವರನ್ನು ಪೊಲೀಸರು ಬಂಧಿಸಿದ್ದರು. ನಂತರ ಎನ್‌ಕೌಂಟರ್‌ನಲ್ಲಿ ಇಬ್ಬರೂ ಸತ್ತಿದ್ದು, ಪೊಲೀಸರೇ ಶವವನ್ನು ಹೊತ್ತೊಯ್ದಿದ್ದರು ಎಂದರು.

ಪ್ರಹ್ಲಾದ್ ಸಹೋದರ ರಾಮ್‌ಕೀರ್ತಿ ಅವರು ವಿವಿಧ ತನಿಖಾ ಆಯೋಗ, ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿದ್ದರು. ಬಳಿಕ ನವೆಂಬರ್ 24, 2012ರಂದು ಆರೋಪಿತ ಪೊಲೀಸರ ವಿರುದ್ಧ ಪ್ರಕರಣ ದಾಖಲಿಸಲು ಕೋರ್ಟ್ ಮೊರೆ ಹೋಗಿದ್ದರು. ಸಾಕಷ್ಟು ವಿಳಂಬವಾಗಿದೆ ಎಂದು ಆಗ ಮ್ಯಾಜಿಸ್ಟ್ರೇಟ್ ಕೋರ್ಟ್ ಮನವಿ ತಿರಸ್ಕರಿಸಿತ್ತು. ಸಿಜೆಎಂ ಕೋರ್ಟ್ ಅರ್ಜಿ ಪುರಸ್ಕರಿಸಿದ್ದು, ಐಪಿಸಿ 302ರ ಅನ್ವಯ ಆಗ ಎಸ್‌ಪಿ ಆಗಿದ್ದ ಸುಶೀಲ್ ಕುಮಾರ್, ಹೆಚ್ಚುವರಿ ಎಸ್‌ಪಿ ಆಗಿದ್ದ ಮಾತಾಪ್ರಸಾದ್ ಅವರು ಒಳಗೊಂಡು 18 ಜನರ ವಿರುದ್ಧ ಮೊಕದ್ದಮೆ ದಾಖಲಿಸಲು ಜನವರಿ 18ರಂದು ಆದೇಶಿಸಿದೆ ಎಂದರು.

ಅಮೆರಿಕ: ಸೇನಾ ನೆಲೆ ತೊರೆದ ಆಫ್ಗನ್ ನಿರಾಶ್ರಿತರು

ವಾಷಿಂಗ್ಟನ್ (ಎಪಿ): ಅಮೆರಿಕದ ಎಂಟು ಸೇನಾ ನೆಲೆಗಳಲ್ಲಿ ಪುನರ್ವಸತಿಗಾಗಿ ಕಾಯುತ್ತಿದ್ದ ಸಾವಿರಾರು ಆಫ್ಗನ್ ನಿರಾಶ್ರಿತರಲ್ಲಿ ಕೊನೆಯ ತಂಡ ಶನಿವಾರ ನ್ಯೂಜೆರ್ಸಿಯ ಸೇನಾ ನೆಲೆಯಿಂದ ಹೊರಟು, ಆಗಸ್ಟ್‌ನಲ್ಲಿ ಕಾಬೂಲ್‌ನಿಂದ ಸ್ಥಳಾಂತರಿಸುವಿಕೆಯೊಂದಿಗೆ ಪ್ರಾರಂಭವಾದ ವಲಸೆ ಪ್ರಯಾಣವನ್ನು ಪೂರ್ಣಗೊಳಿಸಿತು.

ತಮ್ಮ ದೇಶವು ತಾಲಿಬಾನ್ ತೆಕ್ಕೆಗೆ ಸಿಕ್ಕಿದ ನಂತರ ನಿರಾಶ್ರಿತರ ಪುನರ್ವಸತಿ ಸಂಸ್ಥೆಗಳ ಸಹಾಯದಿಂದ ಸ್ಥಳಾಂತರಗೊಂಡಿದ್ದ ಆಫ್ಘಾನ್ ನಿರಾಶ್ರೀತರು ಇತ್ತೀಚಿನ ತಿಂಗಳುಗಳಲ್ಲಿ ಕ್ರಮೇಣ ಮಿಲಿಟರಿ ನೆಲೆಗಳನ್ನು ತೊರೆಯುತ್ತಿದ್ದಾರೆ. ಅಮೆರಿಕದಾದ್ಯಂತ ಸಮುದಾಯಗಳಲ್ಲಿ ಬೆರೆತು ಹೊಸ ಜೀವನ ಪ್ರಾರಂಭಿಸುತ್ತಿದ್ದಾರೆ.

76 ಸಾವಿರ ಆಫ್ಘಾನ್ ನಿರಾಶ್ರಿತರನ್ನು ಅಮೆರಿಕ ದೇಶಕ್ಕೆ ಸ್ವಾಗತಿಸಿದೆ. ಇದು ದಶಕಗಳಲ್ಲಿ ನಡೆದ ದೇಶದ ಅತಿ ದೊಡ್ಡ ನಿರಾಶ್ರಿತರ ಪುನರ್ವಸತಿ ಎನಿಸಿದೆ.

‘ಆಪರೇಷನ್ ಮೈತ್ರಿ ಸ್ವಾಗತದಲ್ಲಿ ಇದು ನಿಜವಾಗಿಯೂ ಪ್ರಮುಖ ಮೈಲಿಗಲ್ಲು. ಆದರೆ, ಈ ಕಾರ್ಯಾಚರಣೆ ಮುಗಿದಿಲ್ಲ. ಆಫ್ಘನ್ನರು ಆ ದೇಶದಲ್ಲಿ ಇನ್ನೂ ಅಪಾಯವನ್ನು ಎದುರಿಸುತ್ತಿದ್ದಾರೆ. ಒಂಬತ್ತು ರಾಷ್ಟ್ರೀಯ ಪುನರ್ವಸತಿ ಸಂಸ್ಥೆಗಳಲ್ಲಿ ಒಂದಾದ ಲುಥೆರನ್ ವಲಸೆ ಮತ್ತು ನಿರಾಶ್ರಿತರ ಸೇವಾ ಸಂಸ್ಥೆಯ ಅಧ್ಯಕ್ಷ ಮತ್ತು ಸಿಇಒ ಕ್ರಿಶ್ ಒ ಮಾರಾ ವಿಘ್ನರಾಜಹ ತಿಳಿಸಿದರು.

ಉತ್ತರ ಪ್ರದೇಶ ಚುನಾವಣೆ • ಹಳೆಯ ತಲೆಮಾರಿನ ನಿಷ್ಠೆ ಅಚಲ • ಹೊಸ ತಲೆಮಾರಿನ ಯೋಚನೆ ಭಿನ್ನ

ರಾಯಬರೇಲಿ: ಕಾಂಗ್ರೆಸ್‌ಗೆ ಅಗ್ನಿಪರೀಕ್ಷೆ

• ಸಂಜಯ ಪಾಂಡೆ

ರಾಯಬರೇಲಿ: ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ರಾಯಬರೇಲಿ ಕ್ಷೇತ್ರದ 70 ವರ್ಷದ ಸಂತ ರಾಮ್ ಅವರದ್ದು ಕಾಂಗ್ರೆಸ್ ಪಕ್ಷಕ್ಕೆ ಅಚಲ ನಿಷ್ಠೆ. 40 ವರ್ಷಗಳಿಂದ ಕಾಂಗ್ರೆಸ್ ಬೆಂಬಲಿಗರಾಗಿರುವ ಅವರು ಈ ಬಾರಿಯೂ ಕಾಂಗ್ರೆಸ್ ಅಭ್ಯರ್ಥಿಗೇ ಮತ ಹಾಕುವುದಾಗಿ ಹೇಳುತ್ತಾರೆ. ಆದರೆ, ಹೊಸ ತಲೆಮಾರು ಹೀಗೆ ಯೋಚಿಸುತ್ತಿಲ್ಲ. ಸಂತ ರಾಮ್ ಅವರ ಕುಟುಂಬದಲ್ಲಿಯೂ ಯುವ ಜನರು ಕಾಂಗ್ರೆಸ್ ಜತೆಗೆ ಇಲ್ಲ.

'ನಾನು ಯಾವಾಗಲೂ ಕಾಂಗ್ರೆಸ್‌ಗೆ ಮತ ಹಾಕಿದವನು... ಅಭ್ಯರ್ಥಿ ಯಾರು ಎಂಬುದು ನನಗೆ ಮುಖ್ಯವೇ ಅಲ್ಲ... ಗಾಂಧಿ ಕುಟುಂಬದವರು ಈ ಪ್ರದೇಶದ ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದ್ದಾರೆ. ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ' ಎಂದು ಸಂತ ರಾಮ್ ಹೇಳುತ್ತಾರೆ.

ಹಿರಿಯರಲ್ಲಿ ಹಲವರು ಈ ಅಭಿಪ್ರಾಯಕ್ಕೆ ಸಹಮತ ಸೂಚಿಸುತ್ತಾರೆ. ಆದರೆ, ಯುವ ತಲೆಮಾರು ಜಾತಿ ಮತ್ತು ಕೋಮು ನೆಲೆಯಲ್ಲಿ ವಿಭಜನೆ ಆಗಿದೆ. ತಮ್ಮ ಆದ್ಯತೆ ಏನು ಎಂಬುದನ್ನು ಹೇಳಲು ಯುವ ತಲೆಮಾರಿಗೆ ಹಿಂಜರಿಕೆ ಏನೂ ಇಲ್ಲ.

2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಗೆದ್ದ ಏಕೈಕ ಕ್ಷೇತ್ರ ರಾಯಬರೇಲಿ. ಭದ್ರಕೋಟೆ ಎನಿಸಿಕೊಂಡಿದ್ದ ಅಮೇಠಿಯನ್ನು ಉಳಿಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗಿರಲಿಲ್ಲ. ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿರುದ್ಧ ಇಲ್ಲಿ ಸೋತಿದ್ದರು.

ಹಳೆಯ ತಲೆಮಾರಿನ ಕಾಂಗ್ರೆಸ್ ನಿಷ್ಠೆಯ ಪರೀಕ್ಷೆ ಈ ಬಾರಿಯ ಚುನಾವಣೆಯಲ್ಲಿ ಆಗಲಿದೆ. ಹಳೆಯ ನಿಷ್ಠಾವಂತರು ಮತ್ತು ಪಕ್ಷ ತೊರೆದು ಹೋಗಿ ಪ್ರತಿಸ್ಪರ್ಧಿ ಪಕ್ಷಗಳ ಅಭ್ಯರ್ಥಿಗಳಾಗಿರುವವರ ನಡುವೆ ಈ ಬಾರಿಯ ಹೋರಾಟ ನಡೆಯಲಿದೆ. ಈ ಹೋರಾಟದಲ್ಲಿ ಯಾರ ಕೈ ಮೇಲಾಗುವುದೋ ಅದರ ಮೇಲೆ ಕಾಂಗ್ರೆಸ್ ತನ್ನ ನೆಲೆಯನ್ನು ಮತ್ತೆ ಪಡೆದುಕೊಳ್ಳುವುದು ಅವಲಂಬಿತವಾಗಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಇಲ್ಲಿನ ಎರಡು ಕ್ಷೇತ್ರಗಳಲ್ಲಿ ಗೆದ್ದಿತ್ತು. ರಾಯಬರೇಲಿ ಸದರ್ ಕ್ಷೇತ್ರದಿಂದ ಅದಿತಿ ಸಿಂಗ್ ಮತ್ತು ಹರಚಂದನಪುರ ಕ್ಷೇತ್ರದಿಂದ ರಾಕೇಶ್ ಪ್ರತಾಪ್ ಗೆದ್ದಿದ್ದರು. ಬಳಿಕ, ಈ ಇಬ್ಬರೂ ನಿಷ್ಠೆ ಬದಲಿಸಿ ಬಿಜೆಪಿ ಸೇರಿದರು. ಅವರು ಈ ಹಿಂದೆ ಪ್ರತಿನಿಧಿಸಿದ್ದ ಅವೇ ಕ್ಷೇತ್ರಗಳಿಂದ ಬಿಜೆಪಿ ಟಿಕೆಟ್‌ನಲ್ಲಿ ಕಣಕ್ಕೆ ಇಳಿದಿದ್ದಾರೆ.

ತಳಮಟ್ಟದ ವಾಸ್ತವದ ಜತೆಗಿನ ಸಂಪರ್ಕವನ್ನೇ ಕಾಂಗ್ರೆಸ್ ಕಳೆದುಕೊಂಡಿದೆ. ಹಳೆಯ ತಲೆಮಾರಿನವರ ಮತಗಳನ್ನು ಕಾಂಗ್ರೆಸ್ ಪಕ್ಷವು ಅವಲಂಬಿಸಿದೆ ಎಂಬುದು ರಾಯಬರೇಲಿ ಜಿಲ್ಲೆಯ ಹಲವರ ಅಭಿಪ್ರಾಯವಾಗಿದೆ. ಸೋನಿಯಾ ಗಾಂಧಿ ಅವರು ಕಳೆದ ಮೂರು ವರ್ಷಗಳಲ್ಲಿ ತಮ್ಮ ಕ್ಷೇತ್ರಕ್ಕೆ ಭೇಟಿಯನ್ನೇ ಕೊಟ್ಟಿಲ್ಲ. ಅನಾರೋಗ್ಯ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಸೋನಿಯಾ ಅವರ ಅನುಪಸ್ಥಿತಿಯಲ್ಲಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಕ್ಷೇತ್ರದ ಹೊಣೆ ವಹಿಸಿಕೊಂಡಿದ್ದಾರೆ.

ಅದಿತಿ ಸಿಂಗ್ ಅವರು ಪ್ರಿಯಾಂಕಾ ಅವರಿಗೆ ಬಹಳ ಆಪ್ತರಾಗಿದ್ದಾರೆ ಎಂದು ಹಿಂದೆ ಹೇಳಲಾಗುತ್ತಿತ್ತು. ಆದರೆ, ಈಗ ಅದಿತಿ ಅವರು ಕಾಂಗ್ರೆಸ್‌ನ ತೀಕ್ಷ್ಣ ಟೀಕಾಕಾರರಲ್ಲಿ ಒಬ್ಬರಾಗಿದ್ದಾರೆ. ಪಕ್ಷ ತೊರೆದ ಬಳಿಕ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯುತ್ತಲೇ ಇದ್ದಾರೆ. ಅದಿತಿ ಅವರ ತಂದೆ ಅಖಿಲೇಶ್ ಸಿಂಗ್ ಅವರು ರಾಯಬರೇಲಿ ಸದರ್ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಹಲವು ಬಾರಿ ಗೆದ್ದಿದ್ದರು. 'ಈ ಬಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವು ಖಾತೆ ತೆರೆಯವುದೇ ಸಾಧ್ಯವಾಗುವುದಿಲ್ಲ' ಎಂದು ಅದಿತಿ ಹೇಳುತ್ತಾರೆ.

ಪಂಜಾಬ್‌ನ ಕಾಂಗ್ರೆಸ್ ಶಾಸಕ ಅಂಗದ್ ಸಿಂಗ್ ಅವರು ಅದಿತಿ ಅವರ ಗಂಡ. 'ಪ್ರಿಯಾಂಕಾ ಅವರ ಸೂಚನೆಯಂತೆ ಅಂಗದ್ ಅವರಿಗೆ ಈ ಬಾರಿ ಟಿಕೆಟ್ ನಿರಾಕರಿಸಲಾಗಿದೆ. ಪ್ರಿಯಾಂಕಾ ಅವರು ನನ್ನ ಮೇಲೆ ಸೇಡು ತೀರಿಸಿಕೊಂಡಿದ್ದಾರೆ' ಎಂದು ಅದಿತಿ ಹೇಳಿದ್ದಾರೆ.

ರಾಯಬರೇಲಿಯಲ್ಲಿ ಪ್ರಿಯಾಂಕಾ ಅವರ ಚುನಾವಣಾ ಪ್ರಚಾರ ಪಿಟಿಐ ಚಿತ್ರ

ಪ್ರತಿಸ್ಪರ್ಧಿಗಳು ಸಕ್ರಿಯ

'ಕಾಂಗ್ರೆಸ್ ಪಕ್ಷವು 2014ರ ಬಳಿಕ ಕಾರ್ಯಕರ್ತರು ಮತ್ತು ಮುಖಂಡರನ್ನು ಕಳೆದುಕೊಳ್ಳುತ್ತಲೇ ಬಂದಿದೆ. ಬಿಜೆಪಿ ಮುಖಂಡರು ಇಲ್ಲಿ ಬಹಳ ಸಕ್ರಿಯವಾಗಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಕಾಂಗ್ರೆಸ್‌ನ ಹಲವಾರು ಮುಖಂಡರು ಪಕ್ಷ ತ್ಯಜಿಸಿ ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ' ಎಂದು ಸ್ಥಳೀಯ ನಿವಾಸಿ ಮನೀಶ್ ತ್ರಿಪಾಠಿ ಹೇಳುತ್ತಾರೆ.

ಎಸ್‌ಪಿ ಮತ್ತು ಬಿಎಸ್‌ಪಿ ಕೂಡ ರಾಯಬರೇಲಿಯಲ್ಲಿ ಸ್ಥಳೀಯ ಮುಖಂಡರನ್ನು ಬೆಳೆಸಿವೆ. ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದು ಇತ್ತೀಚೆಗೆ ಎಸ್‌ಪಿ ಸೇರಿರುವ ಸ್ವಾಮಿ ಪ್ರಸಾದ್ ಮೌರ್ಯ ಅವರ ಮಗ ರಾಯಬರೇಲಿ ಕ್ಷೇತ್ರದಿಂದ ಎಸ್‌ಪಿ ಟಿಕೆಟ್‌ನಲ್ಲಿ ಒಂದು ಬಾರಿ ಸ್ಪರ್ಧಿಸಿದ್ದರು. ಒಂದು ಬಾರಿ ಬಿಜೆಪಿ ಟಿಕೆಟ್‌ನಲ್ಲಿಯೂ ಸ್ಪರ್ಧಿಸಿದ್ದರು. ಎರಡೂ ಬಾರಿ ಅವರು ಎಸ್‌ಪಿ ಅಭ್ಯರ್ಥಿ ಮನೋಜ್ ಪಾಂಡೆ ಎದುರು ಸೋತಿದ್ದರು.

ಹೊಸ ಮುಖಗಳಿಗೆ ಟಿಕೆಟ್

ಹಲವರು ಪಕ್ಷಾಂತರ ಮಾಡಿದ್ದಾರೆ ಮತ್ತು ಹಲವು ಹಿರಿಯ ಮುಖಂಡರು ಸ್ಪರ್ಧಿಸಲು ನಿರಾಕರಿಸಿದ್ದಾರೆ. ಹೀಗಾಗಿ, ಹೊಸ ಅಭ್ಯರ್ಥಿಗಳನ್ನು ಶೋಧಿಸುವ ಅನಿವಾರ್ಯವೂ ಕಾಂಗ್ರೆಸ್‌ಗೆ ಎದುರಾಗಿತ್ತು. ಹೊಸ ಮುಖಗಳನ್ನು ಕಣಕ್ಕೆ ಇಳಿಸಲಾಗಿದೆ. ಪಕ್ಷಕ್ಕೆ ಕೆಲವೇ ದಿನಗಳ ಹಿಂದೆ ಸೇರಿದವರಿಗೂ ಟಿಕೆಟ್ ನೀಡಲಾಗಿದೆ. ಹರಚಂದನಪುರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವಿಕ್ರಮ್ ಸಿಂಗ್ ಅವರು ಕೆಲವು ದಿನಗಳ ಹಿಂದಿನವರೆಗೆ ಸಮಾಜವಾದಿ (ಎಸ್‌ಪಿ) ಪಕ್ಷದಲ್ಲಿ ಇದ್ದರು. ಸರೇನಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸುಧಾ ದ್ವಿವೇದಿ ಅವರು ಬಿಜೆಪಿಯಲ್ಲಿ ಇದ್ದವರು. ಮೂಲ ಪಕ್ಷದಲ್ಲಿ ಟಿಕೆಟ್ ಸಿಕ್ಕಿಲ್ಲ ಎಂಬ ಕಾರಣಕ್ಕೆ ಇವರು ಕಾಂಗ್ರೆಸ್ ಸೇರಿದ್ದಾರೆ.

ಪ್ರಿಯಾಂಕಾ ಅವರು ರಾಯಬರೇಲಿಯಲ್ಲಿ ಶನಿವಾರ ಪ್ರಚಾರ ಮಾಡಿದ್ದಾರೆ. ಸಾಮಾನ್ಯ ಜನರ ಬೆಂಬಲ ಇರುವುದರಿಂದ ಪಕ್ಷವು ಈ ಬಾರಿ ಉತ್ತಮ ಸಾಧನೆ ಮಾಡಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. 'ಅಭಿವೃದ್ಧಿಯ ವಿಚಾರದಲ್ಲಿ ಜನರಿಗೆ ತೋರಿಸಲು ನಮ್ಮ ಪ್ರತಿಸ್ಪರ್ಧಿಗಳ ಬಳಿ ಏನೂ ಇಲ್ಲ. ಹಾಗಾಗಿಯೇ ಅವರು ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮತ ಕೇಳುತ್ತಿದ್ದಾರೆ' ಎಂದು ಪ್ರಿಯಾಂಕಾ ಹೇಳಿದ್ದಾರೆ.

ರಾಯಬರೇಲಿಯಲ್ಲಿ ನಾಲ್ಕನೇ ಹಂತದಲ್ಲಿ ಬುಧವಾರ ಮತದಾನ ನಡೆಯಲಿದೆ. ಪಕ್ಷಾಂತರಿಗಳು ಮತ್ತು ಹೊಸಮುಖಗಳ ಮೂಲಕ ಪಕ್ಷದ ನೆಲೆಯನ್ನು ಗಟ್ಟಿ ಮಾಡಲು ಪ್ರಿಯಾಂಕಾ ಅವರಿಗೆ ಸಾಧ್ಯ ಆಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

'ಭಯೋತ್ಪಾದಕರ ಬಗ್ಗೆ ಅಖಿಲೇಶ್‌ಗೆ ಅನುಕಂಪ'

ಎಸ್‌ಪಿ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

ಹರ್ದೋಯಿ (ಉತ್ತರ ಪ್ರದೇಶ) (ಪಿಟಿಐ): ಅಹಮದಾಬಾದ್ ಸರಣಿ ಸ್ಫೋಟದ 49 ಜನರನ್ನು ದೋಷಿಗಳು ಎಂದು ಕೋರ್ಟ್ ತೀರ್ಪು ನೀಡಿದ ವಿಚಾರವನ್ನು ಪ್ರಸ್ತಾಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಸಮಾಜವಾದಿ ಪಕ್ಷವು (ಎಸ್‌ಪಿ) ಭಯೋತ್ಪಾದಕರ ಬಗ್ಗೆ ಮೃದು ಧೋರಣೆ ಹೊಂದಿದೆ ಎಂದು ಆರೋಪಿಸಿದ್ದಾರೆ.

ಉತ್ತರ ಪ್ರದೇಶದ ಹರ್ದೋಯಿಯಲ್ಲಿ ನಡೆದ ಬಿಜೆಪಿ ಚುನಾವಣಾ ಸಮಾವೇಶದಲ್ಲಿ ಅವರು ಭಾನುವಾರ ಮಾತನಾಡಿದರು.

ಈ ಹಿಂದಿನ ಎಸ್‌ಪಿ ಸರ್ಕಾರವು ಭಯೋತ್ಪಾದಕ ಚಟುವಟಿಕೆ ಆರೋಪವಿದ್ದ ಹಲವರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಲು ನಿರ್ಧರಿಸಿತ್ತು ಎಂದು ಪ್ರಧಾನಿ ಆರೋಪಿಸಿದ್ದಾರೆ. 'ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಅಹಮದಾಬಾದ್ ಸ್ಫೋಟ ಸಂಭವಿಸಿತು. ಆ ದಿನವನ್ನು ನಾನು ಮರೆಯಲು ಸಾಧ್ಯವಿಲ್ಲ. ರಕ್ತದಿಂದ ತೊಯ್ದಿದ್ದ ಮಣ್ಣನ್ನು ಹಿಡಿದು ಅಂದೇ ನಾನು ಸಂಕಲ್ಪ ಮಾಡಿದೆ. ಈ ಘಟನೆಗೆ ಕಾರಣರಾದ ಭಯೋತ್ಪಾದಕರನ್ನು ಶಿಕ್ಷಿಸದೆ ಬಿಡುವುದಿಲ್ಲ ಎಂದು ಶಪಥ ಮಾಡಿದ್ದೆ' ಎಂದು ಪ್ರಧಾನಿ ಹೇಳಿದರು.

'ಭಾರತೀಯರನ್ನು ನಾಶಗೊಳಿಸಲು ಬಯಸಿದ್ದವರಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿದೆ. ನಾನು ಇಂದು ಭಯೋತ್ಪಾದಕ ದಾಳಿಯನ್ನು ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣವಿದೆ. ಕೆಲವು ರಾಜಕೀಯ ಪಕ್ಷಗಳು ಭಯೋತ್ಪಾದಕರ ಬಗ್ಗೆ ಸಹಾನುಭೂತಿ ಹೊಂದಿವೆ. ಉತ್ತರ ಪ್ರದೇಶದಲ್ಲಿ ಎಸ್‌ಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, 2006ರ ವಾರಾಣಸಿ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಶಮೀಮ್ ಅಹ್ಮದ್ ವಿರುದ್ಧದ ಪ್ರಕರಣವನ್ನು ವಾಪಸ್ ಪಡೆಯಲು ಯತ್ನಿಸಿತ್ತು. 2007ರಲ್ಲಿ ಅಯೋಧ್ಯೆ ಹಾಗೂ ಲಖನೌದಲ್ಲಿ ಸ್ಫೋಟಗಳು ನಡೆದವು. 2013ರಲ್ಲಿ ಸಮಾಜವಾದಿ ಪಕ್ಷವು ತಾರಿಕ್ ಕಜ್ಮಿ ವಿರುದ್ಧದ ಪ್ರಕರಣವನ್ನು ಹಿಂತೆಗೆದುಕೊಂಡಿತು. ಆದರೆ ಇದಕ್ಕೆ ಅವಕಾಶ ನೀಡದ ಕೋರ್ಟ್, ಆರೋಪಿಗೆ ಜೀವಾವಧಿ ಶಿಕ್ಷೆ ನೀಡಿತು' ಎಂದು ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ನಡೆದ ವಿವಿಧ ಭಯೋತ್ಪಾದಕ ಕೃತ್ಯಗಳ ಜೊತೆ ನಂಟು ಹೊಂದಿದ್ದ 14 ಪ್ರಕರಣಗಳನ್ನು ವಾಪಸ್ ಪಡೆಯಲು ಎಸ್‌ಪಿ ಸರ್ಕಾರ ಆದೇಶ ನೀಡಿತ್ತು. ಈ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಶಿಕ್ಷೆಗೆ ಒಳಪಡಿಸಲು ಸರ್ಕಾರ ಸಿದ್ಧವಿರಲಿಲ್ಲ ಎಂದು ಪ್ರಧಾನಿ ಆರೋಪಿಸಿದ್ದಾರೆ. ಈ ಪ್ರಕ್ರಿಯೆಯನ್ನು 'ರಿಟರ್ನ್ ಗಿಫ್ಟ್' ಎಂದು ಪ್ರಧಾನಿ ಕರೆದಿದ್ದಾರೆ.

ಅಖಿಲೇಶ್‌ಗೆ ಭೀತಿ: ಮುಲಾಯಂ ಸಿಂಗ್ ಅವರಿಂದ ಪಕ್ಷದ ಚುಕ್ಕಾಣಿಯನ್ನು ಒತ್ತಾಯದಿಂದ ಪಡೆದಿದ್ದ ಅಖಿಲೇಶ್ ಯಾದವ್ ಅವರಿಗೆ ಈಗ ತಾವು ಸ್ಪರ್ಧಿಸಿರುವ ಕರ್ಹಾಲ್ ಕ್ಷೇತ್ರದಲ್ಲಿ ಸೋಲಿನ ಭೀತಿ ಕಾಡುತ್ತಿದೆ. ಹೀಗಾಗಿ ಅವರು ಪ್ರಚಾರಕ್ಕಾಗಿ ತಮ್ಮ ತಂದೆಯ ಮನವೊಲಿಸಿ ಕರೆ ತಂದಿದ್ದಾರೆ ಎಂದು ಪ್ರಧಾನಿ ಆರೋಪಿಸಿದ್ದಾರೆ. ಮುಸ್ಲಿಮರು ಹಾಗೂ ಯಾದವರು ಹೆಚ್ಚಿನ ಸಂಖ್ಯೆಯಲ್ಲಿರುವ ಕರ್ಹಾಲ್ ಕ್ಷೇತ್ರವನ್ನೇ ಅವರು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.

ಭಯೋತ್ಪಾದಕರು ಸೈಕಲ್‌ಗಳಲ್ಲಿ ಬಾಂಬ್ ಅಡಗಿಸಿಡುತ್ತಿದ್ದರು. ಅವರು ಏಕೆ ಸೈಕಲ್ ಅನ್ನೇ (ಎಸ್‌ಪಿ ಚಿಹ್ನೆ) ಇದಕ್ಕಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬ ಕುತೂಹಲ ಇತ್ತು
ನರೇಂದ್ರ ಮೋದಿ, ಪ್ರಧಾನಿ

ಚುನಾವಣಾ ಕಣದಲ್ಲಿ...

- ಉತ್ತರ ಪ್ರದೇಶದ ಬಿಲ್ಹಾರಾ ವಿಧಾನಸಭಾ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಪ್ರವೀಣ್ ಕುಮಾರ್ ಅವರ ಸಹೋದರ ಅಶುತೋಷ್ ಕುಮಾರ್ ಅವರಿಂದ ₹20 ಲಕ್ಷ ಹಣ ಜಪ್ತಿ ಮಾಡಲಾಗಿದೆ. ಅವರು ತಮ್ಮ ಬಳಿಯಿದ್ದ ಹಣಕ್ಕೆ ಯಾವುದೇ ದಾಖಲೆ ಹೊಂದಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.
- ಉತ್ತರ ಪ್ರದೇಶ ಚುನಾವಣಾ ಪ್ರಚಾರದ ವೇಳೆ ತಮ್ಮ ಪಕ್ಷಕ್ಕೆ ಮತ ಹಾಕುವಂತೆ ಜನರಿಗೆ ಬೆದರಿಕೆ ಹಾಕಿದ ಆರೋಪದಲ್ಲಿ ತೆಲಂಗಾಣದ ಬಿಜೆಪಿ ಶಾಸಕ ಟಿ.ರಾಜಾ ಸಿಂಗ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಚುನಾವಣಾ ಆಯೋಗದ ನಿರ್ದೇಶನದ ಅನ್ವಯ ಪ್ರಕರಣ ದಾಖಲಿಸಲಾಗಿದೆ.
- ಪಂಜಾಬ್ ಚುನಾವಣೆಯಲ್ಲಿ ಖಾಲಿಸ್ತಾನ್ ಪ್ರತ್ಯೇಕತಾವಾದಿಗಳನ್ನು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಬೆಂಬಲಿಸಿದ್ದಾರೆ ಎಂದು ಆರೋಪಿಸಿದ್ದ ಎಎಪಿ ಮಾಜಿ ಮುಖಂಡ ಕುಮಾರ್ ವಿಶ್ವಾಸ್ ಅವರನ್ನು ಕಾಂಗ್ರೆಸ್ ಮುಖಂಡ ದಿಗ್ವಿಜಯ ಸಿಂಗ್ ಬೆಂಬಲಿಸಿದ್ದಾರೆ. ಖಾಲಿಸ್ತಾನ್ ಕುರಿತ ತಮ್ಮ ನಿಲುವನ್ನು ಕೇಜ್ರಿವಾಲ್ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ವಿಪಕ್ಷಗಳ ಒಕ್ಕೂಟ ರಚನೆ ಯತ್ನ: ಸೇನಾ, ಎನ್‌ಸಿಪಿ ನಾಯಕರ ಭೇಟಿ ನಂತರ ಕೆ.ಸಿ.ಆರ್ ಹೇಳಿಕೆ

ಉದ್ಧವ್, ಪವಾರ್ ಜತೆ ಚಂದ್ರಶೇಖರ್ ಭೇಟಿ

ಪ್ರಜಾವಾಣಿ ವಾರ್ತೆ

ಮುಂಬೈ: ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಇಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. 2024ರ ಲೋಕಸಭಾ ಚುನಾವಣೆಗೆ ಬಿಜೆಪಿಯೇತರ ಪಕ್ಷಗಳ ಒಕ್ಕೂಟವನ್ನು ರಚಿಸುವ ದಿಸೆಯಲ್ಲಿ ಈ ಭೇಟಿ ಮಹತ್ವದ್ದು ಎನ್ನಲಾಗಿದೆ.

ಕಾಂಗ್ರೆಸ್ ಅನ್ನು ಹೊರಗಿರಿಸಿ, ಬಿಜೆಪಿ ವಿರೋಧಿ ಪಕ್ಷಗಳ ಒಕ್ಕೂಟವನ್ನು ರಚಿಸುವ ಪ್ರಸ್ತಾವವನ್ನು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಪ್ರಾದೇಶಿಕ ಪಕ್ಷಗಳ ಮುಂದೆ ಇಟ್ಟಿದ್ದರು. ಇದರ ಭಾಗವಾಗಿಯೇ ಅವರು ಕೆ.ಸಿ. ರಾವ್ ಅವರ ಜತೆ ದೂರವಾಣಿಯಲ್ಲಿ ಕಳೆದ ವಾರ ಮಾತುಕತೆ ನಡೆಸಿದ್ದರು. ಆ ಮಾತುಕತೆಯ ನಂತರ 'ಮುಂದಿನ ಭಾನುವಾರ ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡುತ್ತೇನೆ' ಎಂದು ರಾವ್ ಅವರು ಹೇಳಿದ್ದರು. ಇಂತಹ ಒಂದು ಒಕ್ಕೂಟವನ್ನು ರಚಿಸುವ ಯತ್ನದ ಭಾಗವಾಗಿಯೇ ಅವರು ಭಾನುವಾರ ಈ ಇಬ್ಬರೂ ನಾಯಕರನ್ನು ಭೇಟಿ ಮಾಡಿದ್ದಾರೆ.

ಠಾಕ್ರೆ ಅವರ ಮಲಬಾರ್ ಹಿಲ್ ಅಧಿಕೃತ ನಿವಾಸದಲ್ಲಿ ರಾವ್ ಅವರಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಯೇ ಇಬ್ಬರೂ ನಾಯಕರ ಮಧ್ಯೆ ಮಾತುಕತೆ ನಡೆಯಿತು. ಈ ಭೇಟಿಯ ವೇಳೆ ಶಿವಸೇನಾ ಮತ್ತು ತೆಲಂಗಾಣ ರಾಷ್ಟ್ರ ಸಮಿತಿಯ ಹಲವು ನಾಯಕರು ಉಪಸ್ಥಿತರಿದ್ದರು. ಬಹುಭಾಷಾ ಚಿತ್ರನಟ ಮತ್ತು ಮೋದಿ ಟೀಕಾಕಾರರಾದ ಪ್ರಕಾಶ್ ರಾಜ್ ಅವರು ಈ ಭೇಟಿಯ ವೇಳೆ ಉಪಸ್ಥಿತರಿದ್ದರು. ಪಿಟಿಐ ಬಿಡುಗಡೆ ಮಾಡಿರುವ ಭೇಟಿಯ ಚಿತ್ರದಲ್ಲಿ, ರಾವ್ ಮತ್ತು ಠಾಕ್ರೆ ಅವರ ಜತೆ ಪ್ರಕಾಶ್ ರಾಜ್ ಅವರೂ ಇದ್ದಾರೆ.

ಸಂಜೆಯ ವೇಳೆಗೆ ಶರದ್ ಪವಾರ್ ಅವರ ಬ್ರೀಚ್ ಕ್ಯಾಂಡಿಯಲ್ಲಿನ ಸಿಲ್ವರ್ ಓಕ್ ನಿವಾಸದಲ್ಲಿ ರಾವ್ ಅವರಿಗೆ ಚಹಾಕೂಟ ಏರ್ಪಡಿಸಲಾಗಿತ್ತು. ಆ ವೇಳೆ ಇಬ್ಬರೂ ನಾಯಕರು ವಿರೋಧ ಪಕ್ಷಗಳ ಒಕ್ಕೂಟ ರಚಿಸುವ ಬಗ್ಗೆ ಮಾತುಕತೆ ನಡೆಸಿದ್ದಾರೆ. ತೆಲಂಗಾಣ ಚಳವಳಿಯನ್ನು ಬೆಂಬಲಿಸಿದ್ದಕ್ಕೆ ಶರದ್ ಪವಾರ್ ಅವರಿಗೆ ರಾವ್ ಅವರು ಧನ್ಯವಾದ ಹೇಳಿದ್ದಾರೆ. ಠಾಕ್ರೆ ಅವರನ್ನು ಹೈದರಾಬಾದ್‌ಗೆ ಆಹ್ವಾನಿಸಿದ್ದಾರೆ.

ಕೆ.ಸಿ.ರಾವ್ ಮತ್ತು ಶರದ್ ಪವಾರ್ ಅವರ ಭೇಟಿಯ ವೇಳೆ ನಟ ಪ್ರಕಾಶ್ ರಾಜ್ ಸಹ ಇದ್ದರು —ಪಿಟಿಐ ಚಿತ್ರ

ಶಿವಸೇನಾ, ಟಿಆರ್‌ಎಸ್ ಬಿಜೆಪಿ ಮಿತ್ರಪಕ್ಷಗಳಾಗಿದ್ದವು. ಅವನ್ನು ಮುಗಿಸುವ ಬಿಜೆಪಿ ತಂತ್ರ ಅವರಿಗೆ ಅರ್ಥವಾಗಿದೆ. ಆದರೆ ಕಾಂಗ್ರೆಸ್ ಇಲ್ಲದ ಇಂತಹ ಒಕ್ಕೂಟ ಸಾಧ್ಯವಿಲ್ಲ
ನಾನಾ ಪಟೋಲೆ,
ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ

ಕಾಂಗ್ರೆಸ್ ಇರಲಿದೆಯೇ?

ಉದ್ಧವ್ ಠಾಕ್ರೆ ಮತ್ತು ಶರದ್ ಪವಾರ್ ಅವರನ್ನು ಭೇಟಿ ಮಾಡಿದ ನಂತರ ಕೆ.ಸಿ.ರಾವ್ ಅವರು ಮಾಧ್ಯಮ ಪ್ರತಿನಿಧಿಗಳ ಜತೆಗೆ ಸಭೆಯ ವಿವರಗಳನ್ನು ಹಂಚಿಕೊಂಡರು. 'ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಸಮಾನ ಮನಸ್ಕ ಪಕ್ಷಗಳು ಒಟ್ಟಾಗುವ ಸಮಯ ಈಗ ಬಂದಿದೆ' ಎಂದು ಅವರು ಹೇಳಿದರು.

ಆಗ ಪತ್ರಕರ್ತರು, 'ಕಾಂಗ್ರೆಸ್ ಇಲ್ಲದ ವಿರೋಧ ಪಕ್ಷಗಳ ಒಕ್ಕೂಟವನ್ನು ರಚಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು. ಇದಕ್ಕೆ ರಾವ್ ಅವರು, 'ಒಕ್ಕೂಟ ರಚಿಸುವ ಪ್ರಕ್ರಿಯೆಯನ್ನು ಇನ್ನಷ್ಟೇ ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಇತರರನ್ನೂ ಭೇಟಿ ಮಾಡಲಿದ್ದೇವೆ' ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ ನೇತೃತ್ವದ ಸರ್ಕಾರದಲ್ಲಿ ಶಿವಸೇನಾ ಮತ್ತು ಎನ್‌ಸಿಪಿಯ ಜತೆ ಕಾಂಗ್ರೆಸ್ ಸಹ ಮೈತ್ರಿಕೂಟದ ಪಾಲುದಾರ. ಆದರೆ ಕಾಂಗ್ರೆಸ್ ಅನ್ನು ಹೊರತುಪಡಿಸಿ ಒಕ್ಕೂಟ ರಚಿಸುವ ಬಗ್ಗೆ ಈ ಹಿಂದೆ ಸ್ಪಷ್ಟವಾಗಿ ಮಾತನಾಡಿದ್ದ ರಾವ್ ಅವರು, ಭಾನುವಾರದ ಭೇಟಿಯ ನಂತರ ಇತರರ ಜತೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದು ಹೇಳಿದ್ದಾರೆ.

'ಬಾರಾಮತಿಯಲ್ಲಿ ಮತ್ತೆ ಎಲ್ಲಾ ಸಭೆ ಸೇರಲಿದ್ದೇವೆ. ನಮ್ಮ ಜತೆ ಸೇರಬೇಕು ಎಂದಿರುವವರು, ನಮ್ಮೊಂದಿಗೆ ಸೇರಲಿ. ನಾವು ನಮ್ಮ ಕಾರ್ಯಸೂಚಿಯನ್ನು ಮುಂದಿಡುತ್ತೇವೆ' ಎಂದಷ್ಟೇ ಅವರು ಹೇಳಿದ್ದಾರೆ.

ಕಾಂಗ್ರೆಸ್ ಅನ್ನು ಒಕ್ಕೂಟದಲ್ಲಿ ಸೇರಿಸಿಕೊಳ್ಳುವ ಬಗ್ಗೆ ಶಿವಸೇನಾ ಮತ್ತು ಎನ್‌ಸಿಪಿ ಭಾನುವಾರ ಏನನ್ನೂ ಹೇಳಿಲ್ಲ.

ನಮ್ಮ ಸಭೆ ಫಲಪ್ರದವಾಗಿತ್ತು. ಮುಂದಿನ ದಿನಗಳಲ್ಲಿ ಮತ್ತಷ್ಟು ಸಭೆಗಳನ್ನು ನಡೆಸುತ್ತೇವೆ. ದೇಶ ಸ್ವಾತಂತ್ರ್ಯದ 75ನೇ ವರ್ಷವನ್ನು ಪೂರೈಸುತ್ತಿದೆ. ಆದರೆ ಹಲವು ಸಮಸ್ಯೆಗಳು ಇನ್ನೂ ಇವೆ. ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ಗರಿಷ್ಠ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ನಾವೆಲ್ಲರೂ ಒಟ್ಟಾಗಿ ಬದುಕಬೇಕು. ಹೀಗಾಗಿ ಹಲವು ರಾಷ್ಟ್ರೀಯ ನಾಯಕರು ಮತ್ತು ಪ್ರಾದೇಶಿಕ ನಾಯಕರನ್ನು ಭೇಟಿ ಮಾಡುತ್ತಿದ್ದೇವೆ. ನಮ್ಮ ಮುಂದೆ ಹೊಸ ಭರವಸೆ ಇದೆ. ಹೊಸ ಹುರುಪು ಮತ್ತು ಹೊಸ ಕಾರ್ಯಸೂಚಿಯೊಂದಿಗೆ ಸಮಾನ ಮನಸ್ಕರೆಲ್ಲರನ್ನೂ ಒಳಗೊಳ್ಳುತ್ತಿದ್ದೇವೆ
ಕೆ. ಚಂದ್ರಶೇಖರ ರಾವ್, ತೆಲಂಗಾಣ ಮುಖ್ಯಮಂತ್ರಿ

ನಮ್ಮದು ಸೇಡಿನ ಹಿಂದುತ್ವವಲ್ಲ. ಸೇಡಿನ ರಾಜಕಾರಣ ಹಿಂದುತ್ವವೂ ಅಲ್ಲ, ಭಾರತೀಯ ಸಂಸ್ಕೃತಿಯೂ ಅಲ್ಲ. ಈ ಸ್ಥಿತಿ ಬದಲಾಗಬೇಕು. ಇದೇ ಸ್ಥಿತಿ ಮುಂದುವರಿದರೆ ಭಾರತದ ಸ್ಥಿತಿ ಏನಾಗಬಹುದು? ನಮ್ಮ ರಾಜಕೀಯ ಎದುರಾಳಿಗಳು ತಮ್ಮ ಅವಧಿಯಲ್ಲಿನ ಅಭಿವೃದ್ಧಿಯ ಬಗ್ಗೆ ಮಾತನಾಡುವ ಬದಲಿಗೆ ಸುಳ್ಳು, ತಪ್ಪು ಮಾಹಿತಿಗಳನ್ನು ಹರಡುತ್ತಿದ್ದಾರೆ

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

ನಾವು ಭೇಟಿ ಮಾಡಿದಾಗಲೆಲ್ಲಾ ರಾಜಕಾರಣದ ಬಗ್ಗೆ ಚರ್ಚಿಸುತ್ತೇವೆ. ನಿರುದ್ಯೋಗ, ಬಡತನ, ರೈತರ ಸಾವು ಮತ್ತು ದೇಶದ ಇತರ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತೇವೆ. ರಾಜಕಾರಣದ ಚರ್ಚೆ ಎಂಬುದು ಅಭಿವೃದ್ಧಿಯ ಚರ್ಚೆ ಮಾತ್ರ. ತೆಲಂಗಾಣ ಸರ್ಕಾರವು ರೈತರ ಸಮಸ್ಯೆಗಳನ್ನು ಬಗೆಹರಿಸಿದ ಬಗ್ಗೆಯೂ ಚರ್ಚಿಸಿದ್ದೇವೆ
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ಸೋನು ಸೂದ್ ಕಾರು ಜಪ್ತಿ

ಚಂಡೀಗಡ (ಪಿಟಿಐ): ಮತದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂಬ ದೂರುಗಳು ಬಂದ ಕಾರಣ ನಟ ಸೋನು ಸೂದ್ ಅವರು ಮೊಗಾ ಕ್ಷೇತ್ರದ ಮತಗಟ್ಟೆಗೆ ಹೋಗಲು ಚುನಾವಣಾ ಆಯೋಗವು ನಿರ್ಬಂಧ ಹೇರಿದೆ. ಆದರೆ ಮತದಾರರ ಮೇಲೆ ಪ್ರಭಾವ ಬೀರಿದ್ದಾರೆ ಎಂಬ ಆರೋಪವನ್ನು ಸೋನು ಸೂದ್ ಅಲ್ಲಗಳೆದಿದ್ದಾರೆ.

ಮೊಗಾ ಕ್ಷೇತ್ರದಿಂದ ಸೂದ್ ಅವರ ತಂಗಿ ಮಾಳವಿಕಾ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ.

ಸೂದ್ ಅವರ ಕಾರನ್ನು ವಶಕ್ಕೆ ಪಡೆದಿರುವ ಪೊಲೀಸರು, ಅವರ ಮನೆಯ ಸುತ್ತ ಕಣ್ಗಾವಲು ಹಾಕಿದ್ದಾರೆ.

ಕೆಲವು ಅಭ್ಯರ್ಥಿಗಳು ಮತದಾರರನ್ನು ಖರೀದಿಸುತ್ತಿದ್ದಾರೆ ಎಂದು ಸೂದ್ ಆರೋಪಿಸಿದ್ದರು. 'ಇತರ ಅಭ್ಯರ್ಥಿಗಳು ಮೊಗಾ ಕ್ಷೇತ್ರದಲ್ಲಿ ಹಣ ಹಂಚುತ್ತಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿ ಚುನಾವಣಾ ಆಯೋಗವು ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಸೂದ್ ಟ್ವೀಟ್ ಮಾಡಿದ್ದಾರೆ.

'ವದಂತಿಗಳು ಮತ್ತು ಸುಳ್ಳು ಸುದ್ದಿಗಳ ಬಗ್ಗೆ ನಾವು ಅತ್ಯಂತ ಎಚ್ಚರದಲ್ಲಿ ಇರಬೇಕು. ನಮ್ಮ ಸಮಾಜದಲ್ಲಿ ಸುಧಾರಣೆ ಮತ್ತು ಬದಲಾವಣೆ ತರಲು ಸಾಧ್ಯವಿರುವ ಸರಿಯಾದ ಅಭ್ಯರ್ಥಿಗೆ ಮತ ಹಾಕಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಿಮ್ಮ ಪ್ರತಿಯೊಂದು ಮತವೂ ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ. ಅದು ನಮ್ಮ ದೇಶದ ಅಭಿವೃದ್ಧಿಗೆ ಅತ್ಯಂತ ಮುಖ್ಯ' ಎಂದೂ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

'ಪರಿಸರ ಸ್ನೇಹಿ ಪ್ರಗತಿಗೆ ಭಾರತ–ಜರ್ಮನಿ ಬದ್ಧ'

ಮ್ಯೂನಿಚ್ (ಪಿಟಿಐ): ಪರಿಸರ ಸ್ನೇಹಿ ಪ್ರಗತಿ ಮತ್ತು ಶುದ್ಧ ತಂತ್ರಜ್ಞಾನದ ಅಭಿವೃದ್ಧಿಗೆ ಉತ್ತೇಜನ ನೀಡಲು ಹಾಗೂ ಸಹಯೋಗ ಹೊಂದಲು ಭಾರತ ಮತ್ತು ಜರ್ಮನಿ ಬದ್ಧವಾಗಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಜರ್ಮನಿಯ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಖಾತೆ ಸಚಿವ ಸ್ವೆಂಜಾ ಶುಲ್ಜೆ ಅವರೊಂದಿಗೆ ರಚನಾತ್ಮಕ ಸಂವಾದ ಬಳಿಕ ಅವರು ಸುದ್ದಿಗಾರೊಂದಿಗೆ ಮಾತನಾಡಿದರು. ಮ್ಯೂನಿಚ್ ಭದ್ರತಾ ಸಮ್ಮೇಳನದಲ್ಲಿ ಭಾಗವಹಿಸಲು ಅವರು ಇಲ್ಲಿಗೆ ಬಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಜೈಶಂಕರ್, ಅಭಿವೃದ್ಧಿಗೆ ಸಹಭಾಗಿತ್ವ ಕುರಿತು ಚರ್ಚಿಸಿದ್ದೇವೆ. ಪರಿಸರಸ್ನೇಹಿ ಪ್ರಗತಿ ಮತ್ತು ಶುದ್ಧ ತಂತ್ರಜ್ಞಾನದ ಬಳಕೆ ಕುರಿತು ನಮ್ಮ ಬದ್ಧತೆಯನ್ನು ಮನವರಿಕೆ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಅವರು ವಿದೇಶಾಂಗ ಮತ್ತು ಭದ್ರತಾ ನೀತಿಯ ಸಲಹೆಗಾರ ಮತ್ತು ಜರ್ಮನ್ ಚಾನ್ಸಲರ್ ಜೆನ್ಸ್ ಪ್ಲೊಟ್ನೆರ್ ಹಾಗೂ ಐರ್ಲೆಂಡ್‌ನ ಸಚಿವ ಸೈಮನ್ ಕೊವೆನೆ ಅವರ ಜೊತೆಗೂ ಚರ್ಚಿಸಲಾಯಿತು ಎಂದು ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.


ಎಸ್.ಜೈಶಂಕರ್

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav

16 ಮತ್ತು 17 ವರ್ಷ ಪಕ್ವತಾ ಅವಧಿಯ ಕರ್ನಾಟಕ ಸರ್ಕಾರದ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹4,000 **ಕೋಟಿ** ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹು ದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ **(ಈ-ಕುಬೇರ್)** ವ್ಯವಸ್ಥೆಯ ಮೂಲಕ **22 ಫೆಬ್ರವರಿ 2022 (ಮಂಗಳವಾರ)** ರಂದು ನಡೆಸಲಾಗುವುದು. **ರಿಟೇಲ್ ಡೈರೆಕ್ಟ್ ಪೋರ್ಟಲ್** ಮೂಲಕ (https://rbiretaildirect.org.in) ನಾನ್–ಕಾಂಪಿಟಿಟಿವ್ ಸ್ಕೀಮ್ ಅನುಸಾರ ವೈಯಕ್ತಿಕ ವಿನಿಯೋಜಕರು ಕೂಡಾ ಬಿಡ್ ಮಾಡಬಲ್ಲರು.

ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ 18 ಫೆಬ್ರವರಿ 2022 (ಶುಕ್ರವಾರ) ದಿನಾಂಕದ ಪತ್ರಿಕಾ ಪ್ರಕಟಣೆ RBI ವೆಬ್ ತಾಣ (www.rbi.org.in) ವನ್ನು ನೋಡಿ.

" ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್‌ಎಂಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant contractors for the proposed construction of road, drain & parking bays at Belgaum cricket ground.
The details of issue/submission of tender document are as follows :-
1. Name of work :- Proposed construction of road, drain & parking bays at Belgaum cricket ground
2. Estimated Cost :- Rs.1.01 Croes
3. Earnest Money Deposit :- Rs.1,10,000/- DD should be in favour of KSCA
4. Cost of tender form :- Rs.15,000/- plus GST (Non Refundable)
5. Date of issue of tender form :- 21/2/2022 to 12/3/2022
6. Pre bid meeting :- 17/3/2022
7. Last date of submission of filled tender form :- 23/3/2022 before 4.30 p.m
8. Opening of the tender :- The same day @ 5.30 p.m. If any delay will be Intimated to the vendors.
9. Completion of work by :- 70 Days from the date of work order.

Tender documents may be obtained from the Office of the KSCA civil engineering department, by submitting a requisition in the company's letter head between 11.00 a.m to 5.00 p.m on any working days. For any clarification please contact Mr. H.A. Venkateshprasad, AGM Civil Engineering Dept, Mobile No. 9945604515/ 8150900022
Hon. Secretary, KSCA

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ: spo@uasraichur.edu.in ದೂರವಾಣಿ ಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-16/2021-22 Dt: 17-02-2022

ಅಲ್ಪಾವಧಿ ಟೆಂಡರ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ಸಂಸ್ಕರಣಾ ಉಪಕರಣಗಳ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2019-20/IND4140, 4181, 4197 to 4200) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 25–02–2022 ಆಗಿರುತ್ತದೆ

ಸಹಿ/– ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/637/ಎಂ.ಸಿ.&ಎ/2021–22

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.e-mail:bgrr-cpc@federalbank.co.in
Phone: 080-22074610/604/613/624/625

BGRR/PvtSale/2021-22 **NOTICE FOR PRIVATE SALE OF GOLD** 19/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br. Bangalore/Rajajinagar: No. 60/60, Raj Chambers, Dr. Rajkumar Road, 2Nd Block, Rajaji Nagar, Bangalore-560 010, Ph no. 080-23522007 :- 13346400180354,13346400180412,13346400180677,13346400180891.
Br. Bagalkot: Prema Arcade, Engineering college circle, Vidyagiri PO, Bagalkot- 587102, Ph no. 08354 233399 :- 21966400017817,21966400026867,21966400026644,21966400017114,21966400016033,21966400014236,21966400010101,21966400022965,21966400018799,21966400012453,21966400026636,21966400013006,21966400021900,21966400023146,21966400026594,21966400026826,21966400021223,21966400021405,21966400022395,21966400026545,21966400021926,21966400020167,21966400020142,21966400025414,21966400021934,21966400026628,21966400013311,21966400017643,21966400018625,21966400007784,21966400009442,21966400022536,21966400024599.
Br. Bellary: Modi Chambers, 2nd Cross, Gandhi Nagar, Bellary- 583 103, Ph no. 08392-258667:- 15896400098020.
Br. Udupi: Mahalasa Towers, Court Road, Udipi- 576 101, Ph no. 820-2521562:- 15746400033867.
Br. Billapura: Sy. No.20, Thyvakanahally, Sarjapur - Attibele Road, Bangalore - 562 125 :- 21666100011645,21666400009133,21666400016252,21666400015445,21666400015544,21666400011014,21666400014257,21666400009604,21666400015379,21666400015767,21666400016252,21666400009612,21666400015437,21666400017664,21666400014257,21666400007095,21666100009953,21666400017680,21666400016393,21666400016245,21666100011140,21666400017698,21666400014182,21666400009620,21666100011157,21666400017672,21666400015676,21666400016245,21666400015999,21666100011025,21666400016435,21666400015064,21666400015510,21666400015288,21666400016583,21666400015304,21666400008986,21666100010266,21666400015833,21666400009943,21666400009174,21666100010274,21666400014885,21666100010985,21666400009182,21666400008937,21666400015742,21666400013424,21666400009166,21666400015460,21666400015759,21666400013432,21666400011766,21666400010586,21666400014273,21666400013440,21666400009778,21666400010560,21666400015908,21666400013408,21666400015726,21666400010586,21666400014588,21666400013416,21666400015734,21666400010560,21666400016203,21666400015585,21666400010537,21666400009927,21666400010727,21666400015916,21666400010081,21666400016401,21666400012228,21666400014372,21666400010933,21666400015221,21666400012616,21666400016161,21666400015890.

Bangalore 19-02-2022 Vice President & Zonal Head

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಲಬುರಗಿ
ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ
ದೂ.ಸಂ: 08472-278604 ಇ–ಮೇಲ್: dudc.glb@gmail.com
ಸಂ:ಜಿನಕೋ/ಜಿ.ಐ.ಎಸ್ ಸರ್ವೆ(ಪೈಲಟ್ ಪ್ರೋಜೆಕ್ಟ್)/01/2021–22
ದಿನಾಂಕ: 18/02/2022

ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯ ಅಧಿಸೂಚನೆಯ ಪ್ರಕಟಣೆ

ಈ ಕೆಳಗೆ ಸೂಚಿಸಿದ ತಾತ್ಕಾಲಿಕ ಗುತ್ತಿಗೆ ಆಧಾರದ ಹುದ್ದೆಗಳ ನೇಮಕಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅಧಿಕೃತ ವೆಬ್–ಸೈಟ್ www.kalaburagidudc.mrc.gov.in/en/recruitment ಗೆ ಭೇಟಿ ನೀಡಿ ನಮೂನೆ ಹಾಗೂ ಇತರೆ ವಿವರಗಳನ್ನು ಪಡೆದುಕೊಳ್ಳಲು ಕೋರಿದೆ.
1. Survey Supervisor - 01 No's
2. CAD Operators - 06 No's

ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು A4 size ಲಗೋಡೆ ಮೇಲೆ "________ಹುದ್ದೆಗೆ ಅರ್ಜಿ ಸಲ್ಲಿಸಿದೆ" ಎಂದು ನಮೂದಿಸಿ ಸೂಚಿಸಿದ ನಮೂನೆಯಲ್ಲಿ ಹಾಗೂ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ "ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಠಡಿ ಸಂಖ್ಯೆ 11, 1ನೇ ಮಹಡಿ, ಮಿನಿವಿಧಾನ ಸೌಧ, ಮುಖ್ಯ ರಸ್ತೆ ಕಲಬುರಗಿ–585102 ಇಲ್ಲಿಗೆ ದಿನಾಂಕ 11.03.2022ರ ಸಮಯ ಸಂಜೆ 5.30 ರೊಳಗೆ (ಕಛೇರಿಯ ಕೆಲಸದ ದಿನಗಳಲ್ಲಿ ಮಾತ್ರ) ಸಲ್ಲಿಸಲು ಸೂಚಿಸಿದೆ. ಸೂಚಿಸಿದ ದಿನಾಂಕದ ನಂತರ ಬಂದತಂಹ ಅರ್ಜಿಗಳು ಯಾವೂದೇ ಕಾರಣಕ್ಕೆ ಪರಿಗಣಿಸಲಾಗುವುದಿಲ್ಲ.

ಸಹಿ/– ಜಿಲ್ಲಾಧಿಕಾರಿಗಳು
ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1136/ಎಂ.ಸಿ.&ಎ/2021–22

‘ಬಜೆಟ್ ಅಂದಾಜು ಮೀರಲಿದೆ ದೂರಸಂಪರ್ಕ ವರಮಾನ’

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವೆಗಳಿಂದ ಮುಂದಿನ ಹಣಕಾಸು ವರ್ಷದಲ್ಲಿ ಸರ್ಕಾರಕ್ಕೆ ಬರುವ ವರಮಾನವು ಬಜೆಟ್ ಅಂದಾಜಿಗಿಂತಲೂ ಹೆಚ್ಚಿಗೆ ಇರಲಿದೆ ಎಂದು ದೂರಸಂಪರ್ಕ ಕಾರ್ಯದರ್ಶಿ ಕೆ. ರಾಜಾರಾಮನ್ ಹೇಳಿದ್ದಾರೆ.

2022–23ರಲ್ಲಿ ದೂರಸಂಪರ್ಕ ಸೇವೆಗಳಿಂದ ಸರ್ಕಾರಕ್ಕೆ ₹ 52,806 ಕೋಟಿ ವರಮಾನ ಬರಲಿದೆ ಎಂದು ಕೇಂದ್ರ ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ.

ಕೆಲವರು ಮುಂಗಡ ಪಾವತಿ ಮಾಡುತ್ತಿದ್ದಾರೆ. ಅಲ್ಲದೆ, 5ಜಿ ತರಂಗಾಂತರ ಹರಾಜು ನಡೆಯುವುದರಿಂದ ವರಮಾನ ಸಂಗ್ರಹವು ಅಂದಾಜಿಗಿಂತಲೂ ಹೆಚ್ಚಿಗೆ ಆಗಲಿದೆ. ಆದರೆ ಎಷ್ಟು ಎಂದು ಈಗಲೇ ಅಂದಾಜು ಮಾಡುವುದು ಕಷ್ಟ ಎಂದು ಅವರು ತಿಳಿಸಿದ್ದಾರೆ.

5ಜಿ ತರಂಗಾಂತರ ಹರಾಜಿನಿಂದ ಎಷ್ಟು ಮೊತ್ತ ಸಂಗ್ರಹ ಆಗಲಿದೆ ಎಂದು ಈಗ ಅಂದಾಜು ಮಾಡಲು ಕಷ್ಟ. ಏಕೆಂದರೆ ಟ್ರಾಯ್ ನೀಡಿರುವ ಶಿಫಾರಸುಗಳು ಕೆಲವೊಂದು ಬದಲಾವಣೆಗಳಿಗೆ ಒಳಪಡಲಿವೆ ಎಂದಿದ್ದಾರೆ.

ಬಜೆಟ್ ಅಂದಾಜಿನ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ದೂರಸಂಪರ್ಕ ವರಮಾನವು ₹ 53,986 ಕೋಟಿ ಆಗಲಿದೆ. ಆದರೆ ಅದನ್ನೂ ಮೀರಿ ₹ 71,959 ಕೋಟಿಯಷ್ಟು ಸಂಗ್ರಹ ಆಗುವ ಅಂದಾಜು ಮಾಡಲಾಗಿದೆ. ಫೆಬ್ರುವರಿ 3ರವರೆಗೆ ₹ 69,559 ಕೋಟಿಯನ್ನು ದೂರಸಂಪರ್ಕ ಇಲಾಖೆಯು ಸಂಗ್ರಹಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಹೆಚ್ಚುವರಿಯಾಗಿ ಒಂದು ಸಾವಿರ ನೇಮಕ: ಟಾಟಾ ಟೆಕ್ನಾಲಜೀಸ್

ನವದೆಹಲಿ (ಪಿಟಿಐ): ಟಾಟಾ ಟೆಕ್ನಾಲಜೀಸ್ ಕಂಪನಿಯು 2022–23ನೇ ಹಣಕಾಸು ವರ್ಷದಲ್ಲಿ ಹೆಚ್ಚುವರಿಯಾಗಿ ಒಂದು ಸಾವಿರ ಮಂದಿಯನ್ನು ನೇಮಿಸಿಕೊಳ್ಳಲಿದೆ. ಇದರಿಂದ ಒಟ್ಟಾರೆ ನೇಮಕವು 4ಸಾವಿರಕ್ಕೆ ತಲುಪಲಿದೆ.

ತನ್ನ ವಹಿವಾಟು ಉತ್ತಮ ಬೆಳವಣಿಗೆ ಕಾಣುತ್ತಿರುವುದರಿಂದ ಗ್ರಾಹಕರ ಅಗತ್ಯಗಳನ್ನು ಈಡೇರಿಸಲು ಮುಂದಿನ ಹಣಕಾಸು ವರ್ಷದಲ್ಲಿ (2022–23) ಮೂರು ಸಾವಿರ ಮಂದಿಯನ್ನು ನೇಮಿಸಿಕೊಳ್ಳುವುದಾಗಿ ಕಂಪನಿಯು ಜನವರಿಯಲ್ಲಿ ಹೇಳಿತ್ತು. ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಸೇರಿದಂತೆ ದೇಶದ ಪ್ರಮುಖ ಕಡೆಗಳಲ್ಲಿ ಹಾಗೂ ಜಾಗತಿಕವಾಗಿ ತನ್ನ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಕಂಪನಿ ಯೋಜನೆ ರೂಪಿಸಿದೆ. ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿಯೇ 1,500 ಮಂದಿಯನ್ನು ನೇಮಿಸಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಂ.ಎಫ್: ಕೆಲವು ಪದಗಳ ಪರಿಚಯ

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್ ಹೂಡಿಕೆ ಎಂದಾಕ್ಷಣ ಅನೇಕರು ಆಲೋಚನೆ ಮಾಡದೆ, ಸ್ನೇಹಿತರು ಅಥವಾ ಪರಿಚಯದವರು ಹೇಳಿದ ಫಂಡ್ ಒಂದರಲ್ಲಿ ಹೂಡಿಕೆ ಮಾಡಿ ಸುಮ್ಮನಾಗುತ್ತಾರೆ. ಆದರೆ, ನಿಮ್ಮ ಅಗತ್ಯಕ್ಕೆ ಸರಿಹೊಂದುವ ಫಂಡ್ ಯಾವುದು ಎಂದು ತಿಳಿದುಕೊಂಡು ನಂತರ ಹೂಡಿಕೆ ಮಾಡುವುದು ಮುಖ್ಯ.

ಆಗ ಮಾತ್ರ ಮ್ಯೂಚುವಲ್ ಫಂಡ್ ಹೂಡಿಕೆ ಹಾದಿ ಸುಗಮವಾಗುತ್ತದೆ. ಇದು ಆಗಬೇಕು ಎಂದಾದರೆ ಡೆಟ್, ಈಕ್ವಿಟಿ ಮತ್ತು ಹೈಬ್ರೀಡ್ ಮ್ಯೂಚುವಲ್ ಫಂಡ್‌ಗಳ ಬಗ್ಗೆ ಒಂದಿಷ್ಟು ತಿಳಿದುಕೊಂಡಿರುವುದು ಅಗತ್ಯ.

ಡೆಟ್ ಮ್ಯೂಚುವಲ್ ಫಂಡ್: ಇಲ್ಲಿ ಹೂಡಿಕೆದಾರನ ಹಣಕ್ಕೆ ಹೆಚ್ಚು ರಿಸ್ಕ್ ಇರುವುದಿಲ್ಲ. ಆದರೆ ಹೂಡಿಕೆ ಮೊತ್ತದ ಮೇಲೆ ಸಿಗುವ ಲಾಭದ ಪ್ರಮಾಣ ಕಡಿಮೆ. ಹೂಡಿಕೆಯಲ್ಲಿ ಹೆಚ್ಚು ರಿಸ್ಕ್ ಬೇಡ ಎನ್ನುವವರು ಮತ್ತು ಅಲ್ಪಾವಧಿಗೆ ಹೂಡಿಕೆ ಮಾಡಬೇಕು ಎನ್ನುವವರು ಡೆಟ್ ಫಂಡ್ ಪರಿಗಣಿಸಬಹುದು. ಡೆಟ್ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆದಾರರಿಂದ ಸಂಗ್ರಹಿಸುವ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದಿಲ್ಲ. ಸರ್ಕಾರಿ ಬಾಂಡ್‌ಗಳು, ಡಿಬೆಂಚರ್‌ಗಳು, ಕಾರ್ಪೊರೇಟ್ ಎಫ್.ಡಿ.ಗಳು, ಟ್ರೆಷರಿ ಬಿಲ್‌ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಡೆಟ್ ಫಂಡ್‌ನಲ್ಲಿ ಹೂಡಿಕೆ ಅವಧಿ ಆಧರಿಸಿ ಲಿಕ್ವಿಡ್ ಫಂಡ್, ಮನಿ ಮಾರ್ಕೆಟ್ ಫಂಡ್, ಡೈನಾಮಿಕ್ ಬಾಂಡ್ ಫಂಡ್, ಕಾರ್ಪೊರೇಟ್ ಬಾಂಡ್ ಫಂಡ್, ಬ್ಯಾಂಕಿಂಗ್ ಆ್ಯಂಡ್ ಪಿಎಸ್‌ಯು ಫಂಡ್, ಗಿಲ್ಟ್ ಫಂಡ್, ಕ್ರೆಡಿಟ್ ರಿಸ್ಕ್ ಫಂಡ್, ಫ್ಲೋಟರ್ ಫಂಡ್, ಓವರ್ ನೈಟ್ ಫಂಡ್, ಅಲ್ಟ್ರಾ ಶಾರ್ಟ್ ಟರ್ಮ್ ಡುರೇಷನ್ ಫಂಡ್, ಲೋ ಡುರೇಷನ್ ಫಂಡ್, ಮೀಡಿಯಂ ಡುರೇಷನ್ ಫಂಡ್, ಮೀಡಿಯಂ ಟು ಲಾಂಗ್ ಡುರೇಷನ್ ಫಂಡ್, ಲಾಂಗ್ ಡುರೇಷನ್ ಫಂಡ್ ಆಯ್ಕೆಗಳಿವೆ.

ಈಕ್ವಿಟಿ ಮ್ಯೂಚುವಲ್ ಫಂಡ್: ಇಲ್ಲಿ ಹೂಡಿಕೆಗೆ ರಿಸ್ಕ್ ಜಾಸ್ತಿ ಇದ್ದು ಲಾಭ ಗಳಿಸುವ ಅವಕಾಶವೂ ಹೆಚ್ಚಿಗೆ ಇರುತ್ತದೆ. ದೀರ್ಘಾವಧಿ, ಅಂದರೆ 5ರಿಂದ 10 ವರ್ಷಗಳ ಅವಧಿಯ ಹೂಡಿಕೆಗೆ ಈಕ್ವಿಟಿ ಮ್ಯೂಚುವಲ್ ಫಂಡ್ ಸೂಕ್ತ. ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಶೇ 12ರಿಂದ ಶೇ 13ರಷ್ಟು ಲಾಭಾಂಶ ನಿರೀಕ್ಷಿಸಬಹುದು.

ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆದಾರರಿಂದ ಸಂಗ್ರಹಿಸಿದ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಆದರೆ ಈ ಹೂಡಿಕೆಯಲ್ಲಿ ನಿಶ್ಚಿತ ಠೇವಣಿಯಲ್ಲಿ ಇರುವಂತೆ ಇಂತಿಷ್ಟೇ ಬಡ್ಡಿ ಲಾಭ ಸಿಗುತ್ತದೆ ಎನ್ನುವ ಖಾತರಿ ಇರುವುದಿಲ್ಲ. ಈಕ್ವಿಟಿ ಮ್ಯೂಚುವಲ್ ಫಂಡ್ ಅಡಿಯಲ್ಲಿ ಪ್ರಮುಖವಾಗಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಿವೆ. ಲಾರ್ಜ್ ಕ್ಯಾಪ್ ಫಂಡ್‌ಗಳು ದೊಡ್ಡ ಮಟ್ಟದ ಕಂಪನಿಗಳಲ್ಲಿ ಹೂಡಿಕೆ ಮಾಡಿದರೆ, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳು ಕ್ರಮವಾಗಿ ಮಧ್ಯಮ ಮತ್ತು ಸಣ್ಣ ಪ್ರಮಾಣದ ಕಂಪನಿಗಳಲ್ಲಿ ತೊಡಗಿಸುತ್ತವೆ.

ಹೈಬ್ರೀಡ್ ಮ್ಯೂಚುವಲ್ ಫಂಡ್: ಈಕ್ವಿಟಿ ಮತ್ತು ಡೆಟ್ ಮ್ಯೂಚುವಲ್ ಫಂಡ್‌ಗಳ ಮಿಶ್ರಣ ಹೈಬ್ರೀಡ್ ಮ್ಯೂಚುವಲ್ ಫಂಡ್. ಅಂದರೆ ಹೆಚ್ಚು ರಿಸ್ಕ್ ಇರುವ ಕಂಪನಿ ಷೇರುಗಳು ಮತ್ತು ಕಡಿಮೆ ರಿಸ್ಕ್ ಇರುವ ಬಾಂಡ್, ಡಿಬೆಂಚರ್, ಕಾರ್ಪೊರೇಟ್ ಎಫ್.ಡಿ., ಗವರ್ನಮೆಂಟ್ ಸೆಕ್ಯೂರಿಟೀಸ್‌ಗಳಲ್ಲಿ ಹೈಬ್ರೀಡ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆ ಮಾಡುತ್ತವೆ. ಇಲ್ಲಿ ರಿಸ್ಕ್ ಮತ್ತು ಲಾಭಾಂಶ ಎರಡೂ ಕೂಡ ಮಧ್ಯಮ ಪ್ರಮಾಣದಲ್ಲಿ ಇರುತ್ತವೆ.

ಹೈಬ್ರೀಡ್ ಫಂಡ್‌ಗಳ ಅಡಿಯಲ್ಲಿ ಈಕ್ವಿಟಿ ಓರಿಯಂಟೆಡ್ ಹೈಬ್ರೀಡ್ ಫಂಡ್, ಡೆಟ್ ಓರಿಯಂಟೆಡ್ ಹೈಬ್ರೀಡ್ ಫಂಡ್, ಬ್ಯಾಲೆನ್ಸ್ಡ್ ಫಂಡ್, ಮಾಸಿಕ ಆದಾಯ ಯೋಜನೆಯ ಫಂಡ್ ಮತ್ತು ಆರ್ಬಿಟ್ರೇಜ್ ಫಂಡ್‌ಗಳು ಇವೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ ಎರಡನೇ ವಾರ ಕುಸಿದ ಷೇರುಪೇಟೆ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಕುಸಿತ ಕಂಡಿವೆ. ಫೆಬ್ರುವರಿ 18ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಇಳಿಕೆಯಾಗಿವೆ. 57,832 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇಕಡ 0.55ರಷ್ಟು ಕುಸಿತವಾಗಿದೆ. 17,276 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.56ರಷ್ಟು ತಗ್ಗಿದೆ. ರಷ್ಯಾ–ಉಕ್ರೇನ್ ನಡುವಿನ ಬಿಕ್ಕಟ್ಟು, ತೈಲ ಬೆಲೆ ಹೆಚ್ಚಳ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ನಿರೀಕ್ಷೆಗೂ ಮೊದಲೇ ಬಡ್ಡಿ ದರ ಹೆಚ್ಚಳ ಸಾಧ್ಯತೆ ಸೇರಿ ಹಲವು ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4.6ರಷ್ಟು, ಲೋಹ ವಲಯ ಶೇ 4ರಷ್ಟು, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2.7ರಷ್ಟು ಕುಸಿದಿವೆ. ಬಿಎಸ್‌ಇ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕ್ರಮವಾಗಿ ಶೇ 2ರಷ್ಟು ಮತ್ತು ಶೇ 3.2ರಷ್ಟು ತಗ್ಗಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 12,215.48 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 10,592.21 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಐಷರ್ ಮೋಟರ್ಸ್ ಶೇ 4ರಷ್ಟು, ಟಿಸಿಎಸ್ ಶೇ 3ರಷ್ಟು, ಹಿಂದೂಸ್ಥಾನ್ ಯುನಿಲಿವರ್ ಶೇ 2.3ರಷ್ಟು, ಹೀರೊ ಮೋಟೊಕಾರ್ಪ್ ಶೇ 2ರಷ್ಟು, ಟಾಟಾ ಕನ್ಸ್ಯೂಮರ್ ಶೇ 2.3ರಷ್ಟು ಏರಿಕೆ ಕಂಡಿವೆ. ಪವರ್ ಗ್ರಿಡ್ ಶೇ 6ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 6ರಷ್ಟು, ಅಲ್ಟ್ರಾ ಟೆಕ್ ಸಿಮೆಂಟ್ ಶೇ 6ರಷ್ಟು, ಸಿಪ್ಲಾ ಶೇ 5.2ರಷ್ಟು ಮತ್ತು ಐಸಿಐಸಿಐ ಬ್ಯಾಂಕ್ ಶೇ 5.3ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಬ್ರಹ್ಮಪುತ್ರ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್, ಎಲೆಂಟಾಬ್ ಬೆಕ್ ಇಂಡಿಯಾ ಲಿಮಿಟೆಡ್, ಮಹೀಂದ್ರ ಸಿಐಇ ಆಟೋಮೋಟಿವ್ ಲಿಮಿಟೆಡ್, ಸನೋಫಿ ಇಂಡಿಯಾ ಲಿಮಿಟೆಡ್, ಕೆಎಸ್‌ಬಿ ಲಿಮಿಟೆಡ್, ಲಿಂದೇ ಇಂಡಿಯಾ ಲಿಮಿಟೆಡ್, ವೆಸುವಿಯಸ್ ಇಂಡಿಯಾ ಲಿಮಿಟೆಡ್, ರೈನ್ ಇಂಡಸ್ಟ್ರೀಸ್ ಲಿಮಿಟೆಡ್, ಸ್ಟೋವೆಕ್ ಇಂಡಸ್ಟ್ರೀಸ್ ಲಿಮಿಟೆಡ್, ಮೋಡರ್ಮನ್ ಸ್ಟೀಲ್ಸ್ ಲಿಮಿಟೆಡ್ ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಮಾರ್ಚ್ 10ರಂದು ಉತ್ತರ ಪ್ರದೇಶ ಚುನಾವಣೆ ಫಲಿತಾಂಶ ಹೊರಬೀಳಲಿದೆ. ಮಾರ್ಚ್ 11ರಂದು ಎಲ್‌ಐಸಿ ಐಪಿಒ ನಡೆಯುವ ನಿರೀಕ್ಷೆಯಿದೆ. ಮಾರ್ಚ್ 15-16ರಂದು ಬಡ್ಡಿ ದರ ವಿಚಾರವಾಗಿ ಅಮೆರಿಕದ ಫೆಡರಲ್ ಬ್ಯಾಂಕ್ ಸಮಿತಿಯ ಸಭೆ ಇದೆ. ಈ ಎಲ್ಲ ಬೆಳವಣಿಗೆಗಳ ಮೇಲೆ ಹೂಡಿಕೆದಾರರ ದೃಷ್ಟಿ ನೆಟ್ಟಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹425
12 ಮೊಟ್ಟೆಗೆ	₹59

ಮೈಸೂರು

100 ಮೊಟ್ಟೆಗೆ	₹425

ರಾಮನಗರ ರೇಷ್ಮೆ

ಮಿಶ್ರ ತಳಿ	₹400-771
ದ್ವಿತಳಿ	₹688-955

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

₹15 ಸಾವಿರಕ್ಕಿಂತ ಹೆಚ್ಚಿನ ವೇತನ ಈಗ ಪಿಂಚಣಿಗೆ ಪರಿಗಣನೆ ಇಲ್ಲ

ಹೆಚ್ಚಿನ ಸಂಬಳದವರಿಗೆ ಹೊಸ ಪಿಂಚಣಿ?

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಸಂಘಟಿತ ವಲಯದ, ತಿಂಗಳಿಗೆ ₹ 15 ಸಾವಿರಕ್ಕಿಂತ ಹೆಚ್ಚಿನ ಮೂಲವೇತನ ಪಡೆಯುತ್ತಿರುವ, ನೌಕರರ ಪಿಂಚಣಿ ಯೋಜನೆ –1995ರ (ಇಪಿಎಸ್–95) ವ್ಯಾಪ್ತಿಗೆ ಬಾರದವರಿಗಾಗಿ ಹೊಸ ಪಿಂಚಣಿ ಯೋಜನೆಯೊಂದನ್ನು ರೂಪಿಸುವ ಚಿಂತನೆ ನಡೆಸಿದೆ.

ಮುಖ್ಯಾಂಶಗಳು
- ಮಾ. 11, 12ರಂದು ನಡೆಯುವ ಸಭೆಯಲ್ಲಿ ಚರ್ಚೆ
- ಹೆಚ್ಚಿನ ಸಂಬಳ ಪಡೆಯುವವರಿಗೆ ಹೆಚ್ಚು ಪಿಂಚಣಿಗೆ ಒತ್ತಾಯ

ಈಗಿರುವ ನಿಯಮಗಳ ಪ್ರಕಾರ, ಕೆಲಸಕ್ಕೆ ಸೇರುವ ಸಂದರ್ಭದಲ್ಲಿ ಮೂಲವೇತನವು (ಮೂಲವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತ) ₹ 15 ಸಾವಿರದವರೆಗೆ ಇದ್ದರೆ ಅವರು ಇಪಿಎಸ್–95 ವ್ಯಾಪ್ತಿಗೆ ಬರುತ್ತಾರೆ.

‘ಹೆಚ್ಚಿನ ಮೊತ್ತವನ್ನು ನೀಡುವವರಿಗೆ ಹೆಚ್ಚಿನ ಪಿಂಚಣಿ ಇರಬೇಕು ಎಂಬ ಬೇಡಿಕೆಯು ಇಪಿಎಫ್ ಸದಸ್ಯರ ಕಡೆಯಿಂದ ಇದೆ. ಹೀಗಾಗಿ, ತಿಂಗಳಿಗೆ ₹ 15 ಸಾವಿರಕ್ಕಿಂತ ಹೆಚ್ಚಿನ ಮೂಲವೇತನ ಪಡೆಯುವವರಿಗೆ ಹೊಸ ಪಿಂಚಣಿ ಯೋಜನೆಯೊಂದನ್ನು ರೂಪಿಸುವ ಬಗ್ಗೆ ಪರಿಶೀಲನೆ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯ ಸಭೆಯು ಮಾರ್ಚ್ 11 ಮತ್ತು 12ರಂದು ನಡೆಯಲಿದ್ದು, ಈ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಯು ಅಲ್ಲಿ ಚರ್ಚೆಗೆ ಬರಬಹುದು. ಪಿಂಚಣಿಗೆ ಸಂಬಂಧಿಸಿದ ವಿಚಾರಗಳಿಗಾಗಿ ಧರ್ಮದರ್ಶಿಗಳ ಮಂಡಳಿಯು ರಚಿಸಿದ್ದ ಉಪಸಮಿತಿಯು ಈ ಸಭೆಯ ಸಂದರ್ಭದಲ್ಲಿ ವರದಿ ಸಲ್ಲಿಸಲಿದೆ.

ತಿಂಗಳಿಗೆ ₹ 15 ಸಾವಿರಕ್ಕಿಂತ ಹೆಚ್ಚಿನ ಮೂಲವೇತನ ಪಡೆಯುವ ಇಪಿಎಫ್‌ಒ ಚಂದಾದಾರರು, ಇಪಿಎಸ್–95 ಯೋಜನೆಗೆ ಕಡಿಮೆ ಮೊತ್ತ ನೀಡುವ ಅನಿವಾರ್ಯ ಇದೆ (₹ 15 ಸಾವಿರದ ಶೇಕಡ 8.33ರಷ್ಟು ಪಾಲು). ಹೀಗಾಗಿ ಇವರಿಗೆ ಸಿಗುವ ಪಿಂಚಣಿ ಮೊತ್ತವೂ ಕಡಿಮೆ ಇರುತ್ತದೆ. 2014ರಲ್ಲಿ ಜಾರಿಗೆ ಬಂದ ತಿದ್ದುಪಡಿ ನಿಯಮದ ಪ್ರಕಾರ, ₹ 15 ಸಾವಿರಕ್ಕಿಂತ ಹೆಚ್ಚಿನ ಮೂಲವೇತನವು ಪಿಂಚಣಿಗೆ ಪರಿಗಣನೆ ಆಗುವುದಿಲ್ಲ. ಇದು ವ್ಯಕ್ತಿ ಕೆಲಸಕ್ಕೆ ಸೇರುವಾಗ ಇರುವ ವೇತನಕ್ಕೆ ಮಾತ್ರ ಅನ್ವಯ.

ನಂತರದಲ್ಲಿ, ಪಿಂಚಣಿಗೆ ಪರಿಗಣನೆಗೆ ಆಗುವ ಮೂಲವೇತನವನ್ನು ₹ 25 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಬೇಡಿಕೆ ಬಂದಿದೆ. ಆದರೆ ಈ ಕೋರಿಕೆಗೆ ಒಪ್ಪಿಗೆ ದೊರೆತಿಲ್ಲ.

ಪಿಂಚಣಿಗೆ ಅರ್ಹವಾಗುವ ಮೂಲವೇತನಕ್ಕೆ ಮಿತಿ ಇರುವ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿ ಇದೆ. ಕೇರಳ ಹೈಕೋರ್ಟ್ 2014ರಲ್ಲಿ ನೌಕರರಿಗೆ ಇಪಿಎಸ್–95 ಯೋಜನೆಗೆ ತಮ್ಮ ಮೂಲವೇತನವನ್ನು ಆಧರಿಸಿ ಕೊಡುಗೆ ನೀಡಲು ಅವಕಾಶ ಕಲ್ಪಿಸಿದೆ.

ಕೇರಳ ಹೈಕೋರ್ಟ್ ಆದೇಶ ಪ್ರಶ್ನಿಸಿ ಇಪಿಎಫ್‌ಒ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ 2019ರಲ್ಲಿ ವಜಾಗೊಳಿಸಿತು. ಆದರೆ, 2021ರಲ್ಲಿ ಇಪಿಎಫ್‌ಒ ಸಲ್ಲಿಸಿದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಗಣಿಸಿ, 2019ರ ವಜಾ ಆದೇಶವನ್ನು ಹಿಂದಕ್ಕೆ ಪಡೆದಿದೆ.

ಸಂಕ್ಷಿಪ್ತ ಸುದ್ದಿ

ಜಮ್ಮು: ಶಂಕಿತ ಎಲ್‌ಇಟಿ ಉಗ್ರನ ಬಂಧನ

ಭದೇರ್ವಾ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಥಾತ್ರಿ ಎಂಬಲ್ಲಿ ವಾಹನ ತಪಾಸಣೆ ನಡೆಸುವ ವೇಳೆ ಲಷ್ಕರ್-ಎ-ತೈಬಾಗೆ (ಎಲ್‌ಇಟಿ) ಸೇರಿದ ಶಂಕಿತ ಉಗ್ರನನ್ನು ಬಂಧಿಸಲಾಗಿದೆ ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಸಾಜನ್–ಬರ್ಜನಿ ಗ್ರಾಮದ ನಿವಾಸಿ ಆದಿಲ್ ಇಕ್ಬಾಲ್ ಬಟ್ ಬಂಧಿತ ಆರೋಪಿ. ಬಂಧಿತನಿಂದ ಪಿಸ್ತೂಲ್ ಮತ್ತು ಎರಡು ನಿಯತ-ಕಾಲಿಕೆಯನ್ನು ವಶಪಡಿಸಿಕೊಳ್ಳಲಾಗಿದೆ. ಈತ ಪಾಕಿಸ್ತಾನದ ಮೊಹದ್ ಅಮಿನ್‌ನಿಂದ ಕಾರ್ಯ ಪ್ರವೃತ್ತನಾಗಿದ್ದ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಥಾತ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮೀರ್ ವಾಂಖೆಡೆ ವಿರುದ್ಧ ಎಫ್‌ಐಆರ್

ಠಾಣೆ (ಪಿಟಿಐ): ಮಾದಕವಸ್ತು ನಿಯಂತ್ರಣ ಸಂಸ್ಥೆಯ (ಎನ್‌ಸಿಬಿ) ಮುಂಬೈ ವಲಯದ ಮಾಜಿ ನಿರ್ದೇಶಕ ಸಮೀರ್ ವಾಂಖೆಡೆ ಅವರು ನವಿ ಮುಂಬೈನಲ್ಲಿ ತಮ್ಮ ಮಾಲೀಕತ್ವದ ಬಾರ್ ಮತ್ತು ಹೋಟೆಲ್‌ಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ನೀಡಿ ಪರವಾನಗಿ ಪಡೆದಿದ್ದಾರೆ ಎಂದು ಆರೋಪಿಸಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ತಪ್ಪು ಮಾಹಿತಿ ನೀಡಿ ವಂಚಿಸಿ ಈ ಪರವಾನಗಿ ಪಡೆಯಲಾಗಿದೆ. ಹಾಗಾಗಿ ಆ ಪರವಾನಗಿಯನ್ನು ಇತ್ತೀಚೆಗೆ ರದ್ದುಪಡಿಸಿದ್ದಾಗಿ ಜಿಲ್ಲಾಧಿಕಾರಿ ರಾಜೇಶ್ ನರ್ವೇಕರ್ ತಿಳಿಸಿದ್ದಾರೆ.

ರಾಜ್ಯ ಅಬಕಾರಿ ಅಧಿಕಾರಿಗಳ ದೂರಿನ ಮೇರೆಗೆ ಸಮೀರ್ ವಾಂಖೆಡೆ ವಿರುದ್ಧ ಕೊಪ್ರಿ ಪೊಲೀಸ್ ಠಾಣೆಯಲ್ಲಿ ‘ಫೋರ್ಜರಿ’ ಅಪರಾಧ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಠಾಣೆಯ ಉಪ ಪೊಲೀಸ್ ಆಯುಕ್ತ ಡಾ. ವಿನಯ್‌ಕುಮಾರ್ ರಾಥೋಡ್ ಹೇಳಿದ್ದಾರೆ.

ಸ್ಕೀಯಿಂಗ್... ಶಿಮ್ಲಾದ ಕುಫ್ರಿಯಲ್ಲಿ ಪ್ರವಾಸಿಗರು ಭಾನುವಾರ ಸ್ಕೀಯಿಂಗ್ ಆಡುವ ಮೂಲಕ ಸಂಭ್ರಮ ಪಟ್ಟರು –ಪಿಟಿಐ ಚಿತ್ರ

ಇ.ವಿ. ತಯಾರಿಕೆಗೆ ಪತ್ಯೇಕ ಘಟಕ: ಅಶೋಕ್ ಲೇಲ್ಯಾಂಡ್ ಚಿಂತನೆ

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಗೆ ಪ್ರತ್ಯೇಕ ಘಟಕ ಸ್ಥಾಪಿಸುವ ಆಲೋಚನೆ ನಡೆಸಿರುವುದಾಗಿ ಅಶೋಕ್ ಲೇಲ್ಯಾಂಡ್ ಕಂಪನಿಯ ಕಾರ್ಯನಿರ್ವಾಹಕ ಅಧ್ಯಕ್ಷ ಧೀರಜ್ ಹಿಂದುಜಾ ತಿಳಿಸಿದ್ದಾರೆ.

‘ಶೀಘ್ರದಲ್ಲೇ ನಮಗೆ ಸ್ವತಂತ್ರ ಘಟಕದ ಅಗತ್ಯ ಬೀಳಲಿದೆ. ಈ ಬಗ್ಗೆ ನಿರ್ವಹಣಾ ತಂಡವು ಗಮನ ಹರಿಸಲಿದೆ’ ಎಂದು ಹೇಳಿದ್ದಾರೆ. ಹೊಸ ಘಟಕ ಸ್ಥಾಪನೆಗೆ ಕಾಲಮಿತಿ ಹಾಕಿಕೊಳ್ಳಲಾಗಿದೆಯೇ ಎನ್ನುವ ಪ್ರಶ್ನೆಗೆ, ‘ಬಹಳಷ್ಟು ಅಂಶಗಳು ವಿದ್ಯುತ್ ಚಾಲಿತ ವಾಹನಗಳ ಬೆಳವಣಿಗೆ ಪ್ರಮಾಣದ ಮೇಲೆ ಅವಲಂಬಿಸಿರುತ್ತದೆ’ ಎಂದು ತಿಳಿಸಿದ್ದಾರೆ.

ವಾಣಿಜ್ಯ ವಾಹನಗಳಿಗೆ ಸಿಎನ್‌ಜಿ, ಹೈಡ್ರೋಜನ್‌ನಂತಹ ಪರ್ಯಾಯ ಇಂಧನಗಳ ಎಂಜಿನ್ ಅಭಿವೃದ್ಧಿಪಡಿಸಲು ₹ 500 ಕೋಟಿ ಹೂಡಿಕೆ ಮಾಡಲು ಕಂಪನಿ ನಿರ್ಧರಿಸಿದೆ.

ವಿದ್ಯುತ್ ಚಾಲಿತ ವಾಹನಗಳ ಅಭಿವೃದ್ಧಿಗಾಗಿ ತನ್ನ ಅಂಗಸಂಸ್ಥೆ ಸ್ವಿಚ್ ಮೊಬಿಲಿಟಿ ಮೂಲಕ ₹ 1,500 ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿಯು ಈಗಾಗಲೇ ಘೋಷಿಸಿದೆ. ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯ ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ವಿದ್ಯುತ್ ಚಾಲಿತ ವಾಹನಗಳು ಮತ್ತು ಎಂಜಿನ್‌ಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಗಮನ ಹರಿಸಿದೆ.

ಅರುಣಾಚಲ ಪ್ರದೇಶ, ಮಿಜೋರಾಂ ಅಭಿವೃದ್ಧಿಗೆ ವೇಗ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶ ಮತ್ತು ಮಿಜೋರಾಂ ರಾಜ್ಯಗಳ ರಚನಾ ದಿನದ ಅಂಗವಾಗಿ, ಅಲ್ಲಿನ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಶುಭ ಕೋರಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಮೋದಿ, ‘ಅರುಣಾಚಲ ಪ್ರದೇಶದ ಜನರಿಗೆ ಅವರ ರಾಜ್ಯ ರಚನೆಯಾದ ದಿನದ ಶುಭಾಶಯಗಳು. ಈ ರಾಜ್ಯದ ಜನರು ಅದ್ಭುತ ಪ್ರತಿಭೆ ಮತ್ತು ಪರಿಶ್ರಮಕ್ಕೆ ಹೆಸರುವಾಸಿಯಾಗಿದ್ದಾರೆ. ಅರುಣಾಚಲ ಪ್ರದೇಶವು ಪ್ರಗತಿಯ ಹೊಸ ಎತ್ತರಕ್ಕೇರಲಿ’ ಎಂದು ಹಾರೈಸಿದ್ದಾರೆ.

ಅರುಣಾಚಲ ಪ್ರದೇಶದಲ್ಲಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲಾಗುವುದು. ಅಲ್ಲಿ ಆಧುನಿಕ ಮೂಲಸೌಕರ್ಯ ವೃದ್ದಿಗೂ ಶ್ರಮಿಸಲಾಗುವುದು. ರಾಷ್ಟ್ರೀಯ ಭದ್ರತಾ ದೃಷ್ಟಿಕೋನದಿಂದ ಈ ಕಾರ್ಯ ತ್ವರಿತವಾಗಿ ಆಗಬೇಕಿದೆ ಎಂದು ಅವರು ಪ್ರತಿಪಾದಿಸಿದರು.

ಮತ್ತೊಂದು ಟ್ವೀಟ್‌ನಲ್ಲಿ ಮೋದಿ ಅವರು, ಮಿಜೋರಾಂ ಜನರಿಗೆ ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುವುದಾಗಿ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Machinery & Tools
START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಉದ್ಯೋಗಾವಕಾಶ
General
ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Hotel
ಸಹಾಯಕರು ಬೇಕಾಗಿದ್ದಾರೆ (ಪುರುಷರು) ರಾಮನಗರದ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. 9353191972/ 8867338388

Multiple Vacancy
ವಿಕಲಚೇತನರಿಗಾಗಿ ಉದ್ಯೋಗ ಮೇಳ: ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ವಿಕಲಚೇತನರಿಗಾಗಿ ದಿನಾಂಕ: 25-02-2022ರಂದು ಬೆಂಗಳೂರಿನ ಮೇಜೆಸ್ಟಿಕ್ ಹತ್ತಿರದ ಮ್ಯಾನ್‌ಫೋ ಬೆಲ್ ಹೋಟೆಲ್ ಆಂಡ್ ಕನ್ವೆನ್‌ಷನ್ ಸೆಂಟರ್‌ನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣ. ಹೆಚ್ಚಿನ ಮಾಹಿತಿಗೆ ದೂ.: 080-68333999, 6364867795, 9449864693 ಸಂಪರ್ಕಿಸಬಹುದು.

Part-Time Jobs
ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವೈಯಕ್ತಿಕ
Lost
THIS IS to bring to your kind notice that, Santosh s/o Gajanan Desai, Address: Plot no 13, Kashi Nivas, NGOS Colony, Gulbarga, our Land Link Deed is Missing since 9/2/22. If found kindly return to the above address.

ಭವಿಷ್ಯ
Astrology
★‖ನಂ.1 ಸ್ತ್ರೀಪುರುಷ‖★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಪಾಂಡುರಂಗ ಗುರೂಜಿ. 9972033162

★‖ಶ್ರೀಶಕ್ತಿ ಸಾಯಿಬಾಬಾ‖★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

ಸ್ತ್ರೀ-ವಶೀಕರಣ, ಪುರುಷ-ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಮಾನಸಿಕ ವಶೀಕರಣವಿಧಿ ಕಲಿಯಲಿಚ್ಛಿಸುವವರು: ಮನೆಯಲ್ಲಿನ ಅಶಾಂತಿ, ರೋಗಮುಕ್ತವಾಗಲು, ಪ್ರೇಮಸಂಬಂಧವಾಗಲು, ಗ್ರಾಹಕರಿಂದ ವ್ಯಾಪಾರವಾಗಲು, ನೌಕರಿಗಾಗಿ, ಸ್ತ್ರೀಪುರುಷರನ್ನು, ಜನಸಾಮಾನ್ಯರನ್ನು ಸೆಳೆಯುವ ಶಕ್ತಿಯಾಗಲಿಚ್ಛಿಸುವವರು. 8884826120

ಪ್ರವಾಸ
Travel
ರೈಲು ಮತ್ತು ಎಸಿ ಬಸ್ಸಿನಲ್ಲಿ 20.05.2022 ಹಾಗೂ 27.05.2022ರಿಂದ 17/22ದಿನಗಳ ನವದೆಹಲಿ, ಕೊಲ್ಕತ್ತಾ,ಕಾಶಿ,ನೇಪಾಳ,ಪುರಿ, ಹರಿದ್ವಾರ. 09.06.2022ರಿಂದ ವಿಮಾನ ಮತ್ತು ಬಸ್ಸಿನಲ್ಲಿ ಚಾರೋಧಾಮ್ 13ದಿನಗಳು ಹಾಗೂ 7ದಿನಗಳ ಕಾಶಿ,ಗಯಾ, ನೈಮಿಷಾರಣ್ಯಾ.ವಿವರಗಳಿಗೆ: ವಿಷ್ಣನ್ ಟ್ರಾವೆಲ್ ಲೈನ್ಸ್, #164,ಆರ್.ವಿ.ರಸ್ತೆ, (ಮಿನರ್ವ ಬಸ್‌ಸ್ಟಾಪ್ ಎದುರು) ಬೆಂಗಳೂರು4.ಫೋನ್: 8105657052, 9480182865, 08026565085.

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ, ಮುಕ್ತಿನಾಥ್, ಕಾಶಿ. 12/05/22 ಚಾರ್ಧಾಮ್, ಕೇದಾರನಾಥ,ಬದ್ರಿನಾಥ್. 14/04/22 ವೈಷ್ಣೋದೇವಿ, ಕುಲು, ಮನಾಲಿ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ವೆಂಕಟೇಶ್ ಅಯ್ಯರ್ ಆಲ್‌ರೌಂಡ್ ಆಟ; ಭಾರತ ಕ್ಲೀನ್‌ಸ್ವೀಪ್; ಪೂರನ್ ಅರ್ಧಶತಕ ವ್ಯರ್ಥ

ಸೂರ್ಯಕುಮಾರ್ ಆಟಕ್ಕೆ ಒಲಿದ ಜಯ

ಕೋಲ್ಕತ್ತ (ಪಿಟಿಐ): ಮೊದಲೇ ನಿರೀಕ್ಷಿಸಿದಂತೆ ಭಾರತ ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಟ್ವೆಂಟಿ-20 ಸರಣಿಯಲ್ಲಿ ಕ್ಲೀನ್‌ಸ್ವೀಪ್ ಮಾಡಿತು.

ಭಾನುವಾರ ರಾತ್ರಿ ಈಡನ್ ಗಾರ್ಡನ್‌ನಲ್ಲಿ ಸಮಾಧಾನಕರ ಗೆಲುವಿಗಾಗಿ ವಿಂಡೀಸ್ ಬಳಗವು ಮಾಡಿದ ಪ್ರಯತ್ನಗಳಿಗೆ ಆತಿಥೇಯ ತಂಡದ ಭರವಸೆಯ ಆಟಗಾರರು ಅಡ್ಡಗಾಲು ಹಾಕಿದರು. ಮೂರನೇ ಮತ್ತು ಅಂತಿಮ ಪಂದ್ಯದಲ್ಲಿ 17 ರನ್‌ಗಳಿಂದ ಜಯಿಸಿ, 3–0ಯಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ವಿಂಡೀಸ್ ಬಳಗದ ಬೌಲರ್‌ಗಳು ಆರಂಭವದಲ್ಲಿ ಯಶ ಕಂಡರು. ಆದರೆ, ಸೂರ್ಯಕುಮಾರ್ ಯಾದವ್ ಸೂರ್ಯಕುಮಾರ್ (65; 31ಎ, 4X1, 6X7) ಅಬ್ಬರದ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 184 ರನ್‌ಗಳ ಹೋರಾಟದ ಮೊತ್ತ ಕಲೆಹಾಕಿತು.

ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮಿಂಚಿದ ಇಂದೋರ್ ಪ್ರತಿಭೆ ವೆಂಕಟೇಶ್ ಅಯ್ಯರ್ (ಔಟಾಗದೆ 35 ಮತ್ತು 23ಕ್ಕೆ2) ಹಾಗೂ ಹರ್ಷಲ್ ಪಟೇಲ್ (22ಕ್ಕೆ3) ಅವರ ಆಟದ ಮುಂದೆ ವಿಂಡೀಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 167 ರನ್ ಗಳಿಸಿತು. ನಿಕೋಲಸ್ ಪೂರನ್ (61; 47ಎ) ಅವರ ಆಟಕ್ಕೆ ಶ್ರೇಯಸ್ ಠಾಕೂರ್ ಕಡಿವಾಣ ಹಾಕಿದರು. 18ನೇ ಓವರ್‌ನಲ್ಲಿ ವಿಕೆಟ್‌ಕೀಪರ್ ಇಶಾನ್ ಕಿಶನ್ ಪಡೆದ ಅಮೋಘ ಕ್ಯಾಚ್‌ಗೆ ಪೂರನ್ ಇನಿಂಗ್ಸ್ ಕೊನೆಗೊಂಡಿತು. ಅಲ್ಲಿಗೆ ಪ್ರವಾಸಿ ಬಳಗದ ಭರವಸೆಯೂ ಕಮರಿತು.

ಭಾರತ ತಂಡದಲ್ಲಿ ಪದಾರ್ಪಣೆ ಮಾಡಿದ ಬೌಲರ್ ಆವೇಶ್ ಖಾನ್‌ಗೆ ಒಂದೂ ವಿಕೆಟ್ ಒಲಿಯಲಿಲ್ಲ. ಭಾರತದ ಫೀಲ್ಡರ್‌ಗಳು ಮೂರು ಕ್ಯಾಚ್‌ಗಳನ್ನು ಕೈಚೆಲ್ಲಿದ್ದರಿಂದ ಜಯದ ದಡ ಸೇರುವುದು ವಿಳಂಬವಾಯಿತು.

ಸೂರ್ಯ–ವೆಂಕಟೇಶ್ ಜೊತೆಯಾಟ: ವಿಂಡೀಸ್ ತಂಡದ ಭರವಸೆಯ ಆಟಗಾರ ಜೇಸನ್ ಹೋಲ್ಡರ್ ಭಾರತ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಯುವ ಬ್ಯಾಟರ್ ಋತುರಾಜ್ ಗಾಯಕವಾಡ್ (4 ರನ್) ವಿಕೆಟ್ ಗಳಿಸಿದರು. ಈ ಹಂತದಲ್ಲಿ ಇಶಾನ್ ಕಿಶನ್ (34 ರನ್) ಮತ್ತು ಶ್ರೇಯಸ್ ಅಯ್ಯರ್ (25; 16ಎ) ಎರಡನೇ ವಿಕೆಟ್‌ಗೆ 53 ರನ್ ರನ್ ಸೇರಿಸಿದರು. ಅಯ್ಯರ್ ಉತ್ತಮ ಲಯದಲ್ಲಿದ್ದಾಗಲೇ ಹೇಡನ್ ವಾಲ್ಶ್ ಎಸೆತದಲ್ಲಿ ಎಡವಿದರು. ಹೋಲ್ಡರ್‌ಗೆ ಕ್ಯಾಚಿತ್ತ ಅಯ್ಯರ್ ನಿರ್ಗಮಿಸಿದರು. ನಂತರದ ಓವರ್‌ನಲ್ಲಿ ರಾಸ್ಟನ್ ಚೇಸ್ ಎಸೆತದಲ್ಲಿ ಇಶಾನ್ ಕ್ಲೀನ್‌ಬೌಲ್ಡ್ ಆದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ರೋಹಿತ್ ವಿಫಲರಾದರು.

ವೆಂಕಟೇಶ್ ಅಯ್ಯರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

15 ಎಸೆತಗಳಲ್ಲಿ ಏಳು ರನ್ ಮಾತ್ರ ಗಳಿಸಿದರು. 14ನೇ ಓವರ್‌ನಲ್ಲಿ ಅವರು ಔಟಾದರು. ಈ ಹಂತದಲ್ಲಿ ತಂಡದ ಮೊತ್ತವು ನೂರರ ಗಡಿಯನ್ನೂ ದಾಟಿರಲಿಲ್ಲ.

ಸೂರ್ಯ ಮತ್ತು ವೆಂಕಟೇಶ್ ಅಯ್ಯರ್ (ಔಟಾಗದೆ 35; 19ಎ) ಜೋಡಿಯು ಆತಂಕ ದೂರ ಮಾಡಿತು. ಇಬ್ಬರ ಆಟದ ಭರಾಟೆಗೆ ಕ್ರೀಡಾಂಗಣದಲ್ಲಿ ಸೇರಿದ್ದ ಪ್ರೇಕ್ಷಕರ ಸಂತಸ ಮುಗಿಲುಮುಟ್ಟಿತು. ವಿಂಡೀಸ್ ಬೌಲರ್‌ಗಳ ಬೆವರು ಹರಿಯಿತು. ಕೊನೆಯ ಐದು ಓವರ್‌ಗಳಲ್ಲಿ 86 ರನ್‌ಗಳು ಸೇರಿದವು.

ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಔಟಾಗುವ ಮುನ್ನ ಸೂರ್ಯ ಒಟ್ಟು ಏಳು ಸಿಕ್ಸರ್‌ಗಳನ್ನು ಸಿಡಿಸಿದರು. 209.68ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಇನ್ನೊಂದೆಡೆ ಅಯ್ಯರ್ ಕೂಡ ನಾಲ್ಕು ಬೌಂಡರಿ, ಎರಡು ಸಿಕ್ಸರ್ ಸಿಡಿಸಿದರು. ಅಜೇಯ 35 ರನ್ ಗಳಿಸಿದರು. ವಿಂಡೀಸ್ ತಂಡದ ಆರು ಬೌಲರ್‌ಗಳ ಎಸೆತಗಳನ್ನೂ ಪುಡಿಗಟ್ಟಿದ ಸೂರ್ಯ ಮತ್ತು ವೆಂಕಟೇಶ್ ಆಟ ರಂಗೇರಿತು.

ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ 5ಕ್ಕೆ184 (20 ಓವರ್‌ಗಳಲ್ಲಿ)
ಋತುರಾಜ್ ಸಿ ಮೇಯರ್ಸ್ ಬಿ ಹೋಲ್ಡರ್ 4 (8ಎ), ಇಶಾನ್ ಬಿ ಚೇಸ್ 34 (31ಎ, 4X5), ಶ್ರೇಯಸ್ ಸಿ ಹೋಲ್ಡರ್ ಬಿ ವಾಲ್ಶ್ 25 (16ಎ, 4X4), ರೋಹಿತ್ ಬಿ ಡಾಮ್ನಿಕ್ 7 (15ಎ), ಸೂರ್ಯಕುಮಾರ್ ಸಿ ರೊವ್ಮನ್ ಬಿ ಶೆಫರ್ಡ್ 65 (31ಎ, 4X1, 6X7), ವೆಂಕಟೇಶ್ ಔಟಾಗದೆ 35 (19ಎ, 4X4, 2X6)
ಇತರೆ (ಲೆಗ್‌ಬೈ 10, ವೈಡ್ 4)14
ವಿಕೆಟ್ ಪತನ: 1–10 (ಋತುರಾಜ್ ಗಾಯಕವಾಡ; 2.3), 2–63 (ಶ್ರೇಯಸ್ ಅಯ್ಯರ್; 8.3), 3–66 (ಇಶಾನ್ ಕಿಶನ್; 9.4), 4–93 (ರೋಹಿತ್ ಶರ್ಮಾ; 13.5), 5–184 (ಸೂರ್ಯಕುಮಾರ್ ಯಾದವ್; 19.6)
ಬೌಲಿಂಗ್: ಜೇಸನ್ ಹೋಲ್ಡರ್ 4–0–29–1, ರೊಮಾರಿಯೊ ಶೇಫರ್ಡ್ 4–0–50–1, ರಾಸ್ಟನ್ ಚೇಸ್ 4–0–23–1, ಹೇಡನ್ ವಾಲ್ಶ್ 4–0–30–1, ಡಾಮ್ನಿಕ್ ಡ್ರೇಕ್ಸ್ 3–0–37–1, ಫ್ಯಾಬಿಯನ್ ಅಲೆನ್ 1–0–5–0.

ವೆಸ್ಟ್ ಇಂಡೀಸ್ 9ಕ್ಕೆ 167 (20 ಓವರ್)
ಮೇಯರ್ಸ್ ಸಿ ಇಶಾನ್ ಬಿ ಚಾಹರ್ 6 (5 ಎ, 4x1), ಹೋಪ್ ಸಿ ಇಶಾನ್ ಬಿ ಚಾಹರ್ 8 (4 ಎ, 4x2), ಪೂರನ್ ಸಿ ಇಶಾನ್ ಬಿ ಶಾರ್ದೂಲ್ 61 (47 ಎ, 4x8, 6x1), ಪೊವೆಲ್ ಸಿ ಶಾರ್ದೂಲ್ ಬಿ ಹರ್ಷಲ್ 25 (14 ಎ, 4x2, 6x2), ಪೊಲಾರ್ಡ್ ಸಿ ರವಿ ಬಿ ವೆಂಕಟೇಶ್ 5 (7 ಎ, 4x1), ಹೋಲ್ಡರ್ ಸಿ ಶ್ರೇಯಸ್ ಬಿ ವೆಂಕಟೇಶ್ 2 (6 ಎ), ಚೇಸ್ ಬಿ ಹರ್ಷಲ್ 12 (7 ಎ, 4x2), ಶೆಫರ್ಡ್ ಸಿ ರೋಹಿತ್ ಬಿ ಹರ್ಷಲ್ 29 (21 ಎ, 4x1, 6x3), ಫ್ಯಾಬಿಯನ್ ಔಟಾಗದೆ 5 (3 ಎ, 4x1), ಡೊಮಿನಿಕ್ ಸಿ ರೋಹಿತ್ ಬಿ ಶಾರ್ದೂಲ್ 4 (3 ಎ, 4x1), ಹೇಡನ್ ಔಟಾಗದೆ 0 (3 ಎ)
ಇತರೆ (ಲೆಗ್‌ಬೈ 3, ವೈಡ್ 7) 10
ವಿಕೆಟ್ ಪತನ: 1-6 (ಕೈಲ್ ಮೇಯರ್ಸ್, 0.5), 2-26 (ಶಾಯ್ ಹೋಪ್, 2.4), 3-73 (ರೋವ್ಮನ್ ಪೊವೆಲ್, 6.5), 4-82 (ಕೀರನ್ ಪೊಲಾರ್ಡ್, 8.3), 5-87 (ಜೇಸನ್ ಹೋಲ್ಡರ್, 10.2), 6-100 (ರೋಸ್ಟನ್ ಚೇಸ್, 11.5), 7-148 (ನಿಕೋಲಸ್ ಪೂರನ್, 17.1), 8-158 (ರೊಮಾರಿಯೊ ಶೆಫರ್ಡ್, 18.5), 9-166 (ಡೊಮಿನಿಕ್ ಡ್ರೇಕ್ಸ್, 19.3)
ಬೌಲಿಂಗ್: ದೀಪಕ್ ಚಾಹರ್ 1.5–0–15–2, ಆವೇಶ್ ಖಾನ್ 4–0–42–0, ವೆಂಕಟೇಶ್ ಅಯ್ಯ 2.1–0–23–2, ಶಾರ್ದೂಲ್ ಠಾಕೂರ್ 4–0–33–2, ರವಿ ಬಿಷ್ಣೋಯಿ 4–0 –29–0, ಹರ್ಷಲ್ ಪಟೇಲ್ 4–0–22–3

ಫಲಿತಾಂಶ: ಭಾರತಕ್ಕೆ 17 ರನ್ ಜಯ; 3–0ಯಿಂದ ಸರಣಿ

ವುಕಿಚ್‌ಗೆ ಚಾಂಪಿಯನ್ ಪಟ್ಟ

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ 2ನೇ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡೂ ಸೆಟ್‌ಗಳಲ್ಲಿ ಆಧಿಪತ್ಯ ಸ್ಥಾಪಿಸಿದ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಅವರು ಬೆಂಗಳೂರು ಓಪನ್–2 ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ಮಧ್ಯಾಹ್ನ ನಡೆದ ಫೈನಲ್ ಪಂದ್ಯದಲ್ಲಿ ಅವರು ಬಲ್ಗೇರಿಯಾದ ದಿಮಿತರ್ ಕುಜ್ಮನೊವ್ ಎದುರು 6-4, 6-4ರಲ್ಲಿ ಜಯ ಸಾಧಿಸಿದರು.

25 ವರ್ಷದ ವುಕಿಚ್ ಈ ಪ್ರಶಸ್ತಿಯನ್ನು ತಮ್ಮ ಕುಟುಂಬಕ್ಕೆ ಸಮರ್ಪಿಸಿದ್ದಾರೆ. ನಿರ್ಣಾಯಕ ಘಟ್ಟಗಳಲ್ಲಿ ಕುಟುಂಬವು ತಮ್ಮ ಬೆಂಬಲಕ್ಕೆ ನಿಂತ ಕಾರಣದಿಂದ ಸಾಧನೆಯ ಹಾದಿ ಸುಗಮವಾಗಿದೆ ಎಂದು ಅವರು ಪಂದ್ಯದ ನಂತರ ಹೇಳಿದರು.

ಉದ್ಯಾನ ನಗರಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಪ್ರಯಾಸವಾಗಿದೆ ಎಂದು ಹೇಳಿದ್ದ ವುಕಿಚ್ ಕಳೆದ ವಾರ ನಡೆದ ಮೊದಲ ಟೂರ್ನಿಯ ಎರಡನೇ ಸುತ್ತಿನಲ್ಲೇ ಹೊರಬಿದ್ದಿದ್ದರು. ಫೈನಲ್‌ಗೇರಿದ್ದ ಕ್ರೊವೇಷ್ಯಾದ ಬೋರ್ನ ಗೋಜೊ ಆ ಪಂದ್ಯದಲ್ಲಿ ವುಕಿಚ್ ಅವರನ್ನು ಮಣಿಸಿದ್ದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಸೋಲಿನ ಸುಳಿಯಿಂದ ಮೇಲೆದ್ದು ಬಂದು ಜಯ ಗಳಿಸಿದ್ದ 28 ವರ್ಷದ ಕುಜ್ಮನೊವ್ ಫೈನಲ್‌ನಲ್ಲೂ ಮಿಂಚುವ ಭರವಸೆಯಿಂದಾಗಿ ಟೆನಿಸ್ ಪ್ರಿಯರು ಕುತೂಹಲಗೊಂಡಿದ್ದರು. ಆದರೆ ಅಗ್ರ-ಶ್ರೇಯಾಂಕದ ವುಕಿಚ್ ಎದುರು ಅವರು ನಿರುತ್ತರರಾದರು. ಅಮೋಘ ಸರ್ವ್‌ಗಳ ಮೂಲಕ ಮಿನುಗಿದ ವುಕಿಚ್ ಎದುರಾಳಿ ಎಸಗಿದ ತಪ್ಪುಗಳ ಲಾಭವನ್ನೂ ಪಡೆದುಕೊಂಡರು.

ಮೊದಲ ಸೆಟ್ ಸುಲಭವಾಗಿ ಗೆದ್ದುಕೊಂಡ ವುಕಿಚ್ ಎರಡನೇ ಸೆಟ್‌ನಲ್ಲೂ ಅದೇ ಲಯವನ್ನು ಮುಂದುವರಿಸಿದರು. ಈ ಸೆಟ್‌ನಲ್ಲಿ ಕುಜ್ಮನೊವ್ ಮತ್ತಷ್ಟು ನೀರಸ ಆಟವಾಡಿದರು. ಮೂರನೇ ಗೇಮ್‌ನಲ್ಲಿ ಸರ್ವ್ ಕಳೆದುಕೊಂಡ ಅವರು ಐದನೇ ಗೇಮ್‌ನಲ್ಲೂ ಅದೇ ಸ್ಥಿತಿ ಮುಂದುವರಿದಾಗ ರ್‍ಯಾಕೆಟ್ ಎಸೆದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ 'ಪೆನಾಲ್ಟಿ' ರೂಪದಲ್ಲಿ ಎದುರಾಳಿಗೆ ಒಂದು ಪಾಯಿಂಟ್ ಕೊಡುಗೆ ನೀಡಬೇಕಾಯಿತು.

ಈ ಹಂತದಲ್ಲಿ ಮತ್ತಷ್ಟು ಹುರುಪು ಪಡೆದುಕೊಂಡ ವುಕಿಚ್ ಸತತ ಎರಡು ಸೇರಿದಂತೆ ಮೂರು ಏಸ್‌ಗಳನ್ನು ಸಿಡಿಸಿ ಪಂದ್ಯಕ್ಕೆ ತೆರೆ ಎಳೆದು ಸಂಭ್ರಮಿಸಿದರು. ವುಕಿಚ್ ಈ ಮೂಲಕ ಕುಜ್ಮನೊವ್ ಎದುರಿನ ಎಲ್ಲ ಐದು ಪಂದ್ಯಗಳನ್ನೂ ಗೆದ್ದ ಸಾಧನೆ ಮಾಡಿದರು.

ಪ್ರಶಸ್ತಿಯೊಂದಿಗೆ ಅಲೆಕ್ಸಾಂಡರ್ ವುಕಿಚ್ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ

ಫೈನಲ್ ಪಂದ್ಯದ ಮುಖ್ಯ ಅತಿಥಿ, ಭಾರತ ಹಾಕಿ ತಂಡದ ಮಾಜಿ ನಾಯಕ ಧನರಾಜ್ ಪಿಳ್ಳೆ ಅವರು ಯುವ ಆಟಗಾರನೊಬ್ಬನ ಕ್ಯಾಪ್‌ಗೆ ಸಹಿ ಮಾಡಿದರು

'ನಿವೃತ್ತಿ' ಬಗ್ಗೆ ಯೋಚಿಸಿ ಎಂದಿದ್ದ ದ್ರಾವಿಡ್: ಸಹಾ

ಕೋಲ್ಕತ್ತ (ಪಿಟಿಐ): ಶ್ರೀಲಂಕಾ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ತಮ್ಮನ್ನು ಆಯ್ಕೆ ಮಾಡದ ಕುರಿತು ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಅಸಮಾಧಾನಗೊಂಡಿದ್ದಾರೆ.

ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ವಿರುದ್ಧ ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಇನ್ನು ಮುಂದೆ ಭಾರತ ತಂಡದಲ್ಲಿ ಸ್ಥಾನ ಸಿಗುವುದಿಲ್ಲ. ನೀವು ನಿವೃತ್ತಿಯಾಗುವ ಬಗ್ಗೆ ಯೋಚಿಸುವುದು ಒಳಿತು ಎಂದು ದ್ರಾವಿಡ್ ಸಲಹೆ ನೀಡಿದ್ದರು. ಈಚೆಗೆ ಬಿಸಿಸಿಐ ಅಧ್ಯಕ್ಷ ಗಂಗೂಲಿ ತಾವು ಅಧಿಕಾರದಲ್ಲಿರುವವರೆಗೂ ತಂಡದಲ್ಲಿ ನಿನ್ನ ಸ್ಥಾನ ಅಬಾಧಿತ ಎಂದು ಭರವಸೆ ನೀಡಿದ್ದರು. ಆದರೆ ಅವರು ತಮ್ಮ ಮಾತಿನಂತೆ ನಡೆದುಕೊಳ್ಳಲಿಲ್ಲ' ಎಂದು ಬಂಗಾಳದ ಸಹಾ ಹೇಳಿದ್ದಾರೆ.

ವೃದ್ಧಿಮಾನ್ ಸಹಾ

'ಹೋದ ನವೆಂಬರ್‌ನಲ್ಲಿ ಕಾನ್ಪುರದಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ಎದುರು ನೋವು ನಿವಾರಕ ಮಾತ್ರ ನುಂಗಿ ಆಡಿದ್ದೆ. ಅಜೇಯ 61 ರನ್ ಗಳಿಸಿದ್ದೆ. ಆ ಸಂದರ್ಭದಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಅಭಿನಂದಿಸಿದ್ದ ದಾದಿ (ಸೌರವ್ ಗಂಗೂಲಿ) ತಂಡದಲ್ಲಿ ಸ್ಥಾನ ಇರುವ ಬಗ್ಗೆ ಭರವಸೆ ನೀಡಿದ್ದರು' ಎಂದು ಸಹಾ ಬಹಿರಂಗಪಡಿಸಿದ್ದಾರೆ.

'ಅಲ್ಲದೇ ತಾವು ಮಂಡಳಿ ಅಧ್ಯಕ್ಷರಾಗಿರುವವರೆಗೂ ನೀನು ಯಾವುದೇ ವಿಷಯಕ್ಕೂ ಚಿಂತಿಸಬೇಡ ಎಂದಿದ್ದರು. ಅಧ್ಯಕ್ಷರ ಇಂತಹ ಬೆಂಬಲದಿಂದ ಆತ್ಮವಿಶ್ವಾಸ ಇಮ್ಮಡಿಗೊಂಡಿತ್ತು. ಆದರೆ, ಇಷ್ಟು ಬೇಗ ಎಲ್ಲವೂ ಬದಲಾಗಿದ್ದು ಹೇಗೆಂದು ಅಚ್ಚರಿಯಾಗುತ್ತಿದೆ' ಎಂದು ಸಹಾ ಹೇಳಿದ್ದಾರೆ.

37 ವರ್ಷದ ಸಹಾ 40 ಟೆಸ್ಟ್ ಆಡಿದ್ದಾರೆ. 1353 ರನ್ ಗಳಿಸಿದ್ದಾರೆ. ಅದರಲ್ಲಿ ಮೂರು ಶತಕ ಮತ್ತು ಆರು ಅರ್ಧಶತಕಗಳು ಇವೆ. ಒಂಬತ್ತು ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಐಪಿಎಲ್‌ನಲ್ಲಿಯೂ 133 ಪಂದ್ಯಗಳನ್ನು ಆಡಿದ್ದಾರೆ.

ಪ್ರೊ ಕಬಡ್ಡಿ: ಯೋಧಾ–ಪುಣೇರಿ ಪಲ್ಟನ್ ಮುಖಾಮುಖಿ

ಬುಲ್ಸ್‌ಗೆ 'ಜೈಂಟ್' ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟದೊಂದಿಗೆ ಕಬಡ್ಡಿ ಪ್ರಿಯರನ್ನು ಮುದಗೊಳಿಸಿರುವ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಸೆಮಿಫೈನಲ್ ಮೇಲೆ ಕಣ್ಣಿಟ್ಟು ಸೋಮವಾರ ಕಣಕ್ಕೆ ಇಳಿಯಲಿದೆ. ಪ್ಲೇ ಆಫ್ ಹಂತದ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಬುಲ್ಸ್ ಹಾಗೂ ಗುಜರಾತ್ ಜೈಂಟ್ಸ್ ತಂಡಗಳು ಸೆಣಸಲಿವೆ.

ಹೈ ಫ್ಲೈಯರ್ ಖ್ಯಾತಿಯ ಪವನ್ ಶೆರಾವತ್ ಅವರನ್ನು ನಿಯಂತ್ರಿಸಲು ಸುನಿಲ್ ಕುಮಾರ್ ನೇತೃತ್ವದ ಜೈಂಟ್ಸ್ ತಂಡದ ಬಲಿಷ್ಠ ರಕ್ಷಣಾ ವಿಭಾಗ ಸಜ್ಜಾಗಿದೆ. ಹೀಗಾಗಿ ಸೋಮವಾರದ ಪಂದ್ಯ ತೀವ್ರ ಕುತೂಹಲ ಕೆರಳಿಸಿದೆ.

ಮತ್ತೊಂದು ಪಂದ್ಯದಲ್ಲಿ ಯು.ಪಿ. ಯೋಧಾ ಮತ್ತು ಪುಣೇರಿ ಪಲ್ಟನ್ ಮುಖಾಮುಖಿಯಾಗಲಿವೆ. ಈ ಪಂದ್ಯಗಳಲ್ಲಿ ಗೆಲುವು ಸಾಧಿಸುವ ತಂಡಗಳು ಅಂತಿಮ ನಾಲ್ಕರ ಹಂತಕ್ಕೆ ಲಗ್ಗೆ ಇರಿಸಲಿವೆ. ಕನ್ನಡಿಗ ಪ್ರಶಾಂತ್ ಕುಮಾರ್ ರೈ ನಾಯಕತ್ವದ ಪಟ್ನಾ ಪೈರೇಟ್ಸ್ ಮತ್ತು 'ಎಕ್ಸ್‌ಪ್ರೆಸ್' ಖ್ಯಾತಿಯ ನವೀನ್ ಕುಮಾರ್ ನೇತೃತ್ವದ ದಬಂಗ್ ಡೆಲ್ಲಿ ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶಿಸಿವೆ. ಲೀಗ್ ಹಂತದಲ್ಲಿ ಬೆಂಗಳೂರು ಬುಲ್ಸ್ 66 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನ ಗಳಿಸಿದೆ. ಗುಜರಾತ್ ಜೈಂಟ್ಸ್ ಒಂದು ಪಾಯಿಂಟ್ ಹೆಚ್ಚು ಗಳಿಸಿದ್ದು ನಾಲ್ಕನೇ ಸ್ಥಾನದಲ್ಲಿದೆ. ನಿರ್ಣಾಯಕ ಘಟ್ಟಗಳಲ್ಲಿ ಚೇತರಿಸಿಕೊಳ್ಳುವ ರಕ್ಷಣಾ ವಿಭಾಗವೇ ಜೈಂಟ್ಸ್ ತಂಡದ ಬಲ. ಈ ಸಾಮರ್ಥ್ಯದಿಂದ ತಂಡ ಕೆಲವು ಪಂದ್ಯಗಳನ್ನು ಗೆದ್ದುಕೊಂಡಿದೆ. ಪವನ್ ಶೆರಾವತ್ ಏಕಾಂಗಿ ಹೋರಾಟದ ಮೂಲಕ ಬುಲ್ಸ್‌ಗಾಗಿ ಪಂದ್ಯಗಳನ್ನು ಗೆದ್ದುಕೊಟ್ಟ ಉದಾಹರಣೆಗಳೂ ಇವೆ.

ರೇಡಿಂಗ್‌ನಲ್ಲಿ ಚಂದ್ರನ್ ರಂಜಿತ್, ದೀಪಕ್ ನರ್ವಾಲ್ ಮತ್ತು ಅಬೋಲ್ ಫಜಲ್ ಅವರ ಬಲ ತಂಡಕ್ಕಿದೆ. ಮಹೇಂದರ್ ಸಿಂಗ್, ಮೋಹಿತ್ ಶೆರಾವತ್ ಮತ್ತು ಸೌರಭ್ ನಂದಾಲ್ ರಕ್ಷಣಾ ವಿಭಾಗದಲ್ಲಿ ನಿರೀಕ್ಷೆ ಮೂಡಿಸಿದ್ದಾರೆ.

ಜೈಂಟ್ಸ್‌ನಲ್ಲಿ ಸುನಿಲ್ ಕುಮಾರ್ ಅವರೊಂದಿಗೆ ಗಿರೀಶ್ ಮಾರುತಿ ಎರ್ನಕ್ ಮತ್ತು ಪರ್ವೇಶ್ ಬೇನ್ಸ್‌ವಾಲ್ ಕೂಡ ರಕ್ಷಣಾ ವಿಭಾಗದಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದಾರೆ.

ಪ್ರದೀಪ್ ನರ್ವಾಲ್ ಮೇಲೆ ಕಣ್ಣು

ಪುಣೇರಿ ಪಲ್ಟನ್ ಎದುರಿನ ಪಂದ್ಯದಲ್ಲಿ ಯು.ಪಿ.ಯೋಧಾ ತಂಡದ ದಾಖಲೆ ವೀರ ಪ್ರದೀಪ್ ನರ್ವಾಲ್ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಮೋಹಿತ್ ಗೋಯತ್ ಮತ್ತು ಅಸ್ಲಾಂ ಇನಾಂದಾರ್ ಜೋಡಿ ಪುಣೇರಿಯ ಭರವಸೆಯಾಗಿದ್ದಾರೆ.

ಈ ಎರಡೂ ತಂಡಗಳು ಲೀಗ್‌ನ ಆರಂಭದಲ್ಲಿ ನೀರಸ ಆಟವಾಡಿದ್ದವು. ನಿಧಾನಕ್ಕೆ ಚೇತರಿಸಿಕೊಂಡು ಪ್ಲೇ ಆಫ್ ಹಂತದಲ್ಲಿ ಸ್ಥಾನ ಗಳಿಸಿವೆ. ಯೋಧಾ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಗಳಿಸುವಲ್ಲಿ ಯಶಸ್ವಿಯಾಗಿದ್ದರೆ ಪುಣೇರಿ ಆರನೇ ಸ್ಥಾನದಲ್ಲಿದೆ.

ಇಂದಿನ ಪಂದ್ಯಗಳು (ಪ್ಲೇ ಆಫ್)
ಯು.ಪಿ.ಯೋಧಾ–ಪುಣೇರಿ ಪಲ್ಟನ್
ಆರಂಭ: ರಾತ್ರಿ 7.30
ಬೆಂಗಳೂರು ಬುಲ್ಸ್–ಗುಜರಾತ್ ಜೈಂಟ್ಸ್
ಆರಂಭ: ರಾತ್ರಿ 8.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಗುಜರಾತ್ ತಂಡದ ರಕ್ಷಣಾ ವಿಭಾಗ ಬಲಿಷ್ಠವಾಗಿದೆ. ಅದನ್ನು ಮೀರಿ ಪಾಯಿಂಟ್ಸ್ ಗಳಿಸುವುದು ನಮ್ಮ ಮುಂದೆ ಇರುವ ಬಲುದೊಡ್ಡ ಸವಾಲು
ಪವನ್ ಶೆರಾವತ್ ಬುಲ್ಸ್ ನಾಯಕ

ಪವನ್ ಶೆರಾವತ್ ವಿಶ್ವದರ್ಜೆಯ ರೇಡರ್. ಅವರನ್ನು ಕಟ್ಟಿಹಾಕುವುದು ಯಾವುದೇ ತಂಡಕ್ಕೂ ಕಷ್ಟದ ಕೆಲಸ. ಈ ಹಿನ್ನೆಲೆಯಲ್ಲಿ ನಾವು ತಂತ್ರ ರೂಪಿಸುತ್ತಿದ್ದೇವೆ
ಸುನಿಲ್ ಕುಮಾರ್ ಗುಜರಾತ್ ನಾಯಕ

ಬೆಂಗಳೂರು ತಂಡಕ್ಕೆ ಮಾಡು–ಮಡಿ ಪಂದ್ಯ

ಬ್ಯಾಂಬೊಲಿಮ್ (ಪಿಟಿಐ): ಮಾಜಿ ಚಾಂಪಿಯನ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್ಎಲ್) ಫುಟ್‌ಬಾಲ್ ಟೂರ್ನಿಯ ಸೋಮವಾರದ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡದಲ್ಲಿದೆ.



ಕ್ಲೀಟನ್ ಸಿಲ್ವಾ

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ಎಫ್‌ಸಿಯನ್ನು ಬಿಎಫ್‌ಸಿ ಎದುರಿಸಲಿದ್ದು ಪ್ಲೇ ಆಫ್ ಹಂತ ತಲುಪಬೇಕಾದರೆ ಒಡಿಶಾ ತಂಡಕ್ಕೂ ಗೆಲುವು ಅನಿವಾರ್ಯವಾಗಿದೆ.

17 ಪಂದ್ಯಗಳಲ್ಲಿ 23 ಪಾಯಿಂಟ್ ಗಳಿಸಿರುವ ಬೆಂಗಳೂರು ಎಫ್‌ಸಿ ಹಿಂದಿನ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಎದುರು ನೀರಸ ಆಟವಾಡಿ ನಿರಾಸೆಗೆ ಒಳಗಾಗಿದೆ. ಟೂರ್ನಿಯಿಂದ ಬಹುತೇಕ ಹೊರಬಿದ್ದಿರುವ ತಂಡದ ಪ್ಲೇ ಆಫ್ ಆಸೆ ಜೀವಂತಾಗಿರಬೇಕಾದರೆ ಮುಂದಿನ ಪಂದ್ಯಗಳಲ್ಲಿ ಗೆಲ್ಲಲೇಬೇಕು. ಒಡಿಶಾ 17 ಪಂದ್ಯಗಳಲ್ಲಿ 22 ಪಾಯಿಂಟ್ ಕಲೆಹಾಕಿದ್ದು ಸಂಕಷ್ಟದಲ್ಲಿದೆ.

ಸತತ ಒಂಬತ್ತು ಪಂದ್ಯಗಳಲ್ಲಿ ಸೋಲರಿಯದೆ ಮುನ್ನುಗ್ಗಿದ್ದ ಬೆಂಗಳೂರು ಬುಲ್ಸ್ ಸುಲಭವಾಗಿ ಪ್ಲೇ ಆಫ್ ಹಂತಕ್ಕೇರುವ ಭರವಸೆಯಲ್ಲಿತ್ತು. ಆದರೆ ಹಿಂದಿನ ಪಂದ್ಯದಲ್ಲಿ ಆಘಾತಕ್ಕೊಳಗಾಗಿದೆ.

ಲೀಗ್‌ನ ಕಳೆದ ಪಂದ್ಯದಲ್ಲಿ ಈ ಎರಡು ತಂಡಗಳು ಮುಖಾಮುಖಿಯಾದಾಗ ಒಡಿಶಾ 3–1ರಲ್ಲಿ ಜಯ ಗಳಿಸಿತ್ತು.

ಆರಂಭ: ರಾತ್ರಿ 7.30
ಸ್ಥಳ: ಬ್ಯಾಂಬೊಲಿಮ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರಣಜಿ: ಸೋಲು ತಪ್ಪಿಸಿಕೊಂಡ ರೈಲ್ವೇಸ್; ಮಯಂಕ್, ಸಮರ್ಥ್ ಅರ್ಧಶತಕ

ಡ್ರಾ ಪಂದ್ಯದಲ್ಲಿ ಕರ್ನಾಟಕ ತಂಡ

ಪ್ರಜಾವಾಣಿ ವಾರ್ತೆ

ಚೆನ್ನೈ: ಎರಡು ವರ್ಷಗಳ ನಂತರ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಜಯ ಸಾಧಿಸುವ ಕರ್ನಾಟಕ ತಂಡದ ಗೆಲುವಿನ ಆಸೆ ಈಡೇರಲಿಲ್ಲ.

ಎಲೀಟ್ ಸಿ ಗುಂಪಿನ ಪಂದ್ಯವನ್ನು ಡ್ರಾ ಮಾಡಿಕೊಳ್ಳುವಲ್ಲಿ ರೈಲ್ವೆಸ್ ಯಶಸ್ವಿಯಾಯಿತು. ಕರ್ನಾಟಕ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ ಸಮಾಧಾನ ಲಭಿಸಿತು. ಭಾನುವಾರ ಮಧ್ಯಾಹ್ನ ಎರಡನೇ ಇನಿಂಗ್ಸ್‌ನಲ್ಲಿ 63.2 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 223 ರನ್ ಗಳಿಸಿದ್ದ ಕರ್ನಾಟಕ ತಂಡವು ಡಿಕ್ಲೇರ್ ಮಾಡಿಕೊಂಡಿತು. 276 ರನ್‌ಗಳ ಗುರಿಯನ್ನು ರೈಲ್ವೆಸ್ ತಂಡಕ್ಕೊಡ್ಡಿತು.

ಪಂದ್ಯ ಮುಕ್ತಾಯದೊಳಗೆ ಈ ಗುರಿ ತಲುಪುವುದು ಕಠಿಣ ಕಾರ್ಯವೆಂಬ ಅರಿವಿದ್ದ ರೈಲ್ವೆಸ್ ಯಾವುದೇ ಅವಸರವಿಲ್ಲದೇ ಬ್ಯಾಟಿಂಗ್ ಮಾಡಿತು. 33 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 69 ರನ್ ಗಳಿಸಿ ಇನಿಂಗ್ಸ್ ಮುಗಿಸಿತು.

ಆರ್. ಸಮರ್ಥ್

ಆರಂಭಿಕ ಜೋಡಿ ಮೃಣಾಲ್ ದೇವಧರ್(20; 38ಎ) ಮತ್ತು ವಿವೇಕ್ ಸಿಂಗ್ (18; 82ಎ) ತಾಳ್ಮೆಯಿಂದ ಆಡಿದರು. ಕರ್ನಾಟಕದ ಬೌಲರ್‌ಗಳನ್ನು ಕಾಡಿದರು. 11ನೇ ಓವರ್‌ನಲ್ಲಿ ದೇವಧರ್ ವಿಕೆಟ್ ಗಳಿಸಿದ ವಿಜಯಕುಮಾರ್ ವೈಶಾಖ್ ಜೊತೆಯಾಟ ಮುರಿದರು. ಮುಂದಿನ ಐದು ಓವರ್‌ಗಳ ಅಂತರದಲ್ಲಿ ಶಿವಂ ಚೌಧರಿ ವಿಕೆಟ್ ಅನ್ನು ಗಳಿಸಿದ ಆಫ್‌ಸ್ಪಿನ್ನರ್ ಕೆ. ಗೌತಮ್ ಮತ್ತು ಅರಿಂದಮ್ ಘೋಷ್ ವಿಕೆಟ್ ಅನ್ನು ವೈಶಾಖ್ ಗಳಿಸಿದರು. ಈ ಹಂತದಲ್ಲಿ ರೈಲ್ವೆಸ್ ಬ್ಯಾಟಿಂಗ್ ಪಡೆಯನ್ನು ಬೇಗನೆ ಉರುಳಿಸಿ ಗೆಲುವು ಸಾಧಿಸುವ ನಿರೀಕ್ಷೆ ಕರ್ನಾಟಕ ತಂಡದಲ್ಲಿ ಮೂಡಿತ್ತು.

ಆದರೆ, ಇದಕ್ಕೆ ಮೊಹಮ್ಮದ್ ಸೈಫ್ (ಔಟಾಗದೆ 27) ಅಡ್ಡಗಾಲು ಹಾಕಿದರು. 59 ಎಸೆತಗಳಲ್ಲಿ 27 ರನ್ ಗಳಿಸಿದ ಅವರು ಬೌಲರ್‌ಗಳ ಆಸೆಗೆ ತಣ್ಣೀರೆರಚಿದರು. ಅವರ ವಿವೇಕ್ ಸಿಂಗ್ ಜೊತೆಗೆ ನಾಲ್ಕನೇ ವಿಕೆಟ್‌ನಲ್ಲಿ 40 ರನ್‌ಗಳನ್ನು ಗಳಿಸಿದರು. ಮಯಂಕ್, ಸಮರ್ಥ್ ಅರ್ಧಶತಕ ಕರ್ನಾಟಕ ತಂಡಕ್ಕೆ ಎರಡನೇ ಇನಿಂಗ್ಸ್‌ನಲ್ಲಿ ಮಯಂಕ್ ಅಗರವಾಲ್ (56; 93ಎ) ಮತ್ತು ಆರ್. ಸಮರ್ಥ್ (83; 170ಎ) ಅರ್ಧಶತಕ ಗಳಿಸಿ ಆಸರೆ ನೀಡಿದರು.

ಮೊದಲ ಇನಿಂಗ್ಸ್‌ನಲ್ಲಿ 53 ರನ್‌ಗಳ ಅಲ್ಪ ಮುನ್ನಡೆ ಗಳಿಸುವಲ್ಲಿ ತಂಡವು ಯಶಸ್ವಿಯಾಗಿತ್ತು. ಆದರೆ, ಎರಡನೇ ಇನಿಂಗ್ಸ್‌ನಲ್ಲಿ ಉತ್ತಮ ಆರಂಭ ಲಭಿಸಲಿಲ್ಲ. ದೇವದತ್ತ ಪಡಿಕ್ಕಲ್ (4) ಬೇಗನೆ ಔಟಾದರು.

ಆದರೆ, ಮಯಂಕ್ ಮತ್ತು ಸಮರ್ಥ್ ಜೋಡಿಯು ಎರಡನೇ ವಿಕೆಟ್‌ಗೆ 105 ರನ್‌ಗಳನ್ನು ಸೇರಿಸಿತು.

ಇದರಿಂದಾಗಿ ಕೊನೆಯ ದಿನದಾಟದ ಬೆಳಗಿನ ಅವಧಿಯಲ್ಲಿ ರೈಲ್ವೆಸ್ ಬೌಲರ್‌ಗಳಿಗೆ ಹೆಚ್ಚು ಯಶಸ್ಸು ಲಭಿಸಲಿಲ್ಲ. ಇಬ್ಬರೂ ಬ್ಯಾಟರ್‌ಗಳ ಆಕರ್ಷಕ ಹೊಡೆತಗಳು ಗಮನ ಸೆಳೆದವು.

35ನೇ ಓವರ್‌ನಲ್ಲಿ ಮಯಂಕ್ ವಿಕೆಟ್ ಗಳಿಸುವಲ್ಲಿ ಅವಿನಾಶ್ ಯಾದವ್ ಯಶಸ್ವಿಯಾದರು. ಮೊದಲ ಇನಿಂಗ್ಸ್‌ನಲ್ಲಿ ಶತಕ ದಾಖಲಿಸಿದ್ದ ಸಿದ್ಧಾರ್ಥ್ ಅವರು ಸಮರ್ಥ್ ಜೊತೆಗೂಡಿದರು.

ಇವರಿಬ್ಬರೂ ಮೂರನೇ ವಿಕೆಟ್‌ಗೆ 62 ರನ್‌ಗಳನ್ನು ಸೇರಿಸಿದರು. ನಾಲ್ಕು ಓವರ್‌ಗಳ ಅಂತರದಲ್ಲಿ ಸಿದ್ಧಾರ್ಥ್ ಮತ್ತು ಸಮರ್ಥ್ ಇಬ್ಬರೂ ಔಟಾದರು. ಸಮರ್ಥ್ 17 ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ನಾಯಕ ಮನೀಷ್ ಪಾಂಡೆ (ಔಟಾಗದೇ 24) ತಂಡವು ಇನ್ನೂರರ ಗಡಿ ದಾಟಲು ಕಾರಣರಾದರು.

ಸ್ಕೋರ್ ಕಾರ್ಡ್

ಕರ್ನಾಟಕ, ಮೊದಲ ಇನಿಂಗ್ಸ್ 481 (109.3 ಓವರ್)
ರೈಲ್ವೇಸ್, ಮೊದಲ ಇನಿಂಗ್ಸ್ 426 (128.3 ಓವರ್)
ಕರ್ನಾಟಕ ಎರಡನೇ ಇನಿಂಗ್ಸ್ 9ಕ್ಕೆ 223 ಡಿಕ್ಲೇರ್ (63.2 ಓವರ್)
(ಶನಿವಾರ 17 ಓವರ್‌ಗಳಲ್ಲಿ 1ಕ್ಕೆ 63)
ಮಯಂಕ್ ಸಿ ಅಕ್ಷತ್ (ಬದಲಿ ಆಟಗಾರ) ಬಿ ಅವಿನಾಶ್ 56 (93 ಎ, 4x7, 6x1), ಸಮರ್ಥ್ ಸಿ ವಿವೇಕ್ ಬಿ ಕರಣ್ 83 (170 ಎ, 4x8), ಸಿದ್ಧಾರ್ಥ್ ಸಿ ಕರಣ್ ಬಿ ಯುವರಾಜ್ 39 (59 ಎ, 4x5), ಮನೀಷ್ ಔಟಾಗದೆ 24 (27 ಎ, 4x1), ಗೌತಮ್ ಸಿ ದೇವಧರ್ ಬಿ ಕರಣ್ 8 (6 ಎ, 4x1), ಶರತ್ ಸಿ ಯಾದವ್ ಬಿ ಅಮಿತ್ 0 (2 ಎ), ಶ್ರೇಯಸ್ ಸಿ ಚೌಧರಿ ಬಿ ಅಮಿತ್ 8 (8 ಎ, 4x1), ವೈಶಾಕ್ ಸಿ ಯಾದವ್ ಬಿ ಕರಣ್ 0 (6 ಎ), ವಿದ್ಯಾಧರ್ ಸಿ ಚೌಧರಿ ಬಿ ಅಮಿತ್ 0 (2 ಎ)
ಇತರೆ (ನೋಬಾಲ್ 1) 1
ವಿಕೆಟ್ ಪತನ: 2-116 (ಮಯಂಕ್ ಅಗರವಾಲ್, 34.3), 3-179 (ಕೆ.ವಿ ಸಿದ್ಧಾರ್ಥ್, 53.4), 4-192 (ಆರ್. ಸಮರ್ಥ್, 56.4), 5-210 (ಕೃಷ್ಣಪ್ಪ ಗೌತಮ್, 58.6), 6-211 (ಎಸ್. ಶರತ್, 59.4), 7-219 (ಶ್ರೇಯಸ್ ಗೋಪಾಲ್, 61.3), 8-222 (ವೈಶಾಕ್ ವಿಜಯಕುಮಾರ್, 62.5), 9-223 (ವಿದ್ಯಾಧರ ಪಾಟೀಲ, 63.2)
ಬೌಲಿಂಗ್: ಅಮಿತ್ ಮಿಶ್ರಾ 21.2–4–58–4, ಯುವರಾಜ್ ಸಿಂಗ್ 17–0–61–1, ಶಿವಂ ಚೌಧರಿ 3–0 –19–0, ಅವಿನಾಶ್ ಯಾದವ್ 14–1–38–1, ಕರಣ್ ಶರ್ಮಾ 8–0–47–3

ರೈಲ್ವೇಸ್ ಎರಡನೇ ಇನಿಂಗ್ಸ್ 4ಕ್ಕೆ 69 (33 ಓವರ್)
ಮೃಣಾಲ್ ಬಿ ವೈಶಾಕ್ 20 (38 ಎ, 4x4), ವಿವೇಕ್ ಸಿ ಶ್ರೇಯಸ್ ಬಿ ಸಮರ್ಥ್ 18 (82 ಎ, 4x2), ಶಿವಂ ಸಿ ಸಿದ್ಧಾರ್ಥ್ ಬಿ ಗೌತಮ್ 2 (10 ಎ), ಅರಿಂದಂ ಸಿ ಶರತ್ ಬಿ ವೈಶಾಕ್ 0 (6 ಎ), ಸೈಫ್ ಔಟಾಗದೆ 27 (59 ಎ, 4x4), ಉಪೇಂದ್ರ ಔಟಾಗದೆ 2 (3 ಎ)
ವಿಕೆಟ್ ಪತನ: 1-22 (ಮೃಣಾಲ್ ದೇವಧರ್, 10.4), 2-25 (ಶಿವಂ ಚೌಧರಿ, 13.3), 3-26 (ಅರಿಂದಂ ಘೋಷ್, 14.5), 4-66 (ವಿವೇಕ್ ಸಿಂಗ್, 31.6)
ಬೌಲಿಂಗ್: ರೋಣಿತ್ ಮೋರೆ 2–0–13–0, ವಿದ್ಯಾಧರ ಪಾಟೀಲ 6–4–8–0, ವೈಶಾಕ್ ವಿಜಯಕುಮಾರ್ 8–2–16–2, ಕೃಷ್ಣಪ್ಪ ಗೌತಮ್ 13–4–23–1, ಶ್ರೇಯಸ್ ಗೋಪಾಲ್ 3 –1–9–0, ಆರ್. ಸಮರ್ಥ್ 1–1–0–1

ಫಲಿತಾಂಶ: ಪಂದ್ಯ ಡ್ರಾ; ಕರ್ನಾಟಕಕ್ಕೆ 3 ಪಾಯಿಂಟ್

ರಣಜಿ: ಸಿ ಗುಂಪಿನ ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಡ್ರಾ	ಪಾಯಿಂಟ್
ಜಮ್ಮು–ಕಾಶ್ಮೀರ	1	1	0	0	6
ಕರ್ನಾಟಕ	1	0	0	1	3
ರೇಲ್ವೇಸ್	1	0	0	1	1
ಪುದುಚೇರಿ	1	0	1	0	0

ಪೂಜಾರ 91; ಡ್ರಾ ಪಂದ್ಯದಲ್ಲಿ ಸೌರಾಷ್ಟ್ರ

ಅಹಮದಾಬಾದ್ (ಪಿಟಿಐ): ಟೆಸ್ಟ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಚೇತೇಶ್ವರ್ ಪೂಜಾರ ರಣಜಿ ಟೂರ್ನಿಯಲ್ಲಿ ತಮ್ಮ ಲಯ ಕಂಡುಕೊಳ್ಳುವಲ್ಲಿ ಸಫಲರಾದರು. ಡಿ ಗುಂಪಿನಲ್ಲಿ ನಡೆದ ಮುಂಬೈ ಎದುರಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸೊನ್ನೆ ಸುತ್ತಿದ್ದ ಅವರು ಎರಡನೇ ಇನಿಂಗ್ಸ್‌ನಲ್ಲಿ 91 ರನ್ ಗಳಿಸುವಲ್ಲಿ ಯಶಸ್ವಿಯಾದರು. ಆದರೆ, ಮುಂಬೈ ತಂಡವು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸುವೊಂದರೊಂದಿಗೆ ಪಂದ್ಯ ಡ್ರಾ ಆಯಿತು. ಟೆಸ್ಟ್ ತಂಡದಲ್ಲಿ ಮರಳಿ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವ ಮುಂಬೈನ ಅಜಿಂಕ್ಯ ರಹಾನೆ ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದರು. ತಂಡವು 7 ವಿಕೆಟ್ ನಷ್ಟಕ್ಕೆ 544 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. ಸೌರಾಷ್ಟ್ರ 220 ರನ್‌ಗಳಿಗೆ ಆಲೌಟ್ ಆಗಿ, ಫಾಲೋ ಆನ್ ಪಡೆದಿತ್ತು. ಎರಡನೇ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗಳ ನಷ್ಟಕ್ಕೆ 372 ರನ್ ಗಳಿಸಿತು. ಪೂಜಾರ ಮತ್ತು ಸ್ನೆಲ್ ಪಟೇಲ್ (98) ಮತ್ತು ಹರ್ಮಿತ್ ದೇಸಾಯಿ (62) ತಂಡದ ಸೋಲು ತಪ್ಪಿಸುವಲ್ಲಿ ಯಶಸ್ವಿಯಾದರು.

ಚೇತೇಶ್ವರ್ ಪೂಜಾರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 157 ಓವರ್‌ಗಳಲ್ಲಿ 7ಕ್ಕೆ 544 ಡಿಕ್ಲೇರ್ಡ್, **ಸೌರಾಷ್ಟ್ರ:** 64.3 ಓವರ್‌ಗಳಲ್ಲಿ 220, ಎರಡನೇ ಇನಿಂಗ್ಸ್ (ಫಾಲೋ ಆನ್) ಸೌರಾಷ್ಟ್ರ: 116 ಓವರ್‌ಗಳಲ್ಲಿ 9ಕ್ಕೆ 372 (ಹರ್ಮಿತ್ ದೇಸಾಯಿ 62, ಸ್ನೆಲ್ ಪಟೇಲ್ 98, ಚೇತೇಶ್ವರ್ ಪೂಜಾರ 91, ಶಂಸ್ ಮಲಾನಿ 114ಕ್ಕೆ7) ಫಲಿತಾಂಶ: ಪಂದ್ಯ ಡ್ರಾ.

2ನೇ ಇನಿಂಗ್ಸ್‌ನಲ್ಲೂ ಯಶ್ ಧೂಳ್ ಶತಕ

ಗುವಾಹಟಿ (ಪಿಟಿಐ): 19 ವರ್ಷದೊಳಗಿನವರ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಯಶ್ ಧೂಳ್ ಪ್ರಥಮ ದರ್ಜೆ ಕ್ರಿಕೆಟ್‌ನ ಪದಾರ್ಪಣೆಯಲ್ಲಿಯೇ ದಾಖಲೆ ಬರೆದರು. ಎಚ್ ಗುಂಪಿನಲ್ಲಿ ನಡೆದ ತಮಿಳುನಾಡು ಎದುರಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಅವರು ಎರಡನೇ ಇನಿಂಗ್ಸ್‌ನಲ್ಲಿಯೂ ಮೂರಂಕಿ ಮೊತ್ತ ಗಳಿಸಿದರು. ಪಂದ್ಯವು ಡ್ರಾ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದೆಹಲಿ: 452, **ತಮಿಳುನಾಡು:** 494, **ಎರಡನೇ ಇನಿಂಗ್ಸ್: ದೆಹಲಿ:** 60.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 228 (ಯಶ್ ಧೂಳ್ ಔಟಾಗದೆ 113, ಧ್ರುವ್ ಶೋರೆ ಔಟಾಗದೆ 107) ಫಲಿತಾಂಶ: ಡ್ರಾ.

ಸೈಕಲ್ ಪೋಲೊ: ಕರ್ನಾಟಕ ಜೂನಿಯರ್ ತಂಡಕ್ಕೆ ಕಂಚು

ಏರ್‌ಫೋರ್ಸ್ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಇಂಡಿಯನ್ ಏರ್ ಫೋರ್ಸ್ (ಐಎಎಫ್) ತಂಡದವರು ರಾಷ್ಟ್ರ ಮಟ್ಟದ ಸೈಕಲ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಕರ್ನಾಟಕ ಸೈಕಲ್ ಪೋಲೊ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮತ್ತು ಕೆಎಸ್‌ಒಯು ಸಹ ಯೋಗದಲ್ಲಿ ನಡೆದ ಫೈನಲ್‌ನಲ್ಲಿ ಐಎಎಫ್ 17–12ರಿಂದ ಟೆರಿಟೋರಿಯಲ್ ಆರ್ಮಿ ವಿರುದ್ಧ ಜಯಿಸಿತು.

ಕರ್ನಾಟಕ ತಂಡಕ್ಕೆ ಕಂಚು: ಕರ್ನಾಟಕ ತಂಡ ಜೂನಿಯರ್ ವಿಭಾಗದಲ್ಲಿ ಕಂಚು ಜಯಿಸಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆತಿಥೇಯರು ರಾಜಸ್ತಾನ ವಿರುದ್ಧ 7–2 ಗೋಲುಗಳ ಜಯ ಸಾಧಿಸಿದರು.

ಫೈನಲ್‌ನಲ್ಲಿ ಛತ್ತೀಸ್‌ಗಡ 8–6 ರಲ್ಲಿ ಉತ್ತರಪ್ರದೇಶ ವಿರುದ್ಧ ಗೆದ್ದಿತು.

ಜೂನಿಯರ್ ವಿಭಾಗದಲ್ಲಿ ಕಂಚು ಗೆದ್ದ ಕರ್ನಾಟಕ ತಂಡ. ನಿಂತವರು (ಎಡದಿಂದ): ಅರುಣ್, ತೇಜಸ್, ಮಹೇಶ್ (ಕೋಚ್), ಚಿರಾಗ್, ಸಂದೇಶ್ (ಕುಳಿತವರು) ಮಾನಸ್, ಅಜಯ್, ಮೋನಿಷ್ –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಆರುಷಿ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರುಷಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಮಹಿಳೆಯರ 'ಎ' ಡಿವಿಷನ್ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಮಾಡರ್ನ್ ಗರ್ಲ್ಸ್ ತಂಡ ಯುನೈಟೆಡ್ ಎಫ್‌ಸಿ ಕೊಡಗು ಎದುರು 5–2ರಲ್ಲಿ ಜಯ ಗಳಿಸಿತು. ಮೂರನೇ ನಿಮಿಷದಲ್ಲಿ ಪ್ರಿಯದರ್ಶಿನಿ ಗಳಿಸಿದ ಗೋಲಿನ ಮೂಲಕ ತಂಡ ಮುನ್ನಡೆ ಸಾಧಿಸಿತು. ಆರುಷಿ 22, 43 ಮತ್ತು 63ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. 40ನೇ ನಿಮಿಷದಲ್ಲಿ ಮೇಧಾ ಗುಪ್ತಾ ಗೋಲು ಗಳಿಸಿದರು.

ಕೊಡಗು ತಂಡಕ್ಕಾಗಿ ಪ್ರೇರಣ 10ನೇ ನಿಮಿಷದಲ್ಲಿ ಮತ್ತು ಜಯಶ್ರೀ 27ನೇ ನಿಮಿಷದಲ್ಲಿ ಗೋಲು ಗಳಿಸಿದರು.

ಚಳಿಗಾಲದ ಒಲಿಂಪಿಕ್ಸ್‌ಗೆ ವೈಭವದ ತೆರೆ

ಸಮಾರೋಪ ಸಮಾರಂಭದಲ್ಲಿ ನೃತ್ಯಪಟುಗಳ ವರ್ಣರಂಜಿತ ಕಾರ್ಯಕ್ರಮ –ಎಎಫ್‌ಪಿ ಚಿತ್ರ

ಒಲಿಂಪಿಕ್ ಜ್ಯೋತಿಯ ಮುಂದೆ ಧ್ವಜಧಾರಿ ಸ್ವಯಂ ಸೇವಕರು –ಎಎಫ್‌ಪಿ ಚಿತ್ರ

ಬೀಜಿಂಗ್ (ಎಎಫ್‌ಪಿ): ವರ್ಣರಂಜಿತ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಒಳಗೊಂಡ ಮೋಹಕ ವಾತಾವರಣದಲ್ಲಿ ಚಳಿಗಾಲದ ಒಲಿಂಪಿಕ್ಸ್‌ಗೆ ಭಾನುವಾರ ತೆರೆ ಬಿದ್ದಿತು. ಕ್ರೀಡಾ ವೈಭವ ಮೆರೆದ ಮತ್ತು ಮೈಲುಗಲ್ಲುಗಳು ಸ್ಥಾಪನೆಯಾದ ಒಲಿಂಪಿಕ್ಸ್‌ನಲ್ಲಿ ರಷ್ಯಾದ ಡೋಪಿಂಗ್ ಪ್ರಕರಣ ಕಪ್ಪುಚುಕ್ಕೆಯಾಗಿ ಪರಿಣಮಿಸಿತು.

ಎಯ್ಲೀನ್ ಗೂ ಅವರಂಥ ಹೊಸ ತಾರೆಗಳ ಉದಯಕ್ಕೆ ಕಾರಣವಾದ ಒಲಿಂಪಿಕ್ಸ್‌ನಲ್ಲಿ 15 ವರ್ಷದ ಫಿಗರ್ ಸ್ಕೇಟರ್ ಕಮಿಲ ವಲೀವಾ ಡೋಪಿಂಗ್ ವಿವಾದಕ್ಕೆ ಕಾರಣರಾಗಿದ್ದಾರೆ. ಕೋವಿಡ್–19ರ ಆತಂಕದಿಂದಾಗಿ ಬಯೊ ಬಬಲ್‌ನಲ್ಲಿ ಕಳೆದರೂ ಕ್ರೀಡಾಪಟುಗಳು ಅತ್ಯುತ್ತಮ ಸಾಮರ್ಥ್ಯ ಪ್ರದರ್ಶಿಸಿದರು.

‘ಬರ್ಡ್ಸ್ ನೆಸ್ಟ್’ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪಾಲ್ಗೊಂಡಿದ್ದರು.

ಪ್ರೇಕ್ಷಕರು ಅಂತರ ಕಾಯ್ದುಕೊಂಡು ಕುಳಿತು ಕಾರ್ಯಕ್ರಮ ವೀಕ್ಷಿಸಿದರು.

ಮಂಜಿನ ಆವರಣದ ಕಾರ್ಯಕ್ರಮವು ಪ್ರೇಕ್ಷಕರನ್ನು ಮುದಗೊಳಿಸಿತು.

ಅಮೆರಿಕದ 22ರ ಹರೆಯದ ಅಥ್ಲೀಟ್ ನಥಾನ್ ಚೆನ್ ಅವರು ಎರಡು ಬಾರಿಯ ಚಾಂಪಿಯನ್ ಜಪಾನ್‌ನ ಯುಜುರು ಹನ್ಯು ಅವರನ್ನು ಹಿಂದಿಕ್ಕಿ ಚಿನ್ನ ಗೆದ್ದಿದ್ದರು.

ಅಮೆರಿಕದ ಸ್ನೋಬೋರ್ಡ್ ಅಥ್ಲೀಟ್ 35 ವರ್ಷದ ಶಾನ್ ವೈಟ್ ಕೂಡ ಗಮನಾರ್ಹ ಸಾಧನೆ ಮಾಡಿದ್ದರು.

ಪ್ರೈಮ್ ವಾಲಿಬಾಲ್: ಬೆಂಗಳೂರು ಸೆಮಿಫೈನಲ್ ಹಾದಿ ಕಠಿಣ

ಹೈದರಾಬಾದ್: ಬೆಂಗಳೂರು ಟಾರ್ಪೆಡೊಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ಭಾನುವಾರ ಚೆನ್ನೈ ಬ್ಲಿಟ್ಜ್ ಎದುರು ಸೋತಿತು. ಇದರೊಂದಿಗೆ ಬೆಂಗಳೂರು ತಂಡದ ಸೆಮಿಫೈನಲ್ ಹಾದಿಯು ಕಠಿಣವಾಗಿದೆ.

ಚೆನ್ನೈ 9-15, 15-12, 15-13, 15-9, 12-15 ಅಂತರದಲ್ಲಿ ಬೆಂಗಳೂರಿನ ಎದುರು ಜಯ ಗಳಿಸಿತು. ಸೋಮವಾರ ನಡೆಯುವ ಪಂದ್ಯದಲ್ಲಿ ಹೈದರಾಬಾದ್ ತಂಡ ಕ್ಯಾಲಿಕಟ್ ತಂಡವನ್ನು ಮಣಿಸಿದರೆ ಬೆಂಗಳೂರು ತಂಡ ಸೆಮಿಫೈನಲ್ ಪ್ರವೇಶಿಸಲಿದೆ. ಕ್ಯಾಲಿಕಟ್ ಗೆದ್ದರೆ ನಾಲ್ಕನೇ ತಂಡವಾಗಿ ಸೆಮಿಫೈನಲ್ ಪ್ರವೇಶಿಸಲಿದೆ.

ದುರ್ಬಲ ಚೆನ್ನೈ ಬ್ಲಿಟ್ಜ್ ವಿರುದ್ಧದ ಪಂದ್ಯದಲ್ಲಿ ಬೆಂಗಳೂರು ತನ್ನ ನೈಜ ಪ್ರದರ್ಶನವನ್ನು ತೋರಿ ಆರಂಭದಲ್ಲೇ ಮುನ್ನಡೆ ಕಾಯ್ದುಕೊಂಡಿತು. ರೋಹಿರ್ ಹಾಗೂ ಪಂಕಜ್ ಸಿಂಗ್ ಮೊದಲ ಸೆಟ್ ಜಯದಲ್ಲಿ ಪ್ರಮುಖ ಪಾತ್ರವಹಿಸಿದರು. ಇಬ್ಬರೂ ಆಟಗಾರರು ತಲಾ 4 ಅಂಕಗಳನ್ನು ಗಳಿಸಿ ಜಯದ ರೂವಾರಿ ಎನಿಸಿದರು. ಚೆನ್ನೈ ಪರ ನವೀನ್ ಜೇಕಬ್ ಹಾಗೂ ಬ್ರೂನೋ ಡಿ ಸಿಲ್ವಾ ಉತ್ತಮ ಆಟ ಪ್ರದರ್ಶಿಸಿದರೂ ತಂಡವನ್ನು ಸೋಲಿನಿಂದ ಪಾರು ಮಾಡಲಾಗಲಿಲ್ಲ. ಅಂತಿಮವಾಗಿ ಬೆಂಗಳೂರು ಟಾರ್ಪೆಡೊಸ್ 15-9 ಅಂತರದಲ್ಲಿ ಮೊದಲ ಸೆಟ್ ತನ್ನದಾಗಿಸಿಕೊಂಡಿತು. ನಂತರದ ಮೂರು ಸೆಟ್‌ಗಳಲ್ಲಿಯೂ ಅಮೋಘ ಆಟವಾಡಿದ ಚೆನ್ನೈ ತಂಡವು ಗೆಲುವು ಖಚಿತಪಡಿಸಿಕೊಂಡಿತು. ಕೊನೆಯ ಸೆಟ್‌ನಲ್ಲಿ ಕರ್ನಾಟಕ ಗೆದ್ದಿತು.

ಹ್ಯಾರಿ ಕೇನ್ ಡಬಲ್ ಗೋಲು

ಮ್ಯಾಂಚೆಸ್ಟರ್ (ಎಎಫ್‌ಪಿ): ಹ್ಯಾರಿ ಕೇನ್ ಗಳಿಸಿದ ಎರಡು ಗೋಲುಗಳ ಬಲದಿಂದ ಟೊಟೆನ್‌ಹ್ಯಾಮ್ ತಂಡವು ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಜಯಿಸಿತು.

ಶನಿವಾರ ತಡರಾತ್ರಿ ಇತಿಹಾದ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟೊಟೆನ್‌ಹ್ಯಾಮ್ 3–2 ರಿಂದ ಮ್ಯಾಂಚೆಸ್ಟರ್ ಸಿಟಿ ವಿರುದ್ಧ ರೋಚಕ ಜಯ ಸಾಧಿಸಿತು.

ಪಂದ್ಯದ ನಾಲ್ಕನೇ ನಿಮಿಷದಲ್ಲಿ ಡೆಜಾನ್ ಕುಲುಸೆವಸ್ಕಿ ಗೋಲು ಗಳಿಸಿ, ಟೊಟೆನ್‌ಹ್ಯಾಮ್ ಖಾತೆ ತೆರೆದರು. ಮ್ಯಾಂಚೆಸ್ಟರ್ ತಂಡದ ಲೈಕೆ ಗೊಂಡೊಗಾನ್ (33ನೇ ನಿ) ತಿರುಗೇಟು ನೀಡಿದರು. ಇದರಿಂದ 1–1ರ ಸಮಬಲವಾಯಿತು. ಆದರೆ ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಕೇನ್ 59ನೇ ನಿಮಿಷದಲ್ಲಿ ಗೋಲು ಹೊಡೆದು ಟೊಟೆನಹ್ಯಾಮ್‌ಗೆ ಮತ್ತೆ ಮುನ್ನಡೆ ಗಳಿಸಿಕೊಟ್ಟರು.

ಕೊನೆಯ ಹಂತದಲ್ಲಿ ದೊರೆತ ಪೆನಾಲ್ಟಿ (90 + 2ನಿ) ಯಲ್ಲಿ ರಿಯಾದ್ ಮೆಹ್ರೆಜ್ ಗೋಲು ಗಳಿಸಿದರು. ಮ್ಯಾಂಚೆಸ್ಟರ್‌ಗೆ 2–2ರ ಸಮಬಲ ಗಳಿಸಿಕೊಟ್ಟರು.

ಆದರೆ, ಮತ್ತೆ ಮಿಂಚಿದ ಹ್ಯಾರಿ (90 + 5ನಿ) ಅಮೋಘ ಗೋಲು ಬಾರಿಸುವ ಮೂಲಕ ತಮ್ಮ ತಂಡದ ಮಡಿಲಿಗೆ ಗೆಲುವಿನ ಕಾಣಿಕೆ ಹಾಕಿದರು.